₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 16.07.2024 ಸಂಪುಟ: 09 ಸಂಚಿಕೆ: 203 ಪುಟಗಳು: 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಾಜನೂರಿನ ತುಂಗಾ ಜಲಾಶಯದ 21 ಕ್ರಸ್ಟ್ ಗೇಟ್‌ಗಳನ್ನು ತೆರೆದು ಸೋಮವಾರ ತುಂಗಾ ನದಿಗೆ ನೀರು ಹರಿಸಲಾಯಿತು.

ಸದನದಲ್ಲಿ ಸರಕಾರದ ವಿರುದ್ಧ ಮುಗಿ ಬೀಳದ ಬಿಜೆಪಿಗರು
ಬಿಜೆಪಿಯ ಆರೋಪಗಳಿಗೆ ಉತ್ತರಿಸಲು ಸಿದ್ಧವೆಂದ ಸಿದ್ದು
ಇಂದಿನಿಂದ ಹೋರಾಟ ತೀವ್ರಗೊಳಿಸಲು ಬಿಜೆಪಿ ಲೆಕ್ಕಾಚಾರ

ಸದ್ದಿಲ್ಲದೆ ವಾಲ್ಮೀಕಿ ಹಗರಣದ ಚರ್ಚೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಪ್ರಕರಣ, ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟರ ಮೀಸಲು ಅನುದಾನ ಬಳಕೆ ಸೇರಿದಂತೆ ಸಾಲು ಸಾಲು ವಿವಾದಗಳಿರುವುದರಿಂದ, ಆಡಳಿತ ಪಕ್ಷ ಕಾಂಗ್ರೆಸ್ ವಿರುದ್ಧ ಮೊದಲ ದಿನದಿಂದಲೇ ಬಿಜೆಪಿ ತಿರುಗಿ ಬೀಳಲಿದೆ ಎನ್ನುವ ನಿರೀಕ್ಷೆ ಹುಸಿಯಾಗಿದ್ದು, ಸದ್ದುಗದ್ದಲವಿಲ್ಲದೇ ಮೊದಲದ ದಿನದ ಸದನ ಮುಕ್ತಾಯಗೊಂಡಿದೆ.

ಸೋಮವಾರ ಬೆಳಗ್ಗೆ ಆರಂಭಗೊಂಡ ಉಭಯ ಸದನಗಳಲ್ಲಿ ಸಂತಾಪ ಸೂಚನೆ ಬಳಿಕ ಪ್ರಶ್ನೋತ್ತರ ಕಲಾಪ ಆರಂಭಿಸಲಾಯಿತು. ಆರಂಭದಲ್ಲಿ ಪ್ರಶ್ನೋತ್ತರಕ್ಕೂ ಮೊದಲೇ, ಬಿಜೆಪಿ ನಾಯಕರು ಸರಕಾರದ ವಿರುದ್ಧ ಮುಗಿಬೀಳುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೆ ವಿಧಾನಸಭೆಯಲ್ಲಿ, 'ನಿಯಮಾವಳಿ' ಪ್ರಕಾರ ಪ್ರಶ್ನೋತ್ತರದ ಬಳಿಕ ಪ್ರತಿಪಕ್ಷ ನಾಯಕ ಆರ್.ಅಶೋಕ, ವಾಲ್ಮೀಕಿ ಹಗರಣವನ್ನು ಕೈಗೆತ್ತಿಕೊಂಡು ಸರಕಾರದ ವಿರುದ್ಧ ಆರೋಪಿಸಿದರು.

ಪರಿಷತ್‌ನಲ್ಲಿ ಒಮ್ಮೆ ಬಾವಿಗಿಳಿದು ಬಿಜೆಪಿಗರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆದರೆ ವಿಧಾನಸಭೆಯಲ್ಲಿ ಯಾವುದೇ ಸದ್ದು ಗದ್ದಲವಿಲ್ಲದೇ ಬಿಜೆಪಿ ನಾಯಕರು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಪ್ರಯತ್ನ ಮಾಡಿದರು. ಈ ಮೂಲಕ ಮೊದಲ ದಿನವೇ ಸರಕಾರದ 'ಕೈ'ಕಟ್ಟಿ ಹಾಕುವ ಬಹುತೇಕರ ನಿರೀಕ್ಷೆ ಹುಸಿಯಾಯಿತು. ವಾಲ್ಮೀಕಿ ಹಗರಣದ ಬಗ್ಗೆ ನಿಲುವಳಿ ಸೂಚನೆಯನ್ನು ಬಿಜೆಪಿ ಮಂಡಿಸಿತ್ತು. ಆದರೆ ವಿಷಯ ಪ್ರಸ್ತಾಪಿಸುವ ಮೊದಲೇ, ಸ್ಪೀಕರ್ ಖಾದರ್ ಅವರು ನಿಯಮ 69ರಲ್ಲಿ ಚರ್ಚೆಗೆ ಅವಕಾಶ ನೀಡಿದರು.

ಸಚಿವ, ಅಧ್ಯಕ್ಷರ ಪಾತ್ರ ಸ್ಪಷ್ಟ: ಅಶೋಕ
ಬಳಿಕ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ವಾಲ್ಮೀಕಿ ನಿಗಮ ಹಗರಣದಲ್ಲಿ ಸಚಿವರು ಮತ್ತು ಅಧ್ಯಕ್ಷರು ಭಾಗಿಯಾಗಿರುವುದು ಸ್ಪಷ್ಟವಾಗಿ ತಿಳಿಯುತ್ತಿದೆ. ಕಾನೂನು ಬಾಹಿರವಾಗಿ ಕೋಟ್ಯಂತರ ಹಣ ವರ್ಗಾವಣೆಯಾಗಿದೆ. ನಿಗಮದಲ್ಲಿ ನಾಗೇಂದ್ರ, ಪಿಎ ನೆಕ್ಕುಂಡಿ ನಾಗರಾಜ್ ಏನು ಹೇಳಿದ್ದನೋ ಅದರಂತೆ ನಡೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅವರ ಆಣತಿಯಂತೆ ಎಲ್ಲವೂ ಆಗಿದೆ. ಕಳ್ಳನೇ ಹೋಗಿ ದೂರು ಕೊಟ್ಟಂತೆ ಎಂಡಿ ಪದ್ಮನಾಭ್ ಹೋಗಿ ದೂರು ಕೊಟ್ಟಿದ್ದಾರೆ ಎಂದು ಟೀಕಿಸಿದರು. ನಿಗಮದ ಅಧೀಕ್ಷಕ ಚಂದ್ರಶೇಖರನ್ ಅವರದ್ದು ಆತ್ಮಹತ್ಯೆಯಲ್ಲ. ಸರಕಾರಿ ಪ್ರಾಯೋಜಕತ್ವದ ಕೊಲೆ. ದಲಿತ ಅಧಿಕಾರಿಯ ಕೊಲೆಯಾಗಿದೆ. ಒತ್ತಡಕ್ಕೆ ಸಿಲುಕಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಲಿಯಾದ ಜೀವಿಗೆ ಬೆಲೆ ಇಲ್ಲವಾ? ಸರಕಾರಕ್ಕೆ ಹೃದಯ, ಕಿವಿ ಇಲ್ಲವೇ? ಎಂದು ಪ್ರಶ್ನಿಸಿದರು. → 4

- ಜೆಡಿಎಸ್ ಸಭಾನಾಯಕರಾಗಿ ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್‌ಬಾಬು
- ವಿಧಾನ ಪರಿಷತ್ ಸಭಾನಾಯಕರಾಗಿ ಬೋಸರಾಜು ಪುನಾರಾಯ್ಕೆ
- ಮೊದಲ ದಿನದ ಸದನವನ್ನು ವೀಕ್ಷಿಸಿದ ಛತ್ತೀಸ್ ಘಡ ಮಾಜಿ ಸಿಎಂ ಭೂಪೇಶ್ ಬಘೇಲಾ
- ದ್ವಾರಕೀಶ್, ಅಪರ್ಣಾ, ಶ್ರೀನಿವಾಸ್ ಪ್ರಸಾದ್, ವಸಂತ ಬಂಗೇರ ಸೇರಿ 14 ಜನರಿಗೆ ಸಂತಾಪ ಸೂಚನೆ
- ವಿಧಾನಸಭಾ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಒಂದು ವಾರ ಹೆಚ್ಚುವರಿ ಅಧಿವೇಶನ ನಡೆಸಲು ಬಿಜೆಪಿ ಮನವಿ
- ಹೆಚ್ಚುವರಿ ಅವಧಿಗೆ ಅಧಿವೇಶನ ನಡೆಸಲು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ ಸರಕಾರ
- ವಿಧಾನ ಪರಿಷತ್‌ನಲ್ಲಿಯೂ ವಾಲ್ಮೀಕಿ ಹಗರಣ ಪ್ರಸ್ತಾಪಿಸಿದ ಬಿಜೆಪಿಗರು

ದಲಿತರ ಹಣವನ್ನು ರಾಜ್ಯ ಸರಕಾರ ಲೂಟಿ ಹೊಡೆದಿದೆ. ಕರ್ನಾಟಕದ ಇತಿಹಾಸದಲ್ಲಿಯೇ ದೊಡ್ಡ ಕಪ್ಪು ಚುಕ್ಕೆ. ಟಕಾ ಟಕ್ ಅಂತಾ ನೂರಕ್ಕೆ ನೂರರಷ್ಟು ಲೂಟಿ ಮಾಡಿದ್ದಾರೆ. ನಿಗಮದಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದಂಗೆ ಆಗಿದೆ. ಇತಿಹಾಸದಲ್ಲೇ ಯಾರೂ ದಲಿತರ ಹಣ ನುಂಗಿರಲಿಲ್ಲ.
– **ಆರ್.ಅಶೋಕ** ಪ್ರತಿಪಕ್ಷ ನಾಯಕ

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಸೇರಿ ಎಲ್ಲ ಹಗರಣಗಳ ವಿಚಾರವಾಗಿ ಚರ್ಚೆ ಮಾಡಲು ಸಿದ್ಧರಿದ್ದೇವೆ. ಆದರೆ ನಿಯಮಾವಳಿ ಪ್ರಕಾರ ಚರ್ಚೆ ಮಾಡಬೇಕು. ಎಲ್ಲ ಚರ್ಚೆಗೂ ನಮ್ಮ ಸರಕಾರ ಉತ್ತರ ಕೊಡಲು ಸಿದ್ಧವಿದೆ. ಬಿಜೆಪಿಗೆ ಹಗರಣದ ಬಗ್ಗೆ ಮಾತನಾಡುವ ನೈತಿಕತೆಯಿಲ್ಲ. ಇವರ ಕಾಲದಲ್ಲಿ ಅದೆಷ್ಟು ಲೂಟಿ ಹೊಡೆದಿದ್ದಾರೆ ಅನ್ನೋದು ರಾಜ್ಯದ ಜನರಿಗೆ ಗೊತ್ತಿದೆ.
– **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಪುಟ ತೆರೆದಂತೆ...

ಬೇಲಿಯೇ ಎದ್ದು ಹೊಲ ಮೇಯ್ದಂತೆ
ಆಡಳಿತ, ವಿಪಕ್ಷ ಮಧ್ಯೆ ವಾಗ್ವಾಳಿ
ಸುರೇಶ್ ಬಾಬು ಜೆಡಿಎಸ್ ಸಭಾನಾಯಕ
10 ಸಾವಿರ ಶಿಕ್ಷಕರ ನೇಮಕಕ್ಕೆ ಸಿದ್ಧತೆ
ನಾಪತ್ತೆಯಾಗಿದ್ದ ದದ್ದಲ್ ಸದನದಲ್ಲಿ
ವಿಧಾನಮಂಡಲ ಮಧ್ಯದೊಳಗೆ | 5

ಸದನಕ್ಕೆ ಬರೋದಕ್ಕಿರುವ ಸಮಸ್ಯೆಯೇನು?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಪ್ಲೇನ್‌ನಲ್ಲಿ ಆಹಾರ ಸೇವಿಸುವ ಮುನ್ನ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ | 7

ಮಾತಂದ್ರೆ ಮಾತು

ಪ್ರಧಾನಿಮಂತ್ರಿ ಮಗ ಮುಖ್ಯಮಂತ್ರಿಯಾಗೋದು ದೊಡ್ಡ ವಿಷಯವಲ್ಲ. ಆದರೆ ಕನಕಪುರದ ಒಬ್ಬ ರೈತನ ರೈತನ ಮಗ ರಾಜ್ಯಕ್ಕೆ ಉಪಮುಖ್ಯಮಂತ್ರಿಯಾಗುವುದು ಅಷ್ಟು ಸುಲಭದ ಕೆಲಸ ಅಲ್ಲ. ನೀವು ಬಸ್‌ನಲ್ಲಿ ಎಂಎಲ್‌ಎಗಳನ್ನು ಕರೆದುಕೊಂಡು ಹೋಗಿ ರಾತ್ರೋರಾತ್ರಿ ಪದವಿ ತೆಗೆದುಕೊಂಡಷ್ಟು ಸುಲಭವಲ್ಲ.

ಪ್ರದೀಪ್ ಈಶ್ವರ್
ಶಾಸಕ

ದಾರಿದೀಪೋಕ್ತಿ

ಎಷ್ಟು ವರ್ಷಗಳ ಕಾಲ ಬದುಕುತ್ತೇವೆ ಎಂಬುದು ಮುಖ್ಯವಲ್ಲ. ಬದುಕಿದ್ದಷ್ಟು ಕಾಲ ಹೇಗೆ ಬದುಕುತ್ತೇವೆ ಎಂಬುದು ಬಹಳ ಮುಖ್ಯ. ಪ್ರತಿ ದಿನವೂ ನಮ್ಮ ಬದುಕಿಗೆ ಅರ್ಥವಂತಿಕೆಯನ್ನು ಹೆಚ್ಚಿಸುತ್ತಾ ಹೋಗುವುದು ಇನ್ನೂ ಮುಖ್ಯ. ಅಂಥ ಬದುಕನ್ನು ಬಾಳಲು ಪ್ರಯತ್ನಿಸಬೇಕು.

ವಕ್ರತುಂಡೋಕ್ತಿ

ಎಲ್ಲರೂ ಮದುವೆಯಾಗಬೇಕು. ಬೈಯಲು ಮತ್ತು ಬೈಸಿಕೊಳ್ಳಲು ಕನಿಷ್ಠ ಒಬ್ಬರಾದರೂ ಸಿಗುತ್ತಾರೆ.

ಫನ್‌ತರಂಗ
– ರಘುಪತಿ ಶೃಂಗೇರಿ –

ಅರಮನೆ ಮೈದಾನದಲ್ಲಿ ಒಳ ಉಡುಪುಗಳ ವಿವಿಧ ಬ್ರಾಂಡ್‌ಗಳ ಟ್ರೇಡ್ ಶೋ ಇಂದಿನಿಂದ
ಸುದ್ದಿ



ಕೊಂಕಣದಲ್ಲೂ ಭಾರಿ ಮಳೆ; ಹಲವು ರೈಲು ರದ್ದು
ಕರಾವಳಿ, ಮಲೆನಾಡಿನಲ್ಲಿ ಶಾಲಾ-ಕಾಲೇಜಿಗೆ ರಜೆ

ಮಹಾ ಮಳೆ ಓಡದ ರೈಲು

ಬೆಂಗಳೂರು: ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ ಸೇರಿದಂತೆ ಕೊಂಕಣದ ಹಲವು ಭಾಗಗಳಲ್ಲಿ ಭಾರಿ ಮಳೆಯಾಗುತ್ತಿದ್ದು, 14 ಗಂಟೆಗಳ ಕಾಲ ಹಲವು ರೈಲುಗಳನ್ನು ರದ್ದುಗೊಳಿಸಲಾಗಿದೆ.

ಮಂಗಳೂರು ಎಕ್ಸ್‌ಪ್ರೆಸ್, ಕೊಂಕಣ ಕನ್ಯಾ ಎಕ್ಸ್‌ಪ್ರೆಸ್, ತುಟಾರಿ ಎಕ್ಸ್‌ಪ್ರೆಸ್, ಜನಶತಾಬ್ದಿ ಎಕ್ಸ್‌ಪ್ರೆಸ್, ದಿವಾ ಸಾವಂತವಾಡಿ ಎಕ್ಸ್‌ಪ್ರೆಸ್, ಸಾವಂತವಾಡಿ ಮಡಗಾಂವ್ ಪ್ಯಾಸೆಂಜರ್ ರೈಲು, ಸೂಪರ್ ಎಕ್ಸ್‌ಪ್ರೆಸ್ ಛತ್ರಪತಿ ಶಿವಾಜಿ ಮುಂಬೈ ಟರ್ಮಿನಲ್ ರೈಲು, ಮತ್ಸ್ಯಗಂಧ ಮಂಗಳೂರು ಟು ಮುಂಬೈ ರೈಲು ರದ್ದಾಗಿವೆ. ಬೋಗ್ದ್ಯಾದಲ್ಲಿ ಹಳಿಗಳ ಮೇಲೆ ಗುಡ್ಡ ಕುಸಿದ ಪರಿಣಾಮ ರೈಲು ಸಂಚಾರ ಸ್ಥಗಿತಗೊಂಡಿದೆ. ಇದರಿಂದ ಪ್ರಯಾಣಿಕರು ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲೇ ರೈಲಿಗಾಗಿ ಕಾಯುತ್ತಿದ್ದಾರೆ. ಮುಂದಿನ ನಾಲ್ಕು ದಿನ ಕೊಂಕಣ ಸೇರಿದಂತೆ ರಾಜ್ಯದಲ್ಲಿ ಅಲ್ಲಲ್ಲಿ ಮಳೆಯಾಗುವ ಮುನ್ಸೂಚನೆ ಇದೆ. ಸತಾರಾ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ರೆಡ್ ಅಲರ್ಟ್ ಘೋಷಿಸಲಾಗಿದೆ.

ರಾಜ್ಯದಲ್ಲೂ ಮಳೆ ಅಬ್ಬರ
ರಾಜ್ಯಾದ್ಯಂತ ಮಳೆ ಅಬ್ಬರ ಜೋರಾಗಿದ್ದು, ಕರಾವಳಿ ಹಾಗೂ ಮಲೆನಾಡು ಭಾಗಗಳಿಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ. ಹೀಗಾಗಿ ಜು.16ರಂದು ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಉತ್ತರಕನ್ನಡ, ಕೊಡಗು, ಹಾಸನ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಪದವಿ ಪೂರ್ವ ಕಾಲೇಜ್ ತನಕ ರಜೆ ಘೋಷಣೆ ಮಾಡಲಾಗಿದೆ. ಉತ್ತರಕನ್ನಡ ಜಿಲ್ಲೆಗೆ ಮುಂದಿನ 3 ದಿನ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದ್ದು, ಜಿಲ್ಲಾಡಳಿತವು ತುರ್ತು ಪರಿಸ್ಥಿತಿ ನಿರ್ವಹಣೆಗೆ ಡಿಸ್ಟ್ರಿಕ್ಟ್ ಎಮರ್ಜೆನ್ಸಿ ಆಪರೇಷನ್ ಸೆಂಟರ್ ತೆರೆದಿದೆ.

ಮೈದುಂಬಿದ ನದಿಗಳು
ಮಳೆಯ ಆರ್ಭಟಕ್ಕೆ ತುಂಗಾ, ಭದ್ರೆ, ವರದಾ, ಕುಮುದ್ವತಿ, ಶರಾವತಿ ಮೈದುಂಬಿವೆ. ಗಾಜನೂರಿನ ತುಂಗಾ ಜಲಾಶಯ ಭರ್ತಿ ಆಗಿರುವುದರಿಂದ 21 ಕ್ರಸ್ಟ್ ಗೇಟ್‌ಗಳನ್ನೂ ತೆರೆಯಲಾಗಿದೆ. ಹಾರಂಗಿ ಅಣೆಕಟ್ಟೆಯಿಂದಲೂ ನೀರು ಬಿಡಲಾಗಿದೆ. → 4

- ಮಲೆನಾಡಿನಾದ್ಯಂತ ಜನಜೀವನ ಅಸ್ತವ್ಯಸ್ತ, ಹಲವೆಡೆ ವಿದ್ಯುತ್ ಕಟ್
- ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ನದಿ, ಹಳ್ಳ-ಕೊಳ್ಳಗಳು
- ಜಲಾಶಯಗಳ ಒಳಹರಿವು ಹೆಚ್ಚಳ, ನದಿ ಪಾತ್ರದಲ್ಲಿ ಪ್ರವಾಹದ ಆತಂಕ
- ಭರಚುಕ್ಕಿ, ಜೋಗ ಸೇರಿ ಕೆಲವು ಜಲಪಾತ ನೋಡಲು ಪ್ರವಾಸಿಗರ ದಂಡು
- ರೀಲ್ಸ್, ಸೆಲ್ಫಿಗಾಗಿ ಪ್ರವಾಸಿಗರ ಹುಚ್ಚಾಟ; ಕಡಿವಾಣ ಹಾಕಲು ಪೊಲೀಸರ ಕ್ರಮ

ಫುಟ್‌ಬಾಲ್ ಇತಿಹಾಸದಲ್ಲಿ ದಾಖಲೆ ಬರೆದ ಅರ್ಜೆಂಟಿನಾ
ಸ್ಪೇನ್ ನಾಲ್ಕನೇ ಬಾರಿ ಯುರೋಪ್ ಚಾಂಪಿಯನ್

ಯುರೋ ವಿಜಯಿ ಸ್ಪೇನ್ ಕೋಪಾ ಗೆದ್ದ ಅರ್ಜೆಂಟಿನಾ

ನಾಲ್ಕನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡ ಸ್ಪೇನ್ ತಂಡದ ಆಟಗಾರರ ಸಂಭ್ರಮ.

ಅಮೆರಿಕ: ಕೊಪಾ ಅಮೆರಿಕ ಟೂರ್ನಿ ಹಾಗೂ ಯೂರೋಪಿಯನ್ ಕಪ್ ಫುಟ್‌ಬಾಲ್ ಚಾಂಪಿಯನ್‌ಶಿಪ್‌ಗಳು ಮುಕ್ತಾಯಗೊಂಡಿದ್ದು, ಅರ್ಜೆಂಟಿನಾ ತಂಡವು ಕೊಪಾ ಅಮೆರಿಕ ಪಟ್ಟ ಅಲಂಕರಿಸಿದರೆ, ಸ್ಪೇನ್ ತಂಡವು ಯುರೋ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಭಾನುವಾರ ನಡೆದ ಕೊಪಾ ಅಮೆರಿಕ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯದಲ್ಲಿ ಕೊಲಂಬಿಯಾ ತಂಡವನ್ನು ಮಣಿಸಿ ಸ್ಪೇನ್ 4ನೇ ಬಾರಿ ಯುರೋ ಚಾಂಪಿಯನ್ ಪಟ್ಟ ಅಲಂಕರಿಸಿದರೆ, ಇನ್ನೊಂದೆಡೆ ಅರ್ಜೆಂಟಿನಾ ತಂಡವು ಇಂಗ್ಲೆಂಡ್ ತಂಡವನ್ನು ಮಣಿಸಿ ದಾಖಲೆಯ 16ನೇ ಬಾರಿ ಕೊಪಾ ಅಮೆರಿಕ ಚಾಂಪಿಯನ್ ಆಗಿದೆ.

ಅರ್ಜೆಂಟಿನಾಗೆ ಭರ್ಜರಿ ಗೆಲುವು:
ಫ್ಲೋರಿಡಾದ ಮಿಯಾಮಿ ಗಾರ್ಡನ್ಸ್‌ನಲ್ಲಿರುವ ಹಾರ್ಡ್ ರಾಕ್ ಸ್ಟೇಡಿಯಂನಲ್ಲಿ ನಡೆದ ಕೋಪಾ ಅಮೆರಿಕ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಅರ್ಜೆಂಟಿನಾ ತಂಡವು ಕೊಲಂಬಿಯಾ ವಿರುದ್ಧ ಗೆಲುವು ಸಾಧಿಸುವುದರೊಂದಿಗೆ ಸತತ ಮೂರು ಟ್ರೋಫಿ ಗೆದ್ದ ದಾಖಲೆ ಬರೆದಿದೆ. ಅರ್ಜೆಂಟೀನಾ ತಂಡವು ಸತತ 2021ರ ಕೋಪಾ ಅಮೆರಿಕ, 2022ರ ಫಿಫಾ ವಿಶ್ವಕಪ್ ಹಾಗೂ 2024ರ ಕೊಪಾ ಅಮೆರಿಕ ಟ್ರೋಫಿ ಗೆದ್ದಿದೆ. → 4

ಕೊಪಾ ಅಮೆರಿಕ ಟೂರ್ನಿಯಲ್ಲಿ 16ನೇ ಬಾರಿ ಚಾಂಪಿಯನ್ ಕಿರೀಟ ಧರಿಸಿದ ಅರ್ಜೆಂಟೀನಾ ತಂಡದ ಸಂಭ್ರಮ.

ಭ್ರೂಣದ ಬೆಳವಣಿಗೆಯಲ್ಲಿ ಅಸಹಜತೆ ಗೋಚರ
ಮಹಿಳೆ ರಕ್ಷಣೆಗೆ ದೆಹಲಿ ಹೈಕೋರ್ಟ್ ನಿರ್ಧಾರ

32ನೇ ವಾರದಲ್ಲೂ ಗರ್ಭಪಾತಕ್ಕೆ ಅನುಮತಿ



ದೆಹಲಿ: ಭ್ರೂಣದ ಅಸಹಜ ಬೆಳವಣಿಗೆ ಹಿನ್ನೆಲೆಯಲ್ಲಿ ವೈದ್ಯಕೀಯ ಗರ್ಭಪಾತಕ್ಕೆ (ಎಂಟಿಪಿ) ಅನುಮತಿ ಕೋರಿದ್ದ 32 ವಾರಗಳ ಗರ್ಭಿಣಿಗೆ ದೆಹಲಿ ಹೈಕೋರ್ಟ್ ಸೋಮವಾರ ಅನುಮತಿ ನೀಡಿದೆ.

ಭ್ರೂಣ ಅಸಹಜವಾಗಿ ಬೆಳವಣಿಗೆ ಕಂಡಿರುವುದರಿಂದ ಭವಿಷ್ಯದಲ್ಲಿ ಮಾನಸಿಕ-ದೈಹಿಕ ಆರೋಗ್ಯ ಸಮಸ್ಯೆಗಳನ್ನು ಮಗು ಎದುರಿಸಬೇಕಾಗುತ್ತದೆ. ಅಷ್ಟೇ ಅಲ್ಲದೇ, ಮಗು ಭವಿಷ್ಯದಲ್ಲಿ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗೂ ಒಳಗಾಗುವ ಅಪಾಯವಿದೆ ಎಂಬ ವೈದ್ಯಕೀಯ ತಪಾಸಣಾ ವರದಿಗಳು ಮತ್ತು ಅಲ್ಟ್ರಾ ಸೌಂಡ್ ಚಿತ್ರಗಳನ್ನು ಲಗತ್ತಿಸಿ ಅರ್ಜಿದಾರರು ಗರ್ಭಪಾತಕ್ಕೆ ಅನುಮತಿ ಕೋರಿದ್ದರು. ಗರ್ಭಿಣಿಯ ಪರಿಸ್ಥಿತಿ ಅರ್ಥ ಮಾಡಿಕೊಂಡ ನ್ಯಾ.ಸಂಜೀವ್ ನಾರುಲ್ಲ ಅವರು ಸುರಕ್ಷಿತ ವೈದ್ಯಕೀಯ ಗರ್ಭಪಾತಕ್ಕೆ ಅನುಮತಿ ನೀಡಿದರು.

ದೆಹಲಿಯಲ್ಲಿ ಅಖಿಲ ಭಾರತ ವೈದ್ಯಕೀಯ ಸಂಸ್ಥೆ(ಏಮ್ಸ್)ಯ ತಜ್ಞ ವೈದ್ಯರು ಗರ್ಭಪಾತ ಅನಿವಾರ್ಯ ಎಂಬ ಶಿಫಾರಸು ವರದಿ ಆಧರಿಸಿ ನ್ಯಾಯಾಲಯ, ಅರ್ಜಿದಾರ ಮಹಿಳೆಯ ಹಿತಾಸಕ್ತ ರಕ್ಷಣೆಯ ತೀರ್ಮಾನಕ್ಕೆ ಬಂದಿತು.

2ಡಿ ಅಲ್ಟ್ರಾಸೌಂಡ್‌ನಲ್ಲಿ ಪತ್ತೆ
ಏಮ್ಸ್‌ನಲ್ಲಿ ಪ್ರಸೂತಿ ತಜ್ಞರ ಶಿಫಾರಸಿನ ಮೇರೆಗೆ 2ಡಿ ಅಲ್ಟ್ರಾಸೌಂಡ್ ತಪಾಸಣೆ ನಡೆಸಿದಾಗ ಭ್ರೂಣದ ಬೆಳವಣಿಗೆಯಲ್ಲಿ ಅಸಹಜತೆ ಕಂಡುಬಂದಿತು. ಇನ್ನಷ್ಟು ಆಳವಾಗಿ ಪರೀಕ್ಷೆ ನಡೆಸಿದಾಗ ಭ್ರೂಣದ ಮೆದುಳು, ಕೆಲವು ಅಂಗಾಂಗಗಳು ಸರಿಯಾಗಿ ಬೆಳವಣಿಗೆ ಹೊಂದದೇ ಇರುವುದು ದೃಢಪಟ್ಟಿತು. ಹಾಗಾಗಿ ಪ್ರಸೂತಿ ತಜ್ಞರು ಮಹಿಳೆಗೆ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದ್ದರು. ಗರ್ಭಪಾತ ಮಾಡಿಸಿಕೊಳ್ಳುವ ಬಗ್ಗೆ ಯೋಚಿಸಿ ಎಂದು ಸಲಹೆ ನೀಡಿದ್ದರು.

ಸರಕಾರಿ ನೌಕರರಿಗೆ ಸಿಹಿ ಸುದ್ದಿ ನೀಡಿದ ಸರಕಾರ
7ನೇ ವೇತನ ಆಯೋಗದ ಶಿಫಾರಸಿಗೆ ಒಪ್ಪಿಗೆ

ರಾಜ್ಯ ನೌಕರರ ವೇತನ ಶೇ.10.5ರಷ್ಟು ಹೆಚ್ಚಳ



ಬೆಂಗಳೂರು: ರಾಜ್ಯ ಸರಕಾರಿ ನೌಕರರ ಬಹುದಿನದ ಬೇಡಿಕೆಯಾಗಿರುವ ಏಳನೇ ವೇತನ ಆಯೋಗದ ವರದಿ ಜಾರಿಗೆ ಕೊನೆಗೂ ರಾಜ್ಯ ಸರಕಾರ ಸಮ್ಮತಿಸಿದ್ದು, ಶೇ. 10.5ರಷ್ಟು ವೇತನ ಹೆಚ್ಚಿಸಲು ತೀರ್ಮಾನಿಸಿದೆ. ಆಗಸ್ಟ್ 1ರಿಂದಲೇ ಏಳನೇ ವೇತನ ಆಯೋಗದ ವರದಿಯನ್ವಯ ವೇತನ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಏಳನೇ ವೇತನ ಆಯೋಗ ಜಾರಿಗೆ ಸಮ್ಮತಿಸಲಾಗಿದೆ. ಆ.1ರಿಂದಲೇ ಇದು ಜಾರಿಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಚೇರಿಯಿಂದ ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ. ಏಳನೇ ವೇತನ ಆಯೋಗದ ವರದಿ ಜಾರಿಯಿಂದ ರಾಜ್ಯ ಸರಕಾರಕ್ಕೆ ಭಾರಿ ಆರ್ಥಿಕ ಹೊರೆ ಬೀಳಲಿದೆ. ಆದರೆ ವರದಿ ಜಾರಿ ಅನಿವಾರ್ಯವಾಗಿರುವುದರಿಂದ ಜಾರಿಗೊಳಿಸಲು ತೀರ್ಮಾನಿಸಲಾಗಿದೆ. ಆರ್ಥಿಕ ಹೊರೆಯನ್ನು ಯಾವ ರೀತಿ ತಗ್ಗಿಸಬಹುದು ಎನ್ನುವ ಬಗ್ಗೆ ವರದಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. → 4

ಯಾರಾಗಲಿದ್ದಾರೆ ಸಿಎಸ್?
ಕೆಲವೇ ದಿನದಲ್ಲಿ ಮುಖ್ಯಕಾರ್ಯದರ್ಶಿ ಹುದ್ದೆಯಿಂದ ರಜನೀಶ್ ಗೋಯಲ್ ಅವರು ನಿವೃತ್ತರಾಗಲಿದ್ದಾರೆ. ಆದ್ದರಿಂದ ಅವರ ಸ್ಥಾನಕ್ಕೆ ಯಾರನ್ನು ತರಬೇಕು ಎನ್ನುವ ಬಗ್ಗೆಯೂ ಚರ್ಚೆ ನಡೆದಿದೆ ಎನ್ನಲಾಗಿದೆ. ಹಿರಿತನದ ಆಧಾರದಲ್ಲಿ ಅಪರ ಮುಖ್ಯ ಕಾರ್ಯದರ್ಶಿಯಾಗಿರುವ ಶಾಲಿನಿ ರಜನೀಶ್ ಅವರಿಗೆ ಮುಖ್ಯ ಕಾರ್ಯದರ್ಶಿ ಹುದ್ದೆ ಸಿಗುವ ಸಾಧ್ಯತೆಯಿದೆ. ಇವರೊಂದಿಗೆ ಸಿದ್ದರಾಮಯ್ಯ ಅವರ ಆಪ್ತ ಅಧಿಕಾರಿಗಳ ವಲಯದಲ್ಲಿ ಕಾಣಿಸಿಕೊಂಡಿರುವ ಎಲ್.ಕೆ.ಅತೀಕ್ ಹೆಸರು ಚರ್ಚೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಅಕ್ರಮ ಆಸ್ತಿಗಳಿಕೆ ಪ್ರಕರಣ ಡಿಸಿಎಂ ಡಿಕೆಶಿ ಅರ್ಜಿ ವಜಾ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪದಲ್ಲಿ ತಮ್ಮ ವಿರುದ್ಧ ಸಿಬಿಐ ತನಿಖೆಯನ್ನು ಕೈಬಿಡುವಂತೆ ಸೂಚಿಸಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. 2013ರಿಂದ 2017ರವರೆಗಿನ ಅವಧಿಯಲ್ಲಿ ಡಿಕೆಶಿಯವರು ತಮ್ಮ ಆದಾಯಕ್ಕಿಂತ ಹೆಚ್ಚಿನ ಆದಾಯ ಗಳಿಸಿದ್ದಾರೆಂದು ಸಿಬಿಐ ಆರೋಪಿಸಿ, ಎಫ್‌ಐಆರ್ ದಾಖಲಿಸಿತ್ತು. ಪ್ರಕರಣವನ್ನು ಕೈಬಿಡುವಂತೆ ಸಿಬಿಐಗೆ ನಿರ್ದೇಶನ ನೀಡಬೇಕೆಂದು ಡಿಕೆಶಿ ಮನವಿ ಸಲ್ಲಿಸಿದ್ದರು.

ಕಾಪಿರೈಟ್ ಉಲ್ಲಂಘನೆ: ರಕ್ಷಿತ್ ಶೆಟ್ಟಿ ವಿರುದ್ಧ ದೂರು

ಬೆಂಗಳೂರು: ಕಾಪಿ ರೈಟ್ ಉಲ್ಲಂಘನೆ ಆರೋಪದಡಿ ಪರಂವಃ ಸ್ಟುಡಿಯೋಸ್ ಪ್ರೈವೆಟ್ ಲಿಮಿಟೆಡ್ ಹಾಗೂ ನಟ ರಕ್ಷಿತ್ ಶೆಟ್ಟಿ ವಿರುದ್ಧ ಯಶವಂತಪುರ ಪೊಲೀಸ್ ಠಾಣೆ ಯಲ್ಲಿ ಎಫ್‌ಐಆರ್ ದಾಖಲಾಗಿದೆ. 'ನ್ಯಾಯ ಎಲ್ಲಿದೆ' ಚಿತ್ರದ ನ್ಯಾಯ ಎಲ್ಲಿದೆ..' ಹಾಡು ಮತ್ತು 'ಗಾಳಿ ಮಾತು' ಚಿತ್ರದ 'ಒಮ್ಮೆ ನಿನ್ನನ್ನು' ಹಾಡನ್ನು ಬ್ಯಾಚುಲರ್ ಪಾರ್ಟಿ' ಸಿನಿಮಾ ದಲ್ಲಿ ಹಕ್ಕುಸ್ವಾಮ್ಯ ಹಾಗೂ ಪ್ರಸಾರದ ಹಕ್ಕು ಖರೀದಿ ಮಾಡದೇ ಬಳಕೆಯಾಗಿದೆ ಎಂದು ಎಂಆರ್‌ಟಿ ಮ್ಯೂಸಿಕ್ ಪಾಲುದಾರ ನವೀನ್ ಕುಮಾರ್ ದೂರಿ ನಲ್ಲಿ ಆರೋಪಿಸಿದ್ದಾರೆ.

ಕಾವೇರಿ ನೀರು: ತ.ನಾಡಿನ ಸರ್ವಪಕ್ಷಗಳ ಸಭೆ ಇಂದು

ಚೆನ್ನೈ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆಯ ವಿರುದ್ಧ ಕರ್ನಾಟಕ ಸರಕಾರ ಕೈಗೊಂಡ ನಿರ್ಣಯವನ್ನು ತಮಿಳುನಾಡು ಸರಕಾರ ತೀವ್ರವಾಗಿ ಖಂಡಿಸಿದ್ದು, ಅಂತಾರಾಜ್ಯ ನದಿ ನೀರು ಬಿಕ್ಕಟ್ಟು ಪರಿಹಾರಕ್ಕಾಗಿ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ನಿರ್ಧಾರಕ್ಕಾಗಿ ಮಂಗಳವಾರ ಶಾಸಕರ ಸರ್ವಪಕ್ಷಗಳ ಸಭೆ ಕರೆಯಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಿಳಿಸಿದ್ದಾರೆ. ತಮಿಳುನಾಡಿಗೆ ನಿತ್ಯ 8 ಸಾವಿರ ಕ್ಯುಸೆಕ್ ನೀರು ಹರಿಸಲು ಕರ್ನಾಟಕ ಸರಕಾರ ಭಾನುವಾರ ನಿರ್ಧರಿತ್ತು.

ದ್ವಿತೀಯ ಪಿಯು ಪರೀಕ್ಷೆ-3 ಫಲಿತಾಂಶ ಪ್ರಕಟ ಇಂದು



ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-3ರ ಫಲಿತಾಂಶ ಮಂಗಳವಾರ ಮಧ್ಯಾಹ್ನ 3ಕ್ಕೆ ಪ್ರಕಟಗೊಳ್ಳಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಮಂಡಳಿ, ಜೂನ್ 24 ರಿಂದ ಜುಲೈ 5ರ ವರೆಗೆ ಪರೀಕ್ಷೆ ನಡೆದಿತ್ತು. ಫಲಿತಾಂಶವನ್ನು ಅಧಿಕೃತ ಜಾಲತಾಣ karresults.nic.inರಲ್ಲಿ ನೋಡಬಹುದು ಎಂದಿದೆ. ರಾಜ್ಯದ 248 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 75,995 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಪ್ರತಿಪಕ್ಷ ಪಿಟಿಐ ನಿಷೇಧಕ್ಕೆ ಮುಂದಾದ ಪಾಕ್ ಸರಕಾರ



ಇಸ್ಲಾಮಾಬಾದ್: ಪ್ರಮುಖ ಪ್ರತಿಪಕ್ಷ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರಿಕ್-ಎ-ಇನ್ಸಾಫ್ ಪಕ್ಷವನ್ನು ನಿಷೇಧ ಮಾಡುವುದಾಗಿ ಪಾಕಿಸ್ತಾನ ಸರಕಾರ ಸೋಮವಾರ ಹೇಳಿದೆ. ದೇಶ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾದ ಆರೋಪ ಹೊರಿಸಿ ಸರಕಾರ ಈ ನಿರ್ಧಾರ ತೆಗೆದುಕೊಂಡಿದೆ. ಪಿಟಿಐ ಪಕ್ಷವು ದೇಶ ವಿರೋಧಿ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ. ಹೀಗಾಗಿ ಫೆಡರಲ್ ಸರಕಾರವು ಪಿಟಿಐ ನಿಷೇಧಿಸುವ ನಿರ್ಧಾರ ತೆಗೆದುಕೊಂಡಿದೆ ಎನ್ನಲಾಗಿದೆ.

ಕರೋನಾ ನಿರ್ವಹಣೆ 30 ಕೋಟಿ ಅಕ್ರಮ



ವಿಧಾನ ಪರಿಷತ್: 2021-22ರಲ್ಲಿ ಬಿಜೆಪಿ ಸರಕಾರ ಇದ್ದಾಗ ಕರೋನಾ ನಿರ್ವಹಣೆಯಲ್ಲಿ ದೊಡ್ಡ ಅಕ್ರಮವಾಗಿದೆ. ಔಷಧಿ ಸೇರಿ ಇನ್ನಿತರ ಖರೀದಿಯಲ್ಲಿ ಅಕ್ರಮವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಸದನದಲ್ಲಿ ಧ್ವನಿ ಎತ್ತಿದ್ದಾರೆ. ಶೂನ್ಯ ವೇಳೆಯಲ್ಲಿ ಮಾತನಾಡಿ, ಲೆಕ್ಕ ಪರಿಶೋಧನೆ ವರದಿಯಲ್ಲಿ ಅಕ್ರಮದ ಬಗ್ಗೆ ಪ್ರಸ್ತಾಪ ಇದೆ. ಸುಮಾರು 30 ಕೋಟಿ ರು. ಅಕ್ರಮದ ಆಗಿದೆ. ಈ ಬಗ್ಗೆ ತನಿಖೆ ಮಾಡಿ ತಪ್ಪು ಮಾಡಿರುವವರ ವಿರುದ್ಧ ಕ್ರಮ ಕೈಕೊಳ್ಳಬೇಕು ಎಂದರು.

ಸಮಾಚಾರ ಸಣ್ಣದಲ್ಲ

ರೇಣುಕಾಸ್ವಾಮಿ ಹತ್ಯೆ ಸಿಸಿಟಿವಿ ದೃಶ್ಯ ಪತ್ತೆ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರು, ಘಟನೆಯ ದಿನ ನಟ ದರ್ಶನ್ ಮತ್ತು ಸಹವರ್ತಿಗಳು ಸಂಚರಿಸಿರುವ ಮಾರ್ಗದ ಸಿಸಿಟಿವಿ ದೃಶ್ಯಗಳನ್ನು ಕಲೆಹಾಕಿ, ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಹಾಗೂ ಸಿಐಡಿಯ ತಾಂತ್ರಿಕ ಘಟಕಕ್ಕೆ ರವಾನಿಸಿದ್ದಾರೆ.

ಆರೋಪಿಗಳು ಪಾರ್ಟಿ ಮಾಡಿದ್ದ ಆರ್. ಆರ್. ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಿಂದ ಪಟ್ಟಣಗೆರೆ ಶೆಡ್ ಮಾರ್ಗದಲ್ಲಿರುವ ಸಿಸಿಟಿವಿ ಕ್ಯಾಮರಾ ದೃಶ್ಯಗಳು, ಪಟ್ಟಣಗೆರೆ ಶೆಡ್‌ನಲ್ಲಿರುವ ಸಿಸಿಟಿವಿ ದೃಶ್ಯಾವಳಿ, ಮೃತದೇಹ ಸಾಗಿಸಿದ್ದಾರೆನ್ನಲಾದ ಸುಮನಹಳ್ಳಿ ರಾಜಕಾಲುವೆ ಮಾರ್ಗದಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದೆ. ಅಲ್ಲದೆ ದರ್ಶನ್, ಪವಿತ್ರಾಗೌಡ ಸೇರಿದಂತೆ ಪ್ರಮುಖ ಆರೋಪಿಗಳ ಮನೆಗಳು, ಸುತ್ತಮುತ್ತಲಿನ ಸಿಸಿಟಿವಿ ದೃಶ್ಯ ಸೇರಿದಂತೆ ಈವರೆಗೂ 30ಕ್ಕೂ ಅಧಿಕ ಸಿಸಿಟಿವಿಗಳ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯ ಆಗಲಿರುವ ಸಿಸಿಟಿವಿ ದೃಶ್ಯಗಳನ್ನು ಟೈಮ್‌ಲೈನ್ ಹೊಂದಾಣಿಕೆ, ಕೂಲಂಕಷ ಪರಿಶೀಲನೆಗಾಗಿ ಎಫ್‌ಎಸ್‌ಎಲ್ ಹಾಗೂ ಸಿಐಡಿಯ ತಾಂತ್ರಿಕ ಘಟಕಕ್ಕೆ ರವಾನಿಸಲಾಗಿದೆ. ಸಮಗ್ರ ವರದಿಗಾಗಿ ಕಾಯುತ್ತಿರುವ ಪೊಲೀಸರು, ಬಳಿಕ ವಿವರಗಳನ್ನು ಚಾರ್ಜ್‌ಶೀಟ್‌ನಲ್ಲಿ ಸೇರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ನೈಸ್ ರಸ್ತೆಯಲ್ಲಿ: ಜಿಟಿ ಜಿಟಿ ಮಳೆಯಲ್ಲಿ ನಿಯಂತ್ರಣ ತಪ್ಪಿದ ಸ್ಕಾರ್ಪಿಯೋ

ಸರಣಿ ಅಪಘಾತ: ನಾಲ್ವರ ಸಾವು ಏಳು ಪ್ರಯಾಣಿಕರಿಗೆ ಗಾಯ

ಬೆಂಗಳೂರು: ಚಾಲಕನ ನಿಯಂತ್ರಣ ತಪ್ಪಿದ ಸ್ಕಾರ್ಪಿಯೋ ಕಾರು ಡಿವೈಡರ್‌ಗೆ ಗುದ್ದಿ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದ ಘಟನೆ ಬನ್ನೇರುಘಟ್ಟ ನೈಸ್ ರಸ್ತೆಯ ಟೋಲ್ ಬಳಿ ನಡೆದಿದೆ. ದುರಂತದಲ್ಲಿ ಸ್ಕಾರ್ಪಿಯೋದಲ್ಲಿದ್ದ ಮೂವರು ಪ್ರಯಾಣಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ನಂಜೇಶ್(35), ವಿನೋದ್ (34) ಕುಮಾರ್(35) ಮೃತ ದುರ್ದೈವಿಗಳು. ಮೃತರ ಪೈಕಿ ವಿನೋದ್, ಕನಕಪುರದ ಶಿವನಳ್ಳಿ ನಿವಾಸಿಯಾಗಿದ್ದು, ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದ. ಕುಮಾರ್ ರಾಮನಗರದ ಚೀಲೂರು ಗ್ರಾಮದವನಾದರೆ, ನಂಜೇಶ್ ಕಾಳೇಗೌಡನ ದೊಡ್ಡಿಯ ನಿವಾಸಿಯಾಗಿದ್ದ. ಮೂವರೂ ಗೋವಾಗೆ ತೆರಳಲು ಬೆಂಗಳೂರಿನತ್ತ ಬರುತ್ತಿದ್ದರು.

ಅಪಘಾತಕ್ಕೀಡಾದ ಸ್ಕಾರ್ಪಿಯೋ ಕಾರು ಹೊಸೂರು ಕಡೆಯಿಂದ ಬರುತ್ತಿತ್ತು. ಮಹೇಂದ್ರ ಎಕ್ಸ್‌ಯುವಿ 700 ಕಾರು ಮೈಸೂರು ರಸ್ತೆ ಕಡೆಯಿಂದ ಬರುತ್ತಿತ್ತು. ಈ ವೇಳೆ ಮಳೆಗೆ ನಿಯಂತ್ರಣ ತಪ್ಪಿ ಸ್ಕಾರ್ಪಿಯೋ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಕಾರ್ಪಿಯೋ ಡಿಕ್ಕಿ ಹೊಡೆದ ಪರಿಣಾಮ ಮತ್ತೊಂದು ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಕೂಡಲೇ ಗಂಭೀರವಾಗಿ ಗಾಯಗೊಂಡ ಇಬ್ಬರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಕೆಂಗೇರಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಅಪಘಾತ

ಎಲೆಕ್ಟ್ರಾನಿಕ್ ಸಿಟಿ ಬಳಿ ನೈಸ್‌ರಸ್ತೆಯಲ್ಲಿ ಸರಣಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಓರ್ವ ಮೃತಪಟ್ಟಿದ್ದು, ಐವರಿಗೆ ಗಂಭೀರ ಗಾಯಗಳಾಗಿವೆ. ಎಲಿನ್ಸ್ ಕಂಪನಿ ಉದ್ಯೋಗಿ ಕುಣಿಗಲ್ ಮೂಲದ ದೇವರಾಜ್(42) ಮೃತ ದುರ್ದೈವಿ. ಗೊರಗುಂಟೆಪಾಳ್ಯದಿಂದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶಕ್ಕೆ ತೆರಳುತ್ತಿದ್ದ ಎಲಿನ್ಸ್ ಕಂಪನಿ ಬಸ್ ನೈಸ್ ರಸ್ತೆಯಲ್ಲಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಹಿಂದೆ ವೇಗವಾಗಿ ಬರುತ್ತಿದ್ದ ಎರಡು ಕಾರುಗಳು ಸಹ ಬಸ್ ಹಿಂಬದಿಗೆ ಡಿಕ್ಕಿ ಹೊಡೆದಿವೆ. ಪರಿಣಾಮ ಕಂಪನಿಯ ಮಿನಿ ಬಸ್‌ನಲ್ಲಿ ಚಾಲಕನ ಪಕ್ಕ ಕುಳಿತಿದ್ದ ದೇವರಾಜ್ ಮೃತಪಟ್ಟಿದ್ದಾನೆ. ಇನ್ನು ಮಿನಿಬಸ್‌ನಲ್ಲಿದ್ದ ಐವರಿಗೆ ಗಾಯಾಳಾಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತಕ್ಕೆ ಕಾರಣವೇನು?

ನೈಸ್‌ರಸ್ತೆಯ ಭೀಕರ ಅಪಘಾತದ ಸ್ಥಳಕ್ಕೆ ಪಶ್ಚಿಮ ವಿಭಾಗ ಸಂಚಾರ ಡಿಸಿಪಿ ಅನಿತಾ ಹದ್ದಣ್ಣವರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿದ ಅವರು, ಸೋಮವಾರ ಮಧ್ಯಾಹ್ನ 3.45ಕ್ಕೆ ನೈಸ್ ರಸ್ತೆ ಚನ್ನಸಂದ್ರ ಬ್ರಿಡ್ಜ್ ಬಳಿ ಈ ಅಪಘಾತ ನಡೆದಿದೆ. ಈ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ. ಮೃತ ಮೂವರು ಕೂಡ ಸ್ಕಾರ್ಪಿಯೋ ವಾಹನದಲ್ಲಿದ್ದರು. ಕನಕಪುರದಿಂದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದರು. ವಿನೋದ್ ಎಂಬಾತ ಕಾರು ಚಾಲನೆ ಮಾಡುತ್ತಿದ್ದ. ವಿನೋದ್ ಗ್ರಾಮ ಪಂಚಾಯತ್ ಸದಸ್ಯರಾಗಿದ್ದಾರೆ. ಸ್ಕಾರ್ಪಿಯೋ ಕಾರು ಡಿವೈಡರ್‌ಗೆ ತಗುಲಿ ಪಕ್ಕದ ರಸ್ತೆಗೆ ಬಂದಿದೆ. ಬೆಂಗಳೂರಿನಿಂದ ಹೊಸೂರು ರಸ್ತೆ ಮಾರ್ಗವಾಗಿ ಹೋಗುತ್ತಿದ್ದ ಎಕ್ಸ್‌ಯುವಿ 700 ಕಾರಿಗೆ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಇಬ್ಬರಿಗೂ ಗಾಯವಾಗಿದೆ. ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಹೇಳಿದ್ದಾರೆ. ಸ್ಕಾರ್ಪಿಯೋ ಕಾರಿನ ಟೈರ್ ಬ್ಲಾಸ್ಟ್ ಆಗಿ ಸ್ಕಿಡ್ ಆಗಿದೆ. ಎದುರು ರಸ್ತೆಯಲ್ಲಿ ಬರುತ್ತಿದ್ದ ಎಕ್ಸ್‌ಯುವಿ ಕಾರಿಗೆ ಡಿಕ್ಕಿಯಾಗಿದೆ ಎನ್ನುವ ಮಾಹಿತಿ ಸಿಕ್ಕಿದೆ. ಮೇಲ್ನೋಟಕ್ಕೆ ಅತಿವೇಗವೇ ಈ ಅಪಘಾತಕ್ಕೆ ಕಾರಣ ಎನ್ನಲಾಗುತ್ತಿದೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

187 ಕೋಟಿ ಲೂಟಿಗೆ ನಕಲಿ ವ್ಯಕ್ತಿ ಸೃಷ್ಟಿಸಿ ಹುದ್ದೆ ನೀಡಿದ್ದ ಎಂಡಿ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಕೋಟ್ಯಂತರ ರು. ಹಣ ಲೂಟಿಮಾಡಲು ನಕಲಿ ಹುದ್ದೆಯನ್ನೇ ಸೃಷ್ಟಿಸಿದ ಘಟನೆ ಈಗ ಬೆಳಕಿಗೆ ಬಂದಿದೆ.

ಜಾರಿ ನಿರ್ದೇಶನಾಲಯದ ಪ್ರವೇಶದ ಬಳಿಕ ಒಂದೊಂದೇ ಸ್ಫೋಟಕ ಮಾಹಿತಿಗಳು ಹೊರಬರುತ್ತಿವೆ. ಕೋಟ್ಯಂತರ ರುಪಾಯಿ ಹಣವನ್ನು ಲೂಟಿ ಹೊಡೆಯಲು ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ನಕಲಿ ವ್ಯಕ್ತಿಯನ್ನೇ ಸೃಷ್ಟಿಸಿ ನಿಗಮದಲ್ಲಿ ಹುದ್ದೆ ಸಹ ನೀಡಿದ್ದರು. ಈ ನಕಲಿ ವ್ಯಕ್ತಿ 45 ಕೋಟಿ ರು. ವ್ಯವಹಾರ ಮಾಡಿದ ವಿಚಾರ ಈಗ ಬೆಳಕಿಗೆ ಬಂದಿದೆ.

ಲೂಟಿಗಾಗಿ ನಕಲಿ ಹುದ್ದೆ: ಕೋಟಿ ಕೋಟಿ ಲೂಟಿ ಹೊಡೆಯಲು ಪದ್ಮನಾಭ್ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿಸಿ, ಆ ಹುದ್ದೆಗೆ ಶಿವಕುಮಾರ್ ಹೆಸರಿನ ಉದ್ಯೋಗಿಯನ್ನು ನೇಮಿಸಲಾಗಿತ್ತು. ಜ್ಯೂನಿಯರ್ ಅಕೌಂಟೆಂಟ್ ಅಂತಾ ಐಡಿ ಕಾರ್ಡ್ ನೀಡಿ ಹಣಕಾಸು ವ್ಯವಹಾರ ನೋಡಿಕೊಳ್ಳುವ ಅಧಿಕಾರ ನೀಡಲಾಗಿತ್ತು. ಅಸಲಿಗೆ ಶಿವಕುಮಾರ್ ಹೆಸರಿನ ವ್ಯಕ್ತಿಯೇ ಇರಲಿಲ್ಲ. ಹಣಕ್ಕೆ ಕನ್ನಹಾಕಲು ಎಂಜಿ ರಸ್ತೆಯ ಯೂನಿಯನ್ ಬ್ಯಾಂಕ್‌ನಲ್ಲಿ ಫೆ. 21ರಂದು 034123030001619 ಖಾತೆ ತೆರೆಯಲಾಗಿತ್ತು. ಈ ಶಿವಕುಮಾರ್ ಖಾತೆಗೆ ನಿಗಮದಿಂದ 187 ಕೋಟಿ ರು. ವರ್ಗಾವಣೆಗೆ ಮನವಿ ಹೋಗುತ್ತದೆ. ಮನವಿ ಮೇರೆಗೆ ನಿಗಮದಿಂದ ಮಾ. 5ರಿಂದ ಮೇ 6 ರವರೆಗೆ 187 ಕೋಟಿ ರು. ವರ್ಗಾವಣೆಯಾಗುತ್ತದೆ. ಶಿವಕುಮಾರ್ ಖಾತೆಯಿಂದ ಹೈದರಾಬಾದ್‌ನ ಆರ್‌ಬಿಎಲ್ ಬ್ಯಾಂಕ್‌ಗೆ ಹಣ ವರ್ಗಾವಣೆ ಆಗುತ್ತದೆ. ಪದ್ಮನಾಭ್ ಕೃತ್ಯಕ್ಕೆ ಯೂನಿಯನ್ ಬ್ಯಾಂಕ್ ಸಿಬ್ಬಂದಿ ಬೆಂಬಲ ನೀಡಿದ್ದರಿಂದ ಇಷ್ಟೊಂದು ಹಣವನ್ನು ಲೂಟಿಮಾಡಲಾಗಿದೆ.

ನಾಗೇಂದ್ರ ಆದಾಯದ ಮೂಲ ಕೆದಕಲು ಮುಂದಾದ ಇಡಿ ಅಧಿಕಾರಿಗಳು

ವಾಲ್ಮೀಕಿ ನಿಗಮದಲ್ಲಿ ನಡೆದಿರುವ 187 ಕೋಟಿ ಹಗರಣಕ್ಕೆ ಸಂಬಂಧ ಮಾಜಿ ಸಚಿವ ನಾಗೇಂದ್ರ ಆದಾಯದ ಮೂಲ ಕೆದಕಲು ಜಾರಿ ನಿರ್ದೇಶನಾಲಯ ಮುಂದಾಗಿದೆ. 2023ರ ವಿಧಾನಸಭೆ ಚುನಾವಣೆ ವೇಳೆ ನಾಗೇಂದ್ರ ಸಲ್ಲಿಕೆ ಮಾಡಿರುವ ಪ್ರಮಾಣಪತ್ರ ಹಾಗೂ ದಾಳಿ ವೇಳೆ ಸಿಕ್ಕಿದ ಆಸ್ತಿಪತ್ರಗಳನ್ನು ತಾಳೆಮಾಡಲು ಮುಂದಾಗಿದೆ ಎಂಬ ವಿಚಾರ ಮೂಲಗಳಿಂದ ತಿಳಿದುಬಂದಿದೆ.

6.6 ಕೋಟಿ ಮೌಲ್ಯದ ಅಕ್ರಮ ಚಿನ್ನ ಜಪ್ತಿ

ಬೆಂಗಳೂರು: ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, 5 ದಿನಗಳ ಅಂತರದಲ್ಲಿ ಅಕ್ರಮವಾಗಿ ಚಿನ್ನ ಸಾಗಾಣಿಕೆ ಮಾಡುತ್ತಿದ್ದ 11 ಪ್ರಕರಣಗಳನ್ನ ಪತ್ತೆ ಮಾಡುವ ಮೂಲಕ 8 ಸ್ಮಗ್ಲರ್ಸ್‌ಗಳನ್ನು ಬಂಧಿಸಿದ್ದಾರೆ.

ಅಕ್ರಮವಾಗಿ ಚಿನ್ನ ಸಾಗಿಸಲು ಸ್ಮಗ್ಲರ್ಸ್‌ಗಳು ಸುಲಭ ದಾರಿ ಎಂದು ವಾಯುಮಾರ್ಗವನ್ನ ಬಳಸುತ್ತಾರೆ. ಆದರೆ ಸ್ಮಗ್ಲರ್ಸ್‌ಗಳನ್ನು ಭೇಟಿಯಾಗಲೆಂದೆ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಾದು ಕುಳಿತಿರುತ್ತಾರೆ. ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಕಳೆದ 5 ದಿನಗಳಲ್ಲಿ ಭರ್ಜರಿ ಕಾರ್ಯಾಚರಣೆ ನಡೆಸಿದ್ದಾರೆ.

ಜು.9 ರಿಂದ 13 ರವರೆಗೆ ವಿವಿಧ 11 ಅಕ್ರಮ ಚಿನ್ನ ಸಾಗಣೆ ಪ್ರಕರಣಗಳನ್ನ ಪತ್ತೆ ಮಾಡಿದ್ದಾರೆ. ಕಂದಾಯ ಗುಪ್ತಚಾರ ನಿರ್ದೇಶನಾಲಯದ ಖಚಿತ ಮಾಹಿತಿ ಮೇರೆಗೆ ಪ್ರಕರಣಗಳು ಬೆಳಕಿಗೆ ಬಂದಿದ್ದು, 11 ಪ್ರಕರಣಗಳಲ್ಲಿ 9375 ಗ್ರಾಂ ತೂಕದ 6.6 ಕೋಟಿ ಮೌಲ್ಯದ ಚಿನ್ನವನ್ನ ಜಪ್ತಿ ಮಾಡಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣ: ಡಿಕೆಶಿ ಅರ್ಜಿ ವಜಾ

ಬೆಂಗಳೂರು: ಅಕ್ರಮ ಆಸ್ತಿ ಗಳಿಕೆ ಆರೋಪದಲ್ಲಿ ತಮ್ಮ ವಿರುದ್ಧ ಕೇಂದ್ರೀಯ ತನಿಖಾ ಸಂಸ್ಥೆ ಆರಂಭಿಸಿರುವ ತನಿಖೆಯನ್ನು ಕೈಬಿಡುವಂತೆ ಸೂಚಿಸಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.



2013ರಿಂದ 2017ರವರೆಗಿನ ಅವಧಿಯಲ್ಲಿ ಡಿಕೆಶಿಯವರು ತಮ್ಮ ಆದಾಯಕ್ಕಿಂತ ಹೆಚ್ಚಿನ ಆದಾಯ ಗಳಿಸಿದ್ದಾರೆಂದು ಸಿಬಿಐ ಆರೋಪಿಸಿದ್ದು, ಆ ಕುರಿತಂತೆ ಎಫ್‌ಐಆರ್ ದಾಖಲಿಸಿತ್ತು. ಆ ಪ್ರಕರಣವನ್ನು ಕೈಬಿಡುವಂತೆ ಸಿಬಿಐಗೆ ನಿರ್ದೇಶನ ನೀಡಬೇಕೆಂದು ಕೋರಿ ಡಿಕೆಶಿ ಮನವಿ ಸಲ್ಲಿಸಿದ್ದರು. ಆ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಬಾಲಾ ತ್ರಿವೇದಿ ನೇತೃತ್ವದ ಪೀಠ, ಡಿ.ಕೆ.ಶಿವಕುಮಾರ್ ಅರ್ಜಿಯನ್ನು ವಜಾಗಳಿಸಿತು.

ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಭ್ರಷ್ಟಾಚಾರ ತಡೆ ಕಾಯಿದೆಯ ಸೆಕ್ಷನ್ 17ಎ ಅಡಿಯಲ್ಲಿ ಅನುಮತಿ ಪಡೆಯದೇ ತನಿಖೆ ಆರಂಭಿಸಲಾಗಿದೆ. 2018 ರ ತಿದ್ದುಪಡಿಯ ದಿನಾಂಕದ ಮೊದಲು ಸೆಕ್ಷನ್ 17 ಎ ಸೇರಿಸಲಾದ ಅಪರಾಧಗಳಿಗೆ ಸೆಕ್ಷನ್ 17 ಎ ಅನ್ವಯಿಸುತ್ತದೆಯೇ ಎಂಬ ವಿಷಯವನ್ನು ಘನ ಪೀಠಕ್ಕೆ ಉಲ್ಲೇಖಿಸಲಾಗಿದೆ ಎಂದು ಅವರು ಚಂದ್ರಬಾಬು ನಾಯ್ಡು ಪ್ರಕರಣದ ತೀರ್ಪನ್ನು ಉಲ್ಲೇಖಿಸಿದರು.

ವಾದ -ಪ್ರತಿವಾದ ಆಲಿಸಿದ ನ್ಯಾ. ತ್ರಿವೇದಿ ಅವರು, ವಿಭಜಿತ ತೀರ್ಪಿನ ಆಧಾರದ ಮೇಲೆ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗುವುದಿಲ್ಲ ಎಂದರು. ಡಿಕೆಶಿ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಅರ್ಜಿಯ ಕುರಿತು ನೋಟಿಸ್ ಜಾರಿ ಮಾಡುವಂತೆ ಮನವಿ ಮಾಡುತ್ತಿರುವುದಾಗಿ ತಿಳಿಸಿದರು. ಆದರೆ, ಪೀಠ ಇದಕ್ಕೆ ನಿರಾಸಕ್ತಿ ವ್ಯಕ್ತಪಡಿಸಿತು.

ಏನಿದು ಪ್ರಕರಣ?

ಈ ಹಿಂದಿನ ಸಿದ್ದರಾಮಯ್ಯನವರ ರಾಜ್ಯ ಸರಕಾರದಲ್ಲಿ ಡಿಕೆಶಿಯವರು ಇಂಧನ ಸಚಿವರಾಗಿದ್ದರು. ಆ ಸರಕಾರದ ಅವಧಿಯಲ್ಲಿ 74 ಕೋಟಿ ರು.ಗಳಷ್ಟು ದಾಖಲೆರಹಿತ ಆದಾಯವನ್ನು ಡಿ.ಕೆ. ಶಿವಕುಮಾರ್ ಅವರು ಗಳಿಸಿದ್ದಾರೆಂದು ಹೇಳಲಾಗಿದೆ. ಅದರಂತೆ, 74.93 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಗಳಿಸಿದ್ದಾರೆಂದು ಸಿಬಿಐ ಆರೋಪಿಸಿತ್ತು. ಆ ಹಿನ್ನೆಲೆಯಲ್ಲಿ ಅವರ ವಿರುದ್ಧ ತನಿಖೆ ನಡೆಸಲು ಅನುಮತಿ ಕೋರಿ 2019ರಲ್ಲಿ ರಾಜ್ಯ ಸರಕಾರಕ್ಕೆ ಸಿಬಿಐ ಅರ್ಜಿ ಸಲ್ಲಿಸಿತ್ತು. 2019ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರ, ಸಿಬಿಐ ಮನವಿಗೆ ಸ್ಪಂದಿಸಿ ತನಿಖೆಗೆ ಅನುಮತಿ ನೀಡಿತ್ತು. ಆನಂತರ ಸಿಬಿಐ, ಡಿ.ಕೆ. ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿತ್ತು. ಅದೇ ತನಿಖೆಯನ್ನು ಕೈಬಿಡುವಂತೆ ಡಿಕೆ ಶಿವಕುಮಾರ್ ಅವರು ಹೈಕೋರ್ಟ್‌ನಲ್ಲಿ ಮನವಿ ಸಲ್ಲಿಸಿದ್ದು ಮೊದಲಿಗೆ ಅದು ವಿಭಾಗೀಯ ಪೀಠದಲ್ಲಿ ವಿಚಾರಣೆಯಾಗಿ ಆನಂತರ ಅದೀಗ ವಿಸ್ತ್ರೃತ ಪೀಠಕ್ಕೆ ವರ್ಗಾವಣೆ ಯಾಗಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಿದ್ದ ಹಿಂದಿನ ಸರಕಾರದ ನಿರ್ಧಾರವನ್ನು ಹಾಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ರದ್ದು ಮಾಡಲು ನಿರ್ಧರಿಸಿದೆ. ಅದರ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಇತರರು ಹೈಕೋರ್ಟ್ ಮೊರೆ ಹೋಗಿದ್ದಾರೆ. ಮತ್ತೆ ಹೈಕೋರ್ಟ್ ಮೊರೆ ಹೋಗಿರುವ ಸಿಬಿಐ, ಒಮ್ಮೆ ತನಿಖೆಗೊಳಪಡಿಸಲಾಗಿರುವ ಪ್ರಕರಣವನ್ನು ಪುನಃ ಹಿಂಪಡೆಯುವುದು ಸಲ್ಲದು ಎಂದು ಹೈಕೋರ್ಟ್‌ನಲ್ಲಿ ವಾದ ಮಂಡಿಸಿದೆ. ಅತ್ತ, ಸುಪ್ರೀಂ ಕೋರ್ಟ್‌ಗೂ ಸಿಬಿಐ ಮೇಲ್ಮನವಿ ಸಲ್ಲಿಸಿದೆ.

Norican Group
Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಛೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ,
ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ,
ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055. ಫೋನ್: +91 80 22496700.
ಇ-ಮೇಲ್: investor.relations@noricangroup.com www.disagroup.com
CIN No: L85110KA1984PLC006116

39ನೇ ವಾರ್ಷಿಕ ಸಾಮಾನ್ಯ ಸಭೆ, ಪರೋಕ್ಷ ಇ-ಮತದಾನದ ಮಾಹಿತಿ ಮತ್ತು ದಾಖಲೆ ಪುಸ್ತಕ ಮುಚ್ಚುವ ಬಗ್ಗೆ ಪ್ರಕಟಣೆ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 9/2023 ದಿನಾಂಕ ಸೆಪ್ಟೆಂಬರ್ 25, 2023 ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023 (ಸಮಷ್ಟಿಯಿಂದ **ಸಂಬಂಧಿತ ಸುತ್ತೋಲೆಗಳು**), ಸಂಸ್ಥೆಗಳ ಕಾಯಿದೆ, 2013 (ಕಾಯಿದೆ)ಯ ಅನ್ವಯವಾಗುವ ಇತರೆ ನಿಬಂಧನೆಗಳು, ಅದರಡಿಯಲ್ಲಿ ಮಾಡಲಾಗಿರುವ ನಿಯಮಗಳು ಹಾಗೂ ಸೆಬಿ (ಲಿಸ್ಟಿಂಗ್ ಒಬ್ಲಿಗೇಷನ್ಸ್ ಮತ್ತು ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ಇವುಗಳನ್ನು ಅನುಸರಿಸಿ ಸಂಸ್ಥೆಯ 39ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ)ಯನ್ನು ಗುರುವಾರ, ಆಗಸ್ಟ್ 8, 2024 ರಂದು ಬೆಳಗ್ಗೆ 11 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ ಅಥವಾ ಇತರ ದೃಶ್ಯಶ್ರಾವ್ಯ ಮಾಧ್ಯಮಗಳ (VC) ಮೂಲಕ ನಡೆಸಲಾಗುವುದು. ವಾರ್ಷಿಕ ಸಾಮನ್ಯ ಸಭೆಯಲ್ಲಿ ವಿಸಿಯ ಮೂಲಕ ಭಾಗವಹಿಸುವ ಸದಸ್ಯರನ್ನು ಕಾಯಿದೆಯ ಕಲಂ 103 ರ ಪ್ರಕಾರ ಹಾಜರಾಗಿರುವವರೆಂದು ಪರಿಗಣಿಸಲಾಗುವುದು.

ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಸಂಬಂಧಿತ ಸುತ್ತೋಲೆಗಳನ್ನು** ಅನುಸರಿಸಿ, ಸಂಸ್ಥೆಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (RTA)/ಡೆಪಾಸಿಟರಿ ಪಾರ್ಟಿಸಿಪೆಂಟ್(ಸ್) (DP) ನಲ್ಲಿ ತಮ್ಮ ವಿದ್ಯುನ್ಮಾನ ಅಂಚೆ (e-mail) ಯನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ವಿದ್ಯುನ್ಮಾನ ವಿಧಾನದ ಮೂಲಕ, ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ ಹಾಗೂ ವಾರ್ಷಿಕ ವರದಿಗಳನ್ನು ಜುಲೈ 15, 2024 ರಂದು ರವಾನಿಸಿದೆ. ಮೇಲೆ ಸೂಚಿಸಿರುವ ದಾಖಲಾತಿಗಳು ಸಂಸ್ಥೆಯ ಜಾಲತಾಣ https://www.disagroup.com/en-in/investor-relations/financial-reports/annual-reports ಹಾಗೂ ಸ್ಟಾಕ್ ಎಕ್ಸ್‌ಚೇಂಜ್ ಅಂದರೆ ಬಿಎಸ್‌ಇ ಲಿಮಿಟೆಡ್‌ನ ಜಾಲತಾಣ www.bseindia.com ದಲ್ಲೂ ಲಭ್ಯವಾಗಿದೆ.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಹಾಗೂ ತಮ್ಮ e-mail ಅನ್ನು ನೋಂದಾಯಿಸದ ಸದಸ್ಯರಿಗೆ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಹೇಳಲಾಗಿರುವ ವ್ಯಾಪಾರ ವಹಿವಾಟುಗಳ ಕುರಿತಾಗಿ ಪರೋಕ್ಷವಾಗಿ ಅಥವಾ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತಗಳನ್ನು ಚಲಾಯಿಸಲು ಅವಕಾಶವಿರುತ್ತದೆ. ಸಂಸ್ಥೆಯ ಷೇರುಗಳನ್ನು ಇಲೆಕ್ಟ್ರಾನಿಕ್ ಅಥವಾ ಭೌತಿಕ ರೂಪದಲ್ಲಿ ಹೊಂದಿರುವ ಸದಸ್ಯರಿಗೆ ವಿದ್ಯುನ್ಮಾನ ಮತ ಚಲಾಯಿಸುವ ವಿಧಾನವನ್ನು ಸಹ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಒದಗಿಸಲಾಗಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ e-mail ಹಾಗೂ ಸಂಚಾರಿ ದೂರವಾಣಿ ಸಂಖ್ಯೆಯ ವಿವರಗಳನ್ನು ಆಯಾ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಿಗೆ ಸಲ್ಲಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಸದಸ್ಯರು, ಈ ವಿವರಗಳನ್ನು ಸಂಸ್ಥೆಯ RTA ಆಗಿರುವ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಲಿಮಿಟೆಡ್ ಇವರಿಗೆ ಸಲ್ಲಿಸಲು ಕೋರಲಾಗಿದೆ. ಲಾಭಾಂಶವನ್ನು ಸಕಾಲದಲ್ಲಿ ಪಡೆದುಕೊಳ್ಳಲು ವಿದ್ಯುನ್ಮಾನ ತೇವಣಿ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಕೋರಲಾಗಿದೆ. ಸದಸ್ಯರು ವಿದ್ಯುನ್ಮಾನ ತೇವಣಿ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಲು ನಾವು ಉತ್ತೇಜಿಸುತ್ತೇವೆ.

ಪರೋಕ್ಷ ಇ-ಮತದಾನ ಹಾಗೂ ಎಜಿಯಂನಲ್ಲಿ ನಡೆಯಲಿರುವ ಇ-ಮತದಾನದ ವಿಧಿವಿಧಾನಗಳು

ಕಾಯಿದೆಯ ಕಲಂ 108, ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದಂತೆ ಕಂಪನಿಗಳ (ನಿರ್ವಹಣೆ ಹಾಗೂ ಆಡಳಿತ) ನಿಯಮಗಳು, 2014ರ ನಿಯಮ 20 'ಸಂಬಂಧಿತ ಸುತ್ತೋಲೆಗಳು' ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳಿಗೆ ಸಂಬಂಧಿಸಿದ ಕಾರ್ಯದರ್ಶಿ ಮಾನದಂಡಗಳು ಮತ್ತು ಸೆಬಿ (ಲಿಸ್ಟಿಂಗ್ ಒಬ್ಲಿಗೇಷನ್ಸ್ ಮತ್ತು ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಾವಳಿಗಳು, 2015ರ ನಿಯಮಾವಳಿ 44 ಇವುಗಳಿಗೆ ಬದ್ಧವಾಗಿ, ಕೈಗೊಳ್ಳುವ ವಹಿವಾಟಿಗೆ ಸಂಬಂಧಿಸಿ, ಕಂಪನಿಯು ಸದಸ್ಯರಿಗೆ ಪರೋಕ್ಷ ಇ-ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಹಾಗೂ ಈ ಉದ್ದೇಶಕ್ಕಾಗಿ ಅದು ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಒದಗಿಸಲು ಸಿಡಿಎಸ್‌ಎಲ್ (CDSL) ಸಂಸ್ಥೆಯನ್ನು ನೇಮಕ ಮಾಡಿದೆ.

ದೃಶ್ಯಶ್ರಾವ್ಯ ಮಾಧ್ಯಮಗಳ (VC) ಮೂಲಕ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಸದಸ್ಯರು ಪರೋಕ್ಷ ಇ-ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಿಲ್ಲವಾದ ಪಕ್ಷದಲ್ಲಿ, ಸರ್ವಸದಸ್ಯರ ಸಭೆಯಲ್ಲಿ ಒದಗಿಸಲಾಗುವ ಇ-ಮತದಾನದ ಸೌಲಭ್ಯವನ್ನು ಬಳಸಿ ಮತಗಳನ್ನು ಚಲಾಯಿಸಬಹುದು. ವಾರ್ಷಿಕ ಸಾಮಾನ್ಯ ಸಭೆಯ ಮೊದಲು, ಪರೋಕ್ಷ ಇ-ಮತದಾನದ ಸೌಲಭ್ಯವನ್ನು ಬಳಸಿ ಮತ ಚಲಾಯಿಸಿದ ಸದಸ್ಯರು VC ಮೂಲಕ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬಹುದಾರೂ, ಪುನಃ ಮತ ಚಲಾಯಿಸುವಂತಿಲ್ಲ. ವಾರ್ಷಿಕ ಸಾಮಾನ್ಯ ಸಭೆಯ ಸಮಯದಲ್ಲಿ ಇ-ಮತದಾನವನ್ನು ಬಳಸಿಕೊಂಡು ಸದಸ್ಯರು ಮತ ಚಲಾಯಿಸುವ ಸೌಲಭ್ಯವನ್ನು CDSL ಒದಗಿಸುತ್ತದೆ.

ಪರೋಕ್ಷ ಇ-ಮತದಾನ ಹಾಗೂ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆಯುವ ಇ-ಮತದಾನ ಸಂಬಂಧಿಸಿದ ಮಾಹಿತಿ ಹಾಗೂ ಮಾರ್ಗ ಸೂಚಿಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಒದಗಿಸಲಾಗಿದೆ. ದೃಶ್ಯಶ್ರಾವ್ಯ ಮಾಧ್ಯಮಗಳ (VC) ಮೂಲಕ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅದೇ ಲಾಗಿನ್ ವಿವರಗಳನ್ನು ಬಳಸತಕ್ಕದ್ದು.

ಸದಸ್ಯರ ಇ-ಮತದಾನದ ಹಕ್ಕುಗಳನ್ನು, ದಿನಾಂಕ **ಆಗಸ್ಟ್ 1, 2024**ರಂದು ಅವರು ಭೌತಿಕ ಸ್ವರೂಪದಲ್ಲಿ ಅಥವಾ ವಿದ್ಯುನ್ಮಾನ ಮಾಧ್ಯಮದಲ್ಲಿ ಹೊಂದಿರುವ ಸಂಸ್ಥೆಯ ಸಾಮಾನ್ಯ ಷೇರುಗಳ ಆಧಾರದಿಂದ ಪರಿಗಣಿಸಲಾಗುವುದು. ಪರೋಕ್ಷ ಇ-ಮತದಾನದ ಅವಧಿ ಆಗಸ್ಟ್ 4, 2024ರಂದು (ಭಾನುವಾರ) ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗಿ ಆಗಸ್ಟ್ 7, 2024ರಂದು (ಬುಧವಾರ) ಸಂಜೆ 5.00 ಗಂಟೆಗೆ ಮುಕ್ತಾಯವಾಗುವುದು. ತದನಂತರ CDSL ಪರೋಕ್ಷ ಇ-ಮತದಾನದ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು.

ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯ ರವಾನೆಯ ನಂತರ ಷೇರುಗಳನ್ನು ಖರೀದಿಸಿ ಹಾಗೂ ಆಗಸ್ಟ್ 1, 2024ರಂದು ಅವುಗಳನ್ನು ಹೊಂದಿರುವ ಸದಸ್ಯರು helpdesk.evoting@cdslindia.com ಗೆ ಮನವಿಯನ್ನು ಸಲ್ಲಿಸಿ ಅಥವಾ RTA ಆಗಿರುವ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 (ದೂ. +91-80-23460815-818, ಫ್ಯಾಕ್ಸ್: + 91-80- 23460819 ಹಾಗೂ ಇ-ಮೇಲ್: irg@integratedindia.in) ನ್ನು ಸಂಪರ್ಕಿಸುವ ಮೂಲಕ ಲಾಗ್‌ಇನ್ ಐಡಿ ಹಾಗೂ ಪಾಸ್‌ವರ್ಡ್ ಪಡೆಯಬಹುದು/ ಇ-ಮತದಾನಕ್ಕೆ ಸಂಬಂಧಿಸಿದ ನೆರವು ಕೋರಬಹುದು.

ಯಾವುದೇ ಪಶ್ನೆಗಳಿಗೆ, ಸದಸ್ಯರು, www.evotingindia.com ನ ಸಹಾಯ ವಿಭಾಗದಲ್ಲಿ ಲಭ್ಯವಿರುವ Frequently Asked Questions (FAQs) ಅಥವಾ ಸದಸ್ಯರ ಇ-ಮತದಾನದ ಕೈಪಿಡಿಯನ್ನು ಅವಲೋಕಿಸಬಹುದು ಅಥವಾ helpdesk.evoting@cdslindia.com/CDSL ಉಚಿತ ದೂ. ಸಂ. 18002005533 ನ್ನು ಸಂಪರ್ಕಿಸಬಹುದು. ಇ-ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ಅಹವಾಲುಗಳಿಗೆ, ಶ್ರೀಮತಿ ಶ್ರೀತಿ ಎಂ ಎಸ್, ಕಂಪನಿ ಕಾರ್ಯದರ್ಶಿ, ಡೀಸಾ ಇಂಡಿಯಾ ಲಿಮಿಟೆಡ್, ವರ್ಲ್ಡ್ ಟ್ರೇಡ್ ಸೆಂಟರ್, (WTC), 6ನೇ ಮಹಡಿ, ಯೂನಿಟ್ ಸಂ. ಎಸ್-604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ-ರಾಜಾಜಿನಗರ, ಬೆಂಗಳೂರು-560055, ದೂ. +91 80 22496700, ಇ-ಮೇಲ್: investor.relations@noricangroup.com ಇವರನ್ನು ಸಂಪರ್ಕಿಸಬಹುದು.

ಪರೋಕ್ಷ ಇ-ಮತದಾನದ ಹಾಗೂ ಆಗಸ್ಟ್ 8, 2024 ರಂದು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಡೆಯಲಿರುವ ಇ-ಮತದಾನದ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದಿಂದ ಎರಡು ಕೆಲಸದ ದಿನಗಳೊಳಗೆ ಸಂಸ್ಥೆಯ ಜಾಲತಾಣ (www.disagroup.com/en-in) ದಲ್ಲಿ ಹಾಗೂ/CDSLನ ಜಾಲತಾಣದಲ್ಲಿ (www.evotingindia.com) ಸದಸ್ಯರ ಮಾಹಿತಿಗಾಗಿ ಪ್ರಕಟಿಸಲಾಗುವುದು ಮತ್ತು BSE ಗೆ ತಿಳಿಸಲಾಗುವುದು.

ಪುಸ್ತಕ ಮುಚ್ಚುವಿಕೆ

ಕಾಯಿದೆ, 2013, ಕಲಂ 91 ಹಾಗೂ ಕಂಪನಿಗಳ (ನಿರ್ವಹಣೆ ಹಾಗೂ ಆಡಳಿತ) ತಿದ್ದುಪಡಿ ನಿಯಮಗಳ ನಿಯಮ 10ರ ಪ್ರಕಾರ ಸಂಸ್ಥೆಯ ಸದಸ್ಯರ ದಾಖಲಾತಿ ಪುಸ್ತಕ ಹಾಗೂ ಷೇರು ವರ್ಗಾವಣೆ ಪುಸ್ತಕಗಳನ್ನು 39ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಹಕ್ಕು ಹಾಗೂ ಮಾರ್ಚ್ 31, 2024ರಂದು ಕೊನೆಗೊಂಡ ವಿತ್ತೀಯ ವರ್ಷಕ್ಕೆ, ಈಕ್ವಿಟಿ ಷೇರ್‌ಗಳ ಮೇಲೆ ಲಾಭಾಂಶ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಘೋಷಿತವಾದಲ್ಲಿ, ಅದನ್ನು ಷೇರುದಾರರು ಪಡೆಯಲಿರುವ ಸಾಮಾನ್ಯ ಷೇರುಗಳ ಮೇಲೆ ಲಾಭಾಂಶವು ಸರ್ವಸದಸ್ಯರ ಸಭೆಯಲ್ಲಿ ಹಕ್ಕು ಇರುವ ಷೇರುದಾರರು ಅದನ್ನು ಪಡೆಯಲಿರುವ ಸಾಮಾನ್ಯ ಷೇರುದಾರರ ಹಕ್ಕನ್ನು ನಿರ್ಧರಿಸಲು ಆಗಸ್ಟ್ 2, 2024ರಿಂದ ಆಗಸ್ಟ್ 8, 2024ರ ವರೆಗೆ (ಎರಡು ದಿನಗಳು ಸೇರಿ) ಮುಚ್ಚಲಾಗುತ್ತದೆ.

ನಿರ್ದೇಶಕ ಮಂಡಳಿಯ ಆದೇಶದ ಮೇರೆಗೆ
ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್, ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 15ನೇ ಜುಲೈ, 2024

ಸಹಕಾರ ಸಂಘಗಳ ಅಪರ/ಜಂಟಿ ನಿಬಂಧಕರು (ನಿ.441)
ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿ., ಬೆಂಗಳೂರು. ಇವರ ನ್ಯಾಯಾಲಯದಲ್ಲಿ ನಂ.132, 2ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-560027.

ವ್ಯಾಜ್ಯ ಸಂಖ್ಯೆ : ಎ.ಆರ್.ಡಿ/ಯು.ಬಿ.ಎಫ್/71/2024-25
ವಾದಿ: ಮುಖ್ಯಕಾರ್ಯನಿರ್ವಹಣಾ ಅಧಿಕಾರಿ(ಪ್ರಭಾರ) ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.73/1, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದಾವಾ ಮೊತ್ತ: ರೂ.78,533/- ಪ್ರತಿವಾದಿ: 3ರವರಿಗೆ
ವಿರುದ್ಧ: ಪ್ರತಿವಾದಿಗಳು: (1) **ಶ್ರೀಮತಿ. ಆಶಾ,** ಮನೆ ವಿಳಾಸ: ನಂ.56/2, ಜನತಾ ಕಾಲೋನಿ, ಅಂಚೆ ಕಛೇರಿ ಹತ್ತಿರ, ಬನ್ನೇರುಘಟ್ಟ ಬೆಂಗಳೂರು-560083. (2) **ಶ್ರೀ. ಬಸವರಾಜ.ಬಿ, ಮನೆ ವಿಳಾಸ:** ನಂ.56/2, ಜನತಾ ಕಾಲೋನಿ, ಅಂಚೆ ಕಛೇರಿ ಹತ್ತಿರ, ಬನ್ನೇರುಘಟ್ಟ ಬೆಂಗಳೂರು 560083. (3) **ಶ್ರೀ. ಮುನಿಯಲ್ಲಪ್ಪ.ಎನ್, ಮನೆ ವಿಳಾಸ:** ನಂ.2, ಸಂಪಿಗೆಹಳ್ಳಿ,ಜಿಗಣಿ ಹೋಬಳಿ, ಬನ್ನೇರುಘಟ್ಟ, ಆನೇಕಲ್ ತಾಲ್ಲೂಕು ಬೆಂಗಳೂರು-560083. (4) **ಶ್ರೀ. ಚಂದ್ರ.ಎಂ.ಜೆ ಮನೆ ವಿಳಾಸ:** ನಂ.47, ಬೈರಪ್ಪನ ಹಳ್ಳಿ, ಬನ್ನೇರುಘಟ್ಟ ಬೆಂಗಳೂರು 560083.

3ನೇ ಪ್ರತಿವಾದಿಗೆ ದಿನ ಪತ್ರಿಕೆಯ ಪ್ರಕಟಣೆಯ ಮೂಲಕ ನ್ಯಾಯಾಲಯದ ಸಮನ್ಸ್

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70(1)ರ ಪ್ರಕಾರ ವಾದಿಯು ಪ್ರತಿವಾದಿಗಳ ವಿರುದ್ಧ ಮೇಲೆ ನಮೂದಿಸಿರುವ ಸಾಲದ ಮೊತ್ತದ ವಸೂಲಾತಿಗೆ ಅವಾರ್ಡ ನೀಡಲು ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿಗೆ ಆರ್.ಪಿ.ಎ.ಡಿ. ಮೂಲಕ ನೋಟೀಸ್ ಜಾರಿ ಮಾಡಲಾಗಿದ್ದು, ನೋಟೀಸ್ ಜಾರಿಯಾಗದ ಕಾರಣ, ದಿನ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ನೋಟಿಸ್ ಜಾರಿ ಮಾಡಲು ವಾದಿಯವರು ಕೋರಿರುತ್ತಾರೆ. ವಾದಿಯವರು ಕೋರಿಕೆ ಪರಿಗಣಿಸಿದೆ. ಪ್ರಕರಣದ ವಿಚಾರಣೆಯನ್ನು **ದಿನಾಂಕ 23.07.2024 ಬೆಳಿಗ್ಗೆ/ ಮಧ್ಯಾಹ್ನ 11.00 ಗಂಟೆಗೆ ಸಹಕಾರ ಸಂಘಗಳ ಜಂಟಿ/ಅಪರ ನಿಬಂಧಕರು (ನಿ. 441) ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ನಿ, ಬೆಂಗಳೂರು** ಇವರ ನ್ಯಾಯಾಲಯ ಇಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಹಾಜರಾಗಲು ಪ್ರತಿವಾದಿಗೆ ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿಷಯದಲ್ಲಿ ತಮ್ಮ ಪರವಾದ ಲೆಕ್ಕ – ಪತ್ರಗಳನ್ನು/ ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ, ಸದರಿದಾವೆಯನ್ನು ಅವರ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.
ದಿನಾಂಕ: 25.06.2024 ರಂದು ಈ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441)
ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು
ಇವರ ಆದೇಶದ ಮೇರೆಗೆ
ಸಹಿ/- (ಅಧಿಕೃತ ಅಧಿಕಾರಿ)

ಸ್ಥಳ: ಬೆಂಗಳೂರು

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಜುಲೈ19ರವರೆಗೆ ಮಳೆ ಮುಂದುವರಿಕೆ

ಬೆಂಗಳೂರು : ಬಂಗಾಳ ಕೊಲ್ಲಿಯಲ್ಲಿ ಭಾರೀ ಪ್ರಮಾಣದಲ್ಲಿ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮಳೆಯ ಅಬ್ಬರ ಜೋರಾಗಿದ್ದು, ನಗರದಲ್ಲಿಯೂ ಹಗುರ ಮಳೆಯಾಗುತ್ತಿದೆ.

ನಗರದಲ್ಲಿ ಸೋಮವಾರ ಬೆಳಗ್ಗೆಯಿಂದ ಮೋಡ ಕವಿದ ವಾತಾವರಣವಿದ್ದು, ಮದ್ಯಾಹ್ನದ ವೇಳೆಗೆ ಮಳೆ ಆರಂಭವಾಗಿದ್ದು, ಶಾಂತಿನಗರ, ರಿಚ್‌ಮಂಡ್ ಟೌನ್, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕಾರ್ಪೊರೇಷನ್ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ಮಳೆಯಾಗಿದೆ. ಮಳೆಯಿಂದಾಗಿ ವಾಹನಗಳ ಸವಾರರು, ಉದ್ಯೋಗಿಗಳು, ವ್ಯಾಪಾರಿಗಳು ಸಂಚರಿಸಲಾಗದೆ ಪರದಾಡಿದ್ದಾರೆ. ನಗರದ ಹಲವು ಭಾಗಗಳಲ್ಲಿ ಜಿಟಿಜಿಟಿ ಮಳೆಯಾಗಿದ್ದು, ವಾತಾವರಣ ಸಂಪೂರ್ಣವಾಗಿ ತಂಪಾಗಿದೆ.

ರಾಜ್ಯಾದ್ಯಂತ ಎಲ್ಲೆಡೆ ವ್ಯಾಪಕ ಮಳೆಯಾಗಿದ್ದು, ಕರಾವಳಿ ಭಾಗದಲ್ಲಿ 15 ಸ್ಥಳಗಳಲ್ಲಿ ಭಾರಿ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಜಗಲಬೇಟದಲ್ಲಿ 25 ಸೆಂ.ಮೀ. ಮಳೆಯಾಗಿದೆ. ಬೆಳಗಾವಿ ಜಿಲ್ಲೆಯ ಲೊಂಡಾದಲ್ಲಿ 9 ಸೆಂ.ಮೀ, ದಕ್ಷಿಣ ಒಳನಾಡಿನ 8 ಸ್ಥಳಗಳಲ್ಲಿ ಭಾರಿ ಮಳೆಯಾಗಿದೆ. ಭಾಗಮಂಡಲ ಪ್ರದೇಶದಲ್ಲಿ 12 ಸೆಂ.ಮೀ. ಮಳೆಯಾಗಿದೆ. ಜುಲೈ 19ರವರೆಗೆ ಇದೇ ರೀತಿ ರಾಜ್ಯದಲ್ಲಿ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜುಲೈ 17ರಿಂದ 19ರವರೆಗೆ ಕರಾವಳಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದ್ದು, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ ಜು. 16ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಜು.17 ರಿಂದ 19ರ ವರೆಗೆ ಈ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಲಿದ್ದು, ಕರಾವಳಿ ಜಿಲ್ಲೆಗಳಿಗೆ ಜು.16ರಂದು ರೆಡ್ ಅಲರ್ಟ್ ಘೋಷಿಸಲಾಗಿದೆ.

ಉಳಿದಂತೆ ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಗೆ ನಾಲ್ಕು ದಿನ, ಬೀದರ್, ಧಾರವಾಡ, ಹಾವೇರಿ, ಕಲ್ಬುರ್ಗಿ, ರಾಯಚೂರು, ಯಾದಗಿರಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ದಕ್ಷಿಣ ಒಳನಾಡಿನ ಹಾಸನ, ಕೊಡಗು, ಮೈಸೂರು ಜಿಲ್ಲೆಗೆ ಜು.16ರಂದು ಆರೆಂಜ್ ಅಲರ್ಟ್ ಕೊಡಲಾಗಿದೆ.

ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಮಳೆ ಮತ್ತು ನಿರಂತರ ಗಾಳಿ ಇರಲಿದೆ.

ಒಳನಾಡಿನ ಕಲಬುರ್ಗಿ, ಬೀದರ್, ಧಾರವಾಡ, ಹಾವೇರಿ, ರಾಯಚೂರು, ಯಾದಗಿರಿ, ಕೊಡಗು, ಮೈಸೂರು ಮತ್ತು ಹಾಸನ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರೀ ಮಳೆಯಾಗಲಿದೆ. ಉಳಿದ ಜಿಲ್ಲೆಗಳ ಬಹುತೇಕ ಸ್ಥಳಗಳಲ್ಲಿ ಗಾಳಿಯ ಜತೆಗೆ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLLND00336883 1. ಬಲ್ಬೀರ್ ಸಿಂಗ್ ಧಿಲ್ಲನ್ 2. ಶಿಂಧರ್ ಧಿಲ್ಲನ್	ಅಪಾರ್ಟ್‌ಮೆಂಟ್ ನಂ. ಬಿ-304, 3ನೇ ಮಹಡಿ, ಬ್ಲಾಕ್ ಬಿ, ಓರ್ಝೋನ್ ಅರ್ಬಾನಾ ಅವೆನ್ಯೂ, ಸರ್ವೆ ಸಂ. 75, 77/1, 77/2, 77/3, 77/4, 78, 79, 80, 81/2, 83/2, 83/3, 83/5, 83/6 ಮತ್ತು 86/2, ಕನ್ನಮಂಗಲ ಗ್ರಾಮ , ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ, ಬೆಂಗಳೂರು-560045, ಕರ್ನಾಟಕ	05.05.2024	24.06.2024ರಂದಿನಂತೆ ರೂ. 72,43,513.54/- (ರೂಪಾಯಿ ಎಪ್ಪತ್ತ ಎರಡು ಲಕ್ಷ ನಲವತ್ತ ಮೂರು ಸಾವಿರದ ಐದು ನೂರ ಹದಿಮೂರು ಮತ್ತು ಪೈಸೆ ಐವತ್ತ ನಾಲ್ಕು ಮಾತ್ರ)
2.	ಸಾಲ ಖಾತೆ ನಂ. HHLBAG00348361 1. ಸಿರಿಲ್ ಮ್ಯಾಥ್ಯೂ ಅಲೆಕ್ಸಾಂಡರ್ (ಪಿಓಎ ಹೋಲ್ಡರ್ ಸೋಸಮ್ಮ ಅಲೆಕ್ಸಾಂಡರ್ ಮೂಲಕ) 2. ಅನಿತಾ ಸಿರಿಲ್ ಮ್ಯಾಥ್ಯೂಸ್ (ಪಿಓಎ ಹೋಲ್ಡರ್ ಸೋಸಮ್ಮ ಅಲೆಕ್ಸಾಂಡರ್ ಮೂಲಕ)	ಫ್ಲಾಟ್ ನಂ. ಜಿ G03, ನೆಲ ಮಹಡಿ, ಬ್ಲಾಕ್ ನಂ. ಜಿ, ಅರ್ಬನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಬೆಂಗಳೂರು ಗ್ರಾಮಾಂತರ, ಬೆಂಗಳೂರು-562114, ಕರ್ನಾಟಕ	10.05.2024	24.06.2024ರಂದಿನಂತೆ ರೂ. 97,71,657.13/- (ರೂಪಾಯಿ ತೊಂಬತ್ತ ಏಳು ಲಕ್ಷ ಎಪ್ಪತ್ತ ಒಂದು ಸಾವಿರದ ಆರು ನೂರ ಐವತ್ತ ಏಳು ಮತ್ತು ಪೈಸೆ ಹದಿಮೂರು ಮಾತ್ರ)
3.	ಸಾಲ ಖಾತೆ ನಂ. HHLBAG00337389 1. ಮಾನಸ್ ಕುಮಾರ್ ರೌತ್ (ಪಿಓಎ ಹೋಲ್ಡರ್ ದೇಬನಂದ ರೌತ್ ಮೂಲಕ) 2. ಸರದೆಂದು ಎನ್ ಮಧುಯಲ್ ಅಲಿಯಾಸ್ ಸರದೇಂದು ನಿವಾನನಿ ಮಧುಲ್ (ಪಿಓಎ ಹೋಲ್ಡರ್ ದೇಬನಂದ ರೌತ್ ಮೂಲಕ)	ಫ್ಲಾಟ್ ನಂ. ಎಲ್ 1003, 10ನೇ ಮಹಡಿ, ಬ್ಲಾಕ್ ಎಲ್, ಅರ್ಬನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು-560067, ಕರ್ನಾಟಕ	05.05.2024	24.06.2024ರಂದಿನಂತೆ ರೂ. 56,71,385.10/- (ರೂಪಾಯಿ ಐವತ್ತ ಆರು ಲಕ್ಷ ಎಪ್ಪತ್ತ ಒಂದು ಸಾವಿರದ ಮುನ್ನೂರ ಎಂಬತ್ತ ಐದು ಮತ್ತು ಪೈಸೆ ಹತ್ತು ಮಾತ್ರ)
4.	ಸಾಲ ಖಾತೆ ನಂ. HHLBAG00347918 1. ವಿಕಾಸ್ ವಾಫ್ರೇ (ಪಿಓಎ ಹೋಲ್ಡರ್ ಶಕುಂತಲಾ ವಾಫ್ರೇ ಮೂಲಕ) 2. ನಿಶಾ ವಾಫ್ರೇ (ಪಿಓಎ ಹೋಲ್ಡರ್ ಶಕುಂತಲಾ ವಾಫ್ರೇ ಮೂಲಕ)	ಫ್ಲಾಟ್ ನಂ. ಜಿ 504, 5ನೇ ಮಹಡಿ, ಬ್ಲಾಕ್ ನಂ. ಜಿ, ಓರ್ಝೋನ್ ಅರ್ಬಾನಾ ಆಕ್ವಾ ಹಂತ-2, ಕನ್ನಮಂಗಲ ಗ್ರಾಮ ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು ಬೆಂಗಳೂರು ಗ್ರಾಮಾಂತರ, ಬೆಂಗಳೂರು-560066, ಕರ್ನಾಟಕ	10.05.2024	24.06.2024ರಂದಿನಂತೆ ರೂ. 85,97,037.91/- (ರೂಪಾಯಿ ಎಂಬತ್ತ ಐದು ಲಕ್ಷ ತೊಂಬತ್ತ ಏಳು ಸಾವಿರದ ಮೂವತ್ತ ಏಳು ಮತ್ತು ಪೈಸೆ ತೊಂಬತ್ತ ಒಂದು ಮಾತ್ರ)

ಈ ಮೇಲೆ ಹೆಸರಿಸಲಾದ ಸಾಲಗಾರ (ರು) ಆರ್ಥಿಕ ಶಿಸ್ತು ಮತ್ತು ಸಾಲದ ಖಾತೆಯ ಜವಾಬ್ದಾರಿಯ ಹೊಣೆಯನ್ನು ಸರಿಯಾಗಿ ಪಾಲಿಸದೇ ಇದ್ದುದರಿಂದ ಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳ ಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದ ಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇ ವಿಫಲರಾಗಿದ್ದಾರೆ ಎಂದು ತೋರಿಸಿಕೊಟ್ಟಿದೆ.

ಪ್ರತಿಯೊಬ್ಬಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರ ಉಪೇಕ್ಷೆ ತೋರಿಸಿದುದ ರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದು ವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನ ಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆ ಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದ ಬಡ್ಡಿ , ವೆಚ್ಚಗಳು ಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವ ಮೂಲಕ ಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆ ಕಾಲಮ್ ಬಿಯಲ್ಲಿ ನಮೂದಿಸಲಾದ ಅಡವು ಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅರ್ಹವಾಗಿದೆ ಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವ ಇತರ ಕ್ರಮಗಳನ್ನು ಕೂಡಾತೆಗೆದು ಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟುಗಮನಿಸಿರಿ: ''ಒಬ್ಬಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ) ವಿಧಾನದಿಂದ ಸೂಚನೆಯಲ್ಲಿಲ್ಲುಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗಾಗಿ
ಅಧಿಕೃತ ಅಧಿಕಾರಿ

ಸ್ಥಳ : ಬೆಂಗಳೂರು

IN THE COURT OF THE LXV ADDL, CITY CIVIL & SESSION JUDGE AT BENGALURU
O.S. No. 6860/2023 (CCH-66)

PLAINTIFF: C.R. RAMANNA S/o Rangappa, aged about 69 years, residing at No. A/405, Chaitrashree Royal, Sl.No.25/2, ITI Layout, 3rd Phase, Opposite Gopalan Arcade Mall, Mysore Road, Nayandahalli, Bengaluru-39.
Defendants: Lalitha and 2 others

Notice/Summons to the Defendant no. 1 & 2

To, 1) Lalitha W/o Late G.N.Niranjan Murthy, aged major, R/at No.25, 1st Main Road, Nagappa Layout, Abbigere, Bengaluru-90.
............**Def. no. 1**

2) T.N. Suresh S/o Late G.N. Niranjan Murthy, aged 47 years, R/at No.499, 9th Cross, 6th Main, Coffee Board Layout, Hebbal, Kempapura, Bengaluru-24.
..................**Def. no. 2**

Whereas, the above named plaintiff instituted a suit against you for recovery of money of **Rs. 16,63,700/-** with 12% interest from the date of the suit till realization.

You are hereby summoned to appear before this court **on 21-08- 2024 at 11.00 am** in person or through advocate/pleader to answer the questions to the same. Failing which the suit will be heard and ex parte

Given under my hada & seal th of the court, this **11th day of July, 2024.**

By Order of Court, Asst. Registrar
City Civil & Sessions Court Bangalore.

PRITHVI RAJ B.N., Advocate, No. 71, 1st Main, 8th Cross, Sampangiramanagar, Bengaluru-27, Ph: 9886563092.

ಸಮಾಚಾರ ಸಣ್ಣದಲ್ಲ

ನಾಲ್ಕು ಕೃಷಿ ಡಿಪ್ಲೊಮಾ ಕಾಲೇಜು ಪುನಾರಂಭ

ಬೆಂಗಳೂರು: ಕಳೆದ ಸರಕಾರದ ಅವಧಿಯಲ್ಲಿ ತಡೆಹಿಡಿಯಲಾಗಿದ್ದ ವಿವಿಧ ಕೃಷಿ ವಿವಿ ವ್ಯಾಪ್ತಿಯ ನಾಲ್ಕು ಡಿಪ್ಲೊಮಾ ಕಾಲೇಜುಗಳಿಗೆ ಮರು ಅನುಮತಿ ನೀಡಲಾಗಿದೆ ಸರಕಾರ ಆದೇಶಿಸಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಮಂಡ್ಯ ವಿ.ಸಿ ಫಾರ್ಮ್, ಶಿವಮೊಗ್ಗ ಕೃಷಿ ವಿ.ವಿ ವ್ಯಾಪ್ತಿಯ ಉಡುಪಿ ಜಿಲ್ಲೆಯ ಬ್ರಹ್ಮಾವರ ಕಾಲೇಜು, ಧಾರವಾಡ ಕೃಷಿ ವಿ.ವಿ ವ್ಯಾಪ್ತಿಯ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಕಾಲೇಜು ಮತ್ತು ರಾಯಚೂರು ಕೃಷಿ ವಿ.ವಿ ವ್ಯಾಪ್ತಿಯ ಬೀದರ್ ಕೃಷಿ ಡಿಪ್ಲೊಮಾ ಕಾಲೇಜುಗಳು ಪುನಾರಂಭಕ್ಕೆ ರಾಜ್ಯದ ಸರಕಾರ ಅನುಮೋದನೆ ನೀಡಿದೆ. ಈ ಡಿಪ್ಲೊಮಾ ಕೋರ್ಸ್‌ಗಳನ್ನು ಹಿಂದಿನ ಸರಕಾರದ ಅವಧಿಯಲ್ಲಿ ತಡೆಹಿಡಿಯಲಾಗಿತ್ತು. ಆದರೆ ಕೃಷಿ ಡಿಪ್ಲೊಮಾ ಕೋರ್ಸ್‌ಗಳ ಪುನಾರಂಭಕ್ಕೆ ವಿದ್ಯಾರ್ಥಿಗಳು ಹೆಚ್ಚಿನ ಬೇಡಿಕೆ ಸಲ್ಲಿಸಿದ ಹಿನ್ನಲೆಯಲ್ಲಿ ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ಅವರು ವಿಶೇಷ ಕಾಳಜಿ ವಹಿಸಿ ಈ ನಾಲ್ಕು ಕಾಲೇಜುಗಳಲ್ಲಿ ಪ್ರವೇಶಾತಿ ಪ್ರಾರಂಭಕ್ಕೆ ಅವಕಾಶ ಒದಗಿಸಿಕೊಟ್ಟಿದ್ದಾರೆ.

ಲೋಕ ಅದಾಲತ್‌ನಲ್ಲಿ ಗಣನೀಯ ದಾಖಲೆ

ಬೆಂಗಳೂರು: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಗಣನೀಯ ದಾಖಲೆಯಾಗಿದ್ದು, ಬರೋಬ್ಬರಿ 40 ಲಕ್ಷ 03 ಸಾವಿರದ 411 ಪ್ರಕರಣಗಳು ಇತ್ಯರ್ಥವಾಗಿದ್ದು, ಸಂತ್ರಸ್ತರಿಗೆ ಸುಮಾರು 2 ಸಾವಿರದ 640 ಕೋಟಿ ಪರಿಹಾರ ನೀಡಲಾಗಿದೆ. ಕಾನೂನು ಸೇವಾ ಪ್ರಾಧಿಕಾರ ಆಯೋಜಿಸಿದ್ದ ಲೋಕ ಅದಾಲತ್‌ನಲ್ಲಿ ಪ್ರಾಧಿಕಾರದ ಅಧ್ಯಕ್ಷ ಜಸ್ಟಿಸ್ ಎಸ್. ಹರೀಶ್ ಕುಮಾರ್ ಕಾರ್ಯನಿರ್ವಾಹಕ ಅಧ್ಯಕ್ಷ ಜಸ್ಟಿಸ್ ವಿ. ಕಾಮೇಶ್ವರ್ ರಾವ್ ನೇತೃತ್ವ ವಹಿಸಿದ್ದರು. ಹೈಕೋರ್ಟ್ ಬೆಂಗಳೂರು, ಕಲಬುರಗಿ ಧಾರವಾಡ ಸೇರಿ 1,033 ಪೀಠಗಳಲ್ಲಿ ಈ ರಾಷ್ಟ್ರೀಯ ಲೋಕ ಅದಾಲತ್ ನಡೆದಿದೆ. ಈ ಬಾರಿ 1550 ವೈವಾಹಿಕ ಪ್ರಕರಣದಲ್ಲಿ 259 ದಂಪತಿಗಳ ರಾಜಿ ಸಂಧಾನ ಮಾಡಿಕೊಂಡಿದ್ದಾರೆ. ಆಸ್ತಿ ವಿವಾದದ 3,356 ಪ್ರಕರಣ, 11,155 ಚೆಕ್ ಬೌನ್ಸ್ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದೆ.

ಫಲಪುಷ್ಪ ಪ್ರದರ್ಶನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಆಗಸ್ಟ್ 8ರಿಂದ 19ರ ವರೆಗೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಮಳಿಗೆಗಳಿಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಪ್ರದರ್ಶನ ಪ್ರಯುಕ್ತ ಸರಕಾರಿ/ಖಾಸಗಿ ಅಲಂಕಾರಿಕ ತೋಟಗಾರಿಕಾ ಆಸಕ್ತರು ತಮ್ಮ ಮನೆ, ಕಚೇರಿ ಅಥವಾ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಲಂಕಾರಿಕ ತೋಟಗಳು, ತಾರಸಿ/ಕೈ ತೋಟಗಳು, ತರಕಾರಿ/ಔಷಧಿ ಗಿಡಗಳು, ಕುಂಡದಲ್ಲಿ ಬೆಳೆದ ವಿವಿಧ ಜಾತಿಯ ಗಿಡಗಳು, ಇಕೆಬಾನ, ಜಾನೂರ್, ಥಾಯ್ ಆರ್ಟ್ ಮತ್ತು ಇತರೆ ಪೂರಕ ಕಲೆಗಳಿಗೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು/ಪ್ರದರ್ಶಕರು ಕಚೇರಿ ವೇಳೆಯಲ್ಲಿ ಬೆಳಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ಲಾಲ್‌ಬಾಗ್‌ನ ಕಚೇರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಬಹುದಾಗಿದೆ. ಇಕೆಬಾನ, ಜಾನೂರ್, ಥಾಯ್ ಆರ್ಟ್ ಮತ್ತು ಇತರೆ ಪೂರಕ ಕಲೆಗಳಿಗೆ ಮತ್ತು ವಿವಿಧ ಅಲಂಕಾರಿಕ ತೋಟಗಳ ಸ್ಪರ್ಧೆ / ಕುಂಡದಲ್ಲಿ ಬೆಳೆದ ಗಿಡಗಳ ಸ್ಪರ್ಧೆಗೆ ಜುಲೈ 22ರಿಂದ ಜುಲೈ 31ರ ವರೆಗೆ ಮತ್ತು ಇಲಾಖಾ ಮಳಿಗೆಗಳ ಹಂಚಿಕೆಗೆ ಜುಲೈ 15ರಿಂದ ಜುಲೈ 23ರ ವರೆಗೆ ಅರ್ಜಿಗಳನ್ನು ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ: ಬೀದಿಬದಿ ವ್ಯಾಪಾರಿಗಳ ಸರ್ವೇ

ಬೆಂಗಳೂರು: ಬಿಬಿಎಂಪಿ ಏಳು ವರ್ಷಗಳ ಬಳಿಕ ಬೀದಿ ಬದಿ ವ್ಯಾಪಾರಿಗಳ ಸರ್ವೇ ನಡೆಸಲು ಮುಂದಾಗಿದ್ದು, ಕಳೆದ ಬಾರಿ ಸರ್ವೇ ನಡೆಸಿದಾಗ 25 ಸಾವಿರ ವ್ಯಾಪಾರಿಗಳನ್ನು ಗುರುತಿಸಿತ್ತು. ಕೇಂದ್ರದ ನಿಯಮದ ಅನುಸಾರ ಸಮೀಕ್ಷೆ ನಡೆಸಿ ಸೂಕ್ತ ಯೋಜನೆ ರೂಪಿಸಲು ಸಜ್ಜಾಗಿರುವ ಪಾಲಿಕೆ, ಅತೀ ಶೀಘ್ರದಲ್ಲೇ ಸರ್ವೇ ಆರಂಭಿಸುವುದಾಗಿ ಹೇಳಿದೆ. ಮೊದಲನೆಯದಾಗಿ ಆರ್ ಆರ್ ನಗರದಿಂದ ಸಮೀಕ್ಷೆ ಕಾರ್ಯ ಆರಂಭವಾಗಲಿದೆ. ಬೀದಿ ಬದಿ ವ್ಯಾಪಾರಿಗಳು ಬಿಬಿಎಂಪಿಯ ಈ ತೀರ್ಮಾನಕ್ಕೆ ತಮ್ಮ ಸಹಮತ ವ್ಯಕ್ತಪಡಿಸಿದ್ದಾರೆ. ಪಾಲಿಕೆ ವ್ಯಾಪ್ತಿಯಲ್ಲಿರುವ ತರಕಾರಿ ಗಾಡಿಗಳು, ತಳ್ಳುಗಾಡಿಗಳು, ಪಾನಿಪುರಿ ಮಳಿಗೆಗಳೂ ಸೇರಿದಂತೆ ಹಲವು ಮಂದಿ ಬೀದಿ ಬದಿ ವ್ಯಾಪಾರವನ್ನೇ ಅವಲಂಬಿಸಿದ್ದು, ಅಸಂಘಟಿತ ಕಾರ್ಮಿಕರ ರೀತಿಯಲ್ಲೇ ಇವರಿಗೆ ಸರಕಾರದಿಂದ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ. ಕನಿಷ್ಟ ಗುರುತಿನ ಚೀಟಿಯನ್ನೂ ನೀಡಲಾಗುತ್ತಿಲ್ಲ. ಕೋವಿಡ್ ಸಂದರ್ಭದಲ್ಲಿ ಕೇಳುವವರೂ ಇರಲಿಲ್ಲ. ಈಗ ಪಾಲಿಕೆಯು ಬೀದಿ ಬದಿ ವ್ಯಾಪಾರಿಗಳನ್ನು ಸಾಮಾನ್ಯರಂತೆ ಪರಿಗಣಿಸುತ್ತಿರುವುದು ಸಂತಸದ ವಿಷಯ ಎಂದು ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ರಂಗಸ್ವಾಮಿ ಹೇಳಿದರು.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಮಂಡ್ಯದಲ್ಲಿ ಜನತಾ ದರ್ಶನ ಮಾಡಿದರೆ, ಅಧಿಕಾರಿಗಳು ಭಾಗಿಯಾಗಬಾರದು ಎಂದು ಆದೇಶ ಮಾಡಿದ್ದಾರೆ. ಅಧಿಕಾರಿಗಳ ಸಭೆ ನಡೆಸ ಬಾರದು ಎಂದು ಆದೇಶ ಮಾಡಿದ ಮೇಲೆ ನಮ್ಮಿಂದ ಏನು ಬಯಸುತ್ತೀರಾ? ಪಾಂಡವಪು ರದಲ್ಲಿ ಮತ ಕೊಟ್ಟ ಜನರಿಗೆ ಧನ್ಯವಾದ ಹೇಳಬೇ ಕಿತ್ತು ಹೋಗಿದ್ದೆ. ಯಾವ ಸಂದರ್ಭ ದಲ್ಲಿ ಯಾವ ಕಾರ್ಯಕ್ರಮಕ್ಕೆ ಹೋಗಬೇ ಕು ಎಂದು ನನಗೆ ಗೊತ್ತಿದೆ. ನಾನು ಇವರ ಅನುಮತಿ ಪಡೆಯಬೇಕೇ?



ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಪ್ರತಿಪಕ್ಷ ನಾಯಕರಿಂದ ಗುಣಗಾನ

ಅಗಲಿದ ಗಣ್ಯರಿಗೆ ಸದನ ಶ್ರದ್ಧಾಂಜಲಿ

ಬೆಂಗಳೂರು: ಮಾಜಿ ಸಚಿವೆ, ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷರಾಗಿದ್ದ ನಾಗಮ್ಮ ಕೇಶವಮೂರ್ತಿ, ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರಾಗಿದ್ದ ವಿ. ಶ್ರೀನಿವಾಸ ಪ್ರಸಾದ್, ಹಿರಿಯ ನಟ, ನಿರ್ದೇಶಕ, ನಿರ್ಮಾಪಕ ದ್ವಾರಕೀಶ್, ನಟಿ, ನಿರೂಪಕಿ ಅಪರ್ಣಾ ಸೇರಿದಂತೆ ಇತ್ತೀಚೆಗೆ ನಿಧನರಾದ ಗಣ್ಯರಿಗೆ ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಭಾವಪೂರ್ಣ ಸಂತಾಪ ಸಲ್ಲಿಸಲಾಯಿತು.

ವಿಧಾನಸಭೆ ಕಲಾಪ ಬೆಳಗ್ಗೆ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ವಿಧಾನ ಪರಿಷತ್ತಿನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು, ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ನಾಗಮ್ಮ ಕೇಶವಮೂರ್ತಿ ದಾವಣಗೆರೆಯ ಇಂದಿರಾ ಗಾಂಧಿ ಸ್ಪೀಕರ್ ಮಂಡಿಸಿದ ಸಂತಾಪ ಸೂಚನೆಯನ್ನು ಬೆಂಬಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಗಮ್ಮ ಕೇಶವಮೂರ್ತಿಯವರು ಸಾಮಾಜಿಕ ಸೇವೆಯಲ್ಲಿ ಮದರ್ ಥೆರೇಸಾ, ರಾಜಕಾರಣದಲ್ಲಿ ದಾವಣಗೆರೆಯ ಇಂದಿರಾಗಾಂಧಿ ಎಂದೇ ಖ್ಯಾತಿ ಪಡೆದಿದ್ದರು. ಶ್ರೀನಿವಾಸ ಪ್ರಸಾದ್ ಅವರು, ಆರು ಬಾರಿ ಚಾಮರಾಜನಗರ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿ ಶೋಷಿತರ, ದೀನದಲಿತರ ಹಿಂದುಳಿದವರ ಧ್ವನಿಯಾಗಿದ್ದರು ಎಂದು ಗುಣಗಾನ ಮಾಡಿದರು.

ದ್ವಾರಕೀಶ್, ಕಮಲಾ ಹಂಪನಾ ಸಾಧನೆ ಸ್ಮರಣೀಯ: ನಟ, ನಿರ್ದೇಶಕ ದ್ವಾರಕೀಶ್ ಅವರು ಖ್ಯಾತ ಹಾಸ್ಯನಟರಾಗಿದ್ದು, ನಿರ್ಮಾಪಕ, ನಿರ್ದೇ ಶಕರಾಗಿ ಸೇವೆ ಸಲ್ಲಿಸಿದ್ದರು. ಸಿಂಗಾಪುರದಲ್ಲಿ ರಾಜಾಕುಳ್ಳ ಸಿನಿಮಾ ವಿದೇಶದಲ್ಲೇ ಚಿತ್ರೀಕರಣಗೊಂಡ ಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ಎಂದು ಸ್ಮರಿಸಿದರು. ಸಾಹಿತಿ ಕಮಲಾ ಹಂಪನಾ ಅವರು ಜೈನ ಧರ್ಮ, ಹಳಗನ್ನಡ ಗ್ರಂಥ ಸಂಪಾದನೆ ಮಾಡಿದ್ದರು. ದಾನ ಚಿಂತಾಮಣಿ, ಅತ್ತಿಮಬ್ಬೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದು. ನಾಡೋಜ ಗೌರವವೂ ಅವರಿಗೆ ಸಂದಿತ್ತು ಎಂದು ಹೇಳಿದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ನಾನು ಶಾಸಕನಾಗಿದ್ದಾಗ ಮತ್ತು ಶಾಸಕನಾಗುವ ಮೊದಲು ಸದಸ್ಯರಾಗಿದ್ದವರು ನಿಧನರಾಗಿದ್ದಾರೆ. ಅವರು ಈ ಸದನಕ್ಕೆ ಗೌರವ ತರುವ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಸಾಹಿತ್ಯ, ಚಿತ್ರರಂಗಕ್ಕೂ ಗೌರವ ತರುವ ರೀತಿಯಲ್ಲಿ ಕೆಲಸ ಮಾಡಿದ ಗಣ್ಯರೂ ಅಗಲಿದ್ದಾರೆ. ಇವರೆಲ್ಲರಿಗೂ ಸಂತಾಪವನ್ನು ಸೂಚಿಸುವುದಾಗಿ ತಿಳಿಸಿದರು. ನಾಗಮ್ಮ ಕೇಶವಮೂರ್ತಿಯವರು ಮಹಿಳೆಯರಿಗೆ ದಾರಿದೀಪವಾಗಿದ್ದವರು ಎಂದು ಸ್ಮರಿಸಿದರು. ಶ್ರೀನಿವಾಸ್ ಪ್ರಸಾದ್ ಅವರು ಯಾವುದೇ ಪಕ್ಷದಲ್ಲಿದ್ದರೂ ತಮ್ಮ ತನವನ್ನು ಬಿಟ್ಟುಕೊಟ್ಟಿರಲಿಲ್ಲ. ತುಳಿತಕ್ಕೆ ಒಳಗಾದವರ ಧ್ವನಿಯಾಗಿ ಕೆಲಸ ಮಾಡಿದ್ದರು. ಅಪರ್ಣಾ ಅವರ ಧ್ವನಿ ಮೆಟ್ರೋದಲ್ಲಿ ಉಳಿದಿದೆ. ದ್ವಾರಕೀಶ್ ಅವರು ಹಾಸ್ಯನಟರಾಗಿ ಹೆಚ್ಚು ಚಿರಪರಿಚಿತರಾದವರು ಎಂದು ಮೃತರ ಗುಣಗಾನ ಮಾಡಿದರು.

ಮೃತರ ಒಡನಾಟ ಮೆಲುಕು ಹಾಕಿದ ಡಿಕೆಶಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಶ್ರೀನಿವಾಸಪ್ರಸಾದ್ ಸ್ನೇಹಮಯಿಯಾಗಿದ್ದರು. ದ್ವಾರಕೀಶ್ ಅವರು ಆತ್ಮೀಯರಾಗಿದ್ದರೂ ಅವರ ಸಿನಿಮಾವನ್ನು ಕ್ಯೂನಲ್ಲಿ ನಿಂತು ಟಿಕೆಟ್ ಪಡೆದು ವೀಕ್ಷಿಸಲಾಗುತ್ತಿತ್ತು. ಕಮಲಾ ಹಂಪನಾ ಅವರ ಪುತ್ರನ ಜತೆ ತಾವೂ ವ್ಯಾಸಂಗ ಮಾಡುವಾಗ ರಾಜಾಜಿನಗರದಲ್ಲಿ ಸಮಯ ಕಳೆದಿದ್ದೆವು ಎಂದು ಮೃತರ, ಗಣ್ಯರ ನಡುವಿನ ಒಡನಾಟವನ್ನು ಮೆಲುಕು ಹಾಕಿದರು.

ಶುದ್ಧ ಕನ್ನಡದ ನಿರೂಪಕಿ ಅಪರ್ಣಾ

ಇನ್ನು, ನಿರೂಪಕಿ ಅಪರ್ಣಾ ಅವರು ಶುದ್ಧ ಕನ್ನಡದಲ್ಲಿ ನಿರೂಪಣೆ ಮಾಡುವ ಕಲೆ ಮೈಗೂಡಿಸಿಕೊಂಡಿದ್ದರು. ಸಾಕಷ್ಟು ಸಿನಿಮಾಗಳಲ್ಲಿ ನಟಿಸಿದ್ದರು ಎಂದು ಹೇಳಿದರು. ಖ್ಯಾತ ಧರ್ಮಗುರುವಾಗಿದ್ದ ಖಾಝಿ ಅಸ್ಸೆಯದ್ ಫಝುಲ್ ಕೋಯಮ್ಮ ತಂಙಳ್ ಅಲ್ ಬುಖಾರಿ ಅವರು ಜಾತಿ, ಧರ್ಮ, ಮತಭೇದವಿಲ್ಲದೆ ಮಾನವೀಯತೆಯಿಂದ ಕೂಡಿದ ವ್ಯಕ್ತಿ ಎಂದು ಸ್ಮರಿಸಿದ ಸಿಎಂ, ಇತ್ತೀಚೆಗೆ ಅಗಲಿದ ಎಲ್ಲಾ ಗಣ್ಯರಿಗೂ ಶಾಂತಿ ದೊರೆಯಲಿ, ಸಾವಿನ ದುಃಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗದವರಿಗೆ, ಹಿತೈಷಿಗಳಿಗೆ ಹಾಗೂ ಬಂಧುಗಳಿಗೆ ದೊರೆಯಲಿ ಎಂದು ಕೋರಿದರು.

ವಿಧಾನಸಭೆಯಲ್ಲಿ ಬಿಜೆಪಿ ಶಾಸಕರಿಗೆ ತರಾಟೆ

ಯತ್ನಾಳ್‌ಗೆ ಸೀರಿಯಸ್‌ನೆಸ್ ಇಲ್ಲ: ಸಿಎಂ ಸಿದ್ದರಾಮಯ್ಯ

ವಿಧಾನಸಭೆ : ನಿಮಗೆ ಸೀರಿಯಸ್‌ನೆಸ್ ಇಲ್ಲ. ಯತ್ನಾಳ್, ಏನು ಮಾತಾಡ್ತೀರಿ, ಯಾವಾಗ ಯಾವ ನಿಲುವು ತಗೋತೀರಿ ಅಂತ ನಿಮಗೇ ಗೊತ್ತಿರಲ್ಲ. ನಿಮ್ಮ ಪಕ್ಷದಲ್ಲಿ ಸಿಎಂ ಆಗೋದಿಕ್ಕೆ ಎರಡೂವರೆ ಸಾವಿರ ಕೋಟಿ ಕೊಡಬೇಕು ಅಂದಿದ್ರು. ಆಮೇಲೆ ಅದರಿಂದ ಹಿಂದಕ್ಕೆ ಸರಿದಿರಿ. ಆಗ ಸಿಬಿಐ ತನಿಖೆಗೆ ಕೊಡಿ ಅಂತ ಹೇಳಲಿಲ್ಲ. ಬಾಯಿಗೆ ಬಂದ ಹಾಗೆ ಸುಮ್ಮನೆ ಮಾತಾಡುತ್ತಿರಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಯತ್ನಾಳ್ ವಿರುದ್ಧ ಮುಗಿಬಿದ್ದ ಪ್ರಸಂಗ ನಡೆಯಿತು.

ಭೋಜನ ವಿರಾಮದ ಬಳಿಕ ಪ್ರತಿಪಕ್ಷಗಳು ವಾಲ್ಮೀಕಿ ಅಭಿವೃದ್ಧಿ ನಿಗಮ ಅಕ್ರಮ ಹಣ ವರ್ಗಾವಣೆ ವಿಚಾರ ಬಗ್ಗೆ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಪ್ರತಿಪಕ್ಷ ನಾಯಕ ಆರ್.ಅಶೋಕ್, ವಾಲ್ಮೀಕಿ ಹಗರಣದಲ್ಲಿ ನೂರಾರು ಕೋಟಿ ಲೂಟಿಯಾಗಿದೆ. ಚರ್ಚೆಗೆ ಅವಕಾಶ ಮಾಡಕೊಡಬೇಕು ಎಂದಾಗ ಸದನದಲ್ಲಿ ಪ್ರತಿಪಕ್ಷ ಹಾಗೂ ಆಡಳಿತ ಪಕ್ಷ ಸದಸ್ಯರಿಂದ ಗದ್ದಲ ಉಂಟಾಯಿತು. ಆಗ ಎದ್ದುನಿಂತ ಸಿಎಂ ಸಿದ್ದರಾಮಯ್ಯ, ನಾವು ಎಲ್ಲ ಚರ್ಚೆಗೆ ಸಿದ್ಧರಿದ್ದೇವೆ. ನಿಯ ಮಾವಳಿ ಪ್ರಕಾರ ಚರ್ಚೆ ಮಾಡಬೇಕು. ಎಲ್ಲ ಚರ್ಚೆಗೂ ನಮ್ಮ ಸರಕಾರ ಉತ್ತರ ಕೊಡಲು ಸಿದ್ಧ ಎಂದರು.

ಆ ವೇಳೆ ಮಧ್ಯಪ್ರವೇಶಿಸಿದ ಬಸನಗೌಡ ಯತ್ನಾಳ್, ಹೊಂದಾಣಿಕೆ ಬೇಕಿಲ್ಲ. ನಮ್ಮ ಪಕ್ಷವೂ ಸ್ವಚ್ಛವಾಗಬೇಕು. ನಿಮ್ಮ ಪಕ್ಷವೂ ಸ್ವಚ್ಛವಾಗಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿಗೆ ಹಗರಣದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಇವರ ಕಾಲದಲ್ಲಿ ಅದೆಷ್ಟು ಲೂಟಿ ಹೊಡೆದಿದ್ದಾರೆ ಎಂದು ತಿರುಗೇಟು ಕೊಟ್ಟರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಸೇರಿ ಎಲ್ಲ ಹಗರಣಗಳ ವಿಚಾರ ವಾಗಿ ಚರ್ಚೆ ಮಾಡಲು ಸಿದ್ಧರಿದ್ದೇವೆ. ಈ ಪ್ರಕರಣ ಸಂಬಂಧ ಕಾನೂನು ರೀತಿಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ಏಕೆಂದರೆ ತನಿಖೆ ಇನ್ನೂ ಪೂರ್ಣವಾಗಿಲ್ಲ. ಆದರೂ ರಾಜ್ಯದ ಜನರಿಗೆ ಮಾಹಿತಿ ನೀಡುವ ಕಾರಣಕ್ಕೆ ಚರ್ಚೆಗೆ ನಾವು ಸಿದ್ಧ. ಆದರೆ ಪ್ರಶ್ನೋತ್ತರ ಅವಧಿ ಬಳಿಕ ಚರ್ಚೆ ಮಾಡೋಣ ಎಂದು ತಿಳಿಸಿದರು.

ತುರ್ತು ಪರಿಸ್ಥಿತಿ ಖಂಡಿಸಿ ನಿರ್ಣಯಕ್ಕೆ ಆಗ್ರಹ

ಇದಕ್ಕೂ ಮುಂಚೆ ಬಿಜೆಪಿ ಸದಸ್ಯ ಸುನಿಲ್ ಕುಮಾರ್, ತುರ್ತು ಪರಿಸ್ಥಿತಿ ಖಂಡಿಸಿ ನಿರ್ಣಯ ಮಂಡನೆ ಮಾಡಬೇಕು. ತುರ್ತು ಪರಿಸ್ಥಿತಿಗೆ 50 ವರ್ಷ ಆಗಿದೆ. ಲೋಕಸಭೆಯಲ್ಲಿ ತುರ್ತುಪರಿಸ್ಥಿತಿ ಖಂಡಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ರಾಜ್ಯದಲ್ಲೂ ನಿರ್ಣಯ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಧಾನಸೌಧದಲ್ಲಿ ಛತ್ತೀಸ್‌ಘಡದ ಮಾಜಿ ಸಿಎಂ ಭೂಪೇಶ್ ಬಘೇಲಾ ಅವರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ರಾಜ್ಯದಲ್ಲಿ ನೀಟ್ ರದ್ದತಿಗೆ ಕಾಂಗ್ರೆಸ್ ಆಗ್ರಹ

ವಿಧಾನ ಪರಿಷತ್: ರಾಜ್ಯದಲ್ಲಿ ನೀಟ್ ರದ್ದು ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ ಅವರು ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಅವರು, ನೀಟ್ ಪರೀಕ್ಷೆಯಲ್ಲಿ ದೊಡ್ಡ ಅವ್ಯವಹಾರ ವಾಗಿದೆ. ಪೇಪರ್ ಲೀಕ್ ಆಗಿ 24 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ಹಿಂದೆ ಸಿಇಟಿ ಪರೀಕ್ಷೆ ಇದ್ದಾಗ ನಮ್ಮ ಮಕ್ಕಳಿಗೆ ಹೆಚ್ಚು ಅನುಕೂಲ ಆಗ್ತಿತ್ತು. ನೀಟ್ ವ್ಯವಸ್ಥೆ ಫೆಲ್ಯೂರ್ ಸಿಸ್ಟಮ್. ಇದರಿಂದ ಮಕ್ಕಳಿಗೆ ಅನಾನುಕೂಲ. ಈ ಪರೀಕ್ಷೆಯಲ್ಲಿ ಸಾಮಾಜಿಕ ನ್ಯಾಯ ಇಲ್ಲ. ಹೀಗಾಗಿ ರಾಜ್ಯ ಸರಕಾರ ನೀಟ್ ರದ್ದು ಮಾಡಬೇಕು. ತಮ್ಮದೇ ಪರೀಕ್ಷಾ ವ್ಯವಸ್ಥೆ ಜಾರಿ ಮಾಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸಚಿವ ಶರಣ ಪ್ರಕಾಶ್ ಪಾಟೀಲ್ ಉತ್ತರ ನೀಡಿ, ನೀಟ್ ಪರೀಕ್ಷೆಯಲ್ಲಿ ಅಕ್ರಮವಾಗಿದೆ. ಕೇಂದ್ರ ಸರಕಾರ ಇದರಲ್ಲಿ ಎಡವಟ್ಟು ಮಾಡಿದೆ. ನೀಟ್ ಪರೀಕ್ಷೆ ಮಾಡುವುದರಲ್ಲಿ ಕೇಂದ್ರ ಎಡವಿದೆ. ಪೇಪರ್ ಲೀಕ್ ಆದಾಗ ನಾವು ತನಿಖೆ ಮಾಡಿ ಎಂದು ಆಗ್ರಹ ಮಾಡಲಾಗಿತ್ತು. ಇದಕ್ಕೆ ಕೇಂದ್ರ ಒಪ್ಪಲಿಲ್ಲ. ಬಳಿಕ ತಪ್ಪೊಪ್ಪಿಕೊಂಡು ಸಿಬಿಐ ತನಿಖೆಗೆ ಒಪ್ಪಿಸಿದೆ. ಸುಪ್ರೀಂಕೋರ್ಟ್‌ನಲ್ಲಿ ಈ ಪ್ರಕರಣ ಇದೇ 18ಕ್ಕೆ ವಿಚಾರಣೆಯಿದೆ. ಏನು ತೀರ್ಮಾನ ಆಗುತ್ತದೆಯೋ ನೋಡೋಣ ಎಂದರು.

ಕೇಂದ್ರ ಸರಕಾರ ನಿರ್ಧಾರ ಮಾಡಬೇಕು

ನೀಟ್ ರದ್ದು ಮಾಡೋದು ಸಾಧ್ಯವಿಲ್ಲ. ನೀಟ್ ವ್ಯವಸ್ಥೆ ಸುಪ್ರೀಂ ಕೋರ್ಟ್ ಆದೇಶದಿಂದ ಆಗಿದೆ. ಕೇಂದ್ರ ಸರಕಾರ ಇದನ್ನ ಕಾಯ್ದೆ ತಂದು ಮಾಡಿದೆ. ಇದನ್ನ ರದ್ದು ಮಾಡಲು ಸುಪ್ರೀಂ ಕೋರ್ಟ್ ಆದೇಶ ಮಾಡಬೇಕು. ಅಥವಾ ಕೇಂದ್ರ ಸರಕಾರ ನಿರ್ಧಾರ ಮಾಡಬೇಕು ಎನ್ನುವ ಮೂಲಕ ನೀಟ್ ವ್ಯವಸ್ಥೆ ರದ್ದು ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಕೇಂದ್ರದ ಮೇಲೆ ಆರೋಪ ಮಾಡಿದ್ದಕ್ಕೆ ಬಿಜೆಪಿ ಸದಸ್ಯ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಸದನದಲ್ಲಿ ಗದ್ದಲ ಗಲಾಟೆ ಆಯಿತು. ನೀಟ್ ಪರೀಕ್ಷೆಯಲ್ಲಿ ಮಕ್ಕಳ ಭವಿಷ್ಯ ಹಾಳು ಮಾಡಿದ್ದು ಕೇಂದ್ರ ಸರಕಾರ ಎಂದು ಕಾಂಗ್ರೆಸ್ ಸದಸ್ಯರು ದೂರಿದರು. ಇದಕ್ಕೆ ಸಿಇಟಿಯಲ್ಲಿ ಔಟ್ ಆಫ್ ಸಿಲಬಸ್ ಪ್ರಶ್ನೆ ಕೊಟ್ಟು ನೀವು ಹಾಳು ಮಾಡಿದ್ದು ಎಂದು ಬಿಜೆಪಿ ಸದಸ್ಯರು ಕಿಡಿಕಾರಿದರು. ಸದನದಲ್ಲಿ ಗದ್ದಲ ಗಲಾಟೆ ಉಂಟಾಯ್ತು. ಬಳಿಕ ಮಧ್ಯೆ ಪ್ರವೇಶ ಮಾಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಿದ ಉಪ ಸಭಾಪತಿಗಳು ಗದ್ದಲಕ್ಕೆ ಬ್ರೇಕ್ ಹಾಕಿದರು.

ಮುಡಾ, ವಾಲ್ಮೀಕಿ ಹಗರಣ ಖಂಡಿಸಿ ಬಿಜೆಪಿ ಪ್ರತಿಭಟನಾ ರ್‍ಯಾಲಿ

ಸಿಎಂಗೆ ತಾಕತ್ತಿದ್ದರೆ ಸಿಬಿಐಗೆ ಒಪ್ಪಿಸಿ: ವಿಜಯೇಂದ್ರ

ಬೆಂಗಳೂರು: ಮುಡಾ ಹಗರಣದ ತನಿಖೆಯನ್ನು ನಿವೃತ್ತ ನ್ಯಾಯಾಧೀಶರಿಂದ ನಡೆಸಿದರೆ ಸಾಲದು; ಮುಖ್ಯಮಂತ್ರಿಗಳಿಗೆ ನಿಜವಾಗಿ ತಾಕತ್ತಿದ್ದರೆ ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದ್ದಾರೆ.

ಶಾಸಕರ ಭವನದ ಮಹರ್ಷಿ ವಾಲ್ಮೀಕಿ ಪ್ರತಿಮೆ ಬಳಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸಾವಿರಾರು ಕೋಟಿ ಬೆಲೆಬಾಳುವ ನಿವೇಶನಗಳ ಹಂಚಿಕೆಯ ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳ ಕುಟುಂಬವೇ ಪಾಲು ಪಡೆದಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀ ನಾಮೆ ಕೊಡಬೇಕು ಹಾಗೂ ಮುಡಾ ಹಗ ರಣದ ತನಿಖೆ ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಸದನದ ಹೊರಗೆ ಹಾಗೂ ಸದನದ ಒಳಗೆ ಹೋರಾಟ ಮುಂದು ವರೆಯಲಿದೆ ಎಂದು ಎಚ್ಚರಿಸಿದರು. ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದವರಿಗೆ ನ್ಯಾಯ ಕೊಡುವುದಾಗಿ ಹೇಳಿಕೊಂಡು ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ದಲಿ ತರ ಅಭಿವೃದ್ಧಿಗೆ ಮೀಸಲಿಟ್ಟ ಹಣ ಲೂಟಿ ಮಾಡಿದ್ದಲ್ಲದೆ, ಅದೇ ಮೊತ್ತ ದಲ್ಲಿ ಲೋಕಸಭಾ ಚುನಾವಣೆ ನಡೆ ಸೋ ಮೂಲಕ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಸರಕಾರದ ಬಂಡವಾಳ ಬಯಲಾಗಿದೆ ಎಂದು ಟೀಕಿಸಿದರು.

ನಿಗಮದ ಅಧ್ಯಕ್ಷ ದದ್ದಲ್ ಕಾಣೆಯಾಗಿದ್ದಾರೆ: ಮುಖ್ಯಮಂತ್ರಿಗಳು ಆ ಸ್ಥಾನದಲ್ಲಿ ಕೂರಲು ನೈತಿಕತೆ ಕಳೆದುಕೊಂಡಿದ್ದು, ಸಮಯ ವ್ಯರ್ಥ ಮಾಡದೆ; ಈಗಾಗಲೇ ಮಾಜಿ ಸಚಿವ ನಾಗೇಂದ್ರ ಇ.ಡಿ. ಕಸ್ಟಡಿಯಲ್ಲಿದ್ದಾರೆ. ನಿಗಮದ ಅಧ್ಯಕ್ಷರೂ ಆದ ಶಾಸಕ ದದ್ದಲ್ ಕಾಣೆಯಾಗಿದ್ದಾರೆ. ಅಧಿಕಾರಿಗಳು ಸೇರಿಕೊಂಡು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ಮಾಡಿದ್ದಾಗಿ ಹೇಳುವ ಮೂಲಕ ಶಾಸಕರಿಗೆ ಕ್ಲೀನ್ ಚಿಟ್ ಕೊಡುವ ದುಸ್ಸಾಹಸ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಭ್ರಷ್ಟಾಚಾರರಹಿತ ಆಡಳಿತ ಕೊಡುವುದಾಗಿ ಜನರ ಕಿವಿಗೆ ಹೂವು ಇಟ್ಟಿರುವ ಕಾಂಗ್ರೆಸ್ಸಿಗರ ಬಂಡವಾಳ ಬಯಲಾಗಿದೆ. ಮುಖ್ಯಮಂತ್ರಿಗಳು ನಿಜವಾಗಿ ಪ್ರಾಮಾಣಿಕರೇ ಆಗಿದ್ದರೆ, ನಿಷ್ಪಕ್ಷಪಾತ ತನಿಖೆಗೆ ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ಅಲ್ಲದೆ, ವಾಲ್ಮೀಕಿ ನಿಗಮದ ಹಣವನ್ನು ಲೋಕಸಭಾ ಚುನಾವಣೆಗೆ ಬಳಸಿದ ಎಂದು ಇ.ಡಿ. ತಿಳಿಸಿದ್ದು, ಇವೆರಡೂ ಹಗರಣಗಳ ಬಗ್ಗೆ ಸದನದಲ್ಲಿ ಉತ್ತರ ಕೊಡಬೇಕು ಎಂದು ಒತ್ತಾಯಿಸಿದರು.

ಶಾಸಕರ ಭವನದ ಮಹರ್ಷಿ ವಾಲ್ಮೀಕಿ ಪ್ರತಿಮೆಯಿಂದ ವಿಧಾನಸೌಧವರೆಗೆ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಬಿಜೆಪಿ ನಾಯಕರು.

ಆತ್ಮಹತ್ಯೆ ಮಾಡಿಕೊಂಡ ವಾಲ್ಮೀಕಿ ನಿಗಮದ ಅಧಿಕಾರಿ ದಲಿತರಾಗಿದ್ದು, ಕಾಂಗ್ರೆಸ್ಸಿಗರಿಗೆ ದಲಿತರ ವೋಟ್ ಬೇಕು; ದಲಿತರ ನೋಟು ಕೂಡ ಬೇಕು; ದಲಿತರ ಸಾವು ಬೇಕು. ಇದು ಕಾಂಗ್ರೆಸ್ ನೀತಿ. ಈ ಸರಕಾರ ನೈತಿಕವಾಗಿ ಸತ್ತು ಹೋಗಿದ್ದು, ಅಧಿಕಾರದಲ್ಲಿ ಉಳಿಯುವ ಯೋಗ್ಯತೆ ಕಳೆದುಕೊಂಡಿದೆ. ಮಾನ ಮರ್ಯಾದೆ ಇದ್ದರೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು.

- ಆರ್.ಅಶೋಕ್, ಪ್ರತಿಪಕ್ಷ ನಾಯಕ

ಪಲಾಯನವಾದ ಬಿಟ್ಟು ಚರ್ಚೆಗೆ ಬನ್ನಿ

ಕೇಂದ್ರ ಸಚಿವ ಎಚ್‌ಡಿಕೆಗೆ ಡಿಸಿಎಂ ಡಿ.ಕೆ.ಶಿ ಸವಾಲು

ಬೆಂಗಳೂರು: ಕೇಂದ್ರ ಸಚಿವ ಕುಮಾರಸ್ವಾಮಿ ಕೇವಲ ಹಿಟ್ ಅಂಡ್ ರನ್ ಮಾಡುತ್ತಿದ್ದು, ಬೀದಿಯಲ್ಲಿ ಹಿಟ್ ಅಂಡ್ ರನ್ ಮಾಡುವ ಬದಲು ಮಾಧ್ಯಮಗಳಲ್ಲಿ ಚರ್ಚೆಗೆ ಬರಲಿ, ಇಲ್ಲವೇ ಶಾಸಕರಿಂದ ಸದನದಲ್ಲಿ ಚರ್ಚೆ ಮಾಡಿಸಲಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸವಾಲು ಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಹತಾಶೆಯಲ್ಲಿದ್ದು, ಬಹಿರಂಗ ಚರ್ಚೆಗೆ ಬರಲಿ. ಡಿ.ಕೆ. ಶಿವಕುಮಾರ್ ಅವರಂತೆ ಹಿಟ್ ಅಂಡ್ ರನ್ ಮಾಡುವುದಿಲ್ಲ. ಕಸದ ಲಾರಿ ಹೊಡೆಯುತ್ತಿದ್ದವರು ಅವರು. ಸಹೋದರ ಹಾಗೂ ಪಕ್ಷದ ಸದಸ್ಯರಿಗೆ ದಾಖಲೆ ಕೊಟ್ಟು ಸದನದಲ್ಲಿ ಚರ್ಚೆ ಮಾಡಲಿ. ಕಿಂಗ್ ಆಫ್ ಕರಪ್ಷನ್ ಎಂದು ಜನ ನನ್ನನ್ನಾಗಲಿ, ನನ್ನ ಕುಟುಂಬದವರನ್ನು ಕರೆದಿಲ್ಲ. ಆ ರೀತಿ ಯಾರನ್ನು ಕರೆದಿದ್ದಾರೆ ಎಂದು ಚರ್ಚೆಗೆ ಬರಲಿ ತಿಳಿಸುತ್ತೇನೆ. ನಾನು ಅವರ ಚರಿತ್ರೆ ತೆಗೆಯುತ್ತೇನೆ. ಎಲ್ಲವೂ ದಾಖಲೆಯಲ್ಲಿ ಉಳಿಯಲಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಹಗರಣಗಳ ಪಿತಾಮಹ: ಸದನದ ಹೊರಗೆ ಏಕೆ ಹೋರಾಟ ಮಾಡುತ್ತಿದ್ದಾರೆ? ಸದನದ ಒಳಗೆ ಹೋರಾಟ ಮಾಡಲಿ. ಅವರು ಏನು ಹೇಳಬೇಕೋ ಸದನದ ಒಳಗೆ ಹೇಳಲಿ. ನಾವು ಏನು ಉತ್ತರ ಕೊಡಬೇಕೋ ಕೊಡುತ್ತೇವೆ. ನಮಗೂ ಅವರ ಬಗ್ಗೆ ಗೊತ್ತಿದೆ. ಎಲ್ಲವನ್ನೂ ಒಂದೊಂದಾಗಿ ಬಿಚ್ಚಿಡುತ್ತೇವೆ. ಮುಡಾ ಸೇರಿದಂತೆ ಹಲವಾರು ಹಗರಣಗಳು ನಡೆದಿರುವುದು ಬಿಜೆಪಿ ಕಾಲದಲ್ಲಿ. ಬಿಜೆಪಿ ಭ್ರಷ್ಟಾಚಾರದ ತಂದೆ. ಅವರ ಆಡಳಿತ ಅವಧಿಯಲ್ಲಿ ಭ್ರಷ್ಟಾಚಾರದ ಸರಮಾಲೆಯೇ ನಡೆದಿದೆ. ಭ್ರಷ್ಟಾಚಾರರಹಿತ ಆಡಳಿತ ಮತ್ತು ಆಡಳಿತ ಶುದ್ಧೀಕರಣ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಸರಕಾರ ಭ್ರಷ್ಟಾಚಾರರಹಿತ ಆಡಳಿತ ನೀಡುತ್ತಿರುವುದು ನೋಡಿ ಮೈ ಪರಚಿಕೊಳ್ಳುತ್ತಿದ್ದಾರೆ. ಹಣ್ಣನ್ನು ತಿಂದು ಸಿಪ್ಪೆಯನ್ನು ನಮ್ಮ ಮೇಲೆ ಎಸೆಯುವ ಪ್ರಯತ್ನ ಮಾಡುತ್ತಿದ್ದಾರೆ. ಅವರು ಏನು ಬೇಕಾದರೂ ಹೇಳಿಕೊಳ್ಳಲಿ. ಸಂಸತ್ತಿನಲ್ಲಿ ಏನು ಬೇಕಾದರೂ ಮಾಡಿಕೊಳ್ಳಲಿ. ಕರ್ನಾಟಕದಲ್ಲಿ ಅವರ ಆಟ ನಡೆಯುವುದಿಲ್ಲ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಾಮಗಾರಿ: ರೈಲು ಸಂಚಾರ ಬದಲಾವಣೆ

ಬೆಂಗಳೂರು: ನಿಟ್ಟೂರು ಮತ್ತು ಸಂಪಿಗೆ ರಸ್ತೆ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ 62ರಲ್ಲಿ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆ ಕೆಲ ರೈಲುಗಳ ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ. ಜುಲೈ 18, 25 ರಂದು ತುಮಕೂರು- ಚಾಮರಾಜನಗರ (07346), ಚಾಮರಾಜನಗರ-ಮೈಸೂರು (07328), ಚಾಮರಾಜನಗರ -ಯಶವಂತಪುರ (16239), ಯಶವಂತಪುರ -ಚಾಮರಾಜನಗರ (16240), ತುಮಕೂರು-ಕೆಎಸ್‌ಆರ್ ಬೆಂಗಳೂರು (06576),ಕೆಎಸ್‌ಆರ್ ಬೆಂಗಳೂರು-ತುಮಕೂರು (06575), ಯಶವಂತಪುರ-ಶಿವಮೊಗ್ಗ ಟೌನ್ (16579) ಮತ್ತು ಶಿವಮೊಗ್ಗ ಟೌನ್-ಯಶವಂತಪುರ (16580) ರೈಲುಗಳನ್ನು ರದ್ದು ಪಡಿಸಲಾಗುತ್ತಿದೆ. ಜುಲೈ 18 25 ರಂದು ಕೆಎಸ್‌ಆರ್ ಬೆಂಗಳೂರು-ತುಮಕೂರು ನಿಲ್ದಾಣಗಳ ನಡುವೆ ಸಂಚರಿಸುವ (06571/06572) ರೈಲುಗಳನ್ನು ಹಿರೇಹಳ್ಳಿ-ತುಮಕೂರು, ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು (20652) ರೈಲು, ಬೆಂಗಳೂರು ನಿಲ್ದಾಣಗಳ ನಡುವಿನ ರೈಲುಗಳನ್ನು ಭಾಗಶಃ ರದ್ದು ಮಾಡಲಾಗಿದೆ.

ಫೇಲಾದ ಮಕ್ಕಳಿಗೆ ವಿಶೇಷ ತರಗತಿ

ಆನೇಕಲ್: ಎಸ್‌ಎಸ್‌ಎಲ್‌ಸಿ ಫೇಲಾದ ಮಕ್ಕಳ ಒಂದು ವರ್ಷ ವ್ಯರ್ಥವಾಗಬಾ ರದು ಎನ್ನುವ ಮುಂದಾಲೋಚನೆಯಿಂದ ಮೂರು ವರ್ಷಗಳಿಂದ ಫೇಲಾಗಿರುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತಜ್ಞ ಶಿಕ್ಷಕರಿಂದ ನಡೆಸಿಕೊಂಡು ಬರಲಾಗು ತ್ತಿದೆ ಎಂದು ಲೋಕಾಯುಕ್ತ ಡಿವೈಎಸ್‌ಪಿ ರಾಜೇಶ್ ಎಲ್. ವೈ ಹೇಳಿದರು.

ಆನೇಕಲ್‌ನಲ್ಲಿ ರಾಜಲಾಂಛನ ಯುಕ್ತಿ ಸಂಸ್ಥಾನ ಹಾಗೂ ದರ್ಪಣ ತಂಡದ ಸಹ ಯೋಗದೊಂದಿಗೆ ಏರ್ಪಡಿಸಿದ್ದ ವಿದ್ಯಾರ್ಥಿ ಗಳು ಮತ್ತು ವಿಶೇಷ ತರಗತಿ ನಡೆಸಿದ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಫೇಲಾದ ವಿದ್ಯಾರ್ಥಿಗಳು ಯಾವುದೇ ಅಪರಾಧಿ ಚಟುವಟಿ ಕೆಗಳಲ್ಲಿ ಭಾಗಿಯಾಗದಂತೆ, ಅಡ್ಡದಾರಿ ಹಿಡಿಯದಂತೆ ಜೀವನದ ಒಂದು ವರ್ಷ ವ್ಯರ್ಥವಾಗಬಾರದು ಎನ್ನುವ ಕಾರಣಕ್ಕೆ 2022 ರಲ್ಲಿ ಫೇಲಾದ ಮಕ್ಕಳಿಗೆ ವಿಶೇಷ ತರಗತಿ ಪ್ರಾರಂಭಿಸಿ ಮೂರೂ ವರ್ಷದಲ್ಲಿ ಉತ್ತಮ ಸಾಧನೆ ಮಾಡಲಾಗಿದೆ. ನಿಸ್ವಾರ್ಥ ಪ್ರಯತ್ನಕ್ಕೆ ಕೈಜೋಡಿಸಿದ ಶಿಕ್ಷಕರು ಅಭಿನಂದನಾರ್ಹರು. ಮಂಗಮನಪಾಳ್ಯ, ಚಂದಾಪುರ, ಆನೇಕಲ್ ಭಾಗದ 400ಕ್ಕು ಹೆಚ್ಚು ವಿದ್ಯಾ ರ್ಥಿಗಳು ಸಾರ್ಥಕತೆ ಕಂಡು ಕೊಂಡಿದ್ದಾರೆ ಎಂದರು. ಶುಭೋದಿನಿ ಶಾಲೆಯ ಪ್ರಾಂಶುಪಾಲ ಉಮೇಶ್, ರಾಜಲಾಂಛನ ತಂಡದ ನರಸಿಂಹಮೂರ್ತಿ, ಡಾ. ವಿಜಯ್, ಮೊಹಮದ್ ಇಕ್ಬಾಲ್ ಖಾನ್, ವಸಂತ್, ಮಂಜುನಾಥ್, ಗಣೇಶ್, ರಾಹುಲ್, ಸೋಮಶೇಖರ್, ನಿರಂಜನ್, ಚೇತನ್, ಸಾಗರ್ ಮತ್ತು ಉಡುಪಿ ಉಪಹಾರದ ಸಿದ್ದರಾಜುರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿದ ಶಿಕ್ಷಕರನ್ನು ಡಿ ವೈ ಎಸ್‌ಪಿ ರಾಜೇಶ್ ಸನ್ಮಾನಿಸಿ ಗೌರವಿಸಿದರು.

ಸರ್ವಪಕ್ಷ ಸಭೆಗೆ ಎಚ್‌ಡಿಕೆ ಗೈರು ಚಲುವರಾಯಸ್ವಾಮಿ ಆಕ್ರೋಶ

ಬೆಂಗಳೂರು: ರಾಜ್ಯ ಸರಕಾರ ಕರೆದಿದ್ದ ಸರ್ವಪಕ್ಷ ಸಭೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಗೈರುಹಾಜರಾಗಿ, ಮಂಡ್ಯದ ಜ ನರಿಗೆ ಮಾಡಿದ ಅಗೌರವ ತೋರಿದ್ದಾರೆ ಎಂದು ಕೃಷಿ ಸಚಿವ ಚಲು ವರಾಯ ಸ್ವಾಮಿ ಟೀಕಿಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಕಾವೇರಿ ನದಿ ನೀರು ಕುರಿತ ಸರ್ವಪಕ್ಷ ಸಭೆಗೆ ಕೇಂದ್ರದ ಯಾವ ಸಚಿವರು ಬಂದಿಲ್ಲ. ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಬಂದಿಲ್ಲ. ನಮ್ಮ ಮಂಡ್ಯದ ಸಂಸದರು ಸಭೆಗೆ ಬಂದಿಲ್ಲ. ಅವರು ಬಾಡೂಟಕ್ಕೆ ಹೋಗಿದ್ದರು. ಇದು ದುರಂತ ಅಲ್ಲವೇ ಎಂದು ಪ್ರಶ್ನಿಸಿದ್ದಾರೆ. ನಾನು ಈಗಷ್ಟೇ ಕೇಂದ್ರ ಸಚಿವನಾಗಿದ್ದೇನೆ. ಒಂದು ತಿಂಗಳು ಬೇಕು ಅಂತ ಕೇಳಿದ್ದಾರೆ. ಅವರು ಮಾಜಿ ಸಿಎಂ, ದೇಶ ಆಳಿದ ಕುಟುಂಬದವರಾಗಿದ್ದಾರೆ. ಕನಿಷ್ಠ ರೈತರ ವಿಚಾರಕ್ಕೆ ಬರಬೇಕಿತ್ತು. ಚುನಾವಣೆ ವೇಳೆ ಕಾವೇರಿ ವಿಚಾರವಾಗಿ ಮೊದಲ ಆದ್ಯತೆ ನೀಡುತ್ತೇನೆ ಅಂದಿದ್ದರು. ಸರ್ವಪಕ್ಷ ಸಭೆಗೆ ಬರದೇ ಇರುವುದು ಮಂಡ್ಯದ ಜನರಿಗೆ ಕುಮಾರಸ್ವಾಮಿ ಮಾಡಿದ ಅಗೌರವವಾಗಿದೆ ಎಂದು ಕಿಡಿಕಾರಿದರು. ಕಾವೇರಿ ವಿಚಾರವಾಗಿ ನಮ್ಮ ಸರಕಾರ ರೈತರ ಹಿತಾಸಕ್ತಿ ಕಾಪಾಡುವ ಕೆಲಸ ಮಾಡುತ್ತದೆ. ನಾವು ಸರ್ವಪಕ್ಷ ಸಭೆಯಲ್ಲಿ ನಿರ್ಣಯ ಕೈಗೊಳ್ಳಬಾರದು ಎಂದು ಹೇಳಲು ತಮಿಳುನಾಡಿಗೂ ಅಧಿಕಾರ ಇಲ್ಲ. ಅವರು ಬೇಕಾದರೆ ಸರ್ವಪಕ್ಷ ಸಭೆ ಮಾಡಲಿ. ನಾವು ಅವರು ನಿರ್ಣಯ ತೆಗೆದುಕೊಳ್ಳುವುದನ್ನು ತಪ್ಪು ಅನ್ನಲ್ಲ. ನಮ್ಮ ರಾಜ್ಯದ ಹಿತ ನಮಗೆ ಮುಖ್ಯ. ನಾವು ಜತೆಗೂಡಿ ಚರ್ಚೆ ಮಾಡಬೇಕು. ತಮಿಳುನಾಡು ರಾಜಕೀಯ ಪ್ರೇರಿತ ಚರ್ಚೆ ಬಿಡಬೇಕು. ಎರಡು ರಾಜ್ಯದ ಜನ ಬೇರೆಯವರಲ್ಲ, ನಾವೆಲ್ಲರೂ ಒಂದೇ. ಪರಸ್ಪರ ಚರ್ಚೆ ಮಾಡೋಣ. ಅವರು ನ್ಯಾಯಯುತ ತೀರ್ಮಾನ ಮಾಡಲಿ ಎಂದು ಒತ್ತಾಯಿಸಿದರು.

ಸಮಾಚಾರ ಸಣ್ಣದಲ್ಲ

ಖ್ಯಾತ ಕೃಷಿ ವಿಜ್ಞಾನಿ ಡಾ.ಪಾಟೀಲ್ ನಿಧನ

ಕಲಬುರಗಿ: ಕೃಷಿ ವಿಜ್ಞಾನಿ ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಡಾ. ಎಸ್.ಎ.ಪಾಟೀಲ್ (80) ಅವರು ಸೋಮವಾರ ಕಲಬುರಗಿಯ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಕೃಷಿ ಕ್ಷೇತ್ರಕ್ಕೆ ತಮ್ಮದೇ ವಿಶಿಷ್ಟ ಕೊಡುಗೆ ನೀಡಿರುವ ಡಾ. ಪಾಟೀಲ್, ಕರ್ನಾಟಕ ಕೃಷಿ ಮಿಷನ್ ಮಾಜಿ ಅಧ್ಯಕ್ಷ ರಾಗಿ, ನವದೆಹಲಿಯ ಕೃಷಿ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ,ಕರ್ನಾಟಕ ಕೃಷಿ ವಿಶ್ವವಿದ್ಯಾಲಯ ದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು . ಜೇವರ್ಗಿ ತಾಲೂಕಿನ ಬಿರಾಳಗೌಡರು ಎಂದೇ ಪ್ರಸಿದ್ಧರಾಗಿದ್ದ ಕೃಷಿ ವಿಜ್ಞಾನಿ ಡಾ.ಎಸ್.ಎ. ಪಾಟೀಲ ಅವರ ನಿಧನ ದಿಂದ ಕೃಷಿ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಡಾ.ಎಸ್.ಎ. ಪಾಟೀಲ್ ಮೂಲತ: ಕೃಷಿ ಕುಟುಂ ಬದಿಂದ ಬಂದಿದ್ದು, ಎಂ.ಎಸ್ಸಿ (ಕೃಷಿ) ಹಾಗೂ ಜೆನೆಟಿಕ್ ಮತ್ತು ಪ್ಲಾಂಟ್ ಬ್ರೀಡಿಂಗ್ ವಿಷಯದಲ್ಲಿ ಪಿಎಚ್.ಡಿ ಮಾಡಿ ರಾಯಚೂರಿನ ವಲಯ ಸಂಶೋಧನಾ ಕೇಂದ್ರದಲ್ಲಿ ಸಹ ನಿರ್ದೇಶಕರಾಗಿ ಹಂತಹಂತವಾಗಿ ಬೆಳೆದು ಸಂಶೋಧನಾ ನಿರ್ದೇಶಕ ರಾಗಿ, ಡೀನ್ ರಾಗಿ ಎರಡು ಬಾರಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಡಾ. ಎಸ್.ಎ.ಪಾಟೀಲ್ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬನಿ ಮಿಡಿದಿದ್ದಾರೆ.

ಡೆಂಘೀ ಜ್ವರ: ಬಾಲಕ ಸಾವು

ಅರಸೀಕೆರೆ: ತಾಲೂಕಿನ ಮಾಡಾಳು ಗ್ರಾಮದ ರಾಜೇಶ(8)ಎಂಬ ಬಾಲಕ ಡೆಂಗಿ ಜ್ವರದಿಂದ ಸಾವನ್ನಪಿರುವ ಘಟನೆ ಸೋಮವಾರ ನಡೆದಿದೆ. ಬಾಲಕ ಎರಡು ದಿನಗಳಿಂದ ಜ್ವರ ಕಾಣಿಸಿಕೊಂಡಿತ್ತು. ರಕ್ತ ಪರೀಕ್ಷೆ ನಂತರ ಡೆಂಗಿ ಎಂಬುದು ಗೊತ್ತಾಗಿದ್ದು ಭಾನುವಾರ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಾಪಿದ್ದಾನೆ. ಮೃತ ಬಾಲಕ ತಂದೆ ತಾಯಿ ಅಣ್ಣನನ್ನು ಅಗಲಿದ್ದು ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತು.

ಬಂಧಿತನಿಂದ 20 ಲಕ್ಷ ನಗದು, 15 ಕಂಪ್ಯೂಟರ್ ವಶ

ವೈದ್ಯಕೀಯ ಸೀಟು ವಂಚನೆ: ಬಂಧನ

ಬೆಳಗಾವಿ: ನೀಟ್ ಪರೀಕ್ಷಾ ಫಲಿತಾಂಶ ಹಗರಣದ ಬೆನ್ನಲ್ಲೇ ಬೆಳಗಾವಿಯಲ್ಲಿ ನಕಲಿ ಸಂಸ್ಥೆ ಮೂಲಕ ವೈದ್ಯಕೀಯ ಸೀಟ್ ಕೊಡಿಸುವುದಾಗಿ ನಂಬಿಸಿ 1 ಕೋಟಿ 30 ಲಕ್ಷ ರು. ವಂಚಿಸಿ ಪರಾರಿಯಾಗಿದ್ದ ಆರೋಪಿಯನ್ನು ಬೆಳಗಾವಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. 2023 ರ ನವೆಂಬರ್ ನಲ್ಲಿ ಬೆಳಗಾವಿಯ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕಪಡೆದ ವಿದ್ಯಾರ್ಥಿಗೆ ಮೆಡಿಕಲ್ ಸೀಟು ಕೊಡಿಸುವುದಾಗಿ ವಂಚಿಸಿದ್ದ ಪ್ರಕರಣ ದಾಖಲಾಗಿತ್ತು. ಪ್ರಕರಣದ ಬೆನ್ನುಹತ್ತಿದ್ದ ಪೊಲೀಸರು ಹೈದರಾಬಾದ್‌ನ ಅರಗೊಂಡ ಅರವಿಂದ ಅಲಿಯಾಸ್ ಅರವಿಂದ್ ಕುಮಾರ್ ಎಂಬಾತನನ್ನು ಬಂಧಿಸಿದ್ದು, ಆತನಿಂದ 20 ಲಕ್ಷ ರು. ನಗದು ಹಾಗೂ ಕೃತ್ಯಕ್ಕೆ ಎಸಗಿದ್ದ 15 ಕಂಪ್ಯೂಟರ್ ವಶಕ್ಕೆ ಪಡೆದಿದ್ದಾರೆ.

ಆರೋಪಿ ವಿರುದ್ಧ 13 ಪ್ರಕರಣ: ಅರವಿಂದ್ ಕುಮಾರ್ ವಿರುದ್ಧ ತೆಲಂಗಾಣ ಹಾಗೂ ಬೆಂಗಳೂರಿನ ಹಲವೆಡೆ ಸೇರಿ ದೇಶದ ವಿವಿಧ ಭಾಗಗಳಲ್ಲಿ 13 ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಎಂಬಿಎ ಪದವೀಧರ ಆಗಿರುವ ಆರೋಪಿ ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದವರನ್ನು ಸಂಪರ್ಕಿಸಿ, ವೈದ್ಯಕೀಯ ಸೀಟು ಕೊಡಿಸುವುದಾಗಿ ನಂಬಿಸಿ ವಂಚನೆ ಮಾಡುತ್ತಿದ್ದ. ಕಳೆದ ಆರು ತಿಂಗಳಿನಿಂದ ಆರೋಪಿಯ ಬಗ್ಗೆ ಮಾಹಿತಿ ಕಲೆ ಹಾಕಿದ್ದ ಪೊಲೀಸರು ಭಾನುವಾರ ಮುಂಬೈನಲ್ಲಿ ಬಂಧಿಸಿದ್ದಾರೆ.

> ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡು ತನ್ನ ಸಂಸ್ಥೆ ಮೂಲಕ ವೈದ್ಯಕೀಯ ಸೀಟು ಕೊಡಿಸುವುದಾಗಿ ವಂಚಿಸಿರುವ ಪ್ರಕರಣದ ಆರೋಪಿಯನ್ನು ಬಂಧಿಸುವಲ್ಲಿ ನಮ್ಮ ತಂಡ ಯಶಸ್ವಿಯಾಗಿದೆ. ಆರೋಪಿ ಈವರೆಗೆ ಅನೇಕ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದು ತಿಳಿದುಬಂದಿದೆ. ಸಂಚಲನ ಮೂಡಿಸಿರುವ ನೀಟ್ ಪರೀಕ್ಷಾ ಹಗರಣ ಹಾಗೂ ಈ ವಂಚನೆ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ.
> -ರೋಹನ್ ಜಗದೀಶ್, ಬೆಳಗಾವಿ ಡಿಸಿಪಿ

ಸಿಬಿಐ ತನಿಖೆಗೆ ಕೇಳುವ ತಾಕತ್ತು ಇದೆಯೇ?: ಶಾಸಕ ಪ್ರದೀಪ್

ಮುಡಾ: ಮಾತನಾಡುವ ನೈತಿಕತೆ ಎಚ್‌ಡಿಕೆಗೆ ಇಲ್ಲ

ಬೆಂಗಳೂರು: ಮುಡಾ ಬಗ್ಗೆ ಸಾಲು ಸಾಲು ಆರೋಪ ಮಾಡುತ್ತಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ, ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಕೇಳುವ ತಾಕತ್ತಿದೆಯೇ ಎಂದು ಶಾಸಕ ಪ್ರದೀಪ್ ಈಶ್ವರ್ ಸವಾಲು ಹಾಕಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿಯವರೇ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾ. ದೇಸಾಯಿಯವರ ಏಕಸದಸ್ಯ ಪೀಠದ ಆಯೋಗ ರಚನೆಯಾಗಿದ್ದು, ತನಿಖೆಯಾಗುತ್ತದೆ. ಆದರೆ 2011 ಮಾರ್ಚ್ 17ರಂದು ಯಡಿಯೂರಪ್ಪನವರು ವಿಧಾನಪರಿಷತ್‌ನಲ್ಲಿ ಭಾಷಣ ಮಾಡುವಾಗ, ಮುಡಾ ವಿಷಯದಲ್ಲಿ ದೇವೇಗೌಡರು ಹಾಗೂ ಕುಮಾರಸ್ವಾಮಿಯವರನ್ನು ಉಲ್ಲೇಖಿಸುತ್ತಾರೆ. ದೇವೇಗೌಡರ ಕುಟುಂಬಕ್ಕೆ 48 ಸೈಟ್ ಹಂಚಿಕೆಯಾಗಿದೆ. ಕುಮಾರಸ್ವಾಮಿಯವರಿಗೆ 300★200 ಅಡಿ ಹಂಚಿಕೆಯಾಗಿದೆ ಎಂದು ನಿಮ್ಮ ವಿರುದ್ಧವೇ ಮಾತನಾಡಿದ್ದಾರೆ. ಈಗ ಇದೇ ವಿಚಾರವಾಗಿ ಜೆಡಿಎಸ್–ಬಿಜೆಪಿಯವರು ಒಂದಾಗಿ ಮಾತನಾಡುತ್ತೀರಲ್ಲ, ನಿಮಗ್ಯಾವ ನೈತಿಕತೆಯಿದೆ ಎಂದು ಪ್ರಶ್ನಿಸಿದರು. ಮುಡಾ ವಿಚಾರದಲ್ಲಿ ಬಿಎಸ್‌ವೈ ನಿಮ್ಮ ವಿರುದ್ಧ ಮಾತನಾಡಿದ್ದಾರೆ. ಇದೇ ವಿಚಾರಕ್ಕೆ ಬಿಜೆಪಿಯೊಂದಿಗೆ ಸೇರಿ ಕುಮಾರಸ್ವಾಮಿ ಅವರು ಪ್ರತಿಭಟನೆ ಮಾಡುತ್ತಿರುವುದು ನನಗೆ ಅರ್ಥವಾಗಿಲ್ಲ ಎಂದರು. ಸಿಎಂ ಸಿದ್ದರಾಮಯ್ಯ ಅಹಿಂದ ಸಮುದಾಯದ ಅತಿದೊಡ್ಡ ನಾಯಕ. ಅದನ್ನು ನೀವು ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಪ್ರಧಾನಿಮಂತ್ರಿ ಮಗ ಮುಖ್ಯಮಂತ್ರಿಯಾಗೋದು ದೊಡ್ಡ ವಿಷಯವಲ್ಲ. ಆದರೆ ಕನಕಪುರದ ಒಬ್ಬ ರೈತನ ರೈತನ ಮಗ ರಾಜ್ಯಕ್ಕೆ ಉಪಮುಖ್ಯಮಂತ್ರಿಯಾಗುವುದು ಅಷ್ಟು ಸುಲಭದ ಕೆಲಸ ಅಲ್ಲ. ನೀವು ಬಸ್‌ನಲ್ಲಿ ಎಂಎಲ್‌ಎಗಳನ್ನು ಕರೆದುಕೊಂಡು ಹೋಗಿ ರಾತ್ರೋರಾತ್ರಿ ಪದವಿ ತೆಗೆದುಕೊಂಡಷ್ಟು ಸುಲಭವಲ್ಲ ಎಂದು ಟೀಕಿಸಿದರು.

> **ಅಹಿಂದ ನಾಯಕನನ್ನು ಸಹಿಸುತ್ತಿಲ್ಲ**
> ಇಂದು ಅಹಿಂದ ನಾಯಕನನ್ನು ಸಹಿಸುತ್ತಿಲ್ಲ. ನಿಮ್ಮ ಸಮುದಾಯದ ವ್ಯಕ್ತಿ ರಾಜ್ಯಕ್ಕೆ ಡಿಸಿಎಂ ಆಗಿದ್ದಾರೆ. ಖುಷಿ ಪಡಬೇಕು ಅಲ್ವಾ ? ಆದರೆ ನಿಮಗೆ ಅದನ್ನು ಸಹಿಸಲು ಆಗುತ್ತಿಲ್ಲ. ಬೇರೆ ಸಮುದಾಯ ಬೆಳೆಯೋದು ನಿಮಗೆ ಇಷ್ಟವಿಲ್ಲ. ಮುಡಾ ಹಗರಣದ ಬಗ್ಗೆ ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಾ; ಈ ಪ್ರಕರಣವನ್ನು ಸಿಬಿಐ ಕೊಡಿ ಅನ್ನುವ ತಾಕತ್ತು ಕುಮಾರಸ್ವಾಮಿಗೆ ಇದೆಯಾ ಎಂದು ಶಾಸಕ ಪ್ರದೀಪ್ ಈಶ್ವರ್ ಪ್ರಶ್ನಿಸಿದರು.

ಶೇ.10.5ರಷ್ಟು ವೇತನ ಹೆಚ್ಚಳಕ್ಕೆ ಒಪ್ಪಿಗೆ

← ಮೊದಲಪುಟದಿಂದ ಆಯೋಗ ಶೇ.27.50ರಷ್ಟು ಮೂಲ ವೇತನ ಹೆಚ್ಚಳಕ್ಕೆ ಶಿಫಾರಸು ಮಾಡಿದೆ. ಈ ಶಿಫಾರಸನ್ನು ಒಪ್ಪಿರುವ ರಾಜ್ಯ ಸರಕಾರ, ಆಗಸ್ಟ್ 1ರಿಂದ ಅನ್ವಯವಾಗುವಂತೆ ಪರಿಷ್ಕರಣೆ ಅನುಷ್ಠಾನಕ್ಕೆ ಬರಲಿದೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಶೇ.17ರಷ್ಟು ವೇತನ ಹೆಚ್ಚಿಸಿ ಮಧ್ಯಂತರ ಆದೇಶ ಹೊರಡಿಸಿದ್ದರು. ಇದೀಗ ಶೇ.10.5ರಷ್ಟು ಪರಿಷ್ಕರಣೆ ಅನುಷ್ಠಾನವಾಗಲಿದೆ. ರಾಜ್ಯ ಸರಕಾರದ ಈ ತೀರ್ಮಾನ ಐದು ಲಕ್ಷ ಸರಕಾರಿ ನೌಕರರು, ಅಷ್ಟೇ ಸಂಖ್ಯೆಯ ಪಿಂಚಣಿದಾರರ ಮೇಲೆ ನೇರ ಪರಿಣಾಮಬೀರಲಿದೆ.

17ಸಾವಿರ ಕೋಟಿ ಹೆಚ್ಚುವರಿ ಹೊರೆ: ಸರಕಾರದ ಈ ತೀರ್ಮಾನದಿಂದ ಬೊಕ್ಕಸಕ್ಕೆ ಭಾರಿ ಹೊರೆ ಬೀಳುವುದು ನಿಶ್ಚಿತ. ಶೇ.10.5ರಷ್ಟು ವೇತನ ಹೆಚ್ಚಳದಿಂದ ಸರಕಾರದ ಬೊಕ್ಕಸಕ್ಕೆ ವಾರ್ಷಿಕ ನೇರವಾಗಿ 17.5 ಸಾವಿರ ಕೋಟಿ ರು. ಹೆಚ್ಚುವರಿ ಹೊರೆ ಬೀಳಲಿದೆ. ಆದರೆ ಈ ಆರ್ಥಿಕ ವರ್ಷದಲ್ಲಿ ನಾಲ್ಕು ತಿಂಗಳು ಈಗಾಗಲೇ ಕಳೆದಿರುವ ಕಾರಣ ಹೊರೆ ಅಷ್ಟಾಗಿ ಬೀಳುವುದಿಲ್ಲ ಎನ್ನಲಾಗಿದೆ. 2022ರ ಜುಲೈನಲ್ಲೇ ಆರನೇ ವೇತನ ಆಯೋಗದ ಅವಧಿ ಮುಕ್ತಾಯವಾಗಿತ್ತು. 2022ರ ಜುಲೈ 1ರಿಂದ ಅನ್ವಯವಾಗುವಂತೆ ಪರಿಷ್ಕರಣೆಯಾಗಬೇಕೆಂಬುದು ಸರಕಾರಿ ನೌಕರರ ಬೇಡಿಕೆಯಾಗಿತ್ತು. ಆದರೆ 2024ರ ಮೇವರೆಗೂ ಎಳೆದಾಟವಾಗಿದ್ದು, 2023ರ ಜನವರಿಯಿಂದಲಾದರೂ ಅನ್ವಯವಾಗುವಂತೆ ಆರ್ಥಿಕ ಅನುಕೂಲ ಆಗಬೇಕೆಂಬುದು ಸರಕಾರಿ ನೌಕರರ ಸಂಘದ ಒತ್ತಾಯವಾಗಿತ್ತು.

18ಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ಘಟಿಕೋತ್ಸವ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 24ನೇ ಘಟಿಕೋತ್ಸವ ಜು.18 ರಂದು ಜ್ಞಾನ ಸಂಗಮ ಆವರಣದ ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿದ್ಯಾಶಂಕರ ಮಾಹಿತಿ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಾರಿಯ ಘಟಿಕೋತ್ಸವದಲ್ಲಿ ಚಿಕ್ಕಬಳ್ಳಾಪುರದ ಮಧುಸೂಧನ್ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸ್ಥಾಪಕ ಮಧುಸೂಧನ್ ಸಾಯಿ, ಭಾರತೀಯ ಇಸ್ರೋ ಅಧ್ಯಕ್ಷ ಡಾ. ಎಸ್.ಸೋಮನಾಥ್, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕರು ಹರಿ. ಕೆ. ಮರಾರ್‌ಗೆ ಡಾಕ್ಟರ್ ಆಫ್ ಸೈನ್ಸ್ ಪದವಿ ನೀಡಿ ಗೌರವಿಸಲಾಗುತ್ತಿದೆ. ವಿಶ್ವವಿದ್ಯಾಲಯದ 24ನೇ ವಾರ್ಷಿಕ ಘಟಿಕೋತ್ಸವದ ಸಂದರ್ಭದಲ್ಲಿ ತಾಂತ್ರಿಕ ವಿಭಾಗದಲ್ಲಿ ಒಟ್ಟು 10 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಗುತ್ತಿದೆ. ಬಿ.ಇ/ಬಿ.ಟೆಕ್ ವಿಭಾಗದಲ್ಲಿ ಸ್ವಾಯತ್ತತೆ ಸೇರಿದಂತೆ 51,129 ವಿದ್ಯಾರ್ಥಿಗಳಿಗೆ, ಬಿ.ಪ್ಲಾನ್ ವಿಭಾಗದಲ್ಲಿ 08, ಬಿ.ಆರ್ಚ್ ವಿಭಾಗದಲ್ಲಿ ಸ್ವಾಯತ್ತತೆ ಸೇರಿದಂತೆ 1,138 ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧನಾ ವಿಭಾಗದಲ್ಲಿ 340 ಪದವಿಗಳನ್ನು ಪ್ರದಾನ ಮಾಡಲಾಗುವುದು ಎಂದು ಡಾ.ಎಸ್.ವಿದ್ಯಾಶಂಕರ ತಿಳಿಸಿದರು.

ಯುರೋ ವಿಜಯಿ ಸ್ಪೇನ್, ಕೊಪಾ ಗೆದ್ದ ಅರ್ಜೆಂಟಿನಾ

← ಮೊದಲಪುಟದಿಂದ **4ನೇ ಬಾರಿ ಪಟ್ಟ ಅಲಂಕರಿಸಿದ ಸ್ಪೇನ್:** ಇನ್ನೊಂದಡೆ ಯುರೋ ಕಪ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ಸ್ಪೇನ್ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಬರ್ಲಿನ್‌ನ ಒಲಿಂಪಿಯಾ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದ ದ್ವಿತೀಯಾರ್ಧದಲ್ಲಿ ಸ್ಪೇನ್‌ನ ಅಲ್ವಾರೊ ಮೊರಾಟಾ, ಡ್ಯಾನಿ ಓಲ್ಮೋ, ಫೆರಾನ್ ಟೊರೆಸ್ ಮತ್ತು ಲ್ಯಾಮಿನ್ ಯಮಲ್ ಉತ್ತಮ ಹೊಂದಾಣಿಕೆಯ ಆಟ ಪ್ರದರ್ಶಿಸಿ ಮೊದಲ ಗೋಲು ಬಾರಿಸುವಲ್ಲಿ ಯಶಸ್ವಿಯಾದರೆ, 73ನೇ ನಿಮಿಷದಲ್ಲಿ ಬೆಲ್ಲಿಂಗ್‌ಹ್ಯಾಮ್, ಕೋಲ್ ಪಾಲ್ಮರ್ ಇಂಗ್ಲೆಂಡ್, ಪರ ಮೊದಲ ಗೋಲು ಬಾರಿಸಿದರು. ಈ ಗೋಲಿನೊಂದಿಗೆ ಪಂದ್ಯವು 1–1 ಸಮಬಲದೊಂದಿಗೆ ಸಾಗಿತು. ಆದರೆ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದ ಸ್ಪೇನ್ ಆಟಗಾರರು, ಮತ್ತೊಂದು ಗೋಲು ಬಾರಿಸಿದರು. ಅದರಂತೆ ಅಂತಿಮವಾಗಿ 2–1 ಅಂತರದಿಂದ ಇಂಗ್ಲೆಂಡ್ ತಂಡವನ್ನು ಮಣಿಸಿ ಸ್ಪೇನ್ ಪಡೆ ಯುರೋ ಕಪ್ 2024ರ ಚಾಂಪಿಯನ್ ಪಟ್ಟ ಅಲಂಕರಿಸಿತು. ಈ ಹಿಂದೆ 1964, 2008 ಮತ್ತು 2012ರಲ್ಲಿ ಸ್ಪೇನ್ ಯುರೊ ಚಾಂಪಿಯನ್ ಆಗಿತ್ತು.

- ಕೊಲಂಬಿಯಾ ವಿರುದ್ಧ ಗೆಲ್ಲುವ ಮೂಲಕ ಸತತ 3 ಟ್ರೋಫಿ ಗೆದ್ದ ಅರ್ಜೆಂಟಿನಾ
- ದಾಖಲೆಯ ನಾಲ್ಕನೇ ಬಾರಿ ಯುರೋಪ್‌ನ ಫುಟ್‌ಬಾಲ್ ಸಾಮ್ರಾಟವಾದ ಸ್ಪೇನ್
- ಪ್ರಮುಖ ಪ್ರಶಸ್ತಿಗಾಗಿ 58 ವರ್ಷಗಳಿಂದ ಕಾಯುತ್ತಿದ್ದ ಇಂಗ್ಲೆಂಡ್ ತಂಡಕ್ಕೆ ನಿರಾಸೆ
- ತವರಿನಲ್ಲಿ 1966ರ ವಿಶ್ವಕಪ್ ಗೆದ್ದ ನಂತರ ಯಾವ ಪ್ರಮುಖ ಪ್ರಶಸ್ತಿ ಗೆಲ್ಲದ ಇಂಗ್ಲೆಂಡ್
- ಅರ್ಜೆಂಟಿನಾ–ಕೊಲಂಬಿಯಾ ಫೈನಲ್ ಪಂದ್ಯದಲ್ಲಿ 1–0 ರಿಂದ ಭರ್ಜರಿ ಗೆಲುವು
- ಸ್ಪೇನ್–ಇಂಗ್ಲೆಂಡ್ ನಡುವಿನ ಪಂದ್ಯದಲ್ಲಿ 2–1 ಅಂತರದ ಗೆಲುವು ದಾಖಲು

ಮುಲ್ಲರ್ ಮ್ಯೂನಿಚ್ ನಿವೃತ್ತಿ ಘೋಷಣೆ

ಜರ್ಮನಿಯ ಫಾರ್ವರ್ಡ್ ಆಟಗಾರ ಥಾಮಸ್ ಮುಲ್ಲರ್ 14 ವರ್ಷಗಳ ಅಂತಾರಾಷ್ಟ್ರೀಯ ಫುಟ್‌ಬಾಲ್ ಜೀವನಕ್ಕೆ ವಿದಾಯ ಹೇಳಿದ್ದಾರೆ. 2014ರ ವಿಶ್ವಕಪ್‌ನಲ್ಲಿ ಗೆದ್ದ ಜರ್ಮನಿ ತಂಡದಲ್ಲಿ ಅವರು ಆಡಿದ್ದರು. ಬಯಾನ್ ಮ್ಯೂನಿಚ್‌ನ ಆಟಗಾರನಾದ ಮುಲ್ಲರ್ 131 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, 45 ಗೋಲು ಗಳಿಸಿದ್ದಾರೆ. 34 ವರ್ಷದ ಮಿಲ್ಲರ್ ತಮ್ಮ ಕೊನೆಯ ಪಂದ್ಯ ಆಡಿದ್ದು ಈ ಬಾರಿಯ ಯುರೊ ಕ್ವಾರ್ಟರ್ ಫೈನಲ್‌ನಲ್ಲಿ. ಜರ್ಮನಿ ಆ ಪಂದ್ಯದಲ್ಲಿ ಸ್ಪೇನ್‌ಗೆ ಮಣಿದಿತ್ತು.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **25.07.2024 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	46448160001562	ಮಾದೇಶ ಎಸ್	41.3
2	46448160001575	ಮಾದೇಶ ಎಸ್	31.7
3	46448160001779	ರಾಜು ಎಮ್ ಎನ್	53.6
4	46448160001753	ನಾಗರಾಜಯ್ಯ ಎಂ ಸಿ	54.4
5	46448160001766	ಪದ್ಮರಾಜಪ್ಪ ಎಂ ಸಿ	51.9
6	46448730034376	ಶಶಿಕುಮಾರ್ ಜಿಇ	8.4
7	46448160004532	ಶಿವರಾಜು ಎಸ್ ಎ	73.8
8	46448160004788	ನಾಗರಾಜು	23.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.		
9	33458730023200	ರಾಜೇಂದ್ರ	10.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಜಯರಾಮ್ ಕಾಂಪ್ಲೆಕ್ಸ್, ಹುಣಸೂರು ಮುಖ್ಯರಸ್ತೆ, ಹಿಣಕಲ್ ಬಸ್ ನಿಲ್ದಾಣದ ಎದುರು, ಮೈಸೂರು–570017. ಕರ್ನಾಟಕ		
10	31788730014235	ಚಂದ್ರಮ್ಮ	29.76
11	31788730014515	ರಂಗನಾಥ	15.46
12	31788160009870	ಲಕ್ಷ್ಮಿ ನರಸಿಂಹ	22.24
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8–1–501–66, ವಾರ್ಡ್ ನಂ.8–ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ–573201, ಕರ್ನಾಟಕ.		
13	47518740000130	ಸಂತೋಷ್ ಎಂ	117.46
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.140, ಎಲ್, ಹೆಚ್‌ಎಸ್‌ಆರ್ ಲೇಔಟ್ 5ನೇ ಮೈನ್ 6ನೇ ಸೆಕ್ಟರ್, ಬೆಂಗಳೂರು–560034, ಭಾರತ		
14	46458730007201	ತ್ರಿಮೂರ್ತಿ ಇ	14.56
15	46458730007230	ಸುನಿಲ್ ಕುಮಾರ	9.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ–562114, ಭಾರತ		
16	31838730049173	ನಂಜುಂಡ ರಾಮು	5.8
17	31838730049071	ರಾಘವನ್ ಕೆ	8.6
18	31838730049338	ನಾಗರತ್ನ ಜನಕರಾಜು	6.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಕರ್ಣಾಟಕ ಬ್ಯಾಂಕ್ ಬ್ಯಾಂಕ್ ಹಿಂಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಸುಬ್ರಮಣ್ಯಪುರ ಅಂಚೆ, ಬೆಂಗಳೂರು–560061.		
19	45468730013690	ಚಂದ್ರಮ್ಮ ಬಿ ಎಂ	5.8
20	45468730013753	ಮಂಜುನಾಥ್ ಹೆಚ್ ಆರ್	10.2
21	45468730013714	ಧನರಾಜ್ ಹೆಚ್ ಕೆ	6.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್–1, ನಂ.27, ಗಂಗೋತ್ರಿ ರಸ್ತೆ, ತುಮಕೂರು–572101.		
22	45358730014011	ಶಶಿಕುಮಾರ್ ಎನ್	74.2
23	45358160000342	ಮಂಜುನಾಥ್ ಸಾಬಪ್ಪ ಸನ್ನೇಳ್ಳಿ	31
24	45358730014142	ಪ್ರತಿಭಾ ಪಿ	8
25	45358730014152	ದಿನೇಶ್ ಎಸ್	35.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು–560060.		
26	32018730005012	ವಿಜಯ್ ಕುಮಾರ್ ಕಟಾರ್ಕಿ	6.7
27	32018730005561	ಹನ್ನಾ ಎಂ ನೆಲುಗಲ್	7.8
28	32018160001460	ಮಂಜುಳ ಶಿವಪ್ಪ ಗುನೇರಿ	83.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ, 2ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ, ಬಾಗಲಕೋಟೆ–587101.		
29	33648730030032	ಸೋಮಶೇಖರ್ ವಿ	23.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 12, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಾಪರೆಡ್ಡಿಪಾಳ್ಯ, ಬೆಂಗಳೂರು–560072.		
30	33638730046942	ಗುರು ಎಸ್ ಕೆ	49.65
31	33638730054668	ಮನೋಜ್ ಎನ್ ಕೆ	12.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ನಂ.4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.		
32	34018730021876	ವಿಶ್ವನಾಥ್ ಜಿ	5.6
33	34018160001066	ಭಾಗ್ಯಮ್ಮ ದೊಡ್ಡಮುನಿಯಪ್ಪ	27.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092		
34	31128160001753	ಹರೀಶ್ ಜಿ	42.1
35	31128160001871	ಅಶ್ವಥ್ ಸಿ	95.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.		
36	32568160002930	ರೇಖಾ ಎಂ	116.8
37	32568160002982	ಯಶೋದಾ ಇ	93.8
38	30948730016572	ಕೆಂಪರಾಜು ಎಂ	10.9
39	30948730017902	ಮಾಲತಿ ಕೆ ವಿ	26.8
40	30948730017881	ರಬಿಯ ಫಾತಿಮಾ ಅಬ್ದುಲ್ ಸಲಾಂ	7.8
41	30948730017572	ಮೊಹಮ್ಮದ್ ಲತೀಫ್	11.8
42	30948730017483	ಚಿಕ್ಕಣ್ಣ ಜೆ	9
43	30948730017750	ಕುಮಾರಿ ಮಹೇಶ್	6.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009.		
44	30198730034286	ಮೋನಿಶಾ	7.6
45	30198730034412	ನಸ್ರೀನ್ ತಾಜ್	35.8
46	30198730034391	ರೂಪಶ್ರೀ ವೈ	10.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.		
47	45448730003862	ಈರಣ್ಣ ಯಲ್ಲಪ್ಪ ಕಡಲ್ಲಿ	7.66
48	45448730003773	ಯಾಸ್ಮೀನ್ ಬಿಲೋಡಿ	7.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಬಿವಿಬಿ ಇಂಜಿನಿಯರಿಂಗ್ ಕಾಲೇಜು ಎದುರು ರೆನಾಲ್ಟ್ ಷೋರೂಮ್ ಹತ್ತಿರ, ಪಿ.ಬಿ. ರಸ್ತೆ, ವಿದ್ಯಾನಗರ, ಹುಬ್ಬಳ್ಳಿ		
49	45398730003922	ಸಿದ್ದಾರ್ಥ ಚವನ್	6.8
50	45398730003856	ವಿನಾಯಕ್ ದೀಪಕ್ ಚಿಂಚೆವಾಡಿಕರ್	10.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಯುನಿಕ್ ಟವರ್, ಬಿಗ್ ಬಜಾರ್ ಹತ್ತಿರ ಖಾನಾಪುರ ರಸ್ತೆ, ಬೆಳಗಾವಿ–590003.		
51	45438730008237	ಹರೀಶ್ ಕೆ ಎಂ	19.86
52	45438730008224	ಇಸ್ಮಾಯಿಲ್ ಹಸನ್ ಉಡಗಟ್ಟಿ	60.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಎ ಮತ್ತು 6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಶಾಮನೂರು ರಸ್ತೆ, ದಾವಣಗೆರೆ–577004, ಭಾರತ		
53	31888730023313	ಅರುಣ್ ಕುಮಾರ್ ಟಿ	32.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞನಗರ, #01 ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.		
54	31768730015299	ಶಿಲಾ ಗಾಲೆಪ್ಪ	9.2
55	31768730015106	ಮಣಿಕಾ ತುಕಾರಾಂ	14
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಶಿವಶಕ್ತಿ ಟವರ್ ಕೆಳಭಾಗ ಶಿವನಗರ ಉತ್ತರ, ಬೀದರ್ – 585401		
56	31138730030238	ಶಿವಂದ ಹಿರೇಮಠ್	5
57	31138730051831	ಶೋಭಾ ಚವನ್	15
58	31138160001831	ಅಶ್ರಫಾಲಿ ರಿಯಾಜ್ ಅಹಮದ್ ವಾಲೀಕಾರ್	30.8
59	31138730051093	ಅನ್ವರ್ ಕಗಜಿ	12.6
60	31138160001692	ಅಜ್ರುದ್ದೀನ್ ಚಪ್ಪರ್‌ಬಂದ್	25.8
61	31138730051933	ಮೆಹಬೂಬ್ ಮಂತೂರ್	10
62	31138730051857	ಮಂಜುನಾಥ್ ಎ ಹೊಸಕೋಟಿ	9.2
63	31138730051959	ಮಲ್ಲಿಕಾರ್ಜುನ್ ಸಿದ್ರಾಮಪ್ಪ ಅರ್ಕೆರಿ	10.2
64	31138730051716	ಮಲ್ಲಿಕಾರ್ಜುನ್ ಕಟ್ಟಿಮನಿ	27
65	31138730051742	ಜಾಗೀರ್‌ದಾರ್ ಮಸ್ತಾನ ಐ ಇಬ್ರಾಹಿನ್‌ಸಾಬ	8.8
66	31138730051308	ಪಾಂಡುರಂಗ ವಿಠಪ ಝುಮ್ಮಣ್ಣನವರ್	9.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ–586101		
67	45428730015369	ಸುರೇಶ್ ಗೌರ್	38.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಸೋಲಾಪುರ ರಸ್ತೆ, ಬಿಜಾಪುರ–586103.		
68	45488730010560	ಆಗಸ್ಟಿನ್ ಬಿ	4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101.		
69	33818730024612	ಪವನ್ ಇ	5.35
70	33818160003631	ರವಿ	25.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004		
71	31988730029601	ರೇಷ್ಮಾ ಬೇಗಂ	19.6
72	31988730029462	ಶ್ರೀನಿವಾಸ್ ಪಿ	8.2
73	31988730029488	ಉಡೆಗೋಲ ವೀರೇಶ	9.8
74	31988730029400	ಮೊಹಮ್ಮದ್ ಗೌಸ್	15.8
75	31988730029627	ರೇಷ್ಮಾ ಬೇಗಂ	113.6
76	31988730029551	ಚಂದ್ರಮ್ಮ	11.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 143, 1, ಮಹಡಿ, ಮೋಕಾ ರಸ್ತೆ, ಗಾಂಧಿನಗರ ಮಾರುಕಟ್ಟೆ, ಬಳ್ಳಾರಿ–583101.		
77	45458730021378	ರಿಜ್ವಾನ ಬೇಗಂ ಮೊಹಮ್ಮದ್ ಷರೀಫ್	10
78	45458160001960	ಸುರೇಶ್ ಕುಲಕರ್ಣಿ	72.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003, ಭಾರತ		

ಸ್ಥಳ: ಕರ್ನಾಟಕ
ದಿನಾಂಕ: 16-07-2024

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಸದ್ದಿಲ್ಲದೆ ವಾಲ್ಮೀಕಿ ಹಗರಣದ ಚರ್ಚೆ

← ಮೊದಲಪುಟದಿಂದ **ಎಐ ಆಧಾರಿತ ಹಾಜರಾತಿಗೆ ಕ್ರಮ:** ಸೋಮವಾರದಿಂದ ಆರಂಭಗೊಂಡಿರುವ ಕಲಾಪಕ್ಕೆ ಈ ಬಾರಿ ಶಾಸಕರ ಹಾಜರಾತಿಗೆ ಎಐ ಆಧಾರಿತ ಕ್ಯಾಮೆರಾ ಬಳಸಲಾಗುತ್ತಿದೆ. ಸದನಕ್ಕೆ ಯಾರು ಬೇಗ ಬರುತ್ತಾರೆ. ಕಲಾಪದ ಕೊನೆಯವರೆಗೆ ಯಾರು ಇರುತ್ತಾರೆ ಎಂಬ ಬಗ್ಗೆ ಗುರುತಿಸಲು ಎಐ ಟೆಕ್ನಾಲಜಿ ಬಳಸಲಾಗುತ್ತಿದೆ. ಶಾಸಕರು ಎಷ್ಟು ಗಂಟೆಗೆ ಬರುತ್ತಾರೆ, ಹೋಗುತ್ತಾರೆ ಎಂಬ ವಿವರಗಳನ್ನು ಎಐ ಆಧಾರಿತ ಕ್ಯಾಮೆರಾ ಸೆರೆ ಹಿಡಿಯಲಿದೆ. ಈ ಬಗ್ಗೆ ಮಾಹಿತಿ ನೀಡಿದ ಸ್ಪೀಕರ್ ಖಾದರ್ ಅವರು, 9.51ಕ್ಕೆ ಸದನಕ್ಕೆ ಆಗಮಿಸುವ ಮೂಲಕ ಎಐ ಕ್ಯಾಮೆರಾದ ಆಗಮನ ಉದ್ಘಾಟನೆಯನ್ನು ರೂಪಾ ಕಲಾ ಅವರು ಮಾಡಿದ್ದಾರೆ. ಇನ್ನು ಸದನದಿಂದ ನಿರ್ಗಮಿಸುವ ಕ್ಯಾಮೆರಾದಲ್ಲಿ 10.20ಕ್ಕೆ ಷಡಕ್ಷರಿ ಸೆರೆಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

ವಿಶ್ವಕಪ್ ವಿಜೇತ ತಂಡಕ್ಕೆ ಅಭಿನಂದನೆ

ಇತ್ತೀಚೆಗೆ ಮುಕ್ತಾಯಗೊಂಡ ಟಿ–20 ವಿಶ್ವಕಪ್‌ನಲ್ಲಿ ಚಾಂಪಿಯನ್ಸ್ ಆಗಿರುವ ಭಾರತ ತಂಡಕ್ಕೆ ವಿಧಾನಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು. ಸಂತಾಪ ಸೂಚನೆ ಮುಕ್ತಾಯವಾಗುತ್ತಿದ್ದಂತೆ ಹಿರಿಯ ಶಾಸಕ ಸುರೇಶ್‌ಕುಮಾರ್ ಅವರು, ರಾಹುಲ್ ಗಾಂಧಿ ಅವರನ್ನು ಅಭಿನಂದಿಸಬೇಕು ಎಂದು ಮನವಿ ಮಾಡಿದರು. ಭೋಜನ ವಿರಾಮದ ಬಳಿಕ ಪ್ರಶ್ನೋತ್ತರ ಅವಧಿಯ ಮುಕ್ತಾಯಗೊಂಡ ನಂತರ, ಸ್ಪೀಕರ್ ಯು.ಟಿ.ಖಾದರ್ ಅವರು ರಾಹುಲ್ ದ್ರಾವಿಡ್‌ಗೆ ಸದನದ ಪರವಾಗಿ ಅಭಿನಂದನೆ ಸಲ್ಲಿಸಿದರು. ಕರ್ನಾಟಕದ ಹೆಮ್ಮೆಯ ಪುತ್ರ, ಕ್ರಿಕೆಟ್ ಗೋಡೆ ರಾಹುಲ್ ದ್ರಾವಿಡ್ ಮಾರ್ಗದರ್ಶನ ಹಾಗೂ ರೋಹಿತ್ ಶರ್ಮಾ ಸಾರಥ್ಯದಲ್ಲಿ ಟೀಂ ಇಂಡಿಯಾ ಸಾಧನೆ ಮಾಡಿರುವುದು ಹೆಮ್ಮೆಯ ವಿಚಾರ. ಹೀಗಾಗಿ ರೋಹಿತ್ ಶರ್ಮಾ ಹಾಗೂ ಕೋಚ್ ರಾಹುಲ್ ದ್ರಾವಿಡ್‌ಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದು ಹೇಳಿದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
CIN: L85320KA1994SGC016101
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ)
ತಾ:ಸಿಂದಗಿ, ಜಿ:ವಿಜಾಪೂರ ದೂರವಾಣಿ ಸಂಖ್ಯೆ.08488 224328, Email: kbjnleerampur@gmail.com
ಸಂ.ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2024–25/519 ದಿನಾಂಕ:11.07.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪಅ) ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 2024–25ನೇ ಸಾಲಿನ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ 18 ಸಂಖ್ಯೆ ಕ್ಲೋಜರ್ ಅವಧಿಯ ಕಾಮಗಾರಿಗಳಿಗೆ ರೂ.79.00 ಲಕ್ಷಗಳು ಹಾಗೂ 18 ಸಂಖ್ಯೆ ವಿಶೇಷ ದುರಸ್ತಿ ಕಾಮಗಾರಿಗಳಿಗೆ ರೂ.74.00 ಲಕ್ಷಗಳು ಒಟ್ಟು ರೂ.153.00 ಲಕ್ಷಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ತೃತೀಯ ದರ್ಜೆ ಮತ್ತು ಮೇಲ್ಪಟ್ಟ ದರ್ಜೆಯ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ಏಕ ಮಾತ್ರ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್: (**http//kpp.karnataka.gov.in**) ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

- ಇ–ಪ್ರೊಕ್ಯೂರ್‌ಮೆಂಟ್ **http//kpp.karnataka.gov.in** ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ:15.07.2024 ರಿಂದ 22.07.2024ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವುದು.
- ಭರ್ತಿಗೊಳಿಸಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **22.07.2024ರ ಸಾಯಂಕಾಲ 4.30ಗಂಟೆಯವರೆಗೆ** ಸಲ್ಲಿಸುವುದು.
- ಏಕಮಾತ್ರ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ, ವಿಜಯಪೂರ ಕಛೇರಿಯಲ್ಲಿ **ದಿನಾಂಕ:24.07.2024ರ ಬೆಳಿಗ್ಗೆ 11.00 ಗಂಟೆಗೆ** ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
- ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ (**http//kpp.karnataka.gov.in**) ವೆಬ್‌ಸೈಟ್ ನಿಂದ ಪಡೆಯಬಹುದು.
- ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ ನಿಮಪೋ ಐಬಿಸಿ ವಿಭಾಗ, ರಾಂಪೂರ (ಪಿಎ)
ವಾಸಾಸಂಇ/ವಿಜಯಪುರ/ಆರ್.ಓ.ನಂ.106/ಕೆಎಸ್‌ಎಂಸಿಎ/2024–25

ಮಹಾಮಳೆ ಒಡದ ರೈಲು

← ಮೊದಲಪುಟದಿಂದ ಇದರಿಂದ ತುಂಗಾ ನದಿ ಶಿವಮೊಗ್ಗದಲ್ಲಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಲಿಂಗನಮಕ್ಕಿ ಜಲಾಶಯಕ್ಕೆ 45,115 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಭಾನುವಾರ ಜಲಾಶಯಕ್ಕೆ 36,197 ಕ್ಯುಸೆಕ್ ಇತ್ತು. ಲಿಂಗನಮಕ್ಕಿ ಜಲಾಶಯದ ಗರಿಷ್ಠ ನೀರಿನ ಸಂಗ್ರಹ 1819 ಅಡಿ. ಸದ್ಯ ಜಲಾಶಯದಲ್ಲಿ 1778.2 ಅಡಿ ನೀರಿನ ಸಂಗ್ರಹ ಇದೆ. 186 ಅಡಿ ನೀರಿನ ಸಂಗ್ರಹ ಸಾಮರ್ಥ್ಯದ ಭದ್ರಾ ಜಲಾಶಯದಲ್ಲಿ ಸದ್ಯ 141.3 ಅಡಿ ನೀರಿನ ಸಂಗ್ರಹ ಇದೆ. ಜಲಾಶಯ ಭರ್ತಿ ಆಗಲು ಇನ್ನೂ 45 ಅಡಿ ನೀರಿನ ಸಂಗ್ರಹ ಆಗಬೇಕಿದೆ. ವರದಾ ನದಿ ಕೂಡ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಕುಮದ್ವತಿಯಲ್ಲೂ ನೀರಿನ ಹರಿವು ಹೆಚ್ಚಾಗಿದ್ದು, ಶಿಕಾರಿಪುರ ತಾಲೂಕಿನ ಅಂಜನಾಪುರ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ.

ಉತ್ತರ ಪ್ರದೇಶದಲ್ಲಿ ಐವರು ಸಾವು
ಲಖನೌ: ಉತ್ತರ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಸೋಮವಾರ 1,500 ಗ್ರಾಮಗಳು ಪ್ರವಾಹ ಪರಿಸ್ಥಿತಿಗೆ ಒಳಗಾಗಿದೆ. ಅವಘಡಗಳಲ್ಲಿ ಐವರು ಮೃತಪಟ್ಟಿದ್ದಾರೆ. ಪ್ರತಾಪಗಢದಲ್ಲಿ ಇಬ್ಬರು ಹಾಗೂ ರಾಯ್ ಬರೇಲಿ, ಸಿದ್ದಾರ್ಥ್ ನಗರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮತ್ತೊಂದು ದುರ್ಘಟನೆಯಲ್ಲಿ ಹಾವು ಕಡಿದು ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/2024–25/1138 ದಿ:– 15/07/2024

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
THIS WORK IS RESERVED FOR SC CATEG0RY					
1	PWD/2024-25/BD/WORK_INDENT10803/CALL-2	4.00	2	PWD/2024-25/BD/WORK_INDENT9607/CALL-2	2.50
GENERAL WORKS					
3	PWD/2024-25/BD/WORK_INDENT10844	150.00	6	PWD/2024-25/BD/WORK_INDENT11142	147.17
4	PWD/2024-25/BD/WORK_INDENT1718	230.37	7	PWD/2024-25/BD/WORK_INDENT11216/CALL-2	2.50
5	PWD/2024-25/BD/WORK_INDENT5110	207.47	8	PWD/2024-25/BD/WORK_INDENT11058	476.99

1 ಗುತ್ತಿಗೆದಾರರ ಕ್ವಾರೀಸ್ ದಿನಾಂಕ **Kppp Portal** ನಲ್ಲಿ ಇರುವಂತೆ. 2 ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ **25.07.2024 (16.00 ಗಂಟೆಗೆ)** 3 ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ **26.07.2024 (16.30 ಗಂಟೆಗೆ)**. 4 ಅರ್ಥಿಕ ಬಿಡ್ ತೆರೆಯುವ ದಿನಾಂಕ: **Kppp Portal** ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೋಡಿಕೊಳ್ಳಬಹುದು

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/111



ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು, ಸಂಸದರು, ಕಲ್ಯಾಣ ಕರ್ನಾಟಕ ಭಾಗದ ಶಾಸಕರು, ಕೇಂದ್ರದ ಆರೋಗ್ಯ ಸಚಿವರನ್ನು ಎರಡು ಬಾರಿ ಭೇಟಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ದೇಶದ ಎಲ್ಲ ರಾಜ್ಯಗಳಲ್ಲೂ ಏಮ್ಸ್‌ಗೆ ಅವಕಾಶ ನೀಡಿದರೂ, ಕೇಂದ್ರ ಸರಕಾರ ಕರ್ನಾಟಕಕ್ಕೆ ಮಲತಾಯಿ ಧೋರಣೆ ಮಾಡುತ್ತಿದೆ.

– ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಸಿ.ಟಿ. ರವಿ ಅವರು ನಿತ್ಯ ಸುಮಂಗಲಿ ಎನ್ನುವ ಮೂಲಕ ಮಹಿಳೆಯರಿಗೆ ಅಪಮಾನಿಸಿದ್ದಾರೆ. ಅವರಿನ್ನೂ ಮನುಸ್ಮೃತಿಯಿಂದ ಹೊರಗೆ ಬಂದಂತೆ ಕಾಣುತ್ತಿಲ್ಲ. ಮಹಿಳೆಯರಿಗೆ ನಮ್ಮ ಸರಕಾರ ಹಲವು ಅವಕಾಶಗಳನ್ನು ನೀಡುತ್ತಿದೆ. ಮಹಿಳಾ ಸಬಲೀಕರಣವೇ ನಮ್ಮ ಸರಕಾರದ ಉದ್ದೇಶವಾಗಿದೆ.

– ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ



ವಿಧಾನ ಮಂಡಲ ಮಧ್ಯದೊಳಗೆ

ಸಮಾಚಾರ ಸಣ್ಣದಲ್ಲ

ಸುರೇಶ್‌ಬಾಬು ಜೆಡಿಎಸ್ ಸಭಾನಾಯಕ

ವಿಧಾನಸಭೆ: ನಿರೀಕ್ಷೆಯಂತೆ ಜೆಡಿಎಸ್ ಸಭಾನಾಯಕರಾಗಿ ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್‌ಬಾಬು ಅವರು ಆಯ್ಕೆಯಾಗಿದ್ದಾರೆ. ಈ ಹಿಂದೆ ಜೆಡಿಎಸ್ ಸಭಾನಾಯಕರಾಗಿದ್ದ ಎಚ್.ಡಿ. ಕುಮಾರಸ್ವಾಮಿ



ಅವರು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿ, ಕೇಂದ್ರ ಸಚಿವರಾಗಿರುವುದರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿರುವ ಸಭಾನಾಯಕ ಸ್ಥಾನಕ್ಕೆ ಸುರೇಶ್ ಬಾಬು ಅವರು ಆಯ್ಕೆಯಾಗಿರುವುದಾಗಿ ಸ್ಪೀಕರ್ ಯು.ಟಿ. ಖಾದರ್ ಪ್ರಕಟಿಸಿದ್ದಾರೆ. ಸಂತಾಪ ಸೂಚನೆ ಬಳಿಕ ಈ ಬಗ್ಗೆ ಪ್ರಕಟಣೆ ಹೊರಡಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಶಿಫಾರಸಿನ ಮೇರೆಗೆ ಜೆಡಿಎಸ್ ಪಕ್ಷದ ಶಾಸಕರನ್ನಾಗಿ ಸುರೇಶ್‌ಬಾಬು ಅವರನ್ನು ನೇಮಿಸಿರುವುದಾಗಿ ಹೇಳಿದರು. ಕುರುಬ ಸಮುದಾಯಕ್ಕೆ ಸೇರಿರುವ ಸುರೇಶ್ ಬಾಬು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ನಾಲ್ಕನೇ ಅವಧಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಗೃಹಜ್ಯೋತಿಯಿಂದ ಕರ್ನಾಟಕ ದಿವಾಳಿ

ವಿಧಾನ ಪರಿಷತ್: ರಾಜ್ಯ ಸರಕಾರದ ಉಚಿತ ವಿದ್ಯುತ್ ಯೋಜನೆಯಿಂದ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಬಹಳಷ್ಟು ನಷ್ಟದಲ್ಲಿವೆ. ಕರ್ನಾಟಕವನ್ನೇ

ಬರ್ಬಾದ್ ಮಾಡುವ ಸ್ಕೀಮ್ ಇದು ಎಂದು ಜೆಡಿಎಸ್ ಸದಸ್ಯ ಶರವಣ ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು. ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಗೃಹಜ್ಯೋತಿ ಯೋಜನೆಯಿಂದ ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ಸಂಕಷ್ಟದಲ್ಲಿವೆ. ವಿದ್ಯುತ್ ಉತ್ಪಾದನಾ ಕಂಪನಿಗಳಿಗೂ ಹಣ ಪಾವತಿಯಾಗುತ್ತಿಲ್ಲ ಎಂದು ಆರೋಪಿಸಿದರು. ಇದಕ್ಕೆ ಉತ್ತರಿಸಿದ ಸಚಿವ ಕೆ.ಜೆ ಜಾರ್ಜ್, ಯಾವುದೇ ವಿದ್ಯುತ್ ಕಂಪನಿಗಳ ಬಾಕಿ ಹಣ ಉಳಿಸಿಕೊಂಡಿಲ್ಲ. ಗೃಹಜ್ಯೋತಿ ಅಡಿ ಉಪಯೋಗ ಮಾಡಿದ್ದ ಎಲ್ಲ ವಿದ್ಯುತ್‌ಗೂ ಹಣ ಕಂಪನಿಗಳಿಗೆ ಈಗಾಗಲೇ ಸಂದಾಯವಾಗಿದೆ ಎಂದು ಸ್ಪಷ್ಟನೆ ನೀಡಿದರು.

ಡೆಂಘೀ ವಿಚಾರದಲ್ಲಿ 2 ತಿಂಗಳು ಜಾಗೃತರಾಗಿರಿ

ವಿಧಾನ ಪರಿಷತ್: ಇನ್ನೆರಡು ತಿಂಗಳು ಡೆಂಘೀ ವಿಚಾರದಲ್ಲಿ ಜನರು ಎಚ್ಚರವಾಗಿ ಇರಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಜನರಿಗೆ ಮನವಿ ಮಾಡಿದರು. ವಿಧಾನ ಪರಿಷತ್ ಕಲಾಪ ಪ್ರಶ್ನೋತ್ತರ ಅವಧಿಯ ವೇಳೆ ಬಿಜೆಪಿಯ ಧನಂಜಯ ಸರ್ಜಿ ಅವರ ಬದಲಾಗಿ, ಅರುಣ್ ಡೆಂಘೀ ಬಗ್ಗೆ ಪ್ರಶ್ನೆ ಕೇಳಿದರು. ಇದಕ್ಕೆ ಉತ್ತರ ನೀಡಿದ ಸಚಿವರು, ಡೆಂಘೀ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈ ವರ್ಷ ನಮ್ಮ ರಾಜ್ಯದಲ್ಲಿ ಡೆಂಘೀ ಹೆಚ್ಚಾಗಿದೆ. ಡೆಂಘೀಯನ್ನು ನಾವು ಗಂಭೀರವಾಗಿ ಪರಿಗಣಿಸಲಾಗಿದೆ. ಸಿಎಂ ನೇತೃತ್ವದಲ್ಲಿ ಸಭೆ ಮಾಡಲಾಗಿದೆ. ಡೆಂಘೀಯನ್ನು ನೋಟಿಫೈ ಕಾಯಿಲೆ ಎಂದು ಘೋಷಣೆ ಮಾಡಲಾಗಿದೆ. ಯಾವುದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದರೂ ಮಾಹಿತಿ ಸರಕಾರಕ್ಕೆ ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ವಿವರಿಸಿದರು.

ಬೋಸರಾಜು ಪರಿಷತ್ ಸಭಾನಾಯಕ

ವಿಧಾನಪರಿಷತ್: ವಿಧಾನಪರಿಷತ್ ಸಭಾನಾಯಕರಾಗಿ ಹಾಲಿ ಸಚಿವ ಎನ್.ಎಸ್. ಬೋಸರಾಜು ಅವರು ಪುನರಾಯ್ಕೆಯಾಗಿದ್ದಾರೆ. ಸಣ್ಣ ನೀರಾವರಿ ಸಚಿವರಾಗಿರುವ ಬೋಸರಾಜ್ ಅವರ ಅವಧಿ ಮುಕ್ತಾಯ

ಗೊಂಡಿದ್ದರಿಂದ ಸಭಾನಾಯಕ ಹುದ್ದೆ ತೆರವಾಗಿತ್ತು. ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಅವಿರೋಧ ವಾಗಿ ಆಯ್ಕೆಯಾದ ಬೋಸ ರಾಜು ಅವರನ್ನೇ ಸಭಾನಾಯ ಕರನ್ನಾಗಿ ಮರು ಆಯ್ಕೆ ಮಾಡಲಾ ಗಿದೆ. ಈ ಬಗ್ಗೆ ಮೊದಲ ದಿನದ ಕಲಾಪ ಆರಂಭವಾ ಗುತ್ತಿದ್ದಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಭಾನಾಯಕರಾಗಿ ಬೋಸರಾಜ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಿಸಿದರು. ಈ ವೇಳೆ ಸದಸ್ಯರು ಮೇಜುಕುಟ್ಟಿ ಸ್ವಾಗತಿಸಿದರು.

{ ಚೇತನ್ } ನಟ

ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನಿಂದ ದಲಿತರಿಗೆ ನ್ಯಾಯ ಸಿಕ್ಕಿಲ್ಲ. ಮೂರು ಪಕ್ಷಗಳು ಅನ್ಯಾಯ ಮಾಡಿವೆ. ಈ ಹಣ ಮೀಸಲಿಟ್ಟಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ. ಆದರೆ, ಗ್ಯಾರಂಟಿಗಳಿಗೆ ಬಳಸುವ ಮೂಲಕ ಸಿದ್ದರಾಮಯ್ಯ ಸರಕಾರ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ವಿರುದ್ಧವಿದೆ. ಲಿಂಗಾಯತರಿಗೆ ಬಿಜೆಪಿ, ಒಕ್ಕಲಿಗರಿಗೆ ಜೆಡಿಎಸ್ ಮತ್ತು ಮುಸ್ಲಿಮರಿಗೆ ಕಾಂಗ್ರೆಸ್ ಎನ್ನುವ ಸ್ಥಿತಿ ಇದೆ.

ಸದನದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಗದ್ದಲ | ಕಾಂಗ್ರೆಸ್ ವಿರುದ್ಧ ಆರ್.ಅಶೋಕ್ ಕಿಡಿ

ಬೇಲಿಯೇ ಎದ್ದು ಹೊಲ ಮೇಯ್ದಂತೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದಂತಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು.

ಭೋಜನ ವಿರಾಮದ ಬಳಿಕ ನಿಯಮ 69ರಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಪ್ರಸ್ತಾಪಿಸಿದ ಅವರು, ವಾಲ್ಮೀಕಿ ನಿಗಮ ಹಗರಣದಲ್ಲಿ ಸಚಿವರು ಮತ್ತು ಅಧ್ಯಕ್ಷರು ಭಾಗಿಯಾಗಿದ್ದು, ಬೇಲಿಯೇ ಎದ್ದು ಹೊಲ ಮೇಯ್ದಂಗೆ ಎನ್ನುವುದು ಸ್ಪಷ್ಟವಾಗಿದೆ. ಕಾನೂನು ಬಾಹಿರವಾಗಿ ಕೋಟ್ಯಂತರ ಹಣ ವರ್ಗಾವಣೆ ಆಗಿದೆ. ನಿಗಮದಲ್ಲಿ ನಾಗೇಂದ್ರ ಪಿಎ ನೆಕ್ಕುಂಡಿ ನಾಗರಾಜ್ ಏನು ಹೇಳಿದ್ದನೋ ಅದರಂತೆ ನಡೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅವರ ಆಣತಿಯಂತೆ ಎಲ್ಲವೂ ಆಗಿದೆ. ಕಳ್ಳನೇ ಹೋಗಿ ದೂರು ಕೊಟ್ಟಂತೆ ಎಂ.ಡಿ. ಪದ್ಮನಾಭ್ ಹೋಗಿ ದೂರು ಕೊಡುತ್ತಾರೆ. ಬಳಿಕ ಬಸವರಾಜ ದದ್ದಲ್‌ಗೂ ದೂರು ಹೋಗುತ್ತೆ ಎಂದು ಆರೋಪಿಸಿದರು.

ಈ ಹಗರಣ ಕರ್ನಾಟಕದ ಇತಿಹಾಸದಲ್ಲೇ ಒಂದು ಕಪ್ಪು ಚುಕ್ಕೆ. ಚುನಾವಣೆ ಸಂದರ್ಭ ದುರುಪಯೋಗ ಪಡಿಸಿಕೊಂಡು ದಲಿತರ ಹಣ ಲೂಟಿಮಾಡಿದ್ದಾರೆ. ಟಕಾಟಕ್ ಎಂದು ವರ್ಗಾವಣೆಯಾಗಿದೆ. ಒಬ್ಬ ಮುಖ್ಯಮಂತ್ರಿ ಸರ್ವಾಧಿಕಾರಿ ಹಾಗೆ. ಎಲ್ಲಾ ಇಲಾಖೆ ಮೇಲೆ ಹಿಡಿತವಿರುತ್ತದೆ. ದಲಿತರ ಹಕ್ಕನ್ನು ಕಿತ್ತುಕೊಂಡಿದ್ದೀರಾ. ಈ ಹಗರಣದಲ್ಲಿ ಸಚಿವರು, ಅಧಿಕಾರಿಗಳು, ಹವಾಲಾದವರು ಭಾಗಿಯಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತರ ಹಣ, ನಿಮ್ಮ ಜೇಬಿಗೆ

ಅಂದಿನ ಬಾಲಚಂದ್ರ ಜಾರಕಿಹೊಳಿ 2006 ಜುಲೈ 26ರಂದು 1956 ಕಂಪನಿ ಆಕ್ಟ್ ಅಡಿಯಲ್ಲಿ ವಾಲ್ಮೀಕಿ ನಿಗಮ ರಿಜಿಸ್ಟರ್ ಮಾಡಿದ್ದಾರೆ. ಐದು ಮಂದಿ ಸದಸ್ಯರು ಸೇರಿ ಖಾತೆ ಪ್ರಾರಂಭಿಸಿದ್ದಾರೆ. 2023ರ ಜುಲೈ ಬಜೆಟ್‌ನಲ್ಲಿ 187 ಕೋಟಿ ಅನುಮೋದನೆ ಆಗಿದೆ. ಅದರಡಿ ಸುಮಾರು 175 ಕೋಟಿ ಹಂಚಿಕೆಯಾಗಿರುತ್ತದೆ. ಸ್ವಯಂ ಉದ್ಯೋಗ ಯೋಜನೆ, ನೇರ ಸಾಲದ ಯೋಜನೆ(12.52 ಕೋಟಿ),ಉದ್ಯಮಶೀಲ ಅಭಿವೃದ್ಧಿ ಯೋಜನೆ(16.48 ಕೋಟಿ), ಭೂ ಹೊಡೆತನ ಮಹಿಳೆಯರಿಗೆ(15 ಕೋಟಿ), ತರಬೇತಿ ಕೌಶಲ್ಯ ಸ್ವಯಂ ಉದ್ಯೋಗ (10 ಕೋಟಿ), ಪ್ರತಿ ಮಹಿಳಾ ಸ್ವಸಹಾಯ ಸಂಘ(10 ಕೋಟಿ)ಭೂ ಮಾಲೀಕತ್ವ (35 ಕೋಟಿ) ಸಮಗ್ರ ಗಂಗಾ ಕಲ್ಯಾಣ (40 ಕೋಟಿ), ಗಂಗಾ ಕಲ್ಯಾಣ(10 ಕೋಟಿ), ಏತ ನೀರಾವರಿ (8.50ಕೋಟಿ) ಹೀಗೆ ಸುಮಾರು 177 ಕೋಟಿ ಅನುದಾನ ಬಿಡುಗಡೆಯಾಗಿದೆ. ಫಲಾನುಭವಿಗಳ ಪಟ್ಟಿ ಕೂಡ ರೆಡಿಯಾಗಿತ್ತು. ಆದರೆ ನೈಜ ಫಲಾನುಭವಿಗಳ ಬದಲು ಹಣ ಲೂಟಿಯಾಗಿದೆ ಎಂದು ಟೀಕಿಸಿದರು.

ವಿಧಾನಸಭೆ ಕಲಾಪದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿದರು.

ಶಾಂಗ್ರೀಲಾದಲ್ಲಿ ಅಕ್ರಮ ಕೂಟ

ಈ ಹಗರಣ ಅಕ್ರಮ ಕೂಟದಿಂದ ಪ್ರಾರಂಭವಾಗಿದೆ. ಶಾಂಗ್ರೀಲಾ ಹೋಟೆಲ್‌ನಲ್ಲಿ ಸೇರಿದ ಕೂಟ ಡೀಲ್ ಸಿದ್ದಗೊಂಡಿತ್ತು. ಇದರಲ್ಲಿ ಎಲ್ಲರ ಪಾಲಿದೆ. ಈ ಅಕ್ರಮದ ಹಣ ಲೋಕಸಾಭಾ ಚುನಾವಣೆಗೆ ಖರ್ಚಾಗಿದೆ. ಇದರಲ್ಲಿ ಶೇ.5 ಕಮಿಷನ್ ಪೆಟ್ರೋಲ್ ಬಂಕ್ ಮಾಲೀಕನಿಗೆ, ಚಿನ್ನದ ವ್ಯಾಪಾರಿಗೆ ಹೋಗಿದೆ. ಆದರೆ ಅಮಾಯಕ ಅಧೀಕ್ಷಕ ಡೆತ್‌ನೋಟ್ ಮೂಲಕ ಹಗರಣ ಬೆಳಕಿಗೆ ಬಂದಿದೆ. ಒಂದು ವೇಳೆ ಆತ ಆತ್ಮಹತ್ಯೆ ಮಾಡಿಕೊಳ್ಳದಿದ್ದರೆ ಈ ಪ್ರಕರಣವೇ ಹೊರಬರುತ್ತಿರಲಿಲ್ಲ ಎಂದು ಟೀಕಿಸಿದರು. ಲ್ಯಾಪ್‌ಟಾಪ್, ಮೊಬೈಲ್ ಜಪ್ತಿ ಮಾಡಿರುವ ಪೊಲೀಸರ ಕ್ರಮ ಅನುಮಾನ ಮೂಡಿಸುತ್ತದೆ. ಇದರಲ್ಲಿ ಅನೇಕ ವಿಚಾರ ಅಡಗಿದೆ. ಆತ್ಮಹತ್ಯೆ ಮುನ್ನ ಚಂದ್ರಶೇಖರ್ ಯಾರಿಗೆ ಕರೆ ಮಾಡಿದ್ದರು. ಮುಂತಾದ ವಿಚಾರ ಇನ್ನು ಬಯಲಿಗೆ ಬರಬೇಕಿದೆ. ನಿಷ್ಠಾವಂತ ಅಧಿಕಾರಿಯ ಡೆತ್‌ನೋಟ್ ಸರಕಾರದ ಎಚ್ಚರಿಕೆಯ ಗಂಟೆಯಾಗಿ ಪರಿಣಮಿಸಿದೆ ಎಂದು ಟೀಕಿಸಿದರು.

- ನಿಗಮದ ಅಧೀಕ್ಷಕ ಚಂದ್ರಶೇಖರ್ ಅವರದ್ದು ಆತ್ಮಹತ್ಯೆ ಅಲ್ಲ, ಸರಕಾರದ ಪ್ರಾಯೋಜಕತ್ವದ ಕೊಲೆ.
- ಮುಖ್ಯಮಂತ್ರಿಗಳೇ ನೀವು ಇದನ್ನು ಹಗರಣ ಅಲ್ಲ ಅಂತ ಹೇಳಲು ಸಾಧ್ಯವಿಲ್ಲ. ಈ ಶಾಪ ನಿಮಗೆ ತಟ್ಟಲ್ಲವೇ?
- ಸರಕಾರದಲ್ಲಿ ಸಿಎಂ ಒಂದು, ಡಿಸಿಎಂ ಒಂದು ಹೇಳಿಕೆ ಕೊಡುತ್ತಿದ್ದಾರೆ. ಅವರ ಸರಕಾರದಲ್ಲೇ ವಿಭಿನ್ನ ಹೇಳಿಕೆಗಳು ಬರುತ್ತಿವೆ.
- ಎಸ್‌ಐಟಿ ತನಿಖೆ ಮಾಡಿಸುವ ನಾಟಕವಾಡಿ ಪ್ರಕರಣವನ್ನು ಹಳ್ಳ ಹಿಡಿಸುವುದು ಬೇಡ, ಈ ಸರಕಾರ ಉತ್ತರ ಕೊಡಬೇಕು.
- ನಾವು ಭ್ರಷ್ಟಾಚಾರದ ವಿರುದ್ಧ ಅನ್ನೋದು ಕೇವಲ ಭಾಷಣಕ್ಕೆ ಸಿಮೀತವಾಗಬಾರದು. ಈ ಪ್ರಕರಣವನ್ನು ಸಿಬಿಐಗೆ ವಹಿಸಿ

ಮೇಲ್ಮನೆಯಲ್ಲಿ ವಾಲ್ಮೀಕಿ ಹಗರಣ ಪ್ರತಿಧ್ವನಿ

ಆಡಳಿತ, ವಿಪಕ್ಷ ಮಧ್ಯೆ ವಾಗ್ವಾಳಿ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಭ್ರಷ್ಟಾಚಾರ ನಡೆದಿರುವ ಕುರಿತಂತೆ ನಿಯಮ 59ರಡಿ ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯ ಸಿ.ಟಿ.ರವಿ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಿಸುತ್ತಿದ್ದಂತೆ ಆಡಳಿತ ಪಕ್ಷದ ಸದಸ್ಯರು ವಿರೋಧ ವ್ಯಕ್ತಪಡಿ ಸಿದರು.

ಸಭಾಪತಿಗಳು ಚರ್ಚೆಗೆ ಅನುಮತಿ ನೀಡಿಲ್ಲ, ಈಗ ಯಾಕೆ ಪ್ರಸ್ತಾಪ ಮಾಡುತ್ತೀರಿ ಎಂದು ಆಡಳಿತ ಪಕ್ಷದ ಸದಸ್ಯರು ಪ್ರಶ್ನಿಸುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು ಆಕ್ಷೇಪಿಸಿದರು. ಕೆಲಕಾಲ ಆಡಳಿತ ಹಾಗೂ ಪ್ರತಿಪಕ್ಷಗಳು ಆರೋಪ-ಪ್ರತ್ಯಾರೋಪದ ಸುರಿಮಳೆ ಸುರಿಸಿದರು.

ಈ ವೇಳೆ ಗೃಹ ಸಚಿವ ಪರಮೇಶ್ವರ್ ಅವರು ಮಧ್ಯಪ್ರವೇಶಿಸಿ ವಾಲ್ಮೀಕಿ ಅಭಿವೃದ್ಧಿ ನಿಗಮ ಅವ್ಯವಹಾರ ಸಂಬಂಧ ಎಸ್‌ಐಟಿ ತಂಡ ರಚಿಸಲಾಗಿದೆ. ಸಿಬಿಐ ಕೂಡಾ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಿಕೊಂಡು ತನಿಖೆ ನಡೆಸುತ್ತಿದೆ. ಜಾರಿ ನಿರ್ದೇಶನಾಲಯ ಸಹ ತನಿಖೆ ನಡೆಸುತ್ತಿದೆ. ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ನಡವಳಿಕೆ ನಿಯಮ 59ರಡಿ ಚರ್ಚೆಗೆ ಅವಕಾಶ ನೀಡಕೂಡದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರಲ್ಲಿ ಮನವಿ ಮಾಡಿಕೊಂಡರು.

ಬಳಿಕ ಸಿ.ಟಿ.ರವಿ ರವಿ ಮಾತನಾಡಿ, ವಾಲ್ಮೀಕಿ ನಿಗಮ ಅವ್ಯವಹಾರ ಸಂಬಂಧ ನೂರಾರು ಕೋಟಿ ಭ್ರಷ್ಟಾಚಾರವಾಗಿದೆ. ಇದರಿಂದ ವಾಲ್ಮೀಕಿ ಸಮುದಾಯಕ್ಕೆ ಅಪಾರ ನಷ್ಟವಾಗಿದೆ. ಈ ನಿಟ್ಟಿನಲ್ಲಿ ಚರ್ಚೆ ಅವಕಾಶ ನೀಡಬೇಕು. ನಿಲುವಳಿ ಮಂಡಿಸಲು ಅವಕಾಶ ಸಭಾಪತಿಯವರ ವಿವೇಚನೆಗಿದೆ. ಹೀಗಾಗಿ ನಿಲುವಳಿ ಮಂಡಿಸಲು ಅನುಮತಿ ನೀಡಬೇಕು ಎಂದು ಮನವಿ ಮಾಡಿದರು.

ಸರಕಾರದ ವಿರುದ್ಧ ಧಿಕ್ಕಾರ

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಅವ್ಯವಹಾರದ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ನಡವಳಿಕೆಯಂತೆ ನಿಯಮ 59ರಡಿ ಚರ್ಚೆಗೆ ಅವಕಾಶವಿಲ್ಲ. ಇದನ್ನ ಖಚಿತಪಡಿಸಿಕೊಳ್ಳಲು ಅಡ್ವೋಕೇಟ್ ಜನರಲ್ ಬಳಿ ಸಲಹೆ ಪಡೆದು ಈ ಬಗ್ಗೆ ಸ್ಪಷ್ಟಪಡಿಸುತ್ತೇನೆ ಎಂದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷದ ಸದಸ್ಯರು ಸದನದ ಬಾವಿಗಿಳಿದು ಸರಕಾರ ವಿರುದ್ಧ ಧಿಕ್ಕಾರ ಕೂಗಿದರು.

ಕಾಗವಾಡ ಕ್ಷೇತ್ರಕ್ಕೆ 7 ಮನೆ ಮಂಜೂರು

ವಿಧಾನಸಭೆ: ಬೆಳಗಾವಿ ಜಿಲ್ಲೆಯ ಕಾಗವಾಡ ಕ್ಷೇತ್ರದ ವ್ಯಾಪ್ತಿಯಲ್ಲಿ ಸುಮಾರು 41 ಕಿ.ಮಿ. ಉದ್ದದ ಕೃಷ್ಣಾ ನದಿ ಭಾಗವಿದ್ದು, ಮೀನುಗಾರರ ಜೀವನಕ್ಕೆ ಅನುಕೂಲವಾಗುವಂತೆ ಕಾಗವಾಡ ಕ್ಷೇತ್ರಕ್ಕೆ 2022-23 ರಲ್ಲಿ 7 ಮನೆ ಮಂಜೂರು ಮಾಡಲಾಗಿದೆ ಎಂದು ಮೀನುಗಾರಿಕೆ ಸಚಿವ ಮಾಂಕಾಳ ವೈದ್ಯ ತಿಳಿಸಿದ್ದಾರೆ. ವಿಧಾನಸಭೆಯಲ್ಲಿ ಭರಮಗೌಡ ಅಲಗೌಡ ಕಾಗೆ ಪ್ರಶ್ನೆಗೆ ಉತ್ತರಿಸಿದ ಅವರು, ಶ್ರೀ ದುರ್ಗಾ ದೇವಿ ಮೀನುಗಾರಿಕೆ ಸಹಕಾರ ಸಂಘ ಉಗಾರಖುರ್ದಕ್ಕೆ ಗುತ್ತಿಗೆ ನೀಡಲಾಗಿದ್ದು, ಇಲ್ಲಿ 117 ಮೀನುಗಾರರು ಮೀನುಗಾರಿಕೆ ಚಟುವಟಿಕೆಯಲ್ಲಿ ನಿರತರಾಗಿದ್ದು, 1 ಗ್ರಾಮ ಪಂಚಾಯಿತಿ ಕೆರೆಯನ್ನು ಗುತ್ತಿಗೆ ಪಡೆದು ಮೀನುಗಾರಿಕೆ ನಡೆಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಏಮ್ಸ್ ಸ್ಥಾಪನೆ: ಆಡಳಿತ ಪ್ರತಿಪಕ್ಷಗಳ ಜಟಾಪಟಿ

ವಿಧಾನ ಪರಿಷತ್: ಏಮ್ಸ್ ಸ್ಥಾಪನೆ ವಿಚಾರದಲ್ಲಿ ಆಡಳಿತ ಪಕ್ಷ ಮತ್ತು ಪ್ರತಿಪಕ್ಷದ ನಡುವೆ ಜಟಾಪಟಿಗೆ ಕಾರಣವಾಯಿತು. ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು, ಸದನದಲ್ಲಿ ಕೆಲಕಾಲ ಗದ್ದಲದ ವಾತಾವರಣ ಸೃಷ್ಟಿಯಾಯಿತು. ನಂತರ ಸಭಾಪತಿಗಳು ಮಧ್ಯಪ್ರವೇಶಿಸಿ ಪರಿಸ್ಥಿತಿ ನಿಯಂತ್ರಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್ ಸದಸ್ಯ ತಿಪ್ಪೇಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್, ಸದಸ್ಯರು ಆರೋಪಿಸಿದಂತೆ ನಮ್ಮ ಉತ್ತರದಲ್ಲಿ ಯಾವುದೇ ತಪ್ಪು ಇಲ್ಲ. ನಮ್ಮ ರಾಜ್ಯದಲ್ಲಿ ಏಮ್ಸ್ ಸ್ಥಾಪನೆ ಕುರಿತು ಪ್ರಶ್ನಿಸಿದ್ದಾರೆ. ನಾನು ಸಚಿವನಾದ ನಂತರ ಎರಡು ಬಾರಿ ದೆಹಲಿಗೆ ಹೋಗಿ ಆರೋಗ್ಯ ಸಚಿವರ ಭೇಟಿಯಾಗಿ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಬೇಡಿಕೆ ಇಟ್ಟಿದ್ದೇವೆ. ಕೇಂದ್ರ ಸ್ಥಾಪನೆ ಮಾಡಬೇಕಿದೆ. ಸಿಎಂ ಪತ್ರ ಬರೆದಿದ್ದಾರೆ, ಪ್ರಧಾನಿಗಳ ಭೇಟಿ ಮಾಡಿ ಮನವಿಯನ್ನೂ ಮಾಡಿದ್ದೇವೆ, ರಾಯಚೂರಿನಲ್ಲಿ ಭೂಮಿ ಗುರುತಿಸಿದ್ದೇವೆ, ಭೂಮಿ ಕೊಡಲಿದ್ದೇವೆ. ಎಲ್ಲಾ ವ್ಯವಸ್ಥೆ ಕಲ್ಪಿಸುವ ಆಶ್ವಾಸನೆ ನೀಡಿದ್ದೇವೆ. ಲಿಖಿತವಾಗಿ ಎಲ್ಲ ಸಹಕಾರದ ಭರವಸೆ ನೀಡಿದ್ದೇವೆ, ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದಾರೆ ಹೇಳಿ ಮಾಡಿಸಿ ಎಂದು ತಿವಿದರು. ಇದಕ್ಕೆ ತಿರುಗೇಟು ನೀಡಿದ ತಿಪ್ಪೇಸ್ವಾಮಿ, ಬನ್ನಿ ಹೋಗೋಣ ಎಂದರು.

ಕೇಂದ್ರದಿಂದ ತಾರತಮ್ಯ

ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ಕೇಂದ್ರ ತಾರತಮ್ಯ ಮಾಡುತ್ತಿದೆ. ಕರ್ನಾಟಕ, ಕೇರಳಕ್ಕೆ ಮಾತ್ರ ಏಮ್ಸ್ ನೀಡಿಲ್ಲ ಎಂದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಭ್ರೂಣಹತ್ಯೆ ಆರೋಪಿಗಳ ವಿರುದ್ಧ ಕಠಿಣ ಕ್ರಮ: ಸಚಿವ

ಜಾಮೀನು ಸಿಗದಂತೆ ಕ್ರಮಕ್ಕೆ ಸೂಚನೆ

ವಿಧಾನ ಪರಿಷತ್: ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಪಿಸಿಪಿಎನ್‌ಡಿಟಿ ಕಾಯಿದೆಯಡಿ ಪ್ರಕರಣ ದಾಖಲಿಸಲಾಗುತ್ತಿದೆ. ಉತ್ತಮ ವಕೀಲರ ನಿಯೋಜನೆ ಮೂಲಕ ಆರೋಪಿಗಳಿಗೆ ಜಾಮೀನು ಸಿಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಸೋಮವಾರ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ.ವೆಂಕಟೇಶ್ ಮತ್ತು ಬಿಜೆಪಿ ಸದಸ್ಯ ಸಿ.ಟಿ.ರವಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣಕ್ಕೆ ಎಲ್ಲ ಕ್ರಮ ವಹಿಸಿದ್ದೇವೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಎಲ್ಲ ರೀತಿಯ ಅಗತ್ಯ ಮಾಹಿತಿ ಸಂಗ್ರಹಿಸಿ ಆರೋಪಿಗಳನ್ನು ಹಿಡಿಯಬೇಕಿದ್ದು, ಆ ಕೆಲಸ ಮಾಡುತ್ತಿದ್ದೇವೆ ಎಂದರು.

ಮರು ಪ್ರತಿಕ್ರಿಯಿಸಿದ ಸದಸ್ಯ ಯುಬಿ ವೆಂಕಟೇಶ್, ಸರಕಾರದ ಉತ್ತರ ಸರಿಯಾಗಿಯೇ ಇದೆ. ಆದರೆ, ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಶಿಕ್ಷೆ ಹೆಚ್ಚು ಮಾಡಿ ಭಯ ಹುಟ್ಟಿಸಿ ಮಟ್ಟ ಹಾಕಿ ಎಂದು ಸಲಹೆ ನೀಡಿದರು. ಇದಕ್ಕೆ ಉತ್ತರಿಸಿದ ದಿನೇಶ್ ಗುಂಡೂರಾವ್, ಭ್ರೂಣ ಹತ್ಯೆ ಆರೋಪಿಗಳ ವಿರುದ್ಧ ನಾವು ಪ್ರಕರಣ ದಾಖಲಿಸುತ್ತೇವೆ. ಆದರೆ, ಕೋರ್ಟ್‌ನಲ್ಲಿ ಅವರಿಗೆ ಜಾಮೀನು ಸಿಗಲಿದೆ, ಜಾಮೀನು ಸಿಗಲು ಕಷ್ಟವಾಗುವ ಕಲಂ ಅಡಿಯಲ್ಲಿ ಪ್ರಕರಣ ದಾಖಲಿಸಬೇಕಿದೆ. ಪಿಸಿಪಿಎನ್‌ಡಿಟಿ ಕಾಯಿದೆಯಡಿ ಕ್ರಮ ವಹಿಸಲಿದ್ದೇವೆ. ಆರೋಪಿಗಳಿಗೆ ಶಿಕ್ಷೆಯಾಗುವವರೆಗೂ ನಾವು ಗಟ್ಟಿಯಾಗಿರುತ್ತೇವೆ ಎಂದರು.

ಮನುಷ್ಯರಿಗೆ ಪಶು ಔಷಧ ನೀಡಲ್ಲ: ದಿನೇಶ್

ಪಶುಗಳಿಗೆ ನೀಡಿದ ಔಷಧವನ್ನು ಮನುಷ್ಯರಿಗೆ ನೀಡಲ್ಲ. ಔಷಧಗಳ ಲೇಬಲ್ ದೋಷದಿಂದಾಗಿ ಆ ಔಷಧ ವಾಪಸ್ ಕಳಿಸಲಾಗಿದೆಯೇ ಹೊರತು ಔಷಧಿಯಲ್ಲಿ ಯಾವುದೇ ಲೋಪವಿರಲಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು. ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪಶುಗಳಿಗೆ ಕೊಡುವ ಔಷಧ ನಾವು ಜನರಿಗೆ ಕೊಟ್ಟಿಲ್ಲ, ಸರಬರಾಜುದಾರರು ಲೋಗೋಗ್ರಾಂನಲ್ಲಿ ಎ.ಎಚ್.ಡಿ.ಎಚ್ ಇಲಾಖೆ ಎಂದು ಬಂದಿದೆ. ಇದನ್ನು ಕೂಡಲೇ ಏಳು ಪ್ರಯೋಗಾಲಯಕ್ಕೆ ಕಳಿಸಿ ಪರಿಶೀಲಿಸಲಾಗಿದ್ದು, ಔಷಧದಲ್ಲಿ ಸಮಸ್ಯೆ ಕಂಡುಬಂದಿಲ್ಲ. ಲೇಬಲ್ ಸಮಸ್ಯೆ ಅಷ್ಟೇ, ಆದರೂ, ದಂಡ ಹಾಕಿ ಮರು ಪೂರೈಕೆಗೆ ಸೂಚಿಸಲಾಗಿದೆ ಎಂದರು.

ಆರ್ಥಿಕ ಸ್ಥಿತಿಗತಿ ಆಧರಿಸಿ ಹಂತ ಹಂತವಾಗಿ ಕ್ರಮ

ರಾಜ್ಯದಲ್ಲಿ ಪಿಪಿಪಿ ಮಾದರಿಯ ವೈದ್ಯಕೀಯ ಕಾಲೇಜು ಸ್ಥಾಪನೆ

ವಿಧಾನ ಪರಿಷತ್: ರಾಜ್ಯದ ಎಲ್ಲಾ ಜಿಲ್ಲೆಯಲ್ಲಿಯೂ ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಬೇಕು ಎನ್ನುವುದು ಸರಕಾರದ ಪಾಲಿಸಿಯ ವಿಷಯವಾಗಿದ್ದರೂ ಆರ್ಥಿಕ ಸ್ಥಿತಿಗತಿಯಾಧಾರಿತವಾಗಿ ಹಂತ ಹಂತವಾಗಿ ಕ್ರಮ ವಹಿಸಲಾಗುತ್ತದೆ. ಪಿಪಿಪಿ ಮಾದರಿಯಲ್ಲಿಯೂ ಮೆಡಿಕಲ್ ಕಾಲೇಜು ಸ್ಥಾಪನೆಗೆ ಚಿಂತನೆ ನಡೆಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಮಂಜುನಾಥ ಭಂಡಾರಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 2013 ರಲ್ಲಿಯೇ ನಾವು ಪಾಲಿಸಿ ತಂದಿದ್ದೇವೆ, ಪ್ರತಿ ಜಿಲ್ಲೆಯಲ್ಲಿಯೂ ಮೆಡಿಕಲ್ ಕಾಲೇಜು ಸ್ಥಾಪನೆ

ಮಾಡಬೇಕು ಎನ್ನುವುದು ನಮ್ಮ ಪಾಲಿಸಿ ವಿಷಯವಾಗಿದೆ. ಸದ್ಯ 22 ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಆಗಿದೆ. ಹಣಕಾಸು ಇಲಾಖೆ ಅನುಮತಿ ಸಿಕ್ಕಿದರೆ ಹಂತ ಹಂತವಾಗಿ ಹೊಸ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಲಾಗುತ್ತದೆ ಎಂದರು.

ವರದಿ ಬಂದ ನಂತರ ಶಿಫಾರಸು

ಯಾವ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಇಲ್ಲವೋ ಅಲ್ಲಿ ಪಿಪಿಪಿ ಮಾದರಿಯಲ್ಲಿ ಹೊಸ ಮೆಡಿಕಲ್ ಕಾಲೇಜು ಸ್ಥಾಪಿಸಲು ಕೇಂದ್ರ ಸೂಚಿಸಿದೆ. ಈ ಸಂಬಂಧ ರಾಜ್ಯ ಸರಕಾರದಿಂದ ವರದಿ ನೀಡಲು ಐಡೆಕ್ ಸಂಸ್ಥೆಗೆ ಸೂಚಿಸಿದ್ದು, ಈಗಾಗಲೇ ಸರ್ವೇ ಮಾಡಿ ವರದಿ ನೀಡಿದೆ. ಆದರೆ ಆ ವರದಿ ತೃಪ್ತಿ ತರದ ಕಾರಣ ಮತ್ತೊಂದು ವರದಿಗೆ ಸೂಚಿಸಿದ್ದು, ವರದಿ ಬಂದ ನಂತರ ಸಿಎಂ ಜತೆ ಚರ್ಚಿಸಿ ಶಿಫಾರಸು ಪರಿಶೀಲಿಸಲಾಗುತ್ತದೆ. ಎಲ್ಲಿ ಸಾಧ್ಯವೋ ಅಲ್ಲಿ ಸರಕಾರದಿಂದ ಮತ್ತು ಅವಕಾಶ ಸಿಗುವ ಕಡೆ ಪಿಪಿಪಿ ಮಾದರಿಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಲಾಗುತ್ತದೆ. ಪ್ರತಿ ಜಿಲ್ಲೆಯಲ್ಲಿಯೂ ಸರಕಾರದಿಂದ ಕಾಲೇಜು ಸ್ಥಾಪನೆ ಸರಕಾರದ ಪಾಲಿಸಿ ವಿಷಯವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು.

---

10 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆ

ವಿಧಾನ ಪರಿಷತ್: 10 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆಗೆ ಸಿದ್ಧತೆ ಮಾಡಿದ್ದೇವೆ. ಆರ್ಥಿಕ ಇಲಾಖೆ ಒಪ್ಪಿಗೆ ಕೊಟ್ಟ ಕೂಡಲೇ ಶಿಕ್ಷಕರ ನೇಮಕ ಪ್ರಕ್ರಿಯೆ ಶುರು ಮಾಡುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ವಿಧಾನ ಪರಿಷತ್ ಪಶ್ನೋತ್ತರ

ಕಲಾಪದಲ್ಲಿ ಬಿಜೆಪಿಯ ತಳವಾರ್ ಸಾಬಣ್ಣ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಕರ ಕೊರತೆ ಇದೆ. ಶಿಕ್ಷಕರು ಇಲ್ಲದೆ ಪ್ರತಿ ಬಾರಿ ಫಲಿತಾಂಶದಲ್ಲಿ ಕಲ್ಯಾಣ ಕರ್ನಾಟಕ ಹಿಂದೆ ಬೀಳುತ್ತಿದೆ. 19 ಸಾವಿರ ಶಿಕ್ಷಕರ ಕೊರತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಇದೆ. ಶಿಕ್ಷಕರ ಜತೆಗೆ ಕೊಠಡಿಗಳ ಸಮಸ್ಯೆ ಇದೆ. ಕೂಡಲೇ ಶಿಕ್ಷಕರ ನೇಮಕ ಮಾಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಸಚಿವ ಮಧು ಬಂಗಾರಪ್ಪ ಉತ್ತರ ನೀಡಿ, ಶಿಕ್ಷಣ ಇಲಾಖೆಯಲ್ಲಿ 50 ಸಾವಿರ ಶಿಕ್ಷಕರ ಕೊರತೆ ಇದೆ. 10 ಸಾವಿರ ಶಿಕ್ಷಕರ ನೇಮಕಕ್ಕೆ ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದೆ. ಆರ್ಥಿಕ ಇಲಾಖೆ ಅನುಮತಿ ಕೊಟ್ಟ ಬಳಿಕ 10 ಸಾವಿರ ಹುದ್ದೆ ನೇಮಕ ಪ್ರಕ್ರಿಯೆ ಶುರು ಮಾಡ್ತೇವಿ ಎಂದು ತಿಳಿಸಿದರು. ಈ ವೇಳೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ 6500 ಶಿಕ್ಷಕರ ಹುದ್ದೆ ಖಾಲಿ ಇವೆ. ಕಲ್ಯಾಣ ಕರ್ನಾಟಕ ಭಾಗದ ಹುದ್ದೆ ತುಂಬಲು ಆರ್ಥಿಕ ಇಲಾಖೆ ಅನುಮತಿ ಬೇಕಿಲ್ಲ ಎನ್ನುವ ನಿಯಮವಿದೆ ಎಂದರು.

ಸದನ ಮುಗಿಯುವ ತನಕ ಇ.ಡಿ. ಸೆರೆಯಿಂದ ರಕ್ಷೆ | 2 ದಿನ ಅಜ್ಞಾತವಾಸ

ನಾಪತ್ತೆಯಾಗಿದ್ದ ಶಾಸಕ ದದ್ದಲ್ ಸದನದಲ್ಲಿ ಪತ್ತೆ

ವಿಧಾನಸಭೆ: ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ ಪ್ರಕರಣದಲ್ಲಿ ಇಡಿ ಬಂಧನದಿಂದ ಶಾಸಕ, ನಿಗಮ ಮಂಡಳಿ ಅಧ್ಯಕ್ಷ ಬಸನಗೌಡ ದದ್ದಲ್ ಬಚಾವ್ ಆಗಿದ್ದಾರೆ.

ಇ.ಡಿ.ಬಂಧನಕ್ಕೆ ಅಂಜಿ ಎಸ್‌ಐಟಿ ಮುಂದೆ ಹಾಜರಾಗಿದ್ದ ದದ್ದಲ್

ಅವರು, ಕಳೆದ ಮೂರು ದಿನಗಳಿಂದ ನಾಪತ್ತೆಯಾಗಿದ್ದರು. ಆದರೆ ಸೋಮವಾರದ ಸದನಕ್ಕೆ ಹಾಜರಾಗುವ ಮೂಲಕ ತಾತ್ಕಾಲಿಕವಾಗಿ ಬಂಧನದಿಂದ ರಿಲೀಫ್ ಪಡೆದಿದ್ದಾರೆ.

ಸದನ ನಡೆಯುತ್ತಿರುವ ವೇಳೆ ಯಾವುದೇ ಶಾಸಕರನ್ನು ಬಂಧಿಸಬೇಕು ಎಂದರೂ ಸಭಾಧ್ಯಕ್ಷರ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಒಂದು ವೇಳೆ ಸ್ಪೀಕರ್ ಅನುಮತಿ ನೀಡದಿದ್ದರೆ ಶಾಸಕರನ್ನು ಯಾವುದೇ ತನಿಖಾ ಸಂಸ್ಥೆ ವಶಕ್ಕೆ ಪಡೆಯಲು ಬರುವುದಿಲ್ಲ. ಆದ್ದರಿಂದ ಇದೀಗ ಸದನ ಮುಕ್ತಾಯವಾಗುವ ತನಕ ದದ್ದಲ್‌ರನ್ನು ಬಂಧಿಸುವುದು ಕಷ್ಟಸಾಧ್ಯ ಎನ್ನುವ ಮಾತುಗಳು ಕೇಳಿಬರುತ್ತಿವೆ.

ವಾಲ್ಮೀಕಿ ಅಭಿವೃದ್ಧಿ ನಿಗಮ ಅಕ್ರಮ ಹಣ ವರ್ಗಾವಣೆ ಆರೋಪ ಸಂಬಂಧ ಈಗಾಗಲೇ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಬಂಧನ ಮಾಡಿದ್ದಾರೆ. ಇದರ ಬೆನ್ನಲ್ಲೇ ನಿಗಮದ ಅಧ್ಯಕ್ಷರಾಗಿರುವ ಬಸನಗೌಡ ದದ್ದಲ್ ಅವರಿಗೂ ಇ.ಡಿ. ವಿಚಾರಣೆ ನಡೆಸಬಹುದು ಎಂಬ ಮಾತುಗಳು ಕೇಳಿಬಂದಿತ್ತು.

ನಾಗೇಂದ್ರ ಬಂಧನ ; ಸ್ಪೀಕರ್ ಖಾದರ್ ಮಾಹಿತಿ

ಇನ್ನು ಶಾಸಕ ನಾಗೇಂದ್ರ ಅವರನ್ನು ಇ.ಡಿ. ಅಧಿಕಾರಿಗಳು ಬಂಧಿಸಿರುವ ಮಾಹಿತಿಯನ್ನು ಸ್ಪೀಕರ್ ಯು.ಟಿ.ಖಾದರ್ ಸದನಕ್ಕೆ ತಿಳಿಸಿದರು. ಸಂತಾಪ ಸೂಚನೆ ಬಳಿಕ ಅಧಿಕೃತವಾಗಿ ಈ ಬಗ್ಗೆ ಪ್ರಕಟಣೆ ಹೊರಡಿಸಿದ ಖಾದರ್, 'ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯ ಸಹಾಯಕ ಆಯುಕ್ತ ದಿಲೀಪ್ ಮೇಘವಾಲ ಅವರು, ನಾಗೇಂದ್ರ ಅವರನ್ನು ಜು.12 ರಂದು 10.50ಕ್ಕೆ ದಸ್ತಗಿರಿ ಮಾಡಲಾಗಿದ್ದು, ಇ.ಡಿ.ವಶದಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿರುವುದಾಗಿ ತಿಳಿಸಿದರು.

ಈ ಕಾರಣಕ್ಕಾಗಿಯೇ, ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ, ರಾಯಚೂರು ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ರಾಜ್ಯ ವಿಧಾನಮಂಡಲ ಅಧಿವೇಶನ ಆರಂಭವಾಗುವ ತನಕ ಅಜ್ಞಾತ ಸ್ಥಳದಲ್ಲಿದ್ದು, ಸದನ ಆರಂಭವಾಗುತ್ತಿದ್ದಂತೆ ಕಾಣಿಸಿಕೊಂಡಿದ್ದಾರೆ. ಈ ಬಗ್ಗೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ನಾನು ನಾಪತ್ತೆ ಆಗಿರಲಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ನಾನು ಎಲ್ಲಿಯೂ ಹೋಗಿಲ್ಲ. ಎರಡು ದಿನ ಊರಲ್ಲಿದ್ದೆ. ನನಗೆ ಯಾವುದೇ ನೋಟಿಸ್ ಕೊಟ್ಟಿಲ್ಲ. ಈಗ ವಿಧಾನಸಭೆ ಅಧಿವೇಶನಕ್ಕೆ ಹೋಗುತ್ತಿದ್ದೇನೆ. ನಾನು ನಾಪತ್ತೆಯಾಗಿರಲಿಲ್ಲ ಎಂದಿದ್ದಾರೆ.

ಅಕ್ಕಿ ಖರೀದಿಯಲ್ಲಿ ಹಣದ ವ್ಯತ್ಯಾಸ

ವಿಧಾನ ಪರಿಷತ್: ಆಹಾರ ಇಲಾಖೆ ಮತ್ತು ಶಿಕ್ಷಣ ಇಲಾಖೆ ಅಕ್ಕಿ ಖರೀದಿಸಿದ್ದರಲ್ಲಿ ದೊಡ್ಡ ಪ್ರಮಾಣದಲ್ಲಿ ಹಣದ ವ್ಯತ್ಯಾಸವಾಗಿದೆ ಎಂದು ಬಿಜೆಪಿ ಮುಖಂಡ ಎನ್. ರವಿಕುಮಾರ್ ಆರೋಪಿಸಿದ್ದಾರೆ.

ವಿಧಾನ ಪರಿಷತ್ ಕಲಾಪದಲ್ಲಿ ಆಹಾರ ಸಚಿವ ಮುನಿಯಪ್ಪರಿಗೆ ಪ್ರಶ್ನಿಸಿದ ಅವರು, ಆಹಾರ ಇಲಾಖೆ ಒಂದು ಕೆಜಿಗೆ 34 ರು. 60 ಪೈಸೆ ಖರ್ಚು ಮಾಡುತ್ತಿದೆ. ಶಿಕ್ಷಣ ಇಲಾಖೆ ಅಕ್ಷರ ದಾಸೋಹಗೆ ಪ್ರತಿ ಕೆಜಿ ಅಕ್ಕಿಗೆ 29 ರು. 30 ಪೈಸೆ ಕೊಡುತ್ತಿದ್ದಾರೆ. ಸರಕಾರ ಒಂದೇ ಇದ್ದರೂ ಯಾಕೆ ಬೇರೆ ದರದಲ್ಲಿ ಅಕ್ಕಿ ಖರೀದಿ ಆಗುತ್ತಿದೆ? ಅಕ್ಕಿ ಖರೀದಿಯಲ್ಲಿ ಸುಮಾರು 5 ರು. ಹಣ ಎಲ್ಲಿಗೆ ಹೋಗುತ್ತಿದೆ ಎಂದು ಗೊತ್ತಿಲ್ಲ. ಸುಮಾರು 120 ಕೋಟಿ ರು. ಹಣ ವ್ಯತ್ಯಾಸ ಬರುತ್ತಿದೆ. ಇದಕ್ಕೆ ಉತ್ತರ ಕೊಡಿ ಎಂದು ಅವರು ಕೇಳಿದರು. ಈ ವೇಳೆ ಉತ್ತರಿಸಿದ ಸಚಿವ ಮುನಿಯಪ್ಪ, ಆಹಾರ ಇಲಾಖೆ, ಎನ್‌ಸಿಎಫ್ ಮತ್ತು ಕೇಂದ್ರ ಭಂಡಾರದ ಮೂಲಕವೇ ಅಕ್ಕಿ ಖರೀದಿ ಮಾಡ್ತಿದೆ. ಕೇಂದ್ರವೇ ನಿಗದಿ ಮಾಡಿದ ಮೊತ್ತವನ್ನು ಪ್ರತಿ ಕೆಜಿಗೆ 34 ರು. 60 ಪೈಸೆ ಕೊಡಲಾಗುತ್ತಿದೆ. ನಾವು ಕೇಂದ್ರ ಸರಕಾರಕ್ಕೆ 5 ಕೆಜಿ ಅಕ್ಕಿ ಕೊಡಿ ಎಂದರೂ ಕೊಡಲಿಲ್ಲ. ನಾವು

ವಿಶ್ವವಾಣಿ

ಸಂಪಾದಕೀಯ

ಕಹಿನೆನಪುಗಳ ಆಚರಣೆ ಬೇಡ

ಹಳೆಯ ಕಹಿ ನೆನಪುಗಳನ್ನು ಮರೆತು ಮುಂದೆ ಸಾಗಬೇಕೆನ್ನುವುದು ನಮ್ಮ ಹಿರಿಯರ ಅನುಭವದ ಮಾತು. ಹಿಂದಿನ ಕಹಿ ಘಟನೆಗಳು ನಮಗೆ ಮುಂದೆ ಸತ್ಪಥ ತೋರಿಸುವ ದಾರಿ ದೀಪವಾಗಬೇಕು. ದೇಶದ ಚರಿತ್ರೆಯಲ್ಲಾಗಲಿ, ನಮ್ಮ ವೈಯಕ್ತಿಕ ಜೀವನದಲ್ಲಾಗಲಿ ಹಿಂದೆ ಆಗಿ ಹೋದ ದುರದೃಷ್ಟಕರ ಘಟನೆಗಳನ್ನು ವರ್ತಮಾನ ಕಾಲದಲ್ಲೂ ನೆನಪಿಸಿಕೊಂಡು ಕೊರಗುವುದರಲ್ಲಿ ಅಥವಾ ಗುಲ್ಲೆಬ್ಬಿಸುವುದರಲ್ಲಿ ಅರ್ಥವಿಲ್ಲ. 1975ರ ಜೂನ್ 25ರಂದು ಪ್ರಧಾನಿ ಇಂದಿರಾ ಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ಘಟನೆ 21 ತಿಂಗಳ ಕಾಲ ದೇಶದ ಪಾಲಿಗೆ ಕರಾಳ ಅಧ್ಯಾಯವಾಗಿತ್ತೆನ್ನುವುದರಲ್ಲಿ ಎರಡು ಮಾತಿಲ್ಲ. ಈ ಘಟನೆಗೆ 50 ವರ್ಷ ಸಂದ ನೆನಪಿನಲ್ಲಿ ನೂತನ ಸಂಸತ್ತಿನ ಮೊದಲ ಅಧಿವೇಶನದಲ್ಲಿಯೇ ಖಂಡನಾ ನಿರ್ಣಯ ಅಂಗೀಕರಿಸಲಾಗಿದೆ. ಇದೀಗ ಜೂನ್ 25ರ ದಿನವನ್ನು 'ಸಂವಿಧಾನ ಹತ್ಯಾದಿನ' ಹೆಸರಿನಲ್ಲಿ ಪ್ರತೀ ವರ್ಷ ಸ್ಮರಿಸಲು ಕೇಂದ್ರ ಸರಕಾರ ಮುಂದಾಗಿದೆ. ಕೇಂದ್ರ ಗೃಹಸಚಿವ ಅಮಿತ್ ಶಾ ಈ ಸಂಬಂಧ ನೀಡಿರುವ ಹೇಳಿಕೆ ರಾಜಕೀಯ ಪ್ರೇರಿತ ಎನ್ನುವುದರಲ್ಲಿ ಅನುಮಾನವಿಲ್ಲ. 'ಸಂವಿಧಾನ ರಕ್ಷಣೆ' ಹೆಸರಿನಲ್ಲಿ ಗದ್ದಲ ಎಬ್ಬಿಸುತ್ತಿರುವ ಇಂಡಿಯಾ ಒಕ್ಕೂಟ ವಿಶೇಷವಾಗಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ತಿರುಗೇಟು ಕೊಡಲೆಂದೇ ಮೋದಿ ಸರಕಾರ ಈ ತೀರ್ಮಾನಕ್ಕೆ ಬಂದಿದೆ ಎನ್ನುವುದು ಸುಸ್ಪಷ್ಟ. ಆದರೆ ಸಂವಿಧಾನ ಹತ್ಯಾದಿನ ಎಂದು ಪ್ರತೀ ವರ್ಷ ಈ ಘಟನೆಯನ್ನು ಮೆಲುಕು ಹಾಕುವುದರಲ್ಲಿ ಯಾವ ಔಚಿತ್ಯವೂ ಇಲ್ಲ. ಚರಿತ್ರೆಯಲ್ಲಿ ಆಗಿ ಹೋದ ಪ್ರಮಾದಗಳನ್ನು ಒಬ್ಬರಿಗೊಬ್ಬರು ಆರೋಪಿಸುತ್ತಾ ಸಾಗಿದರೆ ಇಂತಹ ದಿನಗಳಿಗೆ ಅಂತ್ಯವಿರಲಾರದು. ಒಂದು ವೇಳೆ ಈ ನಿರ್ಧಾರ ಕಾರ್ಯರೂಪಕ್ಕೆ ಬಂದರೆ ಪ್ರತೀ ವರ್ಷವೂ ಈ ವಿಷಯದಲ್ಲಿ ಆರೋಪ- ಪ್ರತ್ಯಾರೋಪಗಳು ಮುಂದುವರಿಯುತ್ತಲೇ ಸಾಗಲಿದೆ. ಇದರ ಬದಲು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿದ ಮೌಲ್ಯಗಳು, ಶ್ರೇಷ್ಠತೆಯನ್ನು ತಿಳಿಸಿಕೊಡುವ ಕೆಲಸಕ್ಕೆ ಆದ್ಯತೆ ನೀಡಬೇಕು. ಶಾಲಾ ಕಾಲೇಜುಗಳಲ್ಲಿ ಸಂವಿಧಾನದ ಓದಿನ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ರೂಪಿಸಬಹುದು. ಇನ್ನು ತುರ್ತುಪರಿಸ್ಥಿತಿಯ ವಿಚಾರಕ್ಕೆ ಬಂದರೆ 1977ರ ಚುನಾವಣೆಯಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಸೋಲಿಸುವ ಮೂಲಕ ಈ ನಿರ್ಧಾರಕ್ಕೆ ತಕ್ಕ ಪಾಠ ಕಲಿಸಿದ್ದರು. ಮುಂದೆ ತಮ್ಮ ಸಂದರ್ಶನವೊಂದರಲ್ಲೂ ತಮ್ಮ ನಿರ್ಧಾರ ತಪ್ಪೆನ್ನುವುದನ್ನು ಇಂದಿರಾ ಒಪ್ಪಿಕೊಂಡಿದ್ದರು. ತುರ್ತುಪರಿಸ್ಥಿತಿ ವಿರುದ್ಧ ಎಷ್ಟೇ ಹೋರಾಟ ನಡೆದರೂ ಆಗ ಆದ ಪ್ರಮಾದಗಳಿಗೆ ನ್ಯಾಯ ಕೊಡಿಸುವ ಕೆಲಸ ಇನ್ನೂ ಆಗಿಲ್ಲ. ಈ ವಿಷಯದಲ್ಲಿ ಇಂದಿರಾ ಅವರ ಬೆಂಬಲಕ್ಕೆ ನಿಂತ ಅನೇಕರು ನಂತರದ ದಿನಗಳಲ್ಲೂ ಅಧಿಕಾರದಲ್ಲಿ ಮುಂದುವರಿದಿದ್ದರು.

ಸೊಂಪಾದಕೀಯ

ಎಮ್ಮೆಯ ವಿಷಯ!

ನಮ್ಮ ದೇಶದಲ್ಲಿ ನ್ಯಾಯಾಲಯದಲ್ಲಿ ಕೇಸುಗಳು ಎಷ್ಟು ವರ್ಷಗಳವರೆಗೂ ನಡೆಯುತ್ತವೆ ಅನ್ನೋದು ಎಲ್ಲರಿಗೂ ಗೊತ್ತು. ಕೆಲವೊಂದು ಕೇಸುಗಳು ಆರೋಪಿಗಳ ಜೀವಿತಾವಧಿ ಮುಗಿದರೂ ಇತ್ಯರ್ಥ ಆಗೋದಿಲ್ಲ. ಇದೂ ಒಂಥರಾ ಅದೇ ಕೇಸು. 1965ರಲ್ಲಿ ಎಮ್ಮೆ ಮತ್ತು ಕರುಗಳನ್ನು ಕಳ್ಳತನ ಮಾಡಿದ ವ್ಯಕ್ತಿ ಈಗ ಅಂದ್ರೆ 2024ರಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಅವನು ಸಿಕ್ಕಿಬಿದ್ದಿರೋದು ಅಷ್ಟೇನೂ ದೊಡ್ಡ ವಿಷಯ ಅಲ್ಲ ಬಿಡಿ. ಆದರೆ ನಮ್ಮ ಪೊಲೀಸರು ಇನ್ನೂ ಅವನಿಗೋಸ್ಕರ ಹುಡುಕಾಟ ನಡೆಸುತ್ತಿದ್ದರು ಅನ್ನೋದೇ ಇಲ್ಲಿ ದೊಡ್ಡ ವಿಶೇಷ. 1965ರಲ್ಲಿ ನಡೆದ ಎಮ್ಮೆ ಕಳ್ಳತನದ ಕೇಸನ್ನು ಈಗಲೂ ಹುಡುಕುವಷ್ಟು ನಮ್ಮ ಪೊಲೀಸರು ಪುರುಸೊತ್ತಾಗಿದ್ದಾರೆ ಅಂದ್ರೆ, ನಮ್ಮ ಪೊಲೀಸರಿಗೆ ಇತ್ತೀಚೆಗೆ ಕೇಸುಗಳೇ ಸಿಗುತ್ತಿಲ್ಲವೇ ಅಂತ ಪ್ರಶ್ನೆ ಮಾಡೋ ಹಾಗಿಲ್ಲ. ಆಗ ಕಳ್ಳತನ ಮಾಡಿ ಕೋರ್ಟ್‌ನಿಂದ ಜಾಮೀನು ಪಡೆದ ವ್ಯಕ್ತಿ ನಂತರ ಕಣ್ಮರೆ ಆಗಿದ್ದ. ಪೊಲೀಸರಿಗೂ ಸಿಗದೆ, ನ್ಯಾಯಾಲಯಕ್ಕೂ ಹಾಜರಾಗದೆ ಇದ್ದುದರಿಂದ ಈ ಪ್ರಕರಣ ಲಾಂಗ್ ಪೆಂಡಿಂಗ್ ರಿಪೋರ್ಟ್‌ಗೆ ಸೇರಿ ಹೋಗಿತ್ತು. ಆದರೆ ಕೇಸು ಪೆಂಡಿಂಗ್ ಆಗಿ ಇತ್ತೇ ವಿನಃ ಕ್ಲೋಸ್ ಆಗಿರಲಿಲ್ಲ ಅಂತ ಓಪನ್ ಮೈಂಡೆಡ್ ಆಗಿಯೇ ಇದ್ದ ನಮ್ಮ ಪೊಲೀಸರ ಕೈಗೆ ಕೊನೆಗೂ ಎಮ್ಮೆ ಕಳ್ಳ ಸಿಕ್ಕಿಬಿದ್ದಿದ್ದಾನೆ. ಕಳ್ಳತನ ಮಾಡಿದಾಗ ಅವನಿಗೆ 22 ವರ್ಷ ಅಂತೆ. ಇವನ ಜೊತೆ ಕಳ್ಳತನ ಮಾಡಿದ ಇನ್ನೊಬ್ಬ ವ್ಯಕ್ತಿ ಈಗಾಗಲೇ 2006ರಲ್ಲಿ ಇಹಲೋಕ ತ್ಯಜಿಸಿರುವುದರಿಂದ ಅವನು ಕೋರ್ಟು, ಕೇಸು, ಪೊಲೀಸು ಅಂತ ಅಲೆಯುವ ಸಮಸ್ಯೆಯಿಂದ ತಪ್ಪಿಸಿಕೊಂಡಿದ್ದಾನೆ. ಆದರೆ ಬದುಕಿದ್ದಾನೆ ಅನ್ನೋ ಕಾರಣಕ್ಕೆ ಇವನು ಸಿಕ್ಕಿಬಿದ್ದಿದ್ದಾನೆ. ಈ ಘಟನೆ ನಡೆದು ಈಗ 59 ವರ್ಷಗಳಾಗಿವೆ. ಅಂದ್ರೆ, ಈಗ ಸಿಕ್ಕಿಬಿದ್ದಿರುವ ಕಳ್ಳನಿಗೆ ಸುಮಾರು 80 ವರ್ಷ ವಯಸ್ಸು. ಈ ವಯಸ್ಸಿನಲ್ಲಿ ಈತನನ್ನು ಕೋರ್ಟಿಗೆ ಹಾಜರು ಪಡಿಸಿದರೆ ಅವನು ಏನು ಹೇಳುತ್ತಾನೋ ಗೊತ್ತಿಲ್ಲ. ತನ್ನ 22ನೇ ವಯಸ್ಸಿನಲ್ಲಿ ಇಷ್ಟಪಟ್ಟಿದ್ದ ಹುಡುಗಿಯ ಹೆಸರೇ ಪಾಪ ಅವನಿಗೆ ನೆನಪಿರುತ್ತೋ ಇಲ್ವೋ. ಆದರೆ ಈಗ 58 ವರ್ಷಗಳ ಹಿಂದಿನ ಘಟನೆಯನ್ನು ನೆನಪಿಸಿಕೊಂಡು ತಾನು ಕಳ್ಳತನ ಮಾಡಿದ್ದನೋ ಇಲ್ಲವೋ ಅಂತ ಈ 80 ವರ್ಷದ ಅಜ್ಜ ಕೋರ್ಟ್ ಮುಂದೆ ಹೇಳಿಕೆ ನೀಡಬೇಕಾಗಿದೆ.

ಸಂಪಾದಕರ ಸದ್ಯಶೋಧನೆ

ವಿದೇಶಾಂಗ ಖಾತೆಯ ಆರಂಭಿಕ ದಿನಗಳು

ಸ್ವತಂತ್ರ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಮುಂದೆ ಆರಂಭದಲ್ಲಿ ಅಸಂಖ್ಯ ಸವಾಲುಗಳಿದ್ದವು. ಯುದ್ಧ, ಕ್ಷಾಮ ಮತ್ತು ಕೋಮು ಕಲಹದ ಬೇಗೆಯಿಂದ ಇಡೀ ದೇಶ ತತ್ತರಿಸಿತ್ತು. ಯಾವ ಕ್ಷೇತ್ರದಲ್ಲೂ ಚೇತೋಹಾರಿ, ಸಮಾಧಾನಕಾರಿ ಚಿತ್ರಣ ಇರಲಿಲ್ಲ. ಮೂಲ ಸೌಕರ್ಯವನ್ನು ಒದಗಿಸುವುದೇ ತಲೆನೋವಾಗಿತ್ತು. ಯಾವ ಕೆಲಸವನ್ನು ಎಲ್ಲಿಂದ ಆರಂಭಿಸುವುದು? ಎಲ್ಲಿ ನೋಡಿದರೂ ಬ್ರಿಟಿಷ್ ಆಡಳಿತದ ಪಳೆಯುಳಿಕೆಗಳು ಎದ್ದು ಕಾಣುತ್ತಿದ್ದವು. ಹೊಸ ದೇಶವನ್ನು ಎಲ್ಲಿಂದ, ಹೇಗೆ, ಯಾವ ಶೈಲಿಯಲ್ಲಿ ರೂಪಿಸಬೇಕು, ನಿರ್ಮಿಸಬೇಕು ಎಂಬ ಬೃಹತ್ ಸವಾಲು ನೆಹರು ಮತ್ತು ಅವರ ತಂಡದ ಮುಂದಿತ್ತು. ಆಡಳಿತ ಯಂತ್ರವನ್ನು ರಚಿಸದೇ, ಅದಕ್ಕೊಂದು ಸ್ಪಷ್ಟ ಸ್ವರೂಪ-ನಿರ್ದೇಶನ ಕೊಡದೇ ಮುಂದಡಿಯಿಡುವುದು ಅಸಾಧ್ಯ ಎಂಬುದು ಅವರಿಗೆ ಗೊತ್ತಾಯಿತು. ಹೀಗಾಗಿ ನೆಹರು ಭಾರತೀಯ ಆಡಳಿತ ಸೇವೆ, ಅದರಲ್ಲೂ ವಿಶೇಷವಾಗಿ ಭಾರತೀಯ ವಿದೇಶಾಂಗ ಸೇವೆಗೆ ಕಾಯಕಲ್ಪ ನೀಡಲು ನಿರ್ಧರಿಸಿದರು. ವಿದೇಶಾಂಗ ವ್ಯವಹಾರ ಖಾತೆಗೆ ಯಾವ ಹೆಸರಿಡಬೇಕು ಎಂಬ ಬಗ್ಗೆ ಬಹಳ ಚರ್ಚೆಯಾಯಿತು. ಹರಿವಂಶ ರಾಯ್ ಬಚ್ಚನ್ 'ವಿದೇಶ ಮಂತ್ರಾಲಯ' ಎಂದು ಸೂಚಿಸಿದರು. ಇಂಥ ಸಣ್ಣ ಸಣ್ಣ ಸಂಗತಿಗಳು ಆಗ ಚರ್ಚಿತ ವಿಷಯಗಳಾಗಿದ್ದವು ಎಂಬುದನ್ನು ಈಗ ಊಹಿಸುವುದೂ ಕಷ್ಟ. ಬಹಳ ವರ್ಷಗಳ ಕಾಲ ಮಹಮದ್ ಅಲಿ ಜಿನ್ನಾ ಅವರ ಆಪ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಮಿರ್ಜಾ ರಶೀದ್ ಅಲಿ ಬೇಗ್ ಪ್ರಧಾನ ಶಿಷ್ಟಾಚಾರ ಅಧಿಕಾರಿಯಾಗಿ ಹಾಕಿಕೊಟ್ಟ ನಿಯಮಗಳು ಸೌತ್ ಬ್ಲಾಕ್‌ನಲ್ಲಿ ಈಗಲೂ ಕರಾರುವಾಕ್ಕಾಗಿ ಪಾಲನೆಯಾಗುತ್ತಿವೆ. ಮೀರಾ ಇಶಾರ್ದಸ್ ಮಲಿಕ್ ಅವರನ್ನು ನೆಹರು ಅವರು ಚೀನಾಕ್ಕೆ ಮೊದಲ ರಾಜತಾಂತ್ರಿಕ ಅಧಿಕಾರಿಯಾಗಿ ಕಳುಹಿಸಿದರು. ಅವರು ಅಲ್ಲಿ ಭಾರತದ ರಾಯಭಾರ ಕಚೇರಿಯನ್ನು ತೆರೆದು ಆ ದೇಶದೊಂದಿಗೆ ಸಂಬಂಧ ಸುಧಾರಣೆಗೆ ಮೊದಲ ಸೋಪಾನ ಹಾಕಿದರು. ನೇತಾಜಿ ಸುಭಾಷ್ಚಂದ್ರ ಬೋಸ್ ಜತೆ ಹಲವು ವರ್ಷಗಳ ಕಾಲ ಕೆಲಸ ಮಾಡಿದ ಸಿರಿಲ್ ಜಾನ್ ಸ್ಟ್ರೇಸಿ, ವಿದೇಶಿ ರಾಷ್ಟ್ರಗಳ ಜತೆ ಭಾರತದ ಸಂಬಂಧ ಹೇಗಿರಬೇಕು ಎಂಬ ಬಗ್ಗೆ ವಿವರವಾದ ಕರಡು ಸಿದ್ಧಪಡಿಸಿದರು. ವಿದೇಶಿ ಬಿಕ್ಕಟ್ಟಿನಿಂದ ಭಾರತೀಯರ ಅತಿದೊಡ್ಡ ಸ್ಥಳಾಂತರಿಸುವಿಕೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಎರಿಕ್ ಗೊನ್ಸಾಲ್ವೆಸ್ ಅವರಿಗೆ ವಹಿಸಲಾಯಿತು. ಕೆ.ನಟವರ ಸಿಂಗ್, ರೋಮೇಶ್ ಭಂಡಾರಿ, ಬ್ರಜೇಶ್ ಮಿಶ್ರ ಸೇರಿದಂತೆ ಐವತ್ತಕ್ಕೂ ಹೆಚ್ಚಿನ ಅಧಿಕಾರಿಗಳಿಗೆ ನೆಹರು ನಿರ್ದಿಷ್ಟ ಹೊಣೆಗಾರಿಕೆಗಳನ್ನು ವಹಿಸಿದರು. 1952ರಲ್ಲಿ ಲ್ಹಾಸಾ ಮಿಷನ್‌ನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಯಿತು. ನೆಹರು ಈ ಎಲ್ಲ ಕಾರ್ಯಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. 1948 ರಿಂದಲೇ ಕೇಂದ್ರ ಸರಕಾರ ಭಾರತೀಯ ವಿದೇಶಾಂಗ ಸೇವೆಗಾಗಿ ತರುಣ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಆರಂಭಿಸಿತು. ಐಎಎಸ್ ಅಧಿಕಾರಿಗಳು ಶ್ರೇಯಾಂಕದಲ್ಲಿ ಉನ್ನತ ದರ್ಜೆಯನ್ನು ಪಡೆದರೂ, ಭಾರತೀಯ ವಿದೇಶಾಂಗ ಸೇವೆಯ ಘನತೆಯನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳಲಾಯಿತು. ಯೂರೋಪಿನ ಹಲವು ದೇಶಗಳಲ್ಲಿ 'ದಿ ಹಿಂದೂ' ಪತ್ರಿಕೆಯ ವರದಿಗಾರರಾಗಿ ಕೆಲಸ ನಿರ್ವಹಿಸುತ್ತಿದ್ದ ನಾನು ನಂಬಿಯಾರ್ ಎಂದೇ ಜನಪ್ರಿಯರಾಗಿದ್ದ ಎ.ಸಿ.ಎನ್.ನಂಬಿಯಾರ್ ಅವರ ಜಾಗತಿಕ ವಿದ್ಯಮಾನಗಳ ಆಸಕ್ತಿ ಮತ್ತು ತಿಳಿವಳಿಕೆಯನ್ನು ಗಮನಿಸಿದ ನೆಹರು, ಅವರನ್ನು ವಿದೇಶಾಂಗ ಸೇವೆಗೆ ನೇಮಿಸಿಕೊಂಡರು. ಸ್ವಿಜರಲ್ಯಾಂಡಿನಲ್ಲಿ ಭಾರತ ರಾಯಭಾರ ಕಚೇರಿಯ ಕೌನ್ಸೆಲರ್ ಆಗಿ ನಂಬಿಯಾರ್ ನೇಮಕರಾದರು. ಆದರೆ ನೆಹರು ಅವರ ನಂಬುಗಸ್ಥರಾಗಿದ್ದ ನಂಬಿಯಾರ್, ಯುರೋಪಿಗೆ ಸಂಬಂಧಿಸಿದ ಪ್ರಮುಖ ವಿಷಯಗಳಲ್ಲಿ ಪ್ರಧಾನಿಗೆ ಕಾಲಕಾಲಕ್ಕೆ ಸಲಹೆ ನೀಡುತ್ತಿದ್ದರು. ವಿದೇಶಾಂಗ ವ್ಯವಹಾರಕ್ಕೆ ಸಂಬಂಧಿಸಿದಂತೆ ನೆಹರು ಯಾವ ನಿರ್ಧಾರ ತೆಗೆದುಕೊಂಡರೂ, ಆ ದಿನಗಳಲ್ಲಿ ಅವನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ.

ಸದನಕ್ಕೆ ಬರೋದಕ್ಕಿರುವ ಸಮಸ್ಯೆಯೇನು?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಸುಮಾರು ಆರು ತಿಂಗಳ ಬಳಿಕ ಕರ್ನಾಟಕ ವಿಧಾನಸಭಾ ಕಲಾಪ ಆರಂಭಗೊಂಡಿದೆ. ಲೋಕಸಭಾ ಚುನಾವಣೆಯ ಕಾರಣಕ್ಕೆ ಬಜೆಟ್ ಅಧಿವೇಶನವನ್ನೂ ತರಾತುರಿಯಲ್ಲಿ ನಡೆಸಿದ್ದ ರಾಜಕೀಯ ಪಕ್ಷಗಳು, ಇದೀಗ ಮಳೆಗಾಲದ ಅಧಿವೇಶನಕ್ಕೆ ಸಜ್ಜಾಗಿವೆ. ಬಿಜೆಪಿಗರು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು 'ಅಸ್ತ್ರ'ಗಳಿವೆ ಎನ್ನುತ್ತಿದ್ದರೆ, ಇತ್ತ ಕಾಂಗ್ರೆಸಿಗರು ಪ್ರತಿಪಕ್ಷವನ್ನು ಎದುರಿಸಲು ನಮ್ಮ ಬಳಿಯೂ ಅಸ್ತ್ರಗಳಿವೆ ಎಂದು ಹೇಳುತ್ತಿದ್ದಾರೆ. ಅಶೋಕ್ ನೇತೃತ್ವದ ಬಿಜೆಪಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದೋ ಅಥವಾ ತಾನೇ ಇಕ್ಕಟ್ಟಿಗೆ ಸಿಲುಕುವಂತೆ ಮಾಡಿಕೊಳ್ಳುವುದೋ ಎನ್ನುವುದನ್ನು ಮುಂದಿನ ದಿನಗಳಲ್ಲಿ ತಿಳಿಯಲಿದೆ. ಆದರೆ ಇದಕ್ಕಿಂತ ಮುಖ್ಯವಾಗಿ, ಸ್ಪೀಕರ್ ಯು.ಟಿ. ಖಾದರ್ ಅವರು ವಿಧಾನಸಭಾಧ್ಯಕ್ಷ ಹುದ್ದೆಯೊಂದಿಗೆ 'ಹೆಡ್‌ಮಾಸ್ಟರ್' ಆಗಿರುವುದು ಚರ್ಚೆಯ ವಿಷಯ. ಈ ಹಿಂದೆ ಸದನದಲ್ಲಿ ಶಾಸಕರಿಗೆ ಸರಿಯಾದ ಸಮಯಕ್ಕೆ ಬರುವಂತೆ ಪಾಠ ಮಾಡಿದ, ಸುಖಾಸುಮ್ಮನೆ ನಿಂತು ಮಾತನಾಡುವ ಶಾಸಕರಿಗೆ ಗದರಿದ್ದ ಸ್ಪೀಕರ್ ಇದೀಗ ಶಾಸಕರ 'ಆಗಮನ-ನಿರ್ಗಮನ'ದ ಮೇಲೆ ನಿಗಾ ವಹಿಸಲು ಮುಂದಾಗಿದ್ದಾರೆ.

ಹೌದು, ಸುದೀರ್ಘ ಗ್ಯಾಪ್‌ನ ಬಳಿಕ ಕರೆದಿರುವ ಈ ಅಧಿವೇಶನದ ಆರಂಭಕ್ಕೂ ಮೊದಲು, ವಿಧಾನಸಭೆಯಲ್ಲಿ ಹತ್ತು ಹಲವು ಬದಲಾವಣೆಗಳಾಗಿವೆ. ಪಶ್ಚಿಮ ದ್ವಾರದಲ್ಲಿದ್ದ ಕಬ್ಬಿಣದ ಸಲಾಕೆ ಬದಲು, ರೋಸ್‌ವುಡ್‌ನಲ್ಲಿ ನಿರ್ಮಿಸಿರುವ ಕಮಾನು ಶಾಸಕರನ್ನು ಸ್ವಾಗತಿಸುತ್ತಿದೆ. ವಿಧಾನಸಭೆಯೊಳಗೆ ಗಂಡಭೇರುಂಡದ ಗಡಿಯಾರ, ಶಾಸಕರು ಕೂರುವ ಕುರ್ಚಿಯ ಮುಂಭಾಗದಲ್ಲಿ ಚಿನ್ನದ ಬಣ್ಣದ ಲೇಪನ ಸೇರಿದಂತೆ ಹಲವು ಬದಲಾವಣೆ ತರಲಾಗಿದೆ. ಆದರೆ ಈ ಎಲ್ಲಕ್ಕಿಂತ ಹೆಚ್ಚು ಚರ್ಚೆಗೆ ಗ್ರಾಸವಾಗಿರುವುದು, ಕ್ಯಾಮೆರಾ ಕಣ್ಗಾವಲು. ಅಂದರೆ, ಶಾಸಕರ 'ಆಗಮನ', 'ನಿರ್ಗಮನ'ವನ್ನು ಸೆರೆಹಿಡಿದು, ದಿನಕ್ಕೆ ಎಷ್ಟು ತಾಸು ಶಾಸಕರು ಸದನದಲ್ಲಿದ್ದರು ಎಂದು ತಿಳಿಸುವ ಕೃತಕ ತಂತ್ರಜ್ಞಾನದ ಕ್ಯಾಮೆರಾಗಳ ಅಳವಡಿಸಲಾಗಿದೆ ಈಗ ಅನೇಕರ ಹುಬ್ಬೇರುವಂತೆ ಮಾಡಿದೆ.

ಪ್ರತಿಪಕ್ಷ, ಆಡಳಿತ ಪಕ್ಷದ ಶಾಸಕರು ಆಗಮಿಸುವ ಹಾಗೂ ಸ್ಪೀಕರ್ ಎದುರಿಗೆ ಇರುವ ಬಾಗಿಲಿಗೆ ಈ ಎಐ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇಷ್ಟು ದಿನ ಸದನಕ್ಕೆ ಬರುವ ಮೊದಲು ಶಾಸಕರು ಸಹಿ ಹಾಕಿ ಒಳ ಪ್ರವೇಶಿಸುತ್ತಿದ್ದರು. ಆದರೆ ಇನ್ನುಮುಂದೆ ಕ್ಯಾಮೆರಾ ಮುಂದೆ 'ಪೋಸ್' ಕೊಟ್ಟು ಪ್ರವೇಶಿಸಬೇಕಿದೆ. ಈ ರೀತಿ ಕ್ಯಾಮೆರಾದ ಮುಂದೆ ನಿಂತಾಗ ಶಾಸಕರ ಚೆಕ್‌ಇನ್ ಆಗಲಿದ್ದಾರೆ. ಒಂದು ವೇಳೆ ವಾಪಾಸು ಹೋದರೆ, ಅದೇ ಕ್ಯಾಮೆರಾದಲ್ಲಿ ಶಾಸಕರ ಮುಖ ಸೆರೆಹಿಡಿದು, ಸೈನ್‌ಔಟ್ ಆಗಿರುವ ಬಗ್ಗೆ ಮಾಹಿತಿಯನ್ನು ದಾಖಲಿಸಿಕೊಳ್ಳಲಿದೆ. ಇದಿಷ್ಟೇ ಅಲ್ಲದೇ, ಶಾಸಕರೊಬ್ಬರು ದಿನಕ್ಕೆ ಎಷ್ಟು ಗಂಟೆ ಸದನದಲ್ಲಿ ಕಳೆದಿದ್ದಾರೆ ಎನ್ನುವ ಮಾಹಿತಿಯನ್ನು ದಿನದ ಅಂತ್ಯಕ್ಕೆ ವಿಧಾನಸಭಾ ಕಾರ್ಯದರ್ಶಿಗಳಿಗೆ ರಿಪೋರ್ಟ್ ನೀಡಲಿದೆ ಅಂತೆ!

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಜಾರಿಗೊಳಿಸಿರುವ ಈ ಎಐ ಆಧಾರಿತ ಹಾಜರಾತಿಗೆ ಬಹುತೇಕ ಶಾಸಕರು ಒಪ್ಪಿಕೊಂಡಿದ್ದರೂ, ಒಳಗೊಳಗೆ ಇದ್ಯಾಕೆ ಬೇಕಿತ್ತು ಎಂದು ಮೂಗು ಮುರಿಯುತ್ತಿದ್ದಾರಂತೆ. ಹಾಗೇ ನೋಡಿದರೆ, ಕರ್ನಾಟಕ ವಿಧಾನಸಭಾಧ್ಯಕ್ಷರಾಗಿ ಯು.ಟಿ. ಖಾದರ್ ಆಯ್ಕೆಯಾದ ದಿನದಿಂದ, ಶಾಸಕರ ಹಾಜರಾತಿ, ಸದನದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು, ಕ್ರೀಡೆ ಸೇರಿದಂತೆ ವಿವಿಧ ವಿಷಯಗಳಲ್ಲಿ ಶಾಸಕರನ್ನು ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳಲು ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಸರಿಯಾದ ಸಮಯಕ್ಕೆ ಸದನದೊಳಗೆ ಬರುವ ಶಾಸಕರಿಗೆ 'ಟೀ ಕಪ್' ಬಹುಮಾನವನ್ನು ಘೋಷಿಸಿ, ಪ್ರತಿ ಅಧಿವೇಶನದ ಅಂತಿಮ ದಿನ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಆದರೆ ಶಾಸಕರು ಸರಿಯಾದ ಸಮಯಕ್ಕೆ ಬಂದರೆ ಬಹುಮಾನ ನೀಡುವ ಪದ್ಧತಿಯನ್ನು ಜಾರಿಗೊಳಿಸಿದ್ದು ಏಕೆ ಎಂದರೆ ಅಚ್ಚರಿಯಾದರೆ ತಪ್ಪಾಗುವುದಿಲ್ಲ.

ಸರಿಯಾದ ಸಮಯಕ್ಕೆ ಕಚೇರಿಗೆ ಬರಬೇಕು, ಸರಿಯಾದ ಸಮಯಕ್ಕೆ ಮಕ್ಕಳು ಶಾಲೆಗೆ ಬರಬೇಕು ಎನ್ನುವುದು ಸರಿ. ಆದರೆ ಸರಿಯಾದ ಸಮಯಕ್ಕೆ ಬಂದರೆ 'ಬಹುಮಾನ' ಕೊಡುತ್ತೇವೆ ಎಂದರೆ ಹೇಗಿರುತ್ತದೆ! ಅದೇ ರೀತಿ, ವಿಧಾನಸಭಾ ಕ್ಷೇತ್ರದ ಪ್ರತಿನಿಧಿಯಾಗಿ, ಲಕ್ಷಾಂತರ ಮತದಾರರ ಪ್ರತಿನಿಧಿಯಾಗಿ ವಿಧಾನಸಭೆ ಪ್ರವೇಶಿಸುವ ಶಾಸಕರಿಗೆ ಮಾತ್ರ 'ಬಹುಮಾನ'ವೇಕೆ ಎನ್ನುವುದು ಅನೇಕರ ಪ್ರಶ್ನೆಯಾಗಿದೆ. ಶಾಸಕರಾಗಿ ಆಯ್ಕೆಯಾಗಿರುವ ಶಾಸಕರಿಗೆ ಬಹುದೊಡ್ಡ ಕೆಲಸವೆಂದರೆ, ತನ್ನ ಕ್ಷೇತ್ರದ ಬಗ್ಗೆ ಸದನದಲ್ಲಿ ಧ್ವನಿ ಎತ್ತುವುದು ಹಾಗೂ ಶಾಸನ ರಚನೆಯಲ್ಲಿ ಭಾಗಿಯಾಗುವುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಬಹುತೇಕ ಶಾಸಕರು, ಈ ಎರಡು ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಿಂದೇಟು ಹಾಕುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಕಾರಣಕ್ಕಾಗಿಯೇ ಇದೀಗ ಈ ಎಐ ತಂತ್ರಜ್ಞಾನ, ಬಹುಮಾನದ ಆಸೆ ತೋರಿಸಲಾಗುತ್ತಿದೆ.

ಕಳೆದ ವರ್ಷ ವಿಧಾನಸಭಾ ಚುನಾವಣೆ ಬಳಿಕ ಮೊದಲ ಬಾರಿಗೆ ಅಧಿವೇಶನ ಕರೆದಾಗ ಪ್ರಮಾಣ ವಚನ ಸ್ವೀಕರಿಸುವ ವೇಳೆ ಹೊರತುಪಡಿಸಿ, ಇನ್ನುಳಿದ ಬಹುತೇಕ ಸಮಯದಲ್ಲಿ ಆಡಳಿತ-ಪ್ರತಿಪಕ್ಷ ಸ್ಥಾನಗಳು ಖಾಲಿ ಖಾಲಿಯಾಗಿರುತ್ತಿತ್ತು. ಮೊದಲ ಕಲಾಪದಲ್ಲಿಯೇ, 'ಕೋರಂ' ಇಲ್ಲದೇ ತಾಸುಗಟ್ಟಲೇ ಬೆಲ್ ಹೊಡೆಯಬೇಕಾದ ಅನಿವಾರ್ಯತೆಯಿತ್ತು. ಕೋರಂಗೆ ಬರಲು ಬಹುತೇಕ ಶಾಸಕರು ಆಸಕ್ತಿ ತೋರುತ್ತಿಲ್ಲ ಎನ್ನುವ ಕಾರಣಕ್ಕೆ, ಯು.ಟಿ. ಖಾದರ್ ಅವರು ಸರಿಯಾದ ಸಮಯಕ್ಕೆ ಸದನಕ್ಕೆ ಬರುವ (ಕೋರಂ ಆಗುವ ತನಕ) ಶಾಸಕರಿಗೆ ಟೀ ಕಪ್ ಬಹುಮಾನವಾಗಿ ನೀಡುವುದು ಹಾಗೂ ಸರಿಯಾದ ಸಮಯಕ್ಕೆ ಬಂದ ಶಾಸಕರ ಹೆಸರನ್ನು ಪ್ರಕಟಿಸುವ ನಿಯಮವನ್ನು ಜಾರಿಗೊಳಿಸಿದರು. ವಿಧಾನಸಭಾಧ್ಯಕ್ಷರ ಈ 'ಬಹುಮಾನ'ದ ಕಾರಣಕ್ಕಾಗಿ ಕೆಲ ಶಾಸಕರು ಸರಿಯಾದ ಸಮಯಕ್ಕೆ ಬರಲು ಆಗಮಿಸಿದರು. ಕೆಲ ದಿನಗಳ ಬಳಿಕ ಈ ಬಹುಮಾನಕ್ಕೂ ಕ್ಯಾರೇ ಎನ್ನದ ಸ್ಥಿತಿಗೆ ಬಹುತೇಕ ಶಾಸಕರು ತಲುಪಿದ್ದಾರೆ. ಇನ್ನು ಕೆಲವರು ಸರಿಯಾದಕ್ಕೆ ಸಮಯಕ್ಕೆ ಬಂದು, ಮುಖ ತೋರಿಸಿ ಹೊರನಡೆದರೆ ವಾಪಸು ಮತ್ತೆ ಸದನಕ್ಕೆ 'ಸರಿಯಾದ' ಸಮಯಕ್ಕೆ ಬರುವುದು ಮರುದಿನವೇ!

ಈ ರೀತಿಯ ಶಾಸಕರ ನಿರಾಸಕ್ತಿಯನ್ನು ಗಮನಿಸಿ, ಬರುವುದಷ್ಟೇ ಅಲ್ಲದೇ ಸದನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎನ್ನುವ ಕಾರಣಕ್ಕೆ ನಿರ್ಗಮನದ ಮಾಹಿತಿಯನ್ನು ಕಲೆಹಾಕಲು ಇದೀಗ ವಿಧಾನಸಭಾ ಕಾರ್ಯಾಲಯ ಮುಂದಾಗಿದೆ. ಇದಕ್ಕಾಗಿ ಎಐ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಆದರೆ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಿ, ಕಲಾಪಕ್ಕೆ ಹಾಜರಾಗಬೇಕಿರುವ ಶಾಸಕರಿಗೆ ಇಷ್ಟೆಲ್ಲ ಕಟ್ಟಲೇ ಹಾಕಬೇಕೇ? ಸದನದಲ್ಲಿ ಭಾಗವಹಿಸುವುದೇ ಶಾಸಕರೊಬ್ಬರ ಬಹುದೊಡ್ಡ ಕೆಲಸವಾಗಿದ್ದರೂ, ಅದನ್ನು ಮೀರಿದ 'ಪ್ರಮುಖ' ಕೆಲಸಗಳೇನು ಎನ್ನುವುದಕ್ಕೆ ಉತ್ತರವಿಲ್ಲ. ಈ ರೀತಿ ಕಲಾಪಕ್ಕೆ 'ಚಕ್ಕರ್' ಹೊಡೆಯುವ ಶಾಸಕರು, 'ನಾವು ಕ್ಷೇತ್ರದಲ್ಲಿ ಇರುತ್ತೇವೆ' ಎನ್ನುವ ಸಮರ್ಥನೆಯನ್ನು ನೀಡುತ್ತಾರೆ. ಆದರೆ ಕಲಾಪದ ಸಮಯದಲ್ಲಿ ರಿಯಾಲಿಟಿ ಚೆಕ್ ಮಾಡಿದರೆ, ಬಹುತೇಕ ಶಾಸಕರು ವಿಧಾನಸಭಾ ಕಲಾಪದಲ್ಲಿ ಭಾಗವಹಿಸಲು ಬೆಂಗಳೂರಿಗೆ ಹೋಗುತ್ತೇವೆ ಎಂದು ಹೇಳಿಕೊಂಡೇ ಬೆಂಗಳೂರಿನತ್ತ ಬಂದಿರುತ್ತಾರೆ. ಅಂದರೆ ಕ್ಷೇತ್ರದಲ್ಲಿಯೂ ಇರದೇ, ಬೆಂಗಳೂರಿನಲ್ಲಿ ವಿಧಾನಸಭೆಯಲ್ಲಿ ಭಾಗವಹಿಸದೇ ಎಲ್ಲಿಗೆ ಹೋಗುತ್ತಾರೆ ಎನ್ನುವುದು ಯಕ್ಷಪ್ರಶ್ನೆ.

ಕ್ಷೇತ್ರದಿಂದ ವಿಧಾನಸಭೆಗೆ ಆಗಮಿಸುವ ಶಾಸಕರೇನು ಸುಮ್ಮನೆ ಬರುವುದಿಲ್ಲ. ದಿನ ಕಲಾಪದಲ್ಲಿ ಭಾಗಿಯಾದರೆ, ಇಂತಿಷ್ಟು ಸಾವಿರ ರುಪಾಯಿ ದಿನಭತ್ಯೆ ನೀಡಲಾಗುತ್ತದೆ. ಇನ್ನು ಯಾವುದೇ ಶಾಸಕ ರಜೆ ಹಾಕಬೇಕು ಎಂದರೂ ನಿರ್ದಿಷ್ಟ ನಿಯಮಗಳಿವೆ. ಒಂದು ವೇಳೆ ಸ್ಪೀಕರ್ ಗಮನಕ್ಕೆ ತಾರದೇ ಚಕ್ಕರ್ ಹೊಡೆದರೆ, ದಿನಭತ್ಯೆಯನ್ನು ಕಟ್ ಮಾಡಲು ಅವಕಾಶವಿದೆ. ಆದರೆ ಈ ರೀತಿ ವೇತನವನ್ನು ಕಡಿತಗೊಳಿಸಿರುವ ಉದಾಹರಣೆ ಈವರೆಗೆ ಇಲ್ಲ ಎನ್ನುವುದು ಬೇರೆ ಮಾತು. ವರ್ಷದಲ್ಲಿ ಕಲಾಪ ನಡೆಯುವುದೇ 45ರಿಂದ 50 ದಿನ. ಇದರಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎನ್ನುವಷ್ಟು 'ಬ್ಯುಸಿ'ಯಾಗಿದ್ದರೆ, ಶಾಸಕರಾಗಬೇಕು ಎಂದು ಬಯಸುವುದಾದರೂ ಏಕೆ?

ಇದೆಲ್ಲ ಬಿಡಿ, ಶಾಸಕಾಂಗ ವ್ಯವಸ್ಥೆ ಇರುವುದೇ ಚರ್ಚೆ ನಡೆಸುವ ಉದ್ದೇಶದಿಂದ. ಯಾವುದೇ ವಿಧೇಯಕಗಳು ಪಾಸಾಗಬೇಕೆಂದರೂ, ಆ ವಿಧೇಯಕಗಳ ಬಗ್ಗೆ ಪರವಿರೋಧ ಚರ್ಚೆಗಳು ನಡೆದು, ಸಾಧಕ-ಬಾಧಕದ ಬಗ್ಗೆ ಶಾಸಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು. ಬಿಲ್‌ಗಳ ಮೇಲಿನ ಚರ್ಚೆಗಳಿಗೆ ಅತಿಹೆಚ್ಚು ಸಮಯ ನೀಡಬೇಕು ಎನ್ನುವುದು ಕಲಾಪದಲ್ಲಿರುವ ಅಲಿಖಿತ ನಿಯಮ. ಆದರೆ ಇತ್ತೀಚಿನ ದಿನಗಳಲ್ಲಿ ಬಿಲ್ ಮೇಲಿನ ಚರ್ಚೆಗೆ ಅವಕಾಶ ನೀಡುವುದಕ್ಕೆ ಸ್ಪೀಕರ್ ತಯಾರಿದ್ದರೂ, ಶಾಸಕರು ತಯಾರಿರುವುದಿಲ್ಲ. ಅನೇಕ ಬಿಲ್‌ಗಳು ಪಾಸಾಗುವಾಗ ಕನಿಷ್ಠ 'ಕೋರಂ' ಇಲ್ಲದೇ ಪಾಸಾಗುತ್ತಿವೆ. ಆಡಳಿತ ಪಕ್ಷದಲ್ಲಿ 'ಹೌದೂ' ಎನ್ನುವುದಕ್ಕೂ ಜನರಿಲ್ಲದ ಸ್ಥಿತಿಯನ್ನು ಕಳೆದ ಕೆಲ ವರ್ಷಗಳಲ್ಲಿ ನೋಡಿದ್ದೇವೆ.

ಶಾಸಕರ ಕೊರತೆಯೇನು ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಶುರುವಾಗಿರುವುದಿಲ್ಲ. ಕಳೆದೊಂದು ದಶಕದಿಂದ ನಡೆದಿರುವ ಕಲಾಪವನ್ನು ಗಮನಿಸಿದರೆ, ಈ ಸಮಸ್ಯೆ ಯಾವ ಮಟ್ಟಿಗೆ ತಳವೂರಿದೆ ಎನ್ನುವುದು ತಿಳಿಯುತ್ತದೆ. ಅನೇಕ ಶಾಸಕರು ಎರಡು ವಾರ ನಡೆಯುವ ಅಧಿವೇಶನದಲ್ಲಿ ಒಂದು ದಿನ ತಲೆಹಾಕಿ ಹೊರನಡೆದರೆ, ಬರುವುದು ಮುಂದಿನ ಅಧಿವೇಶನಕ್ಕೆ. ಕೇವಲ ಶಾಸಕರಷ್ಟೇ ಅಲ್ಲ, ಕೆಲವೊಂದಷ್ಟು ಸಚಿವರಿಗೂ ಈ ಛಾಳಿಯಿದೆ. ಈ ತಿತಿ ಸದನಕ್ಕೆ ಚಕ್ಕರ್ ಹಾಕುವ ಶಾಸಕರಿಗೆ ಪಕ್ಷದ ಭೇದವಿಲ್ಲ, ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಮೂರು ಪಕ್ಷದಲ್ಲಿಯೂ ಈ ವಿಷಯದಲ್ಲಿ ಸಮಾನಮನಸ್ಕರಿದ್ದಾರೆ ಎಂದರೆ ತಪ್ಪಾಗುವುದಿಲ್ಲ.

ಅಷ್ಟಕ್ಕೂ ಶಾಸಕರು ಈ ರೀತಿ ಉದಾಸೀನತೆ ತೋರುತ್ತಿರುವುದು ಕಾರಣವೇನೆಂದು ತಿಳಿದುಕೊಳ್ಳುವ ಪ್ರಯತ್ನವನ್ನು ಯಾವ ಪಕ್ಷದ ನಾಯಕರೂ ಮಾಡುತ್ತಿಲ್ಲ. ಅಧಿವೇಶನಗಳು ಆರಂಭವಾಗುತ್ತಿದ್ದಂತೆ, ಶಾಸಕಾಂಗ ಪಕ್ಷದ ಸಭೆಯನ್ನು ಕರೆಯುವ ನಾಯಕರು, ಎಲ್ಲರೂ ಕಡ್ಡಾಯವಾಗಿ ಹಾಜರಿರಬೇಕು ಎನ್ನುತ್ತಾರೆ ಹೊರತು, ಬಾರದಿದ್ದರೆ ಏನು ಎನ್ನುವ ಬಗ್ಗೆ ಮಾತಾಡುವುದಿಲ್ಲ. ಇನ್ನು ಜನಬಲಕ್ಕಿಂತ ಹೆಚ್ಚಾಗಿ ಹಣ ಬಲದ ಮೇಲೆ ಅಧಿಕಾರಕ್ಕೆ ಬರುವವರಿಗೆ, ಈ ಶಾಸಕ ಸ್ಥಾನ ಎನ್ನುವುದು 'ಶೀಲ್ಡ್' ರೀತಿ ಇರುತ್ತದೆ ಹೊರತು, ಜನ ಸೇವೆಯ ತುಡಿತವಿರುವುದಿಲ್ಲ. 'ವಿಧಾನಸಭೆಗೆ ಬಂದರೆ ಎಲ್ಲ ಸಚಿವರು ಒಟ್ಟಿಗೆ ಸಿಗುತ್ತಾರೆ. ಯಾವೆಲ್ಲ ಕೆಲಸಗಳಿಗೆ ಸಹಿ ಹಾಕಿಸಿಕೊಳ್ಳುವುದು ಬಾಕಿಯಿದೆಯೋ ಆ ಎಲ್ಲ ಕೆಲಸಗಳನ್ನು ಮಾಡಿಕೊಂಡು ಹೋದರಾಯಿತು' ಎನ್ನುವ ಮನಸ್ಥಿತಿಯಲ್ಲಿ ಅನೇಕರಿದ್ದಾರೆ.

ಶಾಸನಗಳನ್ನು ರಚಿಸುವುದೇ ಶಾಸಕಾಂಗ ಪ್ರಮುಖ ಆಶಯವಾಗಿದ್ದರೂ ಬಹುತೇಕ ಶಾಸಕರು ಈ ಕೆಲಸವನ್ನು ಹೊರತುಪಡಿಸಿ, ಇನ್ನುಳಿದ ಕಾರ್ಯದಲ್ಲಿಯೇ ತಲೆಕೆಡಿಸಿಕೊಂಡಿರುತ್ತಾರೆ. ವಿಧಾನಸಭಾ ಕಲಾಪಗಳು ನಡೆಯುವಾಗ ಶಾಸಕರು ಸಕ್ರಿಯವಾಗಿ ಭಾಗವಹಿಸಲಿ ಎನ್ನುವ ಕಾರಣಕ್ಕೆ ವಿಧಾನಸಭಾಧ್ಯಕ್ಷರು ಹೊಸ ಹೊಸ ಪ್ರಯತ್ನಕ್ಕೆ ಕೈಹಾಕುತ್ತಿದ್ದು, ಇನ್ನಾದರೂ ಶಾಸಕರು ಸರಿಯಾದ ರೀತಿಯಲ್ಲಿ ಸದನದಲ್ಲಿ ಭಾಗವಹಿಸಲಿ. ವಿಧೇಯಕಗಳ ಚರ್ಚೆಯಲ್ಲಿ ಭಾಗವಹಿಸಲಿ. ಈ ಎಲ್ಲ ಕ್ರಮದ ಹೊರತಾಗಿಯೂ ಶಾಸಕರು ಭಾಗವಹಿಸುವುದಿಲ್ಲ ಎನ್ನುವ ಹಠಕ್ಕೆ ಬಿದ್ದಂತೆ ಓಡಾಡಿಕೊಂಡಿದ್ದರೂ, ಮುಂದಿನ ಚುನಾವಣೆಯಲ್ಲಿ ಆಯಾ ಕ್ಷೇತ್ರದ ಜನರೇ ಏನು ಮಾಡಬೇಕೆಂಬ ತೀರ್ಮಾನ ಮಾಡುವುದು ಅನಿವಾರ್ಯ.

ಶರಿಯತ್ ಸವಾಲು ಮೀರಿದ ಕೋರ್ಟ್ ತೀರ್ಪು

ಅಭಿಮತ

ಡಾ.ಸುಧಾಕರ ಹೊಸಳ್ಳಿ
vveditoped@gmail.com

ಈಚೆಗೆ ಸರ್ವೋಚ್ಚ ನ್ಯಾಯಾಲಯವೂ ಮುಸ್ಲಿಂ ಮಹಿಳೆಯರಿಗೂ ವಿಚ್ಛೇದಿತ ಪತಿಯಿಂದ ಜೀವನಾಂಶ ಪಡೆಯುವ ಹಕ್ಕು ಇದೆ ಎಂಬ ಮಹತ್ವದ ತೀರ್ಪು ನೀಡಿತು. ಈ ತೀರ್ಪು ಶರಿಯತ್ ಕಾನೂನಿನಿಂದ ಸಂವಿಧಾನಕ್ಕೆ ಇದ್ದ ಸವಾಲಿನ ಒಂದು ಭಾಗವನ್ನು ಹೊಡೆದು ಉರುಳಿಸಿದೆಯೇ ಎಂಬ ಚರ್ಚೆಯನ್ನು ಹುಟ್ಟು ಹಾಕಿದೆ. ಒಟ್ಟು ಭಾರತ, ಸಂವಿಧಾನದ ಅಡಿಯಲ್ಲಿ ತಮ್ಮ ಅಸ್ತಿತ್ವವನ್ನು ಹಾಗೂ ಆಚರಣೆಯನ್ನು ಕಂಡುಕೊಂಡಿದ್ದರೆ, ಮುಸ್ಲಿಮರು ಮಾತ್ರ ನಮಗೆ ಸಂವಿಧಾನಕ್ಕಿಂತ ಶರಿಯತ್ ಕಾನೂನು ಪ್ರಧಾನವಾದದ್ದು ಎಂದು ಸಂವಿಧಾನಕ್ಕೆ ಸವಾಲು ಎಸೆಯುತ್ತಾ ಬಂದಿರುವುದು ಭಾರತದಲ್ಲಿ ನಡಾವಳಿಯಾಗಿ ಮಾರ್ಪಟ್ಟಿದೆ.

ಮೊನ್ನೆ ಪಶ್ಚಿಮ ಬಂಗಾಳದ ಮುಸ್ಲಿಂ ಮೇಯರ್ ಒಬ್ಬರು ಮುಸ್ಲಿಮರಲ್ಲದ ಎಲ್ಲರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಿ, ಅವರು ಇಸ್ಲಾಂನಲ್ಲಿ ಹುಟ್ಟದೇ ಇರುವುದು ದುರಾದೃಷ್ಟ, ನೀವು ಧೈರ್ಯ ಮತ್ತು ನಿರ್ಭಿಡೆಯಿಂದ ಮತಾಂತರ ಕಾರ್ಯದಲ್ಲಿ ಮುನ್ನುಗ್ಗಿ ಎಂದು, ಸಂವಿಧಾನಬದ್ಧವಾಗಿ ಆಯ್ಕೆಯಾದ ಪ್ರತಿನಿಧಿಯೊಬ್ಬರು ಸಾರ್ವಜನಿಕವಾಗಿ ಸಂದೇಶ ಸಾರಿದ್ದಾರೆ, ಇಂತಹದ್ದು ಉದಹರಿಸಬಹುದಾದ ಒಂದು ಘಟನೆಯಷ್ಟೇ.

ಶರಿಯತ್ ಕಾನೂನಿನ ಅನ್ವಯ ಯಾವುದೇ ಮುಸ್ಲಿಂ ಮಹಿಳೆಗೆ ವಿಚ್ಛೇದಿತ ಪತಿಯಿಂದ ಜೀವನಾಂಶ ಪಡೆಯುವ ಅವಕಾಶವೇ ಇಲ್ಲವೆಂದು ಮುಸ್ಲಿಂ ಧರ್ಮ ಗುರುಗಳು ಪ್ರತಿಪಾದಿಸುತ್ತಲೇ ಬಂದಿದ್ದಾರೆ, ಈ ಸಂಬಂಧ ರಾಜೀವ್ ಗಾಂಧಿ ಅವರ ಕಾಲಘಟ್ಟದಲ್ಲಿ ದಂಡ ಸಂಹಿತೆ 125ಕ್ಕೆ ತಿದ್ದುಪಡಿಯ ಮೂಲಕ ವಿನಾಯಿತಿಯನ್ನು ನೀಡಲಾಗಿತ್ತು. ಅದೇ ರೀತಿ ಮುಸ್ಲಿಂ ಮಹಿಳೆಯರಿಗೆ ವಿನಾಕಾರಣ ತಲಾಕ್ ನೀಡುವ ಹಾಗೂ ಅದರ ವಿರುದ್ಧ ಮುಸ್ಲಿಂ ಮಹಿಳೆಯರು ಯಾವುದೇ ಹಕ್ಕು ಚಲಾಯಿಸಿದಂತೆ ಶರಿಯತ್ ಕಾನೂನು ನಿಯಮ ಹೊಂದಿದ್ದು, ಸ್ವತಂತ್ರ ಭಾರತದಲ್ಲಿ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಂವಿಧಾನಕ್ಕೆ ಎದುರಾಗಿದ್ದ ಬಹುದೊಡ್ಡ ಸವಾಲೇ ಆಗಿತ್ತು.

ಹಿಂದಿನ ಕೇಂದ್ರ ಸರಕಾರ 2019 ಜುಲೈ 30 ರಂದು ತಲಾಕ್ ಆಚರಣೆಯನ್ನು ಪಾರ್ಲಿಮೆಂಟ್‌ನಲ್ಲಿ ಸಾಂವಿಧಾನಿಕ ಮಾರ್ಗದಲ್ಲಿ ರದ್ದು ಪಡಿಸಿತ್ತು, ಇಂತಹ ಆದೇಶದ ವಿರುದ್ಧವೂ ನ್ಯಾಯಾಲಯದ ಮೆಟ್ಟಿಲೇರಿದ್ದ ಕೆಲವರಿಗೆ, ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರಕಾರದ ಆದೇಶವನ್ನು ಮಾನ್ಯ ಮಾಡುವ ಮೂಲಕ ಛೀಮಾರಿ ಹಾಕಿದ್ದು ಐತಿಹಾಸಿಕ ಘಟನೆ. ಇದೇ ಆದೇಶದ ಸಂದರ್ಭ ಯಾವುದೇ ವೈಯಕ್ತಿಕ ಕಾನೂನುಗಳು ಸಂವಿಧಾನದ ಮೂಲ ನಿಯಮಗಳಿಗೆ ವಿರುದ್ಧವಾಗಿರಲು ಸಾಧ್ಯವೇ ಇಲ್ಲ ಎಂಬ ಕಟಿಬದ್ಧ ಆದೇಶವನ್ನು ನೀಡಿತ್ತು.

ಮುಸ್ಲಿಮರು ಸಂವಿಧಾನಕ್ಕೆ ಎದುರು ನಿಲ್ಲಲು ಶರಿಯತ್ ಕಾನೂನು ಪ್ರತಿಪಾದಿಸುವ ಸಾಮಾಜಿಕ ಕೆಡುಕುಗಳೇ ಕಾರಣವೆಂದು ಸ್ವತಃ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಲಿಖಿತವಾಗಿ ಅಭಿಪ್ರಾಯ ದಾಖಲಿಸಿದ್ದರು. ಅವರ ಬದುಕು ಬರಹಗಳು ಮತ್ತು ಭಾಷಣಗಳು ಸಂಪುಟ ಆರರ ಪುಟ ಸಂಖ್ಯೆ 587 ರಲ್ಲಿ ಕಾಣುವ ದಾಖಲು ಮುಸ್ಲಿಮರು ಹಿಂದುಗಳು ಒಳಗೊಂಡಿರುವ ಎಲ್ಲ ಸಾಮಾಜಿಕ ಕೆಡುಕುಗಳನ್ನು ಒಳಗೊಂಡಿರುವುದರ ಜತೆಗೆ ಮತ್ತಷ್ಟು ಸಾಮಾಜಿಕ ಕೆಡುಕುಗಳನ್ನು ತಮ್ಮದಾಗಿಸಿಕೊಂಡಿದ್ದಾರೆ, ಅಂತವುಗಳಲ್ಲಿ ಒಂದು ಉದಾಹರಣೆ ಪರ್ದಾ ಪದ್ಧತಿ.

ಪರ್ದಾ ಪದ್ಧತಿಯ ಅನುಸಾರ ಮುಸ್ಲಿಂ ಮಹಿಳೆಯರು ಮನೆಯ ಮುಂದಣ ಕೊಠಡಿಗಳಿಗೆ, ಮೊಗಸಾಲೆಗಳಿಗೆ, ತೋಟಗಳಿಗೆ ತಲೆ ಹಾಕುವಂತಿಲ್ಲ, ಅವರ ಓಡಾಟ ಏನಿದ್ದರೂ ಮನೆಯ ಹಿಂಭಾಗಕಷ್ಟೇ ಸೀಮಿತ, ದೊಡ್ಡವರಿಂದ ಚಿಕ್ಕವರಾಗಿದಿಯಾಗಿ ಮನೆ ಹೆಂಗಸರೆಲ್ಲ ಹಿಂಭಾಗದ ಒಂದೇ ಕೊಠಡಿಯಲ್ಲಿ ವಾಸಿಸಬೇಕು, ಇವರ ಎದುರಿನಲ್ಲಿ ಪುರುಷ ವರ್ಗಕ್ಕೆ ಸೇರಿದ ಯಾವುದೇ ಸೇವಕ ಸುಳಿಯುವಂತಿಲ್ಲ, ತನ್ನ ಗಂಡು ಮಕ್ಕಳನ್ನು, ಅಣ್ಣ ತಮ್ಮಂದಿರನ್ನು, ತಂದೆ, ಚಿಕ್ಕಪ್ಪಂದಿರು ಹಾಗೂ ಗಂಡನನ್ನು ಮಾತ್ರ ನೋಡಲು ಮುಸ್ಲಿಂ ಮಹಿಳೆ ಅರ್ಹಳು, ಪ್ರಾರ್ಥನೆ ಮಾಡಲು ಮಹಿಳೆ ಮಸೀದಿಗೆ ಹೋಗುವಂತಿಲ್ಲ, ಮುಸ್ಲಿಂ ಮಹಿಳೆಯು ಬುರ್ಖಾ ಧರಿಸಿ ರಸ್ತೆಯಲ್ಲಿ ನಡೆಯುವುದನ್ನು ಯಾವುದೇ ವ್ಯಕ್ತಿ ಭಾರತದಲ್ಲಿ ನೋಡಬಹುದಾದ ಭೀಕರ ದೃಶ್ಯಗಳೊಂದು ಎಂದು ದಾಖಲಿಸುತ್ತಾರೆ.

ಇಂತಹ ಆಚರಣೆಯಿಂದ ಮುಸ್ಲಿಂ ಮಹಿಳೆ ಮಾನಸಿಕವಾಗಿ ಕೀಳಿರಿಮೆಯ ಭಾರದಿಂದ ಕುಬ್ಜವಾಗುತ್ತಾಳೆ, ಜ್ಞಾನದ ಕಿರಣ ಅವರ ಪಾಲಿಗೆ ಕತ್ತಲೆಯ ಕಹಿ, ಮನೆಯ ನಾಲ್ಕು ಗೋಡೆಗಳನ್ನು ದಾಟಿ ಹೋಗುವ ಯಾವುದೇ ವಿಷಯದಲ್ಲಿ ಆಶಕ್ತಿ ತಳೆಯದಂತೆ ಅವರಿಗೆ ಬೋಧಿಸಲಾಗುತ್ತದೆ, ಅದರಲ್ಲೂ ಪರ್ದಾಧಾರಿ ಮಹಿಳೆ ಜೀವನದ ಯಾವುದೇ ಹೋರಾಟವನ್ನು ಎದುರಿಸಲಾರದ ಅಸಹಾಯಕಳು, ಹೇಡಿ ಹಾಗೂ ಅಸಮರ್ಥೆ ಎಂಬುದಾಗಿ ತಮ್ಮ ಸಂಶೋಧನಾತ್ಮಕ ದಾಖಲಾತಿಯನ್ನು ಮಂಡಿಸಿದ್ದಾರೆ.

ಅಂಬೇಡ್ಕರರು ತಮ್ಮ ತಳಮಟ್ಟದ ಸಂಶೋಧನೆಯಿಂದ ಆಧಾರ ಬದ್ಧವಾಗಿ ಹೇಗೆ ಶರಿಯತ್ ಕಾನೂನು ಮುಸ್ಲಿಮರನ್ನು ಸಾಮಾಜಿಕ ಸಮಾನತೆಯಿಂದ ಮತ್ತು ಸಂವಿಧಾನದ ನಿಯಮಗಳಿಂದ ದೂರ ಇಡುತ್ತದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ. ಅದೇ ಸಂಪುಟದ ಪುಟ ಸಂಖ್ಯೆ 591ರಲ್ಲಿ ರೆನಾನ್ ಸಂಶೋಧಕನ ಹೇಳಿಕೆಯನ್ನು ಉಲ್ಲೇಖ ಮಾಡಿ, 'ವಿಜ್ಞಾನ ತನ್ನ ವೈರಿ ಎಂಬ ಇಸ್ಲಾಂನ ಭಾವನೆ ಅಚಲವಾದದ್ದು, ಇದು ಹೀಗೆ ಅಚಲವಾಗಿ ಉಳಿದದ್ದು ಅಪಾಯಕರ, ಕೊನೆಯವರೆಗೂ ಇಸ್ಲಾಂ ತನ್ನ ಈ ಭಾವನೆಗೆ ಬದ್ಧವಾಗಿ ಉಳಿದಿದ್ದು ದುರಾದೃಷ್ಟಕರ, ಇದು ವಿಜ್ಞಾನಗಳನ್ನು ಘಾತಿಸಲು ಹೋಗಿ ತನ್ನನ್ನು ತಾನೇ ತಿಳಿದುಕೊಂಡಿದೆ, ಅಲ್ಲದೆ ವಿಶ್ವದಾದ್ಯಂತ ಸಂಪೂರ್ಣ ಕೀಳಿರಿಮೆಯ ಅವಹೇಳನಕ್ಕೆ ತುತ್ತಾಗಿದೆ.' ಎಂದು ಆರೋಪಿಸಿದ್ದಾರೆ.

ಪುಟ ಸಂಖ್ಯೆ 597ರಲ್ಲಿ ಅಂಬೇಡ್ಕರರು ದಾಖಲಿಸುವ ಮುಸ್ಲಿಂ ಮಹಿಳೆಯರ ಸಾಮಾಜಿಕ ಆಕ್ರಂದನ ವರ್ಣಿಸಲು ಅಸಾಧ್ಯವಾದದ್ದು, ಅವರದೇ ಮಾತುಗಳಲ್ಲಿ, 1939ರ ಮುಸ್ಲಿಂ ವಿವಾಹ ರದ್ದತಿ ಅಧಿನಿಯಮದ ಪ್ರಕಾರ ವಿವಾಹಿತ ಮುಸ್ಲಿಂ ಮಹಿಳೆಯ ದಾಂಪತ್ಯ ಅವಳು ಇನ್ನೊಂದು ಧರ್ಮಕ್ಕೆ ಮತಾಂತರಗೊಳ್ಳುವುದರಿಂದ ಕಡೆದು ಹೋಗುವುದಿಲ್ಲ, ಇದರಿಂದ ಅವಳಿಗೆ ದೊರೆಯಬಹುದಾದದ್ದು, ಕೇವಲ ವಿವಾಹ ವಿಚ್ಛೇದನ ಹಕ್ಕು ಮಾತ್ರ, ಕಲಂ ಎರಡರ ಮತಾಂತರ ಅಥವಾ ಧರ್ಮ ಪರಿತ್ಯಾಗವನ್ನು ವಿವಾಹ ವಿಚ್ಛೇದನಕ್ಕೆ ಕಾರಣವಾಗಿ ಪರಿಗಣಿಸದಿರುವುದೇ ಇದರ ಹಿಂದಿರುವ ಒಳಸಂಚಿನ ಮರ್ಮ, ಅಂದರೆ, ಈ ಕಾನೂನಿನ ಪ್ರಕಾರ ಒಬ್ಬ ವಿವಾಹಿತ ಮುಸ್ಲಿಂ ಮಹಿಳೆ ತನ್ನ ಗಂಡನ ಧಾರ್ಮಿಕ ನಂಬಿಕೆ, ಅವಳಿಗೆ ಎಷ್ಟೇ ಹೇಸಿಗೆ ಹುಟ್ಟಿಸಿದರೂ, ಅವನೊಡನೆಯೇ ಬದುಕಬೇಕು ಮತ್ತು ತನ್ನ ಮನಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ಅವಳಿಗೆ ಇರುವುದಿಲ್ಲ ಎಂಬಂತೆ ನೋವಿನ ನುಡಿಗಳಾಡಿರುತ್ತಾರೆ.

ಹೀಗೆ ಶರಿಯತ್ ಕಾನೂನು ಮುಸ್ಲಿಮರು ಸಂವಿಧಾನವನ್ನು ಮೀರುವಂತೆ ಪ್ರೇರೇಪಣೆ ನೀಡುವ ಅನೇಕ ಸಂಗತಿಗಳನ್ನು ತನ್ನೊಳಗೆ ಇಟ್ಟುಕೊಂಡಿದೆ ಎಂಬುದನ್ನು ಅಂಬೇಡ್ಕರರ ಸಂಶೋಧನೆಯಲ್ಲಿ ನೋಡಬಹುದಾಗಿದೆ, ಮಹಿಳಾ ಸಮಾನತೆಯ ಬಗ್ಗೆ ಮಾತನಾಡುವ ಪ್ರತಿಯೊಬ್ಬರಿಗೂ ಅಂಬೇಡ್ಕರರ ಸಂಶೋಧನೆ ಭಗವದ್ಗೀತೆಯಾಗಿ ನಿಲ್ಲಬಹುದು, ಆದರೆ ಢಾಂಬಿಕ ಮಹಿಳಾ ಸಮಾನತೆಯ ಹೋರಾಟಗಾರರು, ಶುದ್ಧತೆ ಮತ್ತು ಆಚರಣೆಯ ಕಾರಣಕ್ಕಾಗಿ ಸ್ವತಃ ಹೆಣ್ಣು ಮಕ್ಕಳೇ ನಿರಾಕರಿಸಿರುವ (ಬಾಲ್ಯದಲ್ಲಿ ಹೆಣ್ಣು ಮಕ್ಕಳು ಹೋಗಬಹುದು) ಅಯ್ಯಪ್ಪ ಸ್ವಾಮಿಯ ದೇವಸ್ಥಾನಕ್ಕೆ ಮಹಿಳಾ ಅಸಮಾನತೆಯ ಬಿರುದುಕೊಟ್ಟು ಹೋರಾಟಕ್ಕೆ ಮುಂದಾಗುತ್ತಾರೆ.

ಹಿಂದೂ ಸಮಾಜದಲ್ಲಿ ಅತಿ ಹೆಚ್ಚು ಪೂಜಿಸಲ್ಪಡುವುದೇ ಹೆಣ್ಣು, ಭೂಮಿಯನ್ನು ತಾಯಿ ಎಂದು ಪೂಜಿಸಲ್ಪಡುವ ಏಕೈಕ ಸಮುದಾಯ ಅಥವಾ ಧರ್ಮ ಅದು ಹಿಂದೂ. ಬುದ್ಧಿಜೀವಿಗಳು ಮತ್ತು ಮಹಿಳಾ ಹೋರಾಟಗಾರರಿಗೆ (ಢಾಂಬಿಕ ಮಹಿಳಾ ಹೋರಾಟಗಾರರಿಗೆ ಮಾತ್ರ) ಅಂಬೇಡ್ಕರರು ಇಷ್ಟು ಕಠಿಣವಾಗಿ ಶರಿಯತ್ತನ್ನು ಮುಸ್ಲಿಂ ಮಹಿಳಾ ಅಸಮಾನತೆಯನ್ನು ವಿಮರ್ಶೆ ಮಾಡಿರುವ ಸಂಗತಿಗಳು ಆಧಾರವಾಗುವುದಿಲ್ಲ. ಅವುಗಳ ವಿರುದ್ಧ ಧ್ವನಿ ಎತ್ತಲು ಭಾರತ ಸಂವಿಧಾನ ಇವರಿಗೆ ನೀಡಿರುವ ಹಕ್ಕುಗಳನ್ನು ಮರೆತುಬಿಡುತ್ತಾರೆ.

ಯಾರು ಶರಿಯತ್ ಪರವಾಗಿ ನಿಂತರೂ, ಢಾಂಬಿಕ ಹೋರಾಟ ಮಾಡಿದರೂ, ಭಾರತ ಸಂವಿಧಾನ ತನ್ನ ವಿರುದ್ಧ ಸೆಟೆದು ನಿಲ್ಲಲು ಅವಕಾಶವನ್ನು ಕಲ್ಪಿಸಿಲ್ಲ, ಸರ್ವೋಚ್ಚ ನ್ಯಾಯಾಲಯಕ್ಕೆ ತನ್ನನ್ನೇ ಪರಾಮರ್ಶೆ ಮಾಡುವ ಅಧಿಕಾರವನ್ನು ಕೊಟ್ಟು, ಇಂತಹ ಎಲ್ಲ ಸಾಮಾಜಿಕ ಕೆಡುಕುಗಳನ್ನು ಅಸಿಂಧು ಗೊಳಿಸುವ ದಕ್ಷತೆ ತುಂಬಿದೆ.

ನ್ಯಾಯಮೂರ್ತಿ ಬಿ ವಿ ನಾಗರತ್ನ, ನ್ಯಾಯಮೂರ್ತಿ ಅಗಸ್ಟೀನ್ ಜಾರ್ಜ್ ದಂಡ ಸಂಹಿತೆ 125 ಅಡಿಯಲ್ಲಿ ಭಾರತದ ಮುಸ್ಲಿಂ ಮಹಿಳೆಯು ಕೂಡ ವಿಚ್ಛೇದಿತ ಪತಿಯಿಂದ ಜೀವನಶಪಡಿಯಲು ಅರ್ಹಳು ಎಂಬ ಏಕರೂಪದ ತೀರ್ಪು ನೀಡಿ, ಶರಿಯತ್ ಕಾನೂನಿಂದ ಸಂವಿಧಾನಕ್ಕೆ ಇದ್ದ ಅಡೆತಡೆಯೊಂದನ್ನು ನಿವಾರಿಸುವುದರ ಜೊತೆಗೆ ಅಂಬೇಡ್ಕರರ ಆಶಯವನ್ನು ಸಮರ್ಥಿಸಿದೆ. ಇಂತಹ ತೀರ್ಪುಗಳು ಕಾಲಿಕವಾಗಿ ಸಂವಿಧಾನದ ಬೇರುಗಳನ್ನು ಗಟ್ಟಿಗೊಳಿಸುವುದರ ಜೊತೆಗೆ ಪ್ರಜಾಪ್ರಭುತ್ವವನ್ನು ಸಮಾನತೆಯ ತತ್ವವನ್ನು ಗಟ್ಟಿಗೊಳಿಸುತ್ತವೆ.

(ಲೇಖಕರು: ಸಂವಿಧಾನ ತಜ್ಞ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಿಯಲ್ ಎಸ್ಟೇಟ್‌ಗೆ ದಾರಿ

ಮುಂದೆ ಬರಲಿರುವ ಉಪ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಉಪಮುಖ್ಯಮಂತ್ರಿ ಡಿ ಕೆ ಶಿವ ಕುಮಾರ್‌ರವರು ಹಿಂದೆ ಬೆಂಗಳೂರು ಗ್ರಾಮಾಂತರ ಪ್ರದೇಶದ ಭಾಗವಾಗಿದ್ದ ರಾಮನಗರ ಜಿಲ್ಲೆಯನ್ನು ಹದಿನೇಳು ವರ್ಷಗಳ ತರುವಾಯ ರಾಜಕೀಯ ಕಾರಣಗಳಿಗಾಗಿ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಪುನರ್ನಾಮಕರಣ ಮಾಡಲು ಹೊರಟಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ.ಉಪಮುಖ್ಯಮಂತ್ರಿಗಳ ಸಮರ್ಥನೆಯನ್ನು ಗಮನಿಸಿದರೆ ಬೆಂಗಳೂರು ನಗರವೂ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳ ಅಭಿವೃದ್ಧಿಗಾಗಿ ಎಂದು ಬಾಯಲ್ಲಿ ಹೇಳುತ್ತಿದ್ದರೂ ಸಹ ರಿಯಲ್ ಎಸ್ಟೇಟ್ ಮಾಫಿಯಾಗಳಿಗೆ ರೆಡ್ ಕಾರ್ಪೆಟ್ ಹಾಸುವ ಉಮೇದು ಇರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಈಗಾಗಲೇ ಬೆಂಗಳೂರು ನಗರ ಅಭಿವೃದ್ಧಿಯ ನಾಗಾಲೋಟದಲ್ಲಿ ತನ್ನ ಮೂಲ ಚಹರೆಯಯನ್ನು ಕಳೆದುಕೊಂಡು ಇಂದು ಕನ್ನಡಿಗರು ಅಲ್ಪಸಂಖ್ಯಾತರಾಗಿ, ಅನ್ಯ ಭಾಷಿಕರ ಮತ್ತು ವಲಸಿಗರ ಸ್ವರ್ಗವಾಗಿದೆ. ಹಿಂದೆ ಅನಂತ ಕುಮಾರ್‌ರವರು ವಿಮಾನಯಾನ ಖಾತೆ ಸಚಿವರಾಗಿದ್ದಾಗ ರಾಮನಗರ ಜಿಲ್ಲೆಗೆ ಮೀಸಲಾಗಿದ್ದ ವಿಮಾನ ನಿಲ್ದಾಣವನ್ನು ಆಂಧ್ರ ಪ್ರದೇಶದ ಗಡಿಯ ದೇವನಹಳ್ಳಿಗೆ ವರ್ಗಾಯಿಸಿದರು. ಅಂದು ಜಾಣ ಕುರುಡರಾಗಿದ್ದ ಡಿ ಕೆ ಶಿವಕುಮಾರ್‌ರವರು ಯಾವುದೇ ವಿರೋಧ ವ್ಯಕ್ತಪಡಿಸಿರಲಿಲ್ಲ. ಆದರೆ ಇಂದು ಅಭಿವೃದ್ಧಿಗೆ ಆಂಧ್ರ ಪ್ರದೇಶ ಮತ್ತು ತಮಿಳುನಾಡನ್ನು ಮಂಚೂಣಿಗೆ ತಂದಿರುವುದನ್ನು ಗಮನಿಸಿದರೆ ಇವರ ಪ್ರಾತಿನಿಧ್ಯ ರಾಜಕೀಯಕ್ಕೇ ಹೊರತು ಯಾವುದೇ ರೀತಿಯ ಅಭಿವೃದ್ಧಿ ಇವರ ಮನಸ್ಸಿನಲ್ಲಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಕಾಂಗ್ರೆಸ್ ಸರಕಾರಕ್ಕೆ ಅಭಿವೃದ್ಧಿಯೇ ಮಾನದಂಡವಾಗಿದ್ದರೆ ಬೆಳೆದಿರುವ ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವ ಬದಲು ರಾಮನಗರದ ಹೆಸರನ್ನು ಹಾಗೆಯೇ ಉಳಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸಿ ಯುವ ಜನರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಿ, ಮಹಾತ್ಮ ಗಾಂಧಿಯವರ ಚಿಂತನೆಗಳನ್ನು ರೂಢಿಸಿಕೊಂಡಿರುವ ಕಾಂಗ್ರೆಸ್ ಇದನ್ನು ಕಾರ್ಯ ರೂಪದಲ್ಲಿ ತೋರಿಸಲಿ. ಮತದಾರರು ಕರ್ನಾಟಕದ ಮೂಲಭೂತ ಸಮಸ್ಯೆಗಳ ನಿವಾರಣೆಗಾಗಿ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತಂದಿದ್ದಾರೆಯೇ ಹೊರತು ದರ್ಪ ತೋರಿಸಲು ಅಲ್ಲ ಎಂಬುದನ್ನು ಮಂತ್ರಿ ಮಾಗಧರು ಮರೆಯದಿರಲಿ.

-ಟಿ. ಉಮಾ ಶಂಕರ್ ಲಕ್ಷ್ಮೀಪುರ ಬೆಂಗಳೂರು

ಆರ್ಥಿಕ ಸೌಲಭ್ಯ ತ್ಯಜಿಸಲಿ

ಕಾಂಗ್ರೆಸ್ ಪಕ್ಷವು ಕರ್ನಾಟಕದಲ್ಲಿ ಈ ಬಾರಿ ಶತಾಯಗತಾಯ ಅಧಿಕಾರಕ್ಕೆ ಬರಲೇ ಬೇಕೆಂದು ಪಂಚ ಗ್ಯಾರಂಟಿಗಳನ್ನು ಘೋಷಣೆ ಮಾಡಿತ್ತು. ಜನರು ಸರಕಾರದ ಬದಲಾವಣೆಗೋ, ಬಿಜೆಪಿ ಮೇಲಿನ ಕೋಪಕ್ಕೋ, ಅಗತ್ಯ ವಸ್ತುಗಳ ಬೆಲೆ ಏರಿಕೆಯ ರೋಷಕ್ಕೋ ಅಥವಾ ಪಂಚಗ್ಯಾರಂಟಿಗಳಿಗೆ ಮನಸೋತೋ ಕಾಂಗ್ರೆಸ್‌ಗೆ ಬಹುಮತ ನೀಡಿ ಸರಕಾರ ರಚಿಸುವ ಅವಕಾಶ ಕೊಟ್ಟರು.

ಚುನಾವಣೆಗೆ ಮುನ್ನ ನೀಡಿದ ವಾಗ್ದಾನವನ್ನು ಮರೆಯದೆ ಕೆಲವೇ ತಿಂಗಳುಗಳಲ್ಲಿ ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದು ಜನರಿಂದ ಭೇಷ್ ಎನಿಸಿಕೊಂಡಿತು. ಆದರೆ, ಈಗ ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದೆ ಪರದಾಡುತ್ತಿರುವುದು ಅಂಗೈಹುಣ್ಣಿನಷ್ಟೇ ಸತ್ಯ. ಅದಕ್ಕೆ ಹಣ ಹೊಂದಿಸುವ ಸಲುವಾಗಿ ಮದ್ಯದ ದರ ಏರಿಕೆ, ಹಾಲಿನ ದರ ಏರಿಕೆ, ರೆವೆನ್ಯೂ ಇಲಾಖೆಯಲ್ಲಿ ಪ್ರತಿಯೊಂದಕ್ಕೂ ದರ ಹೆಚ್ಚಳ, ಇಂಧನಗಳ ದರ ಏರಿಕೆ ಮಾಡಿದ್ದು ಅವು ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎಂಬಂತಾಗಿದೆ. ಇಂತಹ ಶೋಚನೀಯ ಆರ್ಥಿಕ ಪರಿಸ್ಥಿತಿ ಇರುವಾಗ ಕಾಂಗ್ರೆಸ್ ಶಾಸಕರು ಸರಕಾರದಿಂದ ಲಭಿಸುವ ಎಲ್ಲ ಮಾದರಿಯ ಆರ್ಥಿಕ ಸವಲತ್ತುಗಳನ್ನು ತ್ಯಜಿಸಿ ಮಾದರಿ ಆಗಲಿ. ಹೇಗಿದ್ದರೂ ಅನೇಕ ಶಾಸಕರಿಗೆ ಹಣ ಸಂಪಾದನೆಗೆ ಪರ್ಯಾಯ ಉದ್ಯೋಗ ಅಥವಾ ಉದ್ದಿಮೆಗಳು ಇವೆ. ಇವರ ಸರಕಾರದ ಸಂಬಳ ಮತ್ತಿತರ ಆರ್ಥಿಕ ಸವಲತ್ತು ಅನ್ಯ ಆದಾಯ ಪರಿಗಣಿಸಿದರೆ ಆನೆ ಮತ್ತು ಆಡಿನಂತಹ ವ್ಯತ್ಯಾಸ ಬಹುತೇಕರಲ್ಲಿ ಕಾಣುತ್ತದೆ. ಹಾಗಾಗಿ ಅಂತಹವರು ತಮ್ಮ ಆರ್ಥಿಕ ಸವಲತ್ತನ್ನು ನಮ್ರವಾಗಿ ತಿರಸ್ಕರಿಸಿ ಸರಕಾರಕ್ಕೆ ಆರ್ಥಿಕ ಹೊರೆ ಕಡಿಮೆ ಮಾಡಿ ಮಾದರಿ ಆಗಲಿ.

-ಪತ್ತಂಗಿ ಎಸ್ ಮುರಳಿ ಬೆಂಗಳೂರು

ಕೇಂದ್ರಕ್ಕೆ ಬೊಟ್ಟು ಮಾಡುವುದೇಕೆ?

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಬಹುಕೋಟಿ ಹಗರಣದ ತನಿಖೆಯನ್ನು ಎಸ್‌ಐಟಿ ತೀವ್ರಗೊಳಿಸಿದ್ದು, ಇದರ ಜತೆಗೆ ಜಾರಿ ನಿರ್ದೇಶನಾಲಯವೂ ಕೂಡ ಅಖಾಡಕ್ಕೆ ಇಳಿದಿದೆ. ಮಾಜಿ ಸಚಿವ ನಾಗೇಂದ್ರರವರನ್ನು ಸಮರ್ಥಿಸಿಕೊಳ್ಳುತ್ತಿದ್ದ ರಾಜ್ಯ ಕಾಂಗ್ರೆಸ್ ನಾಯಕರುಗಳು ಇದೀಗ ಒಬ್ಬೊಬ್ಬರಾಗಿ ಹಿಂದೆ ಸರಿಯುತ್ತಿದ್ದಾರೆ. ಜಾರಿ ನಿರ್ದೇಶನಾಲಯದ ದಾಳಿಯ ಬಗ್ಗೆ ಬಿಜೆಪಿ ಪಕ್ಷವನ್ನು ಗುರಿಯಾಗಿಸಿಕೊಂಡು ಮಾತನಾಡಲು ಪ್ರಾರಂಭಿಸಿದ್ದಾರೆ. ಏತನ್ಮಧ್ಯೆ ಹಗರಣದಲ್ಲಿ ಭಾಗಿಯಾದವರಿಗೆ ಎಸ್‌ಐಟಿ ಮೂಲಕ ಕ್ಲೀನ್ ಚಿಟ್ ನೀಡುವ ಪ್ರಯತ್ನ ನಡೆದಿದೆಯೆಂದು ವಿಪಕ್ಷ ನಾಯಕ ಆರ್ ಅಶೋಕ್ ಆರೋಪಿಸಿದ್ದಾರೆ. ಇಂತಹ ದಾಳಿಗಳಿಗೆ ನಾವು ಹೆದರುವುದಿಲ್ಲ ಎಂದು ಮುಖ್ಯಮಂತ್ರಿ ಹೇಳಿದರೆ, ಶಾಸಕರ ಮನೆ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ ಬಗ್ಗೆ ಮಾಹಿತಿಯಿಲ್ಲವೆಂದು ಹೇಳುವ ಮೂಲಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಜಾಣ ಕುರುಡು ತೋರಿದ್ದಾರೆ. ದಾಳಿ ನಡೆಸುವುದು ಬಿಜೆಪಿ ಪಕ್ಷದ ಹಳೇ ಚಾಳಿ ಎಂದು ಕಿಡಿಕಾರಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ ಮಾತ್ರ ಇಡಿ, ಸಿಬಿಐ ದಾಳಿಯಲ್ಲಿ ಯಾವುದೇ ಅಶ್ಚರ್ಯವಿಲ್ಲ ಮೋದಿಯವರ ಬಲ ಕುಂಠಿತವಾದ್ದರಿಂದ ದಾಳಿ ನಡೆಸುವಲ್ಲಿ ಸ್ವಲ್ಪ ತಡವಾಯಿತೆಂದು ಹೇಳಿದ್ದಾರೆ. ಯಾವುದೇ ಹಗರಣ ನಡೆದಾಗ ಅದನ್ನು ಬೇಧಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲೆಂದೇ ತನಿಖಾ ಸಂಸ್ಥೆಗಳಿರುವಾಗ ಆರೋಪಿಯನ್ನು ಸಮರ್ಥಿಸಿಕೊಳ್ಳುವುದು, ತನಿಖಾ ಸಂಸ್ಥೆಗಳ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸುವುದು, ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವುದು ಎಷ್ಟರ ಮಟ್ಟಿಗೆ ಸರಿ? ಒಂದು ವೇಳೆ ಹಗರಣದಲ್ಲಿ ಭಾಗಿಯಾಗಿಲ್ಲದಿದ್ದರೆ, ಮುಕ್ತವಾಗಿ ತನಿಖೆ ನಡೆಸಲು ತನಿಖಾ ಸಂಸ್ಥೆಗಳೊಂದಿಗೆ ಸಹಕರಿಸಬಹುದಲ್ಲವೇ?

-ಜಿ.ನಾಗೇಂದ್ರ ಕಾವೂರು ಸಂಡೂರು

ಪಾಲಿಕೆಯ ಹಿಂದಿ ಪ್ರೇಮ

ಕನ್ನಡ ಭಾಷೆಯ ಬಳಕೆ, ಬರಹಗಳು ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಬೆಂಗಳೂರು ಮಹಾ ನಗರ ಪಾಲಿಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಹಿಂದಿ ಭಾಷೆಯನ್ನು ಬಳಸುವ ಸಂಪ್ರದಾಯವನ್ನು ಈಗಾಗಲೇ ಪ್ರಾರಂಭಿಸಿದೆ. ಬೆಂಗಳೂರು ನಗರದಲ್ಲಿ ಬೆಳಿಗ್ಗೆ ಮನೆ ಮನೆಯಿಂದ ಕಸವನ್ನು ಸಂಗ್ರಹಿಸುವ ವಾಹನ ಬಂದಾಗ ಹಿಂದಿಯಲ್ಲಿ ಹಾಡು ಕೇಳುತ್ತದೆ- ಗಾಡಿ ವಾಲಾ ಆಯಾ ಅಂದರೆ ಬರಿಯ ಹಿಂದಿ ಬಲ್ಲ ಜನಗಳು ಕಸವನ್ನು ಕೊಡಬೇಕೇ? ಸಂಬಂದ ಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಬೇಕು. ಬೇರೆ ಭಾಷೆಯನ್ನು ದ್ವೇಷಿಸಬೇಕು ಎಂದಲ್ಲ. ಈ ಕಸದ ವಾಹನ ಬರುವುದು ಸಾರ್ವಜನಿಕ ಪ್ರದೇಶದಲ್ಲಿ, ಹಾಗಿದ್ದಾಗ ಕನ್ನಡದಲ್ಲಿ ಘೋಷಣೆ ಇರಬೇಕಾದದ್ದು ಉಚಿತ. ಎಲ್ಲರಿಗೂ ಕಸದ ವಿಲೇವಾರಿ ಬಗ್ಗೆ ತಿಳಿದಿರುವು ದರಿಂದ, ಪ್ರತ್ಯೇಕವಾಗಿ ಹಿಂದಿಯಲ್ಲಿ ಹೇಳಬೇಕಾಗಿಲ್ಲ. ಹಿಂದಿ ಅಲ್ಲದೆ, ಇನ್ನೂ ಅನೇಕ ಭಾಷೆಯನ್ನು ಮಾತನಾಡುವ ಜನರು ಬೆಂಗ ಳೂರಿನಲ್ಲಿ ಇದ್ದಾರೆ. ಅವರ ಪಾಡೇನು? ಸ್ಥಳೀಯ ಭಾಷೆ ಯಲ್ಲಿ ಸಂದೇಶವನ್ನು ಸಾರಿದರೆ ಅದಕ್ಕೊಂದು ಅರ್ಥವಿದೆ. ಬೆಂಗಳೂರು ಹೊರತುಪಡಿಸಿ ಕರ್ನಾಟಕದ ಬೇರೆ ಎಲ್ಲ ನಗರಗಳಲ್ಲಿ, ಆಯಾ ನಗರ ಪಾಲಿಕೆ ಅಥವಾ ನಗರ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕಸದ ಸಂಗ್ರಹಣೆ ಮಾಡುವ ವಾಹನದಲ್ಲಿ ಕನ್ನಡದ ಬಳಕೆ ಇದೆ.

-ವಿದ್ಯಾ ಶಂಕರ್ ಶರ್ಮ ಬೆಂಗಳೂರು

ಭಟ್ಟರ್ ಸ್ಕಾಚ್

• **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರಗಿ**
ಭಟ್ರೇ, ವಿಚಾರಣೆಗೆ ಹಾಜರಾದ ತಕ್ಷಣ ಎಲ್ಲರೂ ಮಾತು ಮರೆತವರಂತೆ ಮೌನ ತಾಳುತ್ತಾರಲ್ಲ?
- ಇದನ್ನು ಮೊದಲೇ ಮಾಡಿದ್ದಿದ್ದರೆ ವಿಚಾರಣೆಗೆ ಹಾಜರಾಗಬೇಕಾದ ಪ್ರಸಂಗವೇ ಬರುತ್ತಿರಲಿಲ್ಲ!

• **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಹಳೆಯ ಸಿನಿಮಾಗಳಲ್ಲಿ ಕೊನೆಯಲ್ಲಿ ಪೊಲೀಸರು ಬರ್ತಾ ಇದ್ದರು. ಈಗ ಬರುವುದಿಲ್ಲವಲ್ಲ?
- ಮೊದಲೇ ಕೊಟ್ಟಿ ಬರ್ತಾರೆ!

• **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಸದಾ ವಿದೇಶದಲ್ಲಿ ಇರ್ತಾ ಇದ್ದ ನೀವು ಈಗ ಮನೆಯಲ್ಲಿ ಹೇಗೆ ಇದ್ದೀರಾ?
- ಎದೆ ನೋವು ಕಾಣಿಸಿಕೊಳ್ಳಲು ಅದೇ ಕಾರಣ ಇದ್ದಿರಬಹುದು ಅಂತೀಯಾ?!

• **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ನಾನು ಎಷ್ಟೇ ಕೂಗಿದರೂ ಅವಳು ಎದ್ದು ಬರುವುದಿಲ್ಲವಲ್ಲ?
- ಮೂರು ಕೂಗಿಗೆ ಎದ್ದು ಬರಲು ನೀವೇನು ಕುಕ್ಕರ್ರಾ?!

• **ರಾಜು ಭರತ್, ರಾಮನಗರ**
ಭಟ್ರೇ, ರಾಮನಗರದ ಹೆಸರು ಬದಲಿಸಿ ಅಂತಾರಲ್ಲ ಏಕೆ?
- ರಹೀಮ್ ನಗರ ಅಂತಿದ್ದರೆ ಯಾರೂ ಹೆಸರು ಬದಲಾವಣೆಗೆ ಆಗ್ರಹಿಸುತ್ತಿರಲಿಲ್ಲ!

• **ಪಟ್ಟಣಗೆರೆ ಬಾಲು, ಬೆಂಗಳೂರು**
ಭಟ್ರೇ, ಜೈಲಲ್ಲಿ ದರ್ಶನ್‌ಗೆ ಪುಸ್ತಕ ಬೇಕಂತೆ?
- ಜೈಲಲ್ಲಿ ತಲೆದಿಂಬು ಕೊಡೋದಿಲ್ವಾ?!

• **ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ಈಗ ನಿಮ್ಮ ಹೃದಯದಲ್ಲಿ ಜಾಗ ಖಾಲಿ ಆಗಿರಬಹುದಲ್ವಾ?
- ಅದೇನು ಕೆಂಪೇಗೌಡ, ಶಿವರಾಮ ಕಾರಂತ ಬಡಾವಣೆ ಅಂದುಕೊಂಡೆಯಾ?!

• **ಕೆ.ವಿ.ಗೌಡ, ಮದ್ದೂರು**
ಭಟ್ರೇ, ಎದೆನೋವು ಅದನ್ನು ಕದ್ದಾಗ ಮಾತ್ರ ಬರುತ್ತೆ ಅಂತಾರಲ್ಲ?
- ಹಾಗಿದ್ದಿದ್ದರೆ ನನಗೆ ಕಾಲೇಜಿನಲ್ಲಿದ್ದಾಗಲೇ ಎದೆನೋವು ಬರಬೇಕಿತ್ತಲ್ಲ?!

• **ಪಿ.ರಘು, ಹಾಸನ**
ಭಟ್ರೇ, ದರ್ಶನ್ ಇನ್ನೂ ಎರಡು ವರ್ಷ ಹೊರಬರೋಲ್ಲ ಅಂತಾರಲ್ಲ?
- ಅದು ಬದುಕಿನ ಪ್ರದರ್ಶನ!

• **ನಾಗಮಂಗಲ ಮಂಜು, (ಇಮೇಲ್ ಮೂಲಕ)**
ಸಾರ್, ಪ್ರೀತಿ ಹೆಚ್ಚಾದಾಗ ಹೃದಯ ಅಂದವಾಗಿ ಕಾಣುತ್ತೆ ಅಂತಾರಲ್ಲ?
- ಅದು ಸ್ಟಂಟ್ ಹಾಕಿಸಿಕೊಂಡವರ ಹಳಹಳಿಕೆ!

ಸ್ಪೇನ್‌ನಲ್ಲಿ ಆಹಾರ ಸೇವಿಸುವ ಮುನ್ನ!

ಸ್ಪ್ಯಾನಿಷ್ ಊಟವನ್ನ ಅಪ್ಪಿತಪ್ಪಿ ಕೂಡ ಬೇರೆಯ ಊಟದೊಂದಿಗೆ ಹೋಲಿಸಬೇಡಿ, ಇದು ಚೆನ್ನಾಗಿಲ್ಲ ಎಂದು ಹೇಳಬೇಡಿ. ಸ್ಪ್ಯಾನಿಶರಿಗೆ ಅವರ ಅಡುಗೆಯ ಬಗ್ಗೆ ಇನ್ನಿಲ್ಲದ ಹೆಮ್ಮೆ, ಅದಕ್ಕೆ ಕಾರಣವೂ ಉಂಟು, ಪಕ್ಕದ ಬ್ರಿಟಿಷರು, ಜರ್ಮನರು, ಫ್ರೆಂಚರು ಸ್ಪೇನ್ ಊಟವನ್ನ ತಿಂದು ಕೊಂಡಾಡಿ ಹೋಗುತ್ತಾರೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಾವು ಬದುಕುವ ರೀತಿ ಇದೆಯಲ್ಲ ಅದು ಸಮಾಜದಿಂದ ಸಮಾಜಕ್ಕೆ ಬದಲಾಗುತ್ತದೆ, ಸಮಾಜದಲ್ಲಿದ್ದೂ ಮನೆಯ ವಾತಾವರಣ ಕೂಡ ಬದುಕುವ ರೀತಿಯನ್ನ ಬಹಳಷ್ಟು ಪ್ರೇರೇಪಿಸುತ್ತದೆ. ಪೀಣ್ಯದ ತೀರಾ ಬಡ ಮಧ್ಯಮದ ವರ್ಗದಲ್ಲಿ ಬದುಕಿದ ನನಗೆ ಭಾರತದ ನಾಗರಿಕರನ್ನು ನೋಡುವ ಸೌಭಾಗ್ಯ ಕೂಡ ಸಿಕ್ಕಿರಲಿಲ್ಲ, ಒಮ್ಮೆಲೇ ವಿದೇಶಕ್ಕೆ ಹೋಗುವ ಅವಕಾಶ ಸಿಕ್ಕಿತು. ಬಾರ್ಸಿಲೋನಾ ತಲುಪಿದ್ದೆ ಆದರೆ ಅಲ್ಲಿ ಬದುಕುವುದು ಹೇಗೆ? ಅಲ್ಲಿನ ಜನರ ರೀತಿನೀತಿಗಳು ಏನು? ಏನು ಮಾಡಿದರೆ ಸರಿ? ಯಾವುದು ತಪ್ಪು? ಊಹೂ ಇಲ್ಲ, ಇದ್ಯಾವುದೂ ನನಗೆ ಗೊತ್ತಿರಲಿಲ್ಲ. ಸಮಾಜದಲ್ಲಿ, ದಿನ ನಿತ್ಯದ ಬದುಕಿನಲ್ಲಿ ಎದುರಾಗುವ ಜನರನ್ನ ಹೇಗೆ ಫೇಸ್ ಮಾಡುವುದು ಎನ್ನುವ ಅರಿವು ಕೂಡ ಇರಲಿಲ್ಲ. ಸಾಮಾನ್ಯವಾಗಿ ಇಲ್ಲಿ ಎದುರುಗಡೆ ಯಾರಾದರೂ ಸಿಕ್ಕರೆ ಅವರು ನಿಮಗೆ ತೀರಾ ಪರಿಚಯದವರು ಅಲ್ಲದಿದ್ದರೂ 'ಓಲಾ' ಎಂದು ಗ್ರೀಟ್ ಮಾಡುವುದು ಸಂಪ್ರದಾಯ. ನಮಗಿಂತ ಹಿರಿಯರು ಬಂದರೆ ದಾರಿ ಬಿಟ್ಟು ತೆರೆದು ಅವರು ಹೋದ ನಂತರ ನಾವು ಹೋಗುವುದು ಇಲ್ಲಿ ಶಿಷ್ಟಾಚಾರ. ಮಾತಿನ ಪ್ರಾರಂಭದಲ್ಲಿ, ಅಂತ್ಯದಲ್ಲಿ 'ಪರ್ ಫಾವೊರ್' ಅಂದರೆ ಪ್ಲೀಸ್ ಎನ್ನುವುದು ಬಳಸುವುದು, ಗ್ರಾಸಿಯಾಸ್ ಅಂದರೆ ಧನ್ಯವಾದ ಹೇಳುವುದು ಇಲ್ಲಿ ಅಲಿಖಿತ ನಿಯಮ. ಹೀಗೆ ನಿತ್ಯ ಬದುಕಿನ ಶಿಷ್ಟಾಚಾರಗಳನ್ನ ಬೇಗ ಕಲಿತು ಬಿಟ್ಟೆ ಆದರೆ ನಾವು ನಿತ್ಯವೂ ರೆಸ್ಟೋರೆಂಟ್‌ಗೆ ಊಟಕ್ಕೆ ಹೋಗುವುದಿಲ್ಲವಲ್ಲ? ಹೀಗಾಗಿ ಟೇಬಲ್ ಮ್ಯಾನರ್ಸ್ ಸ್ವಲ್ಪ ವೇಳೆ ತೆಗೆದುಕೊಂಡಿತು.

ನೀವು ಸ್ಪೇನ್‌ಗೆ ಪ್ರವಾಸಿಗರಾಗಿ ಹೋಗುವವರಾದರೆ ಈಗ ನಾನು ಬರೆಯುವ ಸಾಲುಗಳು ನಿಮಗೆ ಖಂಡಿತ ಒಂದಷ್ಟು ಕೆಲಸಕ್ಕೆ ಬರುತ್ತವೆ. ಎಲ್ಲಕ್ಕಿಂತ ಮೊದಲನೆ ಹೋಟೆಲ್ ಅಥವಾ ರೆಸ್ಟೋರೆಂಟ್ ಪ್ರವೇಶಿಸಿದಾಗ 'ಓಲಾ' ಎನ್ನುವುದು ತೀರಾ ಸಾಮಾನ್ಯ. ಆಮೇಲೆ ದಿನದ ಯಾವ ಸಮಯದಲ್ಲಿ ನೀವು ಅಲ್ಲಿಗೆ ಪ್ರವೇಶ ನೀಡಿದ್ದೀರಿ ಎನ್ನುವುದರ ಆಧಾರದ ಮೇಲೆ ಬ್ಯೂನೋಸ್ ದಿಯಾಸ್, ತಾರ್ದೆಸ್ ಅಥವಾ ನೋಚೆ ಎನ್ನುವುದನ್ನ ಕೂಡ ಹೇಳಬೇಕಾಗುತ್ತದೆ. ಉದಾಹರಣೆಗೆ ನೀವು ಮಧ್ಯಾಹ್ನದ ಊಟಕ್ಕೆ ಪ್ರವೇಶಿಸಿದ್ದರೆ ಓಲಾ ಬ್ಯೂನೋಸ್/ ಬ್ಯೂನಸ್ ತಾರ್ದೆಸ್ ಎಂದು ಹೇಳಬೇಕಾಗುತ್ತದೆ. ಹಿರಿಯ ನಾಗರಿಕರು ಈ ರೀತಿ ಪೂರ್ಣ ಹೇಳುವ ಪರಿಪಾಠ ಹೊಂದಿಲ್ಲ. ಅವರು ಓಲಾ ಬ್ಯೂನೋಸ್ ಎನ್ನುತ್ತಾರೆ. ಇದನ್ನ ದಿನದ ಯಾವ ವೇಳೆಯಲ್ಲಿ ಕೂಡ ಬಳಸಬಹುದು.

ಎರಡನೆಯದಾಗಿ ಟೇಬಲ್ ಮೇಲೆ ಮೊಣಕೈ ಊರಿ ಕೂರಬಾರದು. ಹೌದು ಇಲ್ಲಿ ಈ ರೀತಿ ಟೇಬಲ್ ಮೇಲೆ ಮೊಣಕೈ ಊರುವುದನ್ನ ಇಲ್ಲಿನ ಜನ ಅಷ್ಟೊಂದು ಚೆನ್ನಾಗಿ ಸ್ವೀಕರಿಸುವುದಿಲ್ಲ. ಸ್ಪ್ಯಾನಿಷ್ ಜನತೆಯ ಪ್ರಕಾರ ಅದು ಕೇವಲ ಮುಂಗೈ ಇಡಲು ಇರುವ ಜಾಗ, ಅಲ್ಲಿ ತೂಕ ಹಾಕುವುದು ಮೊಣಕೈ ಊರಿ ಕೂರುವುದು ನಿಷಿದ್ಧ. ಗೊತ್ತಿಲ್ಲದೇ ಮಾಡಿದವರನ್ನ ಮುಲಾಜಿಲ್ಲದೆ ಹೀಗೆ ಕೂರಬಾರದು ಎಂದು ನವಿರಾಗಿ ಎಚ್ಚರಿಸುತ್ತಾರೆ.

ಮೂರನೆಯದಾಗಿ ಅಗೆದು ತಿನ್ನುವುದು, ಕುಡಿಯುವ ಶಬ್ದ ಬೇರೆಯವರಿಗೆ ಕೇಳಿಸುವಂತಿರಬಾರದು. ಮೊದಲೇ ಹೇಳಿದಂತೆ ಸಮಾಜದಿಂದ ಸಮಾಜಕ್ಕೆ ಇದರಲ್ಲಿ ಬಹಳ ವ್ಯತ್ಯಾಸವಿದೆ. ಇದನ್ನ ಇಲ್ಲಿ ತಪ್ಪು ಸರಿ ಎನ್ನುವ ಉದ್ದೇಶದಿಂದ ಬರೆಯುತ್ತಿಲ್ಲ. ಎಲ್ಲರಿಗೂ ಅವರದೇ ಆದ ಒಂದು ರೀತಿ ರಿವಾಜು ಬೆಳೆದುಕೊಂಡು ಬಿಟ್ಟಿರುತ್ತದೆ. ಕೆಲವೊಂದು ಊರುಗಳಲ್ಲಿ ಸೋರ್ರ್ ಎನ್ನುವ ಶಬ್ದ ಮಾಡುತ್ತಾ ಕಾಫಿ, ಟೀ ಅಥವಾ ಇನ್ನಿತರ ಪಾನೀಯ ಹೀರುವುದು ಸಂಪ್ರದಾಯ. ಊಟವನ್ನ ಅಗೆದು, ಚೆನ್ನಾಗಿ ಜಗಿದು ತಿನ್ನುವ ಶಬ್ದವನ್ನ ಕೂಡ ನೀವು ಕೇಳಿರುತ್ತೀರಿ. ಇಲ್ಲಿ ಅಂದರೆ ಸ್ಪೇನ್‌ನಲ್ಲಿ ಈ ರೀತಿ ಶಬ್ದ ಬರುವ ರೀತಿಯಲ್ಲಿ ಪಾನೀಯವನ್ನ ಹೀರುವುದು, ತಿನ್ನುವಾಗ ಶಬ್ದ ಹೊರಡಿಸುವುದು ಕೂಡ ಜನ ಇಷ್ಟಪಡುವುದಿಲ್ಲ. ಇಂತಹ ಕ್ರಿಯೆಯಲ್ಲಿ ತೊಡಗಿದವರನ್ನ ಅನಾಗರೀಕ ಎನ್ನುವ ರೀತಿಯಲ್ಲಿ ಕಾಣಲಾಗುತ್ತದೆ. ಇನ್ನು ತಿನ್ನುವ ರೀತಿಯಲ್ಲೂ ಬಹಳ ನಾಜೂಕುತನವನ್ನ ಇವರು ಪ್ರದರ್ಶಿಸುತ್ತಾರೆ. ಸಣ್ಣದಾಗಿ ಮೂತಿಯ ಅಕ್ಕಪಕ್ಕ ಆಹಾರ ತಗುಲಿದರೂ ಸಾಕು ನವಿರಾಗಿ ಟಿಶ್ಯೂ ಪೇಪರ್ ಬಳಲಿ ವರೆಸಿಕೊಳ್ಳುತ್ತಾರೆ. ಅತಿ ದೊಡ್ಡ ಬೈಟ್ಸ್ ಅಂದರೆ ತುತ್ತುಗಳನ್ನ ಒಮ್ಮೆಲೇ ತಿನ್ನುವುದನ್ನ ಕೂಡ ಇಲ್ಲಿನ ಜನ ಸಹಿಸುವುದಿಲ್ಲ. ಬಾರ್ಸಿಲೋನಾ ನಗರಕ್ಕೆ ಬರುವ ಕೇವಲ ಒಂದೂವರೆ ವರ್ಷದ ಹಿಂದೆ ನಾನು ಕೇರಳದ ಕಣ್ಣೂರಿನಲ್ಲಿ ಆಡಿಟ್ ಕೆಲಸದ ಮೇಲೆ ಮೂರು ತಿಂಗಳ ಕಾಲ ವಾಸವಿದ್ದೆ. ಅಲ್ಲಿನ ಜನ ತುತ್ತನ್ನ ಕೈ ತುಂಬುವಷ್ಟು ದೊಡ್ಡದು ಮಾಡಿ ಅದನ್ನ ಹತ್ತಾರು ಬಾರಿ ಉಂಡೆಗಟ್ಟಿ ಒಮ್ಮೆಲೇ ಬಾಯಿಗೆ ಎಸೆದುಕೊಳ್ಳುತ್ತಾರೆ. ಅಲ್ಲಿನ ಊಟದ ರೀತಿಯನ್ನ ನೋಡಿದವರಿಗೆ ಇದು ಅರ್ಥವಾಗುತ್ತದೆ. ಇಲ್ಲದವರಿಗೆ ಇದನ್ನ ಹೇಳುವುದು ಸ್ವಲ್ಪ ಕಷ್ಟ. ಒಟ್ಟಿನಲ್ಲಿ ದೊಡ್ಡ ತುತ್ತನ್ನ ಅವರು ತಿನ್ನುತ್ತಾರೆ. ಬೆಂಗಳೂರಿನಿಂದ ಹೋಗಿದ್ದ ನನಗೆ ಅಲ್ಲಿನ ರೀತಿ ರಿವಾಜು ನೋಡಿ ಇದೇನಪ್ಪ ಹೀಗೆ ಆನಿಸಿತ್ತು. ಟೈಮ್ ಟ್ರಾವೆಲ್ ಮಾಡಿದ ರೀತಿಯಲ್ಲಿ 20 ವರ್ಷ ಮುಂದಕ್ಕೆ ಬಾರ್ಸಿಲೋನಾ ನಗರದ ಜೀವನ ಶೈಲಿಗೆ ಕೂಡ ಒಗ್ಗಿಕೊಳ್ಳಬೇಕಿತ್ತು.

ನಾಲ್ಕನೆಯ ಅಂಶ ಎಲ್ಲಕ್ಕಿಂತ ಅತ್ಯಂತ ಪ್ರಮುಖವಾದದ್ದು, ಬೇರೆ ಯಾವುದಾದರೂ ಅಂಶವನ್ನ ಸ್ಪ್ಯಾನಿಷ್ ಜನ ಕ್ಷಮಿಸಿ ಬಿಟ್ಟಾರು ಆದರೆ ಈ ನಾಲ್ಕನೆಯ ಅಂಶವನ್ನ ಮಾತ್ರ ಎಂದೂ ಕ್ಷಮಿಸುವುದಿಲ್ಲ. ಊಟದ ಮಧ್ಯದಲ್ಲಿ, ಕೊನೆಯಲ್ಲಿ ಒಟ್ಟಿನಲ್ಲಿ ನಾಲ್ಕು ಜನ ಸೇರಿದ ಕಡೆ ತೇಗುವುದು ಇಲ್ಲಿ ನಿಷಿದ್ಧ. ಹಾಗೊಮ್ಮೆ ತೇಗಿದರೆ ಇಡೀ ರೆಸ್ಟೋರೆಂಟ್ ಜನ ನಿಮ್ಮನ್ನೇ ನೋಡಲು ಶುರು ಮಾಡಿ ಬಿಡುತ್ತಾರೆ ಹುಷಾರು. ತೇಗುವಿಕೆಯನ್ನ ಇಲ್ಲಿ ಅತ್ಯಂತ ಹೀನವಾದ, ಮತ್ತು ನಾಗರಿಕತೆಯ ಎಳ್ಳಷ್ಟೂ ಅರಿವಿಲ್ಲದ ಜನ ಮಾತ್ರ ಮಾಡುವ ಕ್ರಿಯೆ ಎಂದು ಪರಿಗಣಿಸಲಾಗಿದೆ. ಹೀಗಾಗಿ ಏನೇ ಮಾಡಿ ಅಥವಾ ಬಿಡಿ, ತೇಗುವುದು ಮಾತ್ರ ಮಾಡಲೇಬೇಡಿ. ನನಗೆ ಇದರ ಅರಿವಿರದೆ ಹೋದರೂ ಪುಣ್ಯಕ್ಕೆ ಯಾವುದೇ ಅಭಾಸಕ್ಕೂ ಸಿಕ್ಕಿಕೊಳ್ಳಲಿಲ್ಲ. ಪ್ರಾರಂಭದ ದಿನದಲ್ಲಿ ಯಾರಾದರೂ ಹೇಳಿದರೆ ಸರಿ ಇಲ್ಲದಿದ್ದರೆ ಇಂತಹ ತಪ್ಪುಗಳಿಂದ ಆಗುವ ಮುಜುಗರವನ್ನ ತಪ್ಪಿಸಿಕೊಳ್ಳುವುದು ಕಷ್ಟ ಸಾಧ್ಯ. ತೇಗುವಿಕೆಯೊಂದಿಗೆ ಅಂಟಿಕೊಂಡಿರುವ ಒಂದು ನೆನಪು ಬೇಡವೆಂದರೂ ಬಿಡದೆ ಕಾಡುತ್ತಿದೆ. ಹಾಗಾಗಿ ಅದನ್ನ ನಿಮಗೂ ಹೇಳಿ ನಂತರ ಮುಂದುವರೆಸುವೆ, ದುಬೈನಿಂದ ಆಡಿಟ್‌ಗೆ ಎಂದು ಹಿರಿಯ ಆಡಿಟರ್ ಒಬ್ಬರನ್ನ ಬಾರ್ಸಿಲೋನಾಕ್ಕೆ, ನಮ್ಮ ಸಂಸ್ಥೆಗೆ ಕರೆಸಿದ್ದರು, ಆತ ಹೇಳಿಕೇಳಿ ಭಾರತೀಯ, ಜತೆಗೆ ಮಧ್ಯವಯಸ್ಕ, ಅಲ್ಪಸ್ವಲ್ಪ ಹಣ ಸೇರಿದ ಭಾರತೀಯ ಎಂದ ಮೇಲೆ ಹೇಗಿರಬೇಕು ಥೇಟ್ ಹಾಗೆ ಇದ್ದರು, ಡೊಳ್ಳು ಹೊಟ್ಟೆ, ಎರಡು ಮೂರು ನಿಮಿಷಕ್ಕೆ ತೇಗು! ನಮ್ಮ ಆಫೀಸ್‌ನಲ್ಲಿನ ಅಂದಿನ ಎಲ್ಲ ಸಹೋದ್ಯೋಗಿಗಳು ಅವನನ್ನ ವಿಚಿತ್ರ ಪ್ರಾಣಿಯಂತೆ ಕಂಡರು, ಆತನಿಗೆ ಸ್ಪೇನ್ ದೇಶದ ರೀತಿ ರಿವಾಜುಗಳ ಎಳ್ಳಷ್ಟೂ ಜ್ಞಾನವಿಲ್ಲ. ನನಗೆ ಅಯ್ಯೋ ಪಾಪ ಅನ್ನಿಸಿ ಹೀಗೆ ತೇಗುವುದು ಇಲ್ಲಿ ಕೆಟ್ಟದಾಗಿ ಕಾಣಲಾಗುತ್ತದೆ ಎಂದು ತಿಳಿ ಹೇಳಿದೆ. ಆತನಿಗೆ ಸಿವಿಯರ್ ಅಸಿಡಿಟಿ, ಆತನಿಗೂ ಆತನ ತೇಗುವಿಕೆ ಬೇಸರ ತರಿಸಿತ್ತು. ಅವನ ಟೀನ್ ಏಜ್ ಮಕ್ಕಳು ಈತನ ತೇಗುವಿಕೆಯಿಂದ ತುಂಬಾ ಕಿರಿಕಿರಿಗೆ ಒಳಗಾಗುತ್ತಾರೆ ಎಂದು ಕೂಡ ಹೇಳಿದ. ಆದರೆ ತೇಗುವಿಕೆ ಕೊನೆಯಾಗಲಿಲ್ಲ. ನನ್ನ ಸಹೋದ್ಯೋಗಿಗಳಿಗೆ ಅವನ ತೊಂದರೆಯ ಬಗ್ಗೆ ಹೇಳಿದೆ, ಅದು ಆತ ಬೇಕೆಂದು ಮಾಡುತ್ತಿರುವುದಲ್ಲ ಆತನಿಗೆ ಅಸಿಡಿಟಿ ತೊಂದರೆಯಿದೆ ಎಂದು ಎಷ್ಟೇ ಹೇಳಿದರೂ ನನ್ನ ಸ್ಪ್ಯಾನಿಷ್ ಸಹೋದ್ಯೋಗಿಗಳಿಗೆ ಅದು ರುಚಿಸಲಿಲ್ಲ, ಅವನನ್ನ ಸೇದೋರ್ (ಹಂದಿ) ಎಂದು ಕರೆಯಲು ಶುರು ಮಾಡಿದರು. ಅಂದರೆ ಅವರವರ ನಡುವಿನ ಮಾತುಕತೆಯಲ್ಲಿ ಅವನಿಗೆ ಸೇದೋರ್ ಎನ್ನುವ ನಾಮಕರಣ ಮಾಡಿ ಬಿಟ್ಟಿದ್ದರು! ಮುಂದಿನ ಎರಡು ದಿನದಲ್ಲಿ ಆತನನ್ನ ವಾಪಸ್ಸು ದುಬೈಗೆ ಮರಳಿ ಕಳಿಸಲಾಯಿತು. ಹೊಸ ಆಡಿಟರ್ ಬಂದ ಆತನಿಗೆ ಹಾಡುವ ಹುಚ್ಚು ಅದೂ ಶಾಸ್ತ್ರೀಯ ಸಂಗೀತ, ಅದರ ಬಗ್ಗೆ ಇನ್ನೊಮ್ಮೆ ಬರೆಯುವೆ.

ಸ್ಪ್ಯಾನಿಷ್ ಊಟವನ್ನ ಅಪ್ಪಿತಪ್ಪಿ ಕೂಡ ಬೇರೆಯ ಊಟದೊಂದಿಗೆ ಹೋಲಿಸಬೇಡಿ, ಇದು ಚೆನ್ನಾಗಿಲ್ಲ ಎಂದು ಹೇಳಬೇಡಿ. ಸ್ಪ್ಯಾನಿಶರಿಗೆ ಅವರ ಅಡುಗೆಯ ಬಗ್ಗೆ ಇನ್ನಿಲ್ಲದ ಹೆಮ್ಮೆ, ಅದಕ್ಕೆ ಕಾರಣವೂ ಉಂಟು, ಪಕ್ಕದ ಬ್ರಿಟಿಷರು, ಜರ್ಮನರು, ಫ್ರೆಂಚರು ಸ್ಪೇನ್ ಊಟವನ್ನ ತಿಂದು ಕೊಂಡಾಡಿ ಹೋಗುತ್ತಾರೆ. ಸ್ಪೇನ್‌ನ ಪೆಯೇಯ್ಯ, ಸಂಗ್ರಿಯಾ, ಪಾನ್ ಕೋನ್ ತಮೋತೆ, ಹಾಮೋನ್ ಕೋನ್ ಕೇಸೂ.. ಎಲ್ಲವೂ ಜಗತ್ ಪ್ರಸಿದ್ಧ. ನಿಮಗೆ ಗೊತ್ತಿರಲಿಲ್ಲ ಸ್ಪೇನ್‌ನ ಕೆಲವು ರೆಸ್ಟೋರೆಂಟ್‌ಗಳಲ್ಲಿ ಊಟ ಮಾಡಲು ಕೆಲವೊಮ್ಮೆ ವರ್ಷದಿಂದ ಎರಡು ವರ್ಷ ಕಾಯಬೇಕಾಗುತ್ತದೆ. ಮೂರು ತಿಂಗಳಿಗೆ ಅಥವಾ ಆರು ತಿಂಗಳಿಗೆ ಸಿಕ್ಕರೆ ಅದು ಪುಣ್ಯ ಎನ್ನುವಂತೆ ಜನ ಮಾತನಾಡಿಕೊಳ್ಳುತ್ತಾರೆ. ಹೀಗಾಗಿ ಇಲ್ಲಿನ ಜನ ಸಾಮಾನ್ಯನಿಂದ, ಅತಿ ಶ್ರೀಮಂತನವರೆಗೆ ಅವರ ಅಡುಗೆಯ ಬಗ್ಗೆ ಅತೀವ ಹೆಮ್ಮೆ. ಊಟ ಚೆನ್ನಾಗಿಲ್ಲ ಎಂದೂ ನನಗಷ್ಟು ಸೇರಲಿಲ್ಲ ಎಂದೋ ಅವರ ಮುಂದೆ ಹೇಳುವುದನ್ನ ಮಾಡದೆ ಇರುವುದು ಉತ್ತಮ ನಡೆಯಾಗುತ್ತದೆ.

ಇನ್ನು ಕೊನೆಯದಾಗಿ ಎಲ್ಲ ಮುಗಿದ ಮೇಲೆ ಸಾಮಾನ್ಯವಾಗಿ ಇಲ್ಲಿ ಬಿಲ್ ಅಮೌಂಟ್ ಏನಿರುತ್ತದೆ ಅದನ್ನ ಎಲ್ಲರೂ ಸಮವಾಗಿ ಹಂಚಿಕೊಳ್ಳುವುದು ಸಂಪ್ರದಾಯ. ಊಟಕ್ಕೆ ಮುಂಚೆಯೇ 'ತೇ ಇನ್ವಿತೋ ಯೋ' (ನಾನು ನಿನ್ನ ಕರೆಯುತಿದ್ದೇನೆ ನನ್ನ ಜತೆಗೆ ಬಾ ಎನ್ನುವ ಅರ್ಥ) ಎಂದಿದ್ದರೆ ಹೀಗೆ ಆಹ್ವಾನ ಕೊಟ್ಟವನು ಬಿಲ್ ಕೊಡುತ್ತಾನೆ ಎಂದರ್ಥ. ಸುಮ್ಮನೆ ಊಟಕ್ಕೆ ಹೋಗೋಣವೆ ಎಂದರೆ, ಜೊತೆಯಲ್ಲಿ ಹೋಗೋಣ ಎಂದರ್ಥ, ಆಗ ಬಿಲ್ ಸಮವಾಗಿ ಡಿವೈಡ್ ಆಗುತ್ತದೆ. ಟಿಪ್ಸ್ ಕೊಡುವುದು ಇಲ್ಲಿ ಕಡ್ಡಾಯವಲ್ಲ, ಅಮೆರಿಕದಲ್ಲಿ ಸಂಬಳ ನಗಣ್ಯ ಎನ್ನುವಷ್ಟು ಇರುತ್ತದೆ, ಹೀಗಾಗಿ ಅಲ್ಲಿ ಟಿಪ್ಸ್ ಕಡ್ಡಾಯ. ಇಲ್ಲಿ ಸ್ಪೇನ್‌ನಲ್ಲಿ ಟಿಪ್ಸ್ ಕಡ್ಡಾಯವಲ್ಲ, ಆದರೂ ಜನ ಸಾಧಾರಣ ಮಟ್ಟದ ಟಿಪ್ಸ್ ಕೊಟ್ಟೆ ಹೋಗುತ್ತಾರೆ. ಹೀಗಾಗಿ ಒಂದಷ್ಟು ಟಿಪ್ಸ್ ನೀಡಿ, ನಿಮಗೆ ಸೇವೆ ನೀಡಿದ ಪರಿಚಾರಕನ ಹಾರೈಕೆ ಕೂಡ ಸಿಕ್ಕುತ್ತದೆ.

ಮೊದಲ ಸಾಲುಗಳಲ್ಲಿ ಹೇಳಿದಂತೆ ಮನೆಯಿಂದ ಮನೆಗೆ, ಊರಿಂದ ಊರಿಗೆ ಸಂಪ್ರದಾಯಗಳು, ಬದುಕುವ ಶೈಲಿ ಬದಲಾಗುತ್ತದೆ. ಇನ್ನೂ ದೇಶ, ಖಂಡಾಂತರ ಮಾಡಿದಾಗ ಕಲ್ಚರಲ್ ಶಾಕ್‌ಗಳು ಆಗಿಯೇ ತಿರುತ್ತವೆ. ಒಂದಷ್ಟು ತಿಳುವಳಿಕೆ ಹೆಚ್ಚಿನ ಮಟ್ಟದ ಅನಾಹುತ ಆಗುವುದರಿಂದ ತಪ್ಪಿಸುತ್ತದೆ. ಹೀಗಾಗಿ ಸ್ಪೇನ್‌ಗೆ ನೀವು ಎಂದಾದರೂ ಪ್ರವಾಸ ಹೋಗುವವರಿದ್ದರೆ ಮೇಲಿನ ಅಂಶಗಳನ್ನ ನೆನಪಿನಲ್ಲಿ ಇಟ್ಟು ಕೊಂಡಿರಿ, ಖಂಡಿತ ಉಪಯೋಗಕ್ಕೆ ಬರುತ್ತದೆ.

ಪ್ರಸ್ತುತ

ರವೀ ಸಜಂಗದ್ದೆ

ಜಗನ್ನಾಥ ಟ್ರಂಪ್‌ಕಾರ್ಡ್ ಬಳಸಿ ಜೀವ ಉಳಿಸಿದ ಕತೆ!

1976ನೆಯ ಇಸವಿ. ಇಸ್ಕಾನ್ ಸಂಸ್ಥೆ ಸ್ಥಾಪನೆಯಾಗಿ ದಶಕದ ಸಂಭ್ರಮದ ಹಿನ್ನೆಲೆಯಲ್ಲಿ ಅಮೆರಿಕದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರು ಜಗನ್ನಾಥ ರಥಯಾತ್ರೆಯನ್ನು ನ್ಯೂಯಾರ್ಕ್ ಪ್ರದೇಶದ ಸುಪ್ರಸಿದ್ಧ ಫಿಫ್ತ್ ಅವೆನ್ಯೂ ರಸ್ತೆಯಲ್ಲಿ ಮಾಡಿ ಸಂಭ್ರಮಿಸಲು ನಿರ್ಧರಿಸಿದರು. ಮೊದಲಿಗೆ ಸ್ಥಳೀಯಾಡಳಿತ ಮತ್ತು ಪೊಲೀಸ್ ಇಲಾಖೆಯಿಂದ ಅನುಮತಿ ಬೇಕಿತ್ತು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕಛೇರಿಗಳಿಗೆ ಅನುಮತಿ ಕೋರಿ ವಿನಂತಿ ಪತ್ರ ನಿಡುವ ಜವಾಬ್ದಾರಿ ಹರೇಕೃಷ್ಣ ಚಳವಳಿ ಸಮಿತಿಯು ತೋಷನ್ ಕೃಷ್ಣ ದಾಸ್ ಅವರಿಗೆ ವಹಿಸಿತ್ತು. ಪೊಲೀಸ್ ಇಲಾಖೆ ಅನುಮತಿ ನೀಡಿದರೂ ನ್ಯೂಯಾರ್ಕ್ ಮೇಯರ್ ಅಥವಾ ಮ್ಯಾನ್‌ಹಾಟನ್ ಜಿಲ್ಲಾಡಳಿತದ ಅನುಮತಿ ಇನ್ನೂ ಸಿಗದ ಕಾರಣ ಸ್ಥಳೀಯ ಪೊಲೀಸ್ ಅನುಮತಿಗೆ ಮಾನ್ಯತೆಯಿರಲಿಲ್ಲ. 1963ರಲ್ಲೇ ಇಂಥಾ ಯಾವುದೇ ಯಾತ್ರೆ, ಮೆರವಣಿಗೆಗಳಿಗೆ ಅನುಮತಿ ನಿಡಲು ಸ್ಪಷ್ಟ ಸಕಾರಣಗಳು ಬೇಕೆಂದು ಆದೇಶವಾಗಿತ್ತು. ಈ ಎಲ್ಲ ಅಡೆತಡೆಗಳನ್ನು ಮೀರಿ ಅನುಮತಿ ಸಿಗುವುದು ಅನುಮಾನವಾಗಿತ್ತು. ಕೊನೆಯ ಪ್ರಯತ್ನವಾಗಿ ಮ್ಯಾನ್‌ಹಾಟನ್ ಜಿಲ್ಲಾಡಳಿತದ ಮುಖ್ಯಸ್ಥರನ್ನು ಭೇಟಿಯಾಗಿ ವಿನಂತಿ ಪತ್ರ ನೀಡಿದೆವು. ಅದನ್ನು ಎರೆಡೆರಡು ಸಲ ಓದಿ, ರಥಯಾತ್ರೆ ನಡೆಸಲು ಷರತ್ತುಬದ್ಧ ಅನುಮತಿ ನೀಡಿದ್ದು ಅಚ್ಚರಿ ಮತ್ತು ಜಗನ್ನಾಥನ ಪ್ರಭಾವ ಎಂದಿದ್ದಾರೆ ತೋಷನ್ ಕೃಷ್ಣ ದಾಸ್.

ರಥಯಾತ್ರೆಗೆ ಅನುಮತಿಯೇನೋ ಸಿಕ್ಕಿತು. ಈಗ ಅದಕ್ಕಿಂತ ದೊಡ್ಡ ಸವಾಲು ಎದುರಾಯಿತು! ಜನನಿಬಿಡ ನ್ಯೂಯಾರ್ಕ್ ಪ್ರದೇಶದಲ್ಲಿ ಎರಡು-ಮೂರು ದಿನಗಳ ಮಟ್ಟಿಗೆ ಮರದ ಕಟ್ಟಿಗೆ ಮತ್ತಿತರ ವಸ್ತುಗಳನ್ನು ಬಳಸಿ ದೊಡ್ಡ ರಥ ತಯಾರಿಸಲು ಸ್ಥಳಾವಕಾಶ ಬೇಕಿತ್ತು. ಜಾಗಕ್ಕಾಗಿ ಸ್ಥಳೀಯ ಉದ್ಯಮಿಗಳನ್ನು ಪ್ರಭಾವಿ ವ್ಯಕ್ತಿ-ಸಂಸ್ಥೆ ಗಳನ್ನು ಸಂಪರ್ಕಿಸಲಾಯಿತು. ಹೆಚ್ಚಿನವರು ಈ ವಿಷಯದ ಕುರಿತು ಅರಿವು, ಆಸಕ್ತಿ ಇಲ್ಲದಿದುದರಿಂದ ನಯವಾಗಿ ನುಣುಚಿಕೊಂಡರು. ಬೇರೆಡೆ ರಥ ತಯಾರಿಸಿ ಇಲ್ಲಿಗೆ ತರಲೂ ಅಸಾಧ್ಯವಾದ ಮತ್ತು ರಥ ತಯಾರಿಸಲು ಫಿಫ್ತ್ ಅವೆನ್ಯೂ ರಸ್ತೆಯಲ್ಲಿ ಜಾಗ ಸಿಗದ ವಿಷಣ್ಣ ಪರಿಸ್ಥಿತಿ.

ಹೀಗೆ ದಿಕ್ಕು ತೋಚದಿರುವಾಗ ಅದೇ ರಸ್ತೆಯಲ್ಲಿ ಇರುವ ಹಳೆಯ ರೈಲು ಪ್ರಾಂಗಣದ ಜಾಗವನ್ನು ಅಮೆರಿಕದ ರಿಯಲ್ ಎಸ್ಟೇಟ್ ಸಂಸ್ಥೆ 'ದಿ ಟ್ರಂಪ್ ಆರ್ಗನೈಸೇಷನ್' ಆಗಷ್ಟೇ ಖರೀದಿಸಿದ ಸುದ್ದಿ ತೋಷನ್ ಕೃಷ್ಣ ದಾಸ್ ಗಮನಕ್ಕೆ ಬಂತು. ಕೂಡಲೇ ವಿನಂತಿ ಪತ್ರ ಸಿದ್ಧಪಡಿಸಿ ಅದೇ ದಿನ ಮಧ್ಯಾಹ್ನ ಒಂದು ದೊಡ್ಡ ಡಬ್ಬದಲ್ಲಿ ಅಂದಿನ ಪ್ರಸಾದ ತುಂಬಿಕೊಂಡು ಇಸ್ಕಾನ್ ದೇವಾಲಯದಿಂದ ನಾಲ್ಕು ಮೈಲಿ ದೂರದಲ್ಲಿರುವ ಟ್ರಂಪ್ ಟವರ್‌ಗೆ ತಂಡದೊಂದಿಗೆ ತೆರಳಿದರು. 'ದಿ ಟ್ರಂಪ್ ಆರ್ಗನೈಸೇಷನ್' ಮುಖ್ಯಸ್ಥ, ಉದ್ಯಮಿ ಡೊನಲ್ಡ್ ಟ್ರಂಪ್ ಅವರನ್ನು ಸಂಪರ್ಕಿಸಿ, ಜಗನ್ನಾಥ ರಥಯಾತ್ರೆಗೆ ರಥ ತಯಾರಿಸಲು ಅವರು ಇತ್ತೀಚೆಗೆ ಖರೀದಿಸಿದ ರೈಲು ಪ್ರಾಂಗಣವನ್ನು ಒಂದೆರಡು ದಿನಗಳಿಗೆ ನೀಡುವಂತೆ ಮನವಿ ಸಲ್ಲಿಸುವ ಇರಾದೆ ಅವರದಾಗಿತ್ತು.

ಬಂದಿರುವ ಕಾರಣವನ್ನು ಟ್ರಂಪ್ ಕ್ಯಾಬಿನ್ ಹೊರಗಿರುವ ಆಪ್ತ ಸಹಾಯಕಿಗೆ ವಿವರಿಸಿ, ವಿನಂತಿ ಪತ್ರದ ಜೊತೆಗೆ ಇಸ್ಕಾನ್ ಪ್ರಸಾದದ ಡಬ್ಬಿ ಕೊಟ್ಟರು. ಆಕೆ ವಿವರ ತಿಳಿದು, ಮುಗುಳ್ನಕ್ಕು, 'ವಿವರ ಅವರ ಮುಂದಿಡುವೆ. ಇಂಥಾ ವಿಷಯಗಳಿಗೆಲ್ಲ ಟ್ರಂಪ್ ಅನುಮತಿ ಕೊಡುವುದಿಲ್ಲ, ಹೆಚ್ಚಿನ ಆಸೆ ಬೇಡ' ಎಂದರು. ಇದನ್ನು ಕೇಳಿಸಿಕೊಂಡ ದಾಸ್ ಮತ್ತು ತಂಡಕ್ಕೆ ಭರವಸೆ ಉಳಿದದ್ದು ಜಗನ್ನಾಥನ ಮಹಿಮೆಯ ಮೇಲೆ ಮಾತ್ರ.

ಇದಾದ ಮೂರನೇ ದಿನಕ್ಕೆ, ಇಸ್ಕಾನ್ ಕಚೇರಿಯಲ್ಲಿ ರಿಂಗಣಿಸಿದ ಫೋನ್ ಎತ್ತಿಕೊಂಡು ದಾಸ್ ಅವರು ಇತ್ತ ಕಡೆಯಿಂದ 'ಹರೇಕೃಷ್ಣ' ಎಂದಾಗ ಆಕಡೆಯ ಹೆಣ್ಣು ಧ್ವನಿ 'ಜಂಟಲ್ ಮ್ಯಾನ್, ಏನಾಯಿತು, ಹೇಗಾಯಿತು ಗೊತ್ತಿಲ್ಲ! ಟ್ರಂಪ್ ನಿಮ್ಮ ಪತ್ರ ಓದಿ, ನೀವು ಕೊಟ್ಟ ಆಹಾರ (ಪ್ರಸಾದ)ದ ರುಚಿ ನೋಡಿದರು. ಕೂಡಲೇ ಯಾಕಾಗಬಾರದು? ಅವರಿಗೆ ರಥ ತಯಾರಿಸಲು ಜಾಗ ನೀಡಿ ಎಂದಿದ್ದಾರೆ. ಅವರ ಸಹಿಯಿರುವ ಅನುಮತಿ ಪತ್ರ ತಯಾರಿದೆ, ಬಂದು ಸ್ವೀಕರಿಸಿ. ಎಟಟಟಥ ಛಚಢ!' ಎಂದು ಹೇಳಿ ಫೋನಿಟ್ಟಳು.

48 ವರ್ಷಗಳ ಹಿಂದೆ, ಅಂದರೆ 1976ರಲ್ಲಿ ನ್ಯೂಯಾರ್ಕ್‌ನ ಫಿಫ್ತ್ ಅವೆನ್ಯೂ ರಸ್ತೆಯಲ್ಲಿ ಜಗನ್ನಾಥನ ಪ್ರಥಮ ರಥಯಾತ್ರೆಯ ಹಾದಿ ಎಲ್ಲ ಅಡೆತಡೆಗಳನ್ನು ಮೀರಿ, ಟ್ರಂಪ್ ಸಹಕಾರದೊಂದಿಗೆ ಸುಗಮವಾಯಿತು, ಸಂಪನ್ನವಾಯಿತು!

ಅಂದು ತನ್ನ ಭವ್ಯ ರಥ ತಯಾರಿಸಲು ಜಾಗ ನೀಡಿದ್ದ ಡೊನಲ್ಡ್ ಟ್ರಂಪ್‌ನನ್ನು ಇಂದು ಹತ್ಯಾ ದಾಳಿಯಿಂದ ಕೂದಲೆಳೆಯ ಅಂತರದಲ್ಲಿ ಅದೇ ಸರ್ವೋತ್ತಮ ಜಗನ್ನಾಥ ಭಿಕ್ಷೆ ಮತ್ತು ಅನುಗ್ರಹದ ರೂಪದಲ್ಲಿ ಪಾರು ಮಾಡಿದ್ದಾನೆ ಎಂದೆನಿಸುತ್ತಿದೆ!

ಟ್ರಂಪ್ ಬಗೆಗಿನ ಇತರ ಹಲವು ವಿಚಾರಗಳಲ್ಲಿ ಅನೇಕರಿಗೆ ಸಹಮತ ಇಲ್ಲದಿರಬಹುದು. ಆತನ ನಿರ್ಧಾರ, ಹೇಳಿಕೆ, ನಡವಳಿಕೆಗಳ ಬಗ್ಗೆ ತಕರಾರು ಎಲ್ಲೆಡೆ ಇದೆ. ಹಾಗಿದ್ದೂ ಅಂದು ರಥಯಾತ್ರೆಗೆ ಅನುಕೂಲ ಮಾಡಿಕೊಟ್ಟ ಪ್ರತಿಫಲವಾಗಿ ಇಂದು ವಯ್ಯನ ಪ್ರಾಣ ಉಳಿದಿರುವುದು ಅಲ್ಲಗಳೆಯಲಾಗದು. 'ನಂಬಿದವರನ್ನು, ಸಲಹುವವರನ್ನು ಇಂಬುಗೊಟ್ಟು ಕಾಪಾಡುವ ಶಕ್ತಿ'ಯನ್ನು ಅನೇಕ ರೂಪಗಳಲ್ಲಿ ಪೂಜಿಸಿ ಆರಾಧಿಸುವ ನಂಬಿಕೆ ಮತ್ತು ಜನರಿರುವ ದೇಶ ನಮ್ಮದು. ಪ್ರತಿ ಬಾರಿ ಇಂಥಾ ಅಪಘಾತಗಳಿಂದ ಪಾರಾದಾಗ ದೇವರಿಗೆ ಧನ್ಯವಾದ ಹೇಳಿ ಕಾಲಿಗೆರಗುವುದು ನಮ್ಮ ಸನಾತನ ಸಂಸ್ಕೃತಿಯ ಶ್ರೇಷ್ಠತೆ. ಟ್ರಂಪ್‌ಗೂ ಇದೇ ಅನುಭವ ಆಗಿರಬಹುದು. ಹತ್ಯಾ ಪ್ರಯತ್ನದಿಂದ ಪಾರಾದ ಕ್ಷಣದಲ್ಲಿ ತಾನು ನಂಬಿದ ಶಕ್ತಿಯ ನೆನಪನ್ನು ಅವರು ಖಂಡಿತಾ ಮಾಡಿರುತ್ತಾರೆ. ಆ ಶಕ್ತಿಯ ರೂಪ ಜಗದೊಡೆಯ ಜಗನ್ನಾಥನದ್ದೇ ಯಾಕಾಗಿರಬಾರದು?! ಜಗನ್ನಾಥ್ ಕೀ ಜೈ.

(ಲೇಖಕರು ಸಾಫ್ಟ್‌ವೇರ್ ಉದ್ಯೋಗಿ ಮತ್ತು ಹವ್ಯಾಸಿ ಬರಹಗಾರರು)

ಬದಲಾಗಬೇಕಿರುವುದು ಪಾಲಕರ ಮನಸ್ಥಿತಿಯೇ ಹೊರತು ಬೇರೇನಲ್ಲ!

ವಿಶ್ಲೇಷಣೆ
ಸುರೇಂದ್ರ ಪೈ, ಭಟ್ಕಳ
vveditoped@gmail.com

ಮನುಷ್ಯ ತಾನು ಮಾಡುವ ಎಲ್ಲ ತಪ್ಪುಗಳಿಗೂ ಬೇರೆಬ್ಬರನ್ನೂ ಜವಾಬ್ದಾರಿಯುತರಾನ್ನಾಗಿ ಮಾಡುವ ಸ್ವಭಾವವನ್ನು ಬಿಟ್ಟಿಲ್ಲ. ಅದು ಆತನ ಆಜನ್ಮಸಿದ್ಧ ಹಕ್ಕೋ ಏನೋ ಗೊತ್ತಿಲ್ಲ, ಬಹುಶಃ ಈ ಸ್ವಭಾವಕ್ಕೆ ಆತ ಪೇಟೆಂಟ್ ಪಡೆದುಕೊಂಡಿರಬೇಕು ಅನಿಸುತ್ತದೆ. ಸಮಾಜದಲ್ಲಿ ಏನಾದರೂ ತಪ್ಪು ನಡೆದರೆ ಮೊದಲು ತಪ್ಪು ಮಾಡಿದವರನ್ನು ಶಿಕ್ಷಿಸಲು ಮುಂದಾಗುತ್ತೇವೆಯೇ ವಿನಃ, ಆ ತಪ್ಪು ಮಾಡಲು ಏನು ಕಾರಣ? ಯಾವ ಸನ್ನಿವೇಶ ಪ್ರಚೋದನೆ ನೀಡಿತು? ಆತನಿಗೆ ಅಂತಹ ಕ್ರೂರ ಮನಸ್ಥಿತಿ ಬರಲು ಏನು ಮೂಲ ಕಾರಣವೆಂದು ಯಾರೊಬ್ಬರು ಚಿಂತಿಸುವುದಿಲ್ಲ. ಅಲ್ಲೇ ನಾವು ಎಡವುದು ನೋಡಿ. ನಮಗೆ ತಪ್ಪಿತಸ್ಥನಿಗೆ ಶಿಕ್ಷೆ ಕೊಡಿಸುವುದೇ ಮುಖ್ಯವಾಗುತ್ತದೆಯೇ ಹೊರತು, ಇನ್ನೂ ಮುಂದೆ ಅಂತಹ ಘಟನೆ ನಡೆಯದಂತೆ ಮಾಡಲು ಏನು ಮಾಡಬೇಕೆಂಬ ಯೋಚನೆ ಬರುವುದಿಲ್ಲ. ಶಿಕ್ಷೆಯೇ ಎಲ್ಲದಕ್ಕೂ ಉತ್ತರ ಎಂಬ ಮನಸ್ಥಿತಿ ನಮ್ಮದಾಗಿಬಿಟ್ಟಿದೆ. ಇನ್ನೂ ಸಮಾಧಾನವಾಗದಿದ್ದರೆ ಕೊನೆಗೆ ಭಾರತದ ದೇಶದ ಹಣೆಬರಹವೇ ಇಷ್ಟು ಎಂದು ಜಡ್ಜಮೆಂಟ್ ಪಾಸ್ ಮಾಡಿಬಿಡುತ್ತೇವೆ. ಇಲ್ಲಿ ದೇಶದ ತಪ್ಪೇನಿದೆಯೇ ಅರ್ಥವಾಗಲಿಲ್ಲ.

ಒಂದು ತಿಂಗಳಿಂದ ನೀಟ್ ಪರೀಕ್ಷಾ ಅಕ್ರಮದ ವಿಷಯದಲ್ಲಿ ರಾಷ್ಟ್ರವ್ಯಾಪಿ ನಡೆಯುತ್ತಿರುವ ಹೋರಾಟಗಳಲ್ಲಿ ನೋಡುತ್ತಿರುವುದು ಇದನ್ನೇ ತಾನೇ. ಪ್ರತಿಯೊಬ್ಬರು ಎನ್ ಎಟಿ, ಕೇಂದ್ರ ಸರಕಾರವನ್ನು ಜರಿಯುತ್ತಿದ್ದೇವೆ. ನಿಜ, ಜರಿಯಬೇಕಾದದ್ದೆ, ಏಕೆಂದರೆ ಪರೀಕ್ಷೆ ನಡೆಸುವ ಮಹತ್ತರವಾದ ಜವಬ್ದಾರಿ ಹೊರುವ ಮುನ್ನವೇ ಎಲ್ಲಾ ಸಾಧಕ, ಬಾಧಕಗಳ ಬಗ್ಗೆ ಯೋಚಿಸಿಬೇಕಿತ್ತು, ಈಗ ತಪ್ಪು ಮಾಡಿ, ಸರಿ ಪಡಿಸಿಕೊಳ್ಳುತ್ತೇವೆ ಎಂದರೆ ಹೇಗಾಗುತ್ತದೆ. ಆದರೆ 'ವ್ಯವಸ್ಥೆ' ಒಂದು ಮಾಧ್ಯಮ ಅಷ್ಟೇ ವಿನಃ ಅದು ಮೂಲ ಕಾರಣವಲ್ಲ. ಒಂದು ರೋಗಕ್ಕೆ ಲಸಿಕೆ ಕಂಡುಹಿಡಿಯಲು ವಿಜ್ಞಾನಿಗಳು 'ರೋಗಾಣು' ಎಲ್ಲಿಂದ ಹರಡಿತು ಎಂದು ಸಂಶೋಧನೆ ಮಾಡುವ ಹಾಗೇ ನೀಟ್ ಪರಿಕ್ಷಾ ಅಕ್ರಮ ನಡೆಯಲು ಪ್ರಾಥಮಿಕ ಪ್ರಚೋದನೆ ಎಲ್ಲಿಂದ ಬಂತು? ಅವರು ಯಾರು? ಎಂಬುದಕ್ಕೆ ಉತ್ತರ ಹುಡುಕಲು ಹೊರಟಾಗ ಸಿಗುವ ಉತ್ತರವೇ ಇಂದಿನ ಪಾಲಕರ ಮನಸ್ಥಿತಿ ಎಂದರೆ ತಪ್ಪಾಗಲಾರದು.

ಅಯ್ಯೋ! ನಮ್ಮ ಮಕ್ಕಳ ಉತ್ತಮ ಭವಿಷ್ಯದ ಬಗ್ಗೆ, ಶಿಕ್ಷಣದ ಬಗ್ಗೆ ಯೋಚಿಸುವುದು ತಪ್ಪೇ ಎಂದು ಕೇಳಬಹುದು. ಖಂಡಿತವಾಗಿಯೂ ತಪ್ಪಲ್ಲ. ಆದರೆ ತಮ್ಮ ಮಕ್ಕಳ ಭವಿಷ್ಯ ನಿಂತಿರುವುದು ಕೇವಲ ನೀಟ್, ಜೆಇಇ ಅಂತಹ ಪರೀಕ್ಷೆಯ ಮೇಲೆ ಎಂದು ನಿರ್ಧಾರ ಮಾಡುವುದು ತಪ್ಪು. ಒಂದು ತರಗತಿಯಲ್ಲಿರುವ 100 ವಿದ್ಯಾರ್ಥಿಗಳು ಸಹ ಡಾಕ್ಟರ್, ಎಂಜಿನಿಯರ್ ಆಗಬೇಕೆಂದು ಹೇಳಿದರೆ ಹೇಗೆ ಸಾಧ್ಯ? ಈ ಬಾರಿ ಕರ್ನಾಟಕ ದ್ವಿತೀಯ ಪಿಯುಸಿ ಸೈನ್ಸ್ ವಿಭಾಗದಲ್ಲಿ 2,49,927 ಮಕ್ಕಳು ಉತ್ತೀರ್ಣರಾಗಿದ್ದಾರೆ. ಇವರಲ್ಲಿ ಈ ಬಾರಿ ನೀಟ್ ಹಾಗೂ ಜೆಇಇ ಪರೀಕ್ಷೆಯನ್ನು 2 ಲಕ್ಷ, ಅಂದರೆ ಶೇ.80 ರಷ್ಟು ವಿದ್ಯಾರ್ಥಿಗಳು ಬರೆದಿದ್ದಾರೆ. ಹಾಗಾದರೆ ಎಲ್ಲ ಮಕ್ಕಳ ಸಾಮರ್ಥ್ಯ, ಆಸಕ್ತಿ, ಅಭಿರುಚಿ, ಗುರಿ ಒಂದೇ ರೀತಿ ಇರಬೇಕಲ್ಲವೇ? ವೈಜ್ಞಾನಿಕ ಅದು ಸಾಧ್ಯವಿಲ್ಲ, ಪ್ರತಿಯೊಬ್ಬ ವ್ಯಕ್ತಿಯು ಇನ್ನೊಬ್ಬರಿಗಿಂತ ಹಲವು ವಿಷಯಗಳಲ್ಲಿ ಭಿನ್ನರಿರುತ್ತಾರೆ. ಪ್ರತಿಯೊಬ್ಬ ಮಗುವು ತನ್ನದೇ ಆದ ವೈಶಿಷ್ಟ್ಯತೆಯನ್ನು ಒಳಗೊಂಡಿರುತ್ತದೆ. ಒಬ್ಬ ಮಗುವಿನಲ್ಲಿ ಸಂಗೀತಗಾರನೋ, ಶಿಕ್ಷಕನೋ, ಕ್ರೀಡಾಪಟುವೋ, ಆರ್ಥಿಕ ತಜ್ಞನೋ, ಲೇಖಕನೋ, ಕವಿಯೋ ಇರಬಹುದಲ್ಲವೇ? ಆತನ ಆಸಕ್ತಿ, ಅಭಿರುಚಿಯನ್ನು ಹೊಸಕಿ ಹಾಕಿ, ವೈದ್ಯ ಅಥವಾ ಎಂಜಿನಿಯರ್ ಆಗಲೇ ಬೇಕು ಎಂದು ಹಣೆಬರಹ ಬರೆಯುವುದು ಎಷ್ಟರ ಮಟ್ಟಿಗೆ ಸರಿ. ಇದು ಶೈಕ್ಷಣಿಕ ಸಮತೋಲನಕ್ಕೆ ಕಾರಣವಾಗುತ್ತದೆ. ಇದರ ಪರಿಣಾಮ ಮುಂದೊಂದು ದಿನ ನಾವೆಲ್ಲ ಅನುಭವಿಸಲೇಬೇಕು. ಇದನ್ನೇ ಅಲ್ಲವೇ ಹಿಂದಿಯ ತ್ರಿ ಇಡಿಯಟ್ಸ್ ಚಲನಚಿತ್ರದಲ್ಲಿ ನಾವು ನೋಡಿ ಅರ್ಥ ಮಾಡಿಕೊಂಡು ಮೆಚ್ಚಿರುವುದು.

ಮೂರು ದಶಕದ ಹಿಂದೆ ಹೋಗಿ ನೋಡಿದರೆ ಅಂದಿನ ಪಾಲಕರ ಮನಸ್ಥಿತಿಗೂ, ನಮ್ಮ ಇಂದಿನ ಪಾಲಕರ ಮನಸ್ಥಿತಿಗೂ ಬಹಳ ವ್ಯತ್ಯಾಸ ಕಾಣುತ್ತದೆ. ಹಿಂದೆ ಪಾಲಕರು ನಮ್ಮ ಮಕ್ಕಳು ವೈದ್ಯ, ಎಂಜಿನಿಯರಿಂಗ್ ಆಗಬೇಕೆಂದು ಹಪಹಪಿಸುತ್ತಿರಲಿಲ್ಲ. ಮಕ್ಕಳ ಮೇಲೆ ಯಾವ ಹೆಚ್ಚಿನ ಒತ್ತಡವನ್ನು ಹಾಕುತ್ತಿರಲಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಲಿಸುತ್ತಿರಲಿಲ್ಲ. ಆದರೆ ತಮ್ಮ ಮಕ್ಕಳು ವಿದ್ಯಾವಂತರಾವಬೇಕು, ಚೆನ್ನಾಗಿ ಓದಬೇಕು, ಸುಸಂಸ್ಕೃತನಾಗಿ ಸಮಾಜದಲ್ಲಿ ನೆಮ್ಮದಿಯ ಜೀವನ ಸಾಗಿಸುವಂತಾಗಲಿ ಎಂದಷ್ಟೇ ಬಯಸುತ್ತಿದ್ದರು. ಆದರೆ ಇಂದು ಮಕ್ಕಳು ಹುಟ್ಟುವಾಗಲೇ ವೈದ್ಯ, ಎಂಜಿನಿಯರಿಂಗ್ ಎಂದು ಹಣೆಪಟ್ಟಿ ಕಟ್ಟಿ, ಕನ್ನಡ ಮಾಧ್ಯಮ ಕಲಿತರೆ ಭವಿಷ್ಯವಿಲ್ಲ, ಆಂಗ್ಲ ಮಾಧ್ಯಮ ಶಿಕ್ಷಣವೇ ಬೇಕೆಂದು ನಿರ್ಣಯಿಸಿ, ಹತ್ತನೇ ತರಗತಿ ಇನ್ನೂ ಮುಗಿದಿರುವುದಿಲ್ಲ, ಅಷ್ಟರಲ್ಲೇ ಮುಂದೆ ಯಾವ ಕಾಲೇಜಿನಲ್ಲಿ ಸೀಟ್ ಬುಕಿಂಗ್ ಮಾಡಬೇಕು, ಯಾವ ಕೋಚಿಂಗ್ ಸೆಂಟರ್‌ಗೆ ಸೇರಿಸಬೇಕೆಂದು ನಿರ್ಧರಿಸುತ್ತೇವೆ. ಈ ಸ್ವಭಾವದಿಂದಲೇ ಶಿಕ್ಷಣ ಇಂದು ವ್ಯಾಪಾರೀಕರಣವಾಗಿ ಮಾರ್ಪಟ್ಟಿದೆ. ಸೈನ್ಸ್ ಹಾಗೂ ನೀಟ್‌ಗೆ ಹೆಚ್ಚು ಆದ್ಯತೆ ನೀಡಲು ಕಾರಣವಿಷ್ಟೇ, ಪಾಲಕರ ಸ್ವಪ್ರತಿಷ್ಠೆ ಮತ್ತು ಬೇರೆಯವರ ಜತೆ ಹೋಲಿಕೆ ಮಾಡುಕೊಳ್ಳುವ ಪ್ರವೃತ್ತಿ ಹಾಗೂ ಬೇಗ ಶ್ರೀಮಂತನಾಗಬೇಕೆಂಬ ಈರ್ಷೆಯೇ ಹೊರತು ಮತ್ತೇನು ಅಲ್ಲ.

ಇನ್ನೂ ಪಾಲಕರ ಮೀತಿ ಮೀರಿದ ಒತ್ತಡದಿಂದ ಮಕ್ಕಳು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2017 ರಲ್ಲಿ, 9,905 ವಿದ್ಯಾರ್ಥಿಗಳು ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದಾರೆ. 2018 ರಲ್ಲಿ ಇದು 10,159 ಕ್ಕೆ ಏರಿತು, 2019 ರಲ್ಲಿ, ಈ ಸಂಖ್ಯೆ 10,335 ಆಗಿತ್ತು. ಎನ್ಸಿಆರ್‌ಬಿ ಡೇಟಾ ಪ್ರಕಾರ, 2020 ರಲ್ಲಿ 12,526 ವಿದ್ಯಾರ್ಥಿಗಳು ಆತ್ಮಹತ್ಯೆಯಿಂದ ಸಾವನ್ನಪ್ಪಿದ್ದರೆ, 2021 ರಲ್ಲಿ ಈ ಸಂಖ್ಯೆ 13,089 ಕ್ಕೆ ಏರಿದೆ. ಅವರಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 10,732 ಯುವಕರಲ್ಲಿ 864 ಮಂದಿ 'ಪರೀಕ್ಷೆಯಲ್ಲಿ ವಿಫಲತೆ'ಯಿಂದಾಗಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ವರದಿ ಹೇಳುತ್ತದೆ. ಇನ್ನೂ ಅಧಿಕೃತ ವರದಿ ಪ್ರಕಾರ ಕೋಟಾ ಒಂದರಲ್ಲಿ 2015 ರಿಂದ 2024 ರ ತನಕ 150 ಕ್ಕೂ ಹೆಚ್ಚು ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ದತ್ತಾಂಶವು 2020 ರಲ್ಲಿ ಪ್ರತಿ 42 ನಿಮಿಷಗಳಿಗೊಮ್ಮೆ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳುತ್ತದೆ, ಅಂದರೆ ದಿನಕ್ಕೆ ಸರಾಸರಿ 34 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೀಟ್ ಕೋಚಿಂಗ್‌ಗೆ ಹೆಸರಾದ ಕೋಟಾವನ್ನು ಆತ್ಮಹತ್ಯಾ ಕೇಂದ್ರವೆಂದು ಬೊಬ್ಬಿಡುವವರು ತಮ್ಮ ಮಕ್ಕಳನ್ನು ಅಲ್ಲಿ ಏಕೆ ಸೇರಿಸಬೇಕು ಹೇಳಿ. ಕೋಟಾದಂತಹ ಕೋಚಿಂಗ್ ಸೆಂಟರ್‌ಗಳಿಗೆ ಮೌಲ್ಯ ಹೆಚ್ಚಾಗಲು ಕಾರಣ ಯಾರು?

ಆರ್‌ಟಿಐ ಬಹಿರಂಗಪಡಿಸಿದ ಮಾಹಿತಿಯ ಪ್ರಕಾರ, 2018-22ರಲ್ಲಿ ಒಟ್ಟು 64 ಎಂಬಿಬಿಎಸ್ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದು, 153 ಎಂಬಿಬಿಎಸ್ ಮತ್ತು 1117 ಪಿಜಿ ಡ್ರಾಪ್‌ಔಟ್‌ಗಳಾಗಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ವರದಿಯ ಪ್ರಕಾರ, ವಿಶ್ವದ 10-19 ವರ್ಷ ವಯಸ್ಸಿನ ಪ್ರತಿ ಏಳು ವಿದ್ಯಾರ್ಥಿಗಳಲ್ಲಿ ಒಬ್ಬರು ತಮ್ಮ ಶೈಕ್ಷಣಿಕ ಖಿನ್ನತೆಯನ್ನು ಅನುಭವಿಸುತ್ತಾರೆ. ಈ ಸಂಖ್ಯೆಯು ಮಾನಸಿಕ ಆರೋಗ್ಯ ಕಾಯಿಲೆಗಳ ಜಾಗತಿಕ ಹೊರೆಯ ಶೇಕಡಾ 13 ರಷ್ಟಿದೆ. ಪೋಷಕರ ಒತ್ತಡದಿಂದ ಭಾರತದಲ್ಲಿ ಪ್ರತಿ ಗಂಟೆಗೆ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂಬ ಮತ್ತೊಂದು ಆಘಾತಕಾರಿ ಸಂಗತಿಯನ್ನು ಅದು ಬಹಿರಂಗಪಡಿಸಿದೆ.

ತಮ್ಮ ಮಗುವಿನ ಶೈಕ್ಷಣಿಕ ಅರ್ಹತೆಯ ಬಗ್ಗೆ ತಿಳಿದಿರುವ ಪಾಲಕರು ಹೇಗಾದರೂ ಮಾಡಿ ತನ್ನ ಮಗುವನ್ನು ಟಾಪ್ ರ್ಯಾಂಕ್ ಬರುವಂತೆ ಮಾಡಿ ಎಷ್ಟು ಲಕ್ಷ ಖರ್ಚಾದರೂ ಪರವಾಗಿಲ್ಲ ಎಂದು ಕೋಚಿಂಗ್ ಸೆಂಟರ್ ನಡೆಸುವವರ ಬಳಿ ಗೋಗರೆಯುವುದರಿಂದಲೇ ಸಮಸ್ಯೆಯ ಮೂಲ ಉದ್ಭವಿಸುವುದು. ಪಾಲಕರ ಸಮ್ಮತಿ ಇಲ್ಲದೇ ಅಕ್ರಮ ಹೇಗೆ ನಡೆಯಲು ಸಾಧ್ಯ ಯೋಚಿಸಿ. ಹಣವಿಲ್ಲದಿದ್ದರೂ ಸಾಲ ಮಾಡಿಯಾದರೂ ನೀಡುವ ಮನಸ್ಥಿತಿ ಏಕೆ ಬಂತು? ಏಕೆಂದರೆ ತಾವು ಶಿಕ್ಷಣಕ್ಕಾಗಿ ಹಾಕಿದ ಪೂರ್ಣ ಬಂಡವಾಳವನ್ನು ಬಡ್ಡಿ ಸಮೇತ ವೈದ್ಯರಾದ ಬಳಿಕ ಬಡರೋಗಿಗಳಿಂದ ವಸೂಲಿ ಮಾಡಲು ಸಾಧ್ಯ ಎಂಬ ಫಕ್ಕಾ ಭರವಸೆ. ಇದೇ ಮನಸ್ಥಿತಿ ಉದ್ಯೋಗ ನೇಮಕಾತಿ ವಿಷಯದಲ್ಲೂ ಮುಂದುವರಿಯುತ್ತದೆ. ಇದರಿಂದಲೇ ಭ್ರಷ್ಟಾಚಾರ ಹುಟ್ಟುಕೊಳ್ಳುವುದು. 'ಎಲ್ಲ ಅನಿಷ್ಟಕ್ಕೂ ಶನೈಶ್ಚರ'ನೇ ಕಾರಣ ಎನ್ನುವ ನಾವು, ಇಂದಿನ ಅಕ್ರಮ (ಮಾಫಿಯಾ)ದಂತಹ ವ್ಯವಸ್ಥೆ ನಿರ್ಮಾಣಕ್ಕೆ ಬೇರೆಯವರನ್ನೂ ದೂರುವ ಮುನ್ನ, ನಮ್ಮ ಮನಸ್ಥಿತಿಯ ಬಗ್ಗೆ ಒಮ್ಮೆ ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಒಳಿತು. ನಮ್ಮ ಯೋಚನೆ ಸರಿಯಿದ್ದರೆ, ನಾವು ನೋಡುವ ಪ್ರತಿ ನೋಟವು ಸುಂದರವಾಗಿಯೇ ಕಾಣುತ್ತದೆ ಅಲ್ಲವೇ?

ಮೊದಲೆಲ್ಲ ನಾವು ಪದವಿಯ ತನಕ ನಮ್ಮೂರಿನಲ್ಲೇ ವ್ಯಾಸಂಗ ಮಾಡುತ್ತಿದ್ದೇವು. ಆದರೆ ಈಗ 8ನೇ ತರಗತಿಯಿಂದಲೇ ಬೋರ್ಡಿಂಗ್ ಸ್ಕೂಲ್‌ಗೆ ಲಕ್ಷಾನುಗಟ್ಟಲೇ ಶುಲ್ಕ ನೀಡಿ ಸೇರಿಸುತ್ತಿದ್ದೇವೆ. ಮೇಲ್ನೋಟಕ್ಕೆ ಉತ್ತಮ ಶಿಕ್ಷಣ ನೀಡುವ ಉದ್ದೇಶವೆಂದು ಹೇಳಿದರು ಸಹ, ವಾಸ್ತವದಲ್ಲಿ ಇಂದಿನ ಪಾಲಕರಿಗೆ ತಮ್ಮ ಮಕ್ಕಳನ್ನು ನೋಡಿಕೊಳ್ಳುವ ಸಮಯ, ವ್ಯವದಾನವಿಲ್ಲ. ಪಾಲಕರಿಂದ ದೂರವಾದ ಮಕ್ಕಳು ಇಂದು ಸರಿಯಾದ ಅರೈಕೆ ಇಲ್ಲದೇ ಚಿಕ್ಕ ವಯಸ್ಸಿನಲ್ಲೇ ಮಾದಕ ದ್ರವ್ಯಗಳಿಗೆ ದಾಸರಾಗಿ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅಷ್ಟು ಚಿಕ್ಕ ವಯಸ್ಸಿನಲ್ಲೇ ಮನೆಯ ವಾತಾವರಣದಿಂದ, ತಂದೆ-ತಾಯಿ ಪ್ರೀತಿಯಿಂದ ದೂರವಾದ ಮಗು ಹೇಗೆ ತಾನೇ ಮಾನವೀಯ ಸಂಬಂಧಗಳ ಬಗ್ಗೆ ಕಲಿಯಲು ಸಾಧ್ಯ. ತಮ್ಮ ಊರು, ನಮ್ಮ ನೆಲ-ಜಲ, ಭಾಷೆ ಸಂಸ್ಕೃತಿಯ ಪರಿಚಯವಿಲ್ಲದೇ ನಮಗೂ ಸಮಾಜಕ್ಕೂ ಸಂಬಂಧವೇ ಇಲ್ಲವೆಂಬಂತೆ ಜೀವನ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಮೌಲ್ಯ (ಬ್ರ್ಯಾಂಡ್) ಹೆಚ್ಚಾಗಬೇಕಾದರೆ ಗ್ರಾಹಕರ ಬೇಡಿಕೆಯೇ ಮಹತ್ವದ ಪಾತ್ರ ವಹಿಸುತ್ತದೆ ಎಂಬ ವಾಸ್ತವ ಗೊತ್ತಿದ್ದರೆ, ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಕ್ಕಂತೆ. ಇದು ನೀಟ್ ವಿಷಯದಲ್ಲಿ ಮಾತ್ರವಲ್ಲ, ಪ್ರತಿಯೊಂದು ಮೂಲಭೂತ ಸಮಸ್ಯೆಗಳಲ್ಲೂ ಕಾಣ ಸಿಗುತ್ತದೆ. ನಮ್ಮ ಆಸೆ-ಆಮಿಷಗಳಿಗೆ ಸ್ವಲ್ಪ ಲಂಗು-ಲಗಾಮು ಹಾಕಿಕೊಂಡರೆ, ಪ್ರಾಮಾಣಿಕರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲು ಸಾಧ್ಯ.

ಕೊನೆಯದಾಗಿ, ಶಿಕ್ಷಣದ ಮೂಲ ಗುರಿ ಜ್ಞಾನವನ್ನು ಪಡೆಯುವುದೇ ಹೊರತು ಹೆಚ್ಚು ಅಂಕ ಗಳಿಸುವುದಲ್ಲ. ಆದರೆ ಇಂದು ನಾವೆಲ್ಲರೂ ಅಂಕಗಳ ಹಿಂದೆ ಓಡುತ್ತಿದ್ದೇವೆ. ಈ ಬಾರಿ ನೀಟ್ ಪರೀಕ್ಷೆ ಚೆನ್ನಾಗಿ ಆಗಿಲ್ಲ, ನಿಮ್ಮ ಅಪೇಕ್ಷೆಯನ್ನು ನನ್ನಿಂದ ತಲುಪಲು ಸಾಧ್ಯವಾಗಿಲ್ಲ ಕ್ಷಮಿಸಿ, ಇಂತಿ ನಿಮ್ಮ ಮಗ ಎಂದು ಪತ್ರ ಬರೆದು ಆತ್ಮಹತ್ಯೆ ಮಾಡಿಕೊಳ್ಳತ್ತಲೇ ಇರುವ ಮುಗ್ಧ ಮಕ್ಕಳ ಮನಸ್ಥಿತಿ ಪಾಲಕರಿಗೇಕೆ ಅರ್ಥವಾಗುತ್ತಿಲ್ಲವೋ ಕಾಣೆ?

(ಲೇಖಕರು: ಶಿಕ್ಷಕರು, ಹವ್ಯಾಸಿ ಬರಹಗಾರರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ಮದುವೆ ರಾಜಕಾರಣ

ಚಿತ್ರ ನಟ- ರಾಜಕಾರಣಿ ಆರ್.ಶರತ್‌ಕುಮಾರ್ ಅವರ ಮಗಳು ವರಲಕ್ಷ್ಮೀ ಇತ್ತೀಚೆಗೆ ಮುಂಬೈನಲಿ ಮದುವೆಯಾದರು. ಈಗ ಬಿಜೆಪಿಯಲ್ಲಿರುವ ಶರತ್‌ಕುಮಾರ್ ಅವರು ಮಗಳ ಮದುವೆಗೆ ಕೇಂದ್ರ ಮತ್ತು ತಮಿಳುನಾಡಿನ ಹಲವಾರು ಗಣ್ಯರನ್ನು ಆಹ್ವಾನಿಸಿದ್ದರು. ವಿಪಕ್ಷಗಳನ್ನೂ ಕರೆದಸಿದ್ದರ ಪರಿಣಾಮವಾಗಿ ಬೇರೆ ಪಕ್ಷದವರೂ ಬಂದಿದ್ದರು, ಆದರೆ, ಈ ಮದುವೆಯಿಂದ ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಈ ಮದುವೆಯಿಂದ ದೂರ ಸರೆದಿದ್ದರು. ಏಕೆ ಎಂದು ವಿಚಾರಿಸಿದಾಗ, ಆರ್. ಶರತ್‌ಕುಮಾರ್ ಅವರು ಬಿಜೆಪಿಯ ನಂಟನ್ನು ಹೊಂದಿದ್ದಕ್ಕೆ ಎಂಬ ಉತ್ತರ ಬಂತು. ಅದಾಗ್ಯೂ, ಪಳನಿಸ್ವಾಮಿ ಪಕ್ಷದ ಇನ್ನಿತರ ನಾಯಕರಿಗೆ ವಧುವರರನ್ನು ಆಶೀರ್ವದಿಸಲು ಹೋಗುವುದಿದ್ದರೆ ಹೋಗಿ ಎಂದೂ ಹೇಳಿದ್ದರಂತೆ. ಆದರೆ, ಕೆಲವು ಹಿರಿಯ ನಾಯಕರ ಪ್ರಕಾರ ಪಳನಿಸ್ವಾಮಿಯವರ ಈ ಮಾತು ಸಹ ತಪ್ಪು ಎಂದು ಹೇಳುತ್ತಿದ್ದಾರೆ. ಏನಾದರೂ ಇರಲಿ, ಎಐಎಡಿಎಂಕೆಯಲ್ಲಿ ಏನು ಮಾಡಿದರೂ ದೊಡ್ಡ ವಿಷಯವಾಗುತ್ತಿದೆ ಎನ್ನುವುದೇ ಈಗಿನ ಖಾಸ್‌ಬಾತ್!

ಸೋತರೂ ಗೆಲ್ಲುವುದು

ಕೇರಳದ ಪಥಣಂಥಿಟ್ಟ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಬಿಜೆಪಿ ನಾಯಕ ಅನಿಲ್ ಆ್ಯಂಟನಿ ಸೋತಿರಬಹುದು, ಆದರೆ, ಪಕ್ಷ ಅವರ ಮೇಲೆ ನಂಬಿಕೆಯಿಡುತ್ತಿದೆ. ಅದಕ್ಕೆ ಇಂಬು ನೀಡುವ ರೀತಿಯಲ್ಲೆ ಅನಿಲ್ ಅವರನ್ನು ಬಿಜೆಪಿ ಮೇಘಾಲಯ ಮತ್ತು ನಾಗಾಲ್ಯಾಂಡ್‌ನ ಪಕ್ಷದ ಉಸ್ತುವಾರಿಯಾಗಿ ನೇಮಿಸಿದೆ. ಅದಕ್ಕೂ ಒಂದು ಕಾರಣವಿದೆ, ಹೇಳಿಕೇಳಿ ಆ ಎರಡೂ ರಾಜ್ಯಗಳು ಕ್ರಿಶ್ಚಿಯನ್ ಸಮುದಾಯದ ಅತಿಹೆಚ್ಚು ಮತಗಳನ್ನು ಹೊಂದಿದ್ದಾವೆ. ಅದರ ಜತೆಗೆ ಪಕ್ಷದ ಈ ನಡೆ, ಅನಿಲ್ ಅವರ ವರ್ಚಸ್ಸನ್ನು ಬೆಳೆಸುತ್ತಿದೆ ಎಂಬ ಮಾತೂ ಕೇಳಿಬರುತ್ತಿದೆ. ಇದು ಚುನಾವಣಾ ರಾಜಕಾರಣದಲ್ಲಿ ಪಳಗಿದ ಯುವಕರಿಗೆ ಸಲಹುತ್ತಿರುವುದೂ ಕಂಡುಬರುತ್ತದೆ. ಅದರ ಜತೆಗೆ ಈಶಾನ್ಯ ಭಾರತದ ರಾಜ್ಯಗಳಿಗೆ ಪಕ್ಷದ ವಕ್ತಾರ ಸಂಬಿತ್ ಪಾತ್ರಾರನ್ನು ಸಂಘಟಕರನ್ನಾಗಿ ಆಯ್ಕೆಗೊಳಿಸಿದೆ.

ಮದುವೆಗೆ ಮುಯ್ಯೀ

ರಿಲಯನ್ಸ್ ಕಂಪನಿಯ ಮಾಲೀಕ ಮುಖೇಶ್ ಅಂಬಾನಿಯವರ ಮಗ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚಂಟ್ ಮದುವೆ ಬಗ್ಗೆ ಪ್ರತಿದಿನ ಸುದ್ದಿಗಳನ್ನು ಓದುತ್ತಲೇ ಇದ್ದೀವಿ. ಎಲ್ಲರ ಮನೆಯ ಮದುವೆಗೂ ಅಂಬಾನಿಯವರ ಮದುವೆಗೂ ದೊಡ್ಡ ವ್ಯತ್ಯಾಸವನ್ನೂ ಕಂಡಿದ್ದೇವೆ. ಎಲ್ಲರ ಮನೆ ಮದುವೆ ಒಂದೆರಡು ದಿನದಲ್ಲಿ ಮುಗಿದು ಹೋದರೆ, ಅಂಬಾನಿ ಮನೆ ಮದುವೆ ತಿಂಗಳಿನಿಂದ ನಡೆಯುತ್ತಲೇ ಇದೆ. ಹಾಗೇ ಇದು ಯಾರೂ ಕಂಡುಕೇಳರಿಯದ ವಿಚಾರಗಳನ್ನೂ ಮುನ್ನೆಲೆಗೆ ತಂದಿದೆ. ಎಷ್ಟೋ ಮನೆ ಮದುವೆಗಳಲ್ಲಿ ಅಳಿಯನಿಗೆ ವಾಚ್ ಕೊಡಿಸಿಲ್ಲವೆಂದು, ಸಿಟ್ಟುಗೊಳ್ಳುತ್ತಿದ್ದ ವಿಚಾರವೂ ಸಾಮಾನ್ಯ, ಆದರೆ, ಅಂಬಾನಿ ಮನೆ ಮದುವೆಯಲ್ಲಿ ಬಂದ ಅತಿಥಿಗಳಿಗೆ 2 ಕೋಟಿ ಬೆಲೆ ಬಾಳುವ ವಾಚ್‌ಗಳನ್ನು ಗಿಫ್ಟ್ ನೀಡಿದ್ದಾರೆ. ಎಲ್ಲವನ್ನೂ ಬಿಟ್ಟರೂ, ಇತ್ತೀಚೆಗೆ ಜಿಯೋ ರೀಚಾರ್ಜ್ ಅನ್ನು ಹೆಚ್ಚಿಸಿದ್ದರು. ಹೆಚ್ಚಿನ ಹಣವನ್ನು ಪಾವತಿ ಮಾಡಿರುವವರು, 'ಅಂಬಾನಿ ಮದುವೆಗೆ ಕರೆಯದಿದ್ದರೂ, ರೀಚಾರ್ಜ್ ಹೆಚ್ಚಿಸುವ ಮೂಲಕ ಮುಯ್ಯೀ ಪಡೆದಿದ್ದಾರೆ' ಎಂದು ಮಾತನಾಡಲು ಶುರುಮಾಡಿದ್ದಾರೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 204

ಸಮಾಚಾರ ಸಣ್ಣದಲ್ಲ

ವಿದೇಶಾಂಗ ಕಾರ್ಯದರ್ಶಿ ಮಿಸ್ರಿ ಅಧಿಕಾರ ಸ್ವೀಕಾರ

ದೆಹಲಿ: ಭಾರತದ ನೂತನ ವಿದೇಶಾಂಗ ಕಾರ್ಯದರ್ಶಿಯಾಗಿ ವಿಕ್ರಂ ಮಿಸ್ರಿ ಸೋಮವಾರ ಅಧಿಕಾರ ಸ್ವೀಕರಿಸಿದರು. ಐಎಫ್ಎಸ್‌ನ 1989ರ ಬ್ಯಾಚ್‌ನ ಮಿಸ್ರಿ ಹಿಂದೆ ಬೀಜಿಂಗ್‌ನಲ್ಲಿ ಭಾರತದ ರಾಯಭಾರಿಯಾಗಿದ್ದರು. ಲಡಾಕ್ ಗಡಿಯಲ್ಲಿ ಉಂಟಾದ ಉದ್ವಿಘ್ನ ಸ್ಥಿತಿ ನಿಭಾಯಿಸುವಲ್ಲಿ ಮಹತ್ವ ಪಾತ್ರ ವಹಿಸಿದ್ದರು. ಹಾಗಾಗಿ ಚೀನಾ ಎಕ್ಸ್‌ಪರ್ಟ್ ಎಂದೇ ಖ್ಯಾತರು. ಐ.ಕೆ.ಗುಜ್ರಾಲ್, ಮನಮೋಹನ್ ಸಿಂಗ್, ನರೇಂದ್ರ ಮೋದಿ ಅವರಿಗೆ ಖಾಸಗಿ ಕಾರ್ಯದರ್ಶಿಯಾಗಿದ್ದರು. ರಾಷ್ಟ್ರೀಯ ಭದ್ರತೆ ಉಪ ಸಲಹೆಗಾರರಾಗಿದ್ದರು. ಹಾಗಾಗಿ ರಾಷ್ಟ್ರೀಯ ಭದ್ರತೆ, ವಿದೇಶಾಂಗ ವ್ಯವಹಾರ, ಮುಖ್ಯವಾಗಿ ಚೀನಾ ವಿಚಾರದಲ್ಲಿ ಅವರ ಅನುಭವ ಮತ್ತು ಜ್ಞಾನ ವಿದೇಶಾಂಗ ಕಾರ್ಯದರ್ಶಿ ಹುದ್ದೆಗೆ ಉತ್ತಮ ಆಯ್ಕೆ ಎನ್ನಲಾಗಿದೆ.

ಕೇಜ್ರಿ ತೂಕ 2 ಕೆ.ಜಿ ಇಳಿಕೆ; ಜೈಲು ಸ್ಪಷ್ಟನೆ

ದೆಹಲಿ: ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರ ದೇಹದ ತೂಕ ಸೆರೆವಾಸದಲ್ಲಿ ಕೇವಲ 2 ಕೆ.ಜಿ.ಯಷ್ಟೇ ಇಳಿಕೆಯಾಗಿದೆ ಎಂದು ತಿಹಾರ ಜೈಲು ಅಧಿಕಾರಿಗಳು ಸೋಮವಾರ ಸ್ಪಷ್ಟನೆ ನೀಡಿದ್ದಾರೆ. ಕೇಜ್ರಿವಾಲ್ 8 ಕೆಜಿ ತೂಕ ಇಳಿಕೆಯಾಗಿ, ಮಾರಣಾಂತಿಕ ಕಾಯಿಲೆಗೆ ತುತ್ತಾಗುವ ಆತಂಕವಿದೆ ಎಂದು ಆಮ್ ಆದ್ಮಿ ಪಕ್ಷದ ನಾಯಕರು ಆಪಾದಿಸಿದ್ದರು. ಈ ಆರೋಪ ಅಲ್ಲಗಳೆದಿರುವ ಜೈಲು ಅಧಿಕಾರಿಗಳು ಕೇಜ್ರಿವಾಲ್ ಆರೋಗ್ಯ ತಪಾಸಣೆಯನ್ನು ನಿತ್ಯವೂ ಏಮ್ಸ್ ವೈದ್ಯರೇ ನಡೆಸುತ್ತಿದ್ದಾರೆ. ಜೂ.2ರಂದು ಜೈಲಿಗೆ ಬಂದಾಗ 63.5 ಕೆಜಿ ತೂಕವಿದ್ದರು. ಜು.14ರಲ್ಲಿ 61.5 ಕೆಜಿ ಇದ್ದಾರೆ ಎಂದು ತಿಹಾರ ಸೆರೆಮನೆ ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಅಗ್ನಿಶಾಮಕ ದಳ 6 ಸಿಬ್ಬಂದಿ ಬೆಂಕಿಗೆ ಬಲಿ

ಕೇಪ್‌ಟೌನ್: ದಕ್ಷಿಣಾ ಆಫ್ರಿಕಾದ ಕ್ವಾಜುಲು-ನಾಟಲ್ ಪ್ರಾಂತ್ಯದಲ್ಲಿ ಬೆಂಕಿ ನಂದಿಸಲು ಹೋಗಿದ್ದ ಅಗ್ನಿಶಾಮಕ ದಳದ ಆರು ಸಿಬ್ಬಂದಿ, ಅದೇ ಬೆಂಕಿಯಲ್ಲಿ ಜೀವಂತ ದಹಿಸಿ ಹೋಗಿದ್ದಾರೆ. ಅವಘಡದ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಬಾಸ್ಟನ್ ಪಟ್ಟಣ ಸಮೀಪದ ಕಾಡಿಗೆ ಬೆಂಕಿ ತಗುಲಿದ್ದು, ಸುದ್ದಿ ತಿಳಿದು ಬೆಂಕಿ ನಂದಿಸಲು ಹೋದ ಅಗ್ನಿಶಾಮಕ ದಳದ ತಂಡದಲ್ಲಿದ್ದವರಲ್ಲಿ ಮೊದಲಿಗೆ ಮೂವರು ಸಾವನ್ನಪ್ಪಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಇತರೆ ಮೂವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಕಾಡುಪ್ರಾಣಿಗಳ ಬೇಟೆಯಾಡಲು ಕಿಡಿಗೇಡಿಗಳು ಬೆಂಕಿ ಹಾಕಿರುವ ಶಂಕೆ ವ್ಯಕ್ತವಾಗಿದೆ. ಅವಘಡ ಹಿನ್ನೆಲೆ ಹೆಚ್ಚುವರಿಯಾಗಿ ಹೆಲಿಕಾಪ್ಟರ್ ಮೂಲಕ ಬೆಂಕಿ ನಂದಿಸುವ ಕಾರ್ಯ ನಡೆದಿದೆ.

ವಿದ್ಯಾರ್ಥಿಗೆ ಶಾಸಕನ ಪಂಕ್ಚರ್ ಶಾಪ್ ಸಲಹೆ

ಭೋಪಾಲ್: ಪದವಿ ಶಿಕ್ಷಣ ಉಪಯೋಗಕ್ಕೆ ಬರುವುದಿಲ್ಲ, ಜೀವನ ಸಾಗಿಸಬೇಕೆಂದರೆ ಪಂಕ್ಚರ್ ಶಾಪ್ ತೆರೆಯಿರಿ ಎಂದು ಮಧ್ಯಪ್ರದೇಶ ಗುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕರೊಬ್ಬರು ವಿದ್ಯಾರ್ಥಿಗಳಿಗೆ ಪುಕ್ಕಟೆ ಸಲಹೆ ನೀಡಿದ್ದಾರೆ. ಈ ಸಲಹೆ ವಿದ್ಯಾರ್ಥಿಗಳು ಹಾಗೂ ಕಾಲೇಜು ಆಡಳಿತ ಮಂಡಳಿಗೆ ಆಘಾತ ಉಂಟು ಮಾಡಿದೆ. ತಮ್ಮದೇ ಕ್ಷೇತ್ರದಲ್ಲಿ ಸೋಮವಾರ ಆರಂಭವಾದ 'ಪಿಎಂ ಕಾಲೇಜ್ ಆಫ್ ಎಕ್ಸ್‌ಲೆನ್ಸ್' ಉದ್ಘಾಟನೆಗೆ ಹೋಗಿದ್ದ ಶಾಸಕ ಪನ್ನಾಲಾಲ್ ಶಕ್ಯಾ, ವಿದ್ಯಾರ್ಥಿಗಳಿಗೆ ಇಂಥದೊಂದು ಸಲಹೆ ನೀಡಿ ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಉನ್ನತ ಶಿಕ್ಷಣದ ಮಹತ್ವ ಸಾರಬೇಕಿದ್ದ ಶಾಸಕರ, 'ಪಂಕ್ಚರ್ ಶಾಪ್' ಸಲಹೆ ಅವರನ್ನೇ ಪಂಚರ್ ಮಾಡಿದೆ. ಭಾನುವಾರವಷ್ಟೇ ಕೇಂದ್ರ ಗೃಹ ಸಚಿವ ಅಮಿತ್ ಶಾ, ವರ್ಚುವಲ್ ಮೂಲಕ ರಾಜ್ಯದ 55 ಜಿಲ್ಲೆಗಳಲ್ಲಿ ಪಿಎಂ ಕಾಲೇಜ್ ಆಫ್ ಎಕ್ಸ್‌ಲೆನ್ಸ್ ಉದ್ಘಾಟಿಸಿದ್ದರು. ಹೊಸ ಶಿಕ್ಷಣ ನೀತಿ ಜಾರಿಗೊಳಿಸುವ ಪ್ರಧಾನಿ ಯೋಜನೆ ಬಗ್ಗೆ ಮಾಹಿತಿ ನೀಡಿದ್ದರು.

{ಕೇಶವಪ್ರಸಾದ್ ಮೌರ್ಯ} ಉ.ಪ್ರ. ಡಿಸಿಎಂ

ಇತ್ತೀಚಿನ ಚುನಾವಣೆಯಲ್ಲಿ 80 ಲೋಕಸಭೆ ಕ್ಷೇತ್ರಗಳಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿ ಹಿನ್ನಡೆ ಅನುಭವಿಸುವುದಕ್ಕೆ ರಾಜ್ಯ ಸರಕಾರದ ಧೋರಣೆಯೇ ಕಾರಣ. ಸರಕಾರಕ್ಕಿಂತ ಸಂಘಟನೆ ದೊಡ್ಡದು. ಸದಾ ದೊಡ್ಡದಾಗಿಯೇ ಇರುತ್ತದೆ. ಸರಕಾರದ ಕಡೆಯಿಂದ ಪಕ್ಷದ ಕಾರ್ಯಕರ್ತರಿಗೆ ಸರಿಯಾದ ಗೌರವ ಸಿಗದೇ ಇದ್ದುದರಿಂದ ಪಕ್ಷದ ಸಂಘಟನೆ ಸಡಿಲವಾಗಿ ಪಕ್ಷಕ್ಕೆ ಹಿನ್ನಡೆಯಾಯಿತು.

ಅವಧಿ ಮುಗಿದಿದ್ದರಿಂದ ಬಿಜೆಪಿ ಸಂಸದರ ಬಲ 86ಕ್ಕೆ ಕುಸಿತ | ಎನ್‌ಡಿಎ ರಾಜ್ಯಸಭೆ ಸದಸ್ಯರ ಸಂಖ್ಯೆಯೂ 101ಕ್ಕೆ ಇಳಿಕೆ | ವಿಧೇಯಕಗಳ ಅಂಗೀಕಾರಕ್ಕೆ ಅಗತ್ಯ ಸದಸ್ಯಬಲದ ಕೊರತೆ

ಮೇಲ್ಮನೇಲಿ ಕಮಲ ದುರ್ಬಲ!

ದೆಹಲಿ: ಲೋಕಸಭೆ ಚುನಾವಣೆ-2024ರಲ್ಲಿ 400 ಸ್ಥಾನಗಳ ಗಡಿ ದಾಟುವ ಕನಸು ಕಾಣುತ್ತಿದ್ದ ಭಾರತೀಯ ಜನತಾ ಪಕ್ಷ, ಕಡೆಗೆ 240ಕ್ಕೆ ಸೀಮಿತವಾಯಿತು. ಎನ್‌ಡಿಎ ಮೈತ್ರಿಕೂಟದ ಬಲವೂ 293ಕ್ಕೆ ಮಿತಗೊಂಡಿತು. ಇನ್ನೊಂದೆಡೆ, ರಾಜ್ಯಸಭೆಯಲ್ಲಿ ಯೂ ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟ ಎರಡೂ ದುರ್ಬಲಗೊಂಡಿವೆ. ಪರಿಣಾಮ, ಮಹತ್ವದ ವಿಧೇಯಕಗಳ ಅಂಗೀಕಾರಕ್ಕೆ ಕಷ್ಟವಾಗಿದೆ.

ಬಿಜೆಪಿಯ ನಾಮನಿರ್ದೇಶಿತ ನಾಲ್ವರು ರಾಜ್ಯಸಭಾ ಸದಸ್ಯರು ಅವಧಿ ಮುಗಿದು ನಿವೃತ್ತಿಯಾದ ಹಿನ್ನೆಲೆ ಸಂಸತ್ತಿನ ಮೇಲ್ಮನೆಯಲ್ಲಿ ಬಿಜೆಪಿ ಸದಸ್ಯ ಬಲ 86ಕ್ಕೆ ಕುಸಿದಿದೆ. ಹಾಗೆಯೇ ಎನ್‌ಡಿಎ ಮೈತ್ರಿಕೂಟದ ರಾಜ್ಯಸಭೆ ಸದಸ್ಯ ಬಲವೂ 101ಕ್ಕೆ ಇಳಿಕೆಯಾಗಿದೆ. ಬಿಜೆಪಿ ಬೆಂಬಲಿಸುವ ನಾಲ್ವರು ರಾಜ್ಯಸಭೆ ಸದಸ್ಯರು ಅವಧಿ ಪೂರ್ಣಗೊಂಡಿದ್ದರಿಂದ ಶನಿವಾರ ನಿವೃತ್ತಿ ಹೊಂದಿದ್ದಾರೆ. ಸದ್ಯ ಮೇಲ್ಮನೆಯಲ್ಲಿ 19 ಸ್ಥಾನಗಳು ಖಾಲಿ ಇವೆ. ಜಮ್ಮು-ಕಾಶ್ಮೀರ ಹಾಗೂ ನಾಮನಿರ್ದೇಶಿತ ವಿಭಾಗದಲ್ಲಿ ತಲಾ 4 ಸ್ಥಾನ, ಅಸ್ಸಾಂ ಬಿಹಾರ, ಮಹಾರಾಷ್ಟ್ರದಿಂದ ತಲಾ 2 ಸ್ಥಾನ, ಹರಿಯಾಣ, ತೆಲಂಗಾಣ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರಾದಿಂದ ತಲಾ ಒಂದು ಸ್ಥಾನ ಸೇರಿದಂತೆ 11 ಸದಸ್ಯರ ನೇಮಕವಾಗಬೇಕಿದೆ. ಈ ಪೈಕಿ 10 ಸ್ಥಾನಗಳು ಲೋಕಸಭಾ ಚುನಾವಣೆ ಹಿನ್ನೆಲೆ ಖಾಲಿಯಾಗಿವೆ. ಇನ್ನೊಂದು ಸ್ಥಾನ ತೆಲಂಗಾಣದ ಭಾರತ ರಾಷ್ಟ್ರ ಸಮಿತಿ(ಬಿಆರ್‌ಎಸ್) ಸದಸ್ಯ ಕೆ.ಕೇಶವ್ ರಾವ್ ಅವರ ರಾಜೀನಾಮೆಯಿಂದ ತೆರವಾಗಿದೆ.

ಸದ್ಯದಲ್ಲೇ ಎನ್‌ಡಿಎ ಬಲ ಹೆಚ್ಚಳ: ಹಲವು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಭಾರತೀಯ ಜನತಾ ಪಕ್ಷದ ರಾಜ್ಯಸಭೆಯಲ್ಲಿನ ಸದಸ್ಯ ಬಲ 90ಕ್ಕಿಂತ ಕಡಿಮೆ ಮಟ್ಟಕ್ಕಿಳಿದಿದೆ. ಆದರೆ, ಸದ್ಯದಲ್ಲೇ ಖಾಲಿ ಇರುವ 11 ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿರುವುದರಿಂದ ಕಮಲ ಪಕ್ಷದ ಸದಸ್ಯ ಬಲ ಹೆಚ್ಚಳವಾಗುವ ನಿರೀಕ್ಷೆ ಇದೆ. ಎನ್‌ಡಿಎ ಮೈತ್ರಿಕೂಟ ಮಹಾರಾಷ್ಟ್ರ, ಬಿಹಾರ ಮತ್ತು ಅಸ್ಸಾಂನಲ್ಲಿ ತಲಾ 2 ಸ್ಥಾನ, ಹರಿಯಾಣ, ಮಧ್ಯಪ್ರದೇಶ, ತ್ರಿಪುರಾ, ರಾಜಸ್ಥಾನದಲ್ಲಿ ತಲಾ 1 ಸ್ಥಾನ ಗೆಲ್ಲುವ ವಿಶ್ವಾಸದಲ್ಲಿದೆ. ಆಗ, ಮೇಲ್ಮನೆಯಲ್ಲಿನ ಎನ್‌ಡಿಎ ಸದಸ್ಯ ಬಲದಲ್ಲಿ 10 ಸ್ಥಾನ ಹೆಚ್ಚಳವಾಗಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪಕ್ಷಗಳ ಬಲಾಬಲ

ಬಿಜೆಪಿ	86
ಕಾಂಗ್ರೆಸ್	26
ಟಿಎಂಸಿ	13
ವೈಎಸ್‌ಆರ್ ಕಾಂಗ್ರೆಸ್	11
ಆಮ್ ಆದ್ಮಿ ಪಾರ್ಟಿ	10
ಡಿಎಂಕೆ	10
ಬಿಜೆಡಿ	9
ಆರ್‌ಜೆಡಿ	5
ಬಿಆರ್‌ಎಸ್	4
ಸಿಪಿಎಂ	4
ಜೆಡಿಯು	4
ಎಐಎಡಿಎಂಕೆ	4
ಎಸ್‌ಪಿ	4
ಜೆಎಂಎಂ	3
ಎನ್‌ಸಿಪಿ(ಶರದ್)	2
ಎನ್‌ಸಿಪಿ(ಅಜಿತ್)	2
ಸಿಪಿಐ	2
ಐಯುಎಂಎಲ್	2
ಶಿವಸೇನೆ(ಉದ್ಧವ್)	2
ಎಜಿಪಿ	1
ಬಿಎಸ್‌ಪಿ	1
ಜೆಡಿಎಸ್	1
ಕೇರಳ ಕಾಂಗ್ರೆಸ್	1
ಎಂಡಿಎಂಕೆ	1
ಎಂಎನ್‌ಎಫ್	1
ಎನ್‌ಪಿಪಿ	1
ಪಿಎಂಕೆ	1
ಆರ್‌ಎಲ್‌ಡಿ	1
ಆರ್‌ಪಿಐ	1
ಶಿವಸೇನೆ(ಶಿಂದೆ)	1
ತ.ಮಾನಿಲ ಕಾಂಗ್ರೆಸ್	1
ನಾಮನಿರ್ದೇಶಿತ	7
ಪಕ್ಷೇತರ	3

ನಿವೃತ್ತರಾದ ನಾಲ್ವರು

ರಾಕೇಶ್ ಸಿನ್ಹಾ, ರಾಮ್ ಶಾಕಲ್, ಸೋನಲ್ ಮಾನ್‌ಸಿಂಗ್‌ಹಾಗೂ ಮಹೇಶ್ ಜೆಟ್‌ಮಲಾನಿ ಶನಿವಾರ ನಿವೃತ್ತಿಯಾಗಿದ್ದು ಬಿಜೆಪಿಗೆ ಬಹಿರಂಗವಾಗಿಯೇ ಬೆಂಬಲ ನೀಡಿದ್ದರು. ರಾಷ್ಟ್ರಪತಿಗಳಿಂದ ನಾಮನಿರ್ದೇಶನಗೊಳ್ಳುವ 12 ಸದಸ್ಯರಲ್ಲಿ ಸದ್ಯ 7 ಸದಸ್ಯರು ಯಾವುದೇ ಪಕ್ಷಕ್ಕೆ ತಮ್ಮನ್ನು ಗುರುತಿಸಿಕೊಂಡಿಲ್ಲ. ಆದರೆ ಇಂತಹ ಸದಸ್ಯರು ಯಾವುದಾದರೂ ಬಿಲ್ ಪಾಸ್ ಮಾಡುವ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ ಬೆಂಬಲ ಸೂಚಿಸುವುದು ವಾಡಿಕೆ. ಹೀಗಾಗಿ ಈ ಸದಸ್ಯರ ಬೆಂಬಲ ಎನ್‌ಡಿಎಗೆ ಸಿಗಲಿದೆ.

ಮೇಲ್ಮನೆ ಒಟ್ಟು ಸದಸ್ಯತ್ವ

ಒಟ್ಟು ಸ್ಥಾನ	245
ಈಗಿರುವ ಸದಸ್ಯರು	226
ಬಹುಮತ	113
ಎನ್‌ಡಿಎ	101
ಇಂಡಿಯ ಒಕ್ಕೂಟ	87

ಕ್ರೂಕ್‌ಗೆ ಬಂದೂಕು ಗುರಿ ಇಡಲು ಬರುವುದೇ ಇಲ್ಲ

ಕ್ರೂಕ್ ಗುರಿಕಾರನಲ್ಲ: ಸಹಪಾಠಿಗಳು

ವಾಷಿಂಗ್ಟನ್: ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಗುಂಡಿನ ದಾಳಿ ನಡೆಸಿದ ಆರೋಪಿ 20 ವರ್ಷದ ಥಾಮಸ್ ಮಾಥ್ಯೂ ಕ್ರೂಕ್ ಬಗ್ಗೆ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಸನ್ (ಎಫ್‌ಬಿಐ) ಅಚ್ಚರಿ ಮಾಹಿತಿ ಸಂಗ್ರಹಿಸಿದೆ.

ಕ್ರೂಕ್ ಆಕ್ರಮಣಕಾರಿ ಸ್ವಭಾವದವನಲ್ಲ. ಅಪಾಯಕ್ಕೆ ತನ್ನನ್ನು ಒಡ್ಡಿಕೊಳ್ಳುವಂತಹನೂ ಅಲ್ಲ ಎಂದು ಆತನ ಸ್ನೇಹಿತರು, ಸಹಪಾಠಿಗಳು, ಪೋಷಕರು ಹೇಳಿದ್ದಾರೆಂದು ಟ್ರಂಪ್ ಹತ್ಯಾಯತ್ನ ಪ್ರಕರಣದ ತನಿಖೆ ನಡೆಸಿರುವ ಎಫ್‌ಬಿಐ ಸೋಮವಾರ ತಿಳಿಸಿದೆ. ದಾಳಿ ಹಿಂದಿನ ಉದ್ದೇಶ ತಿಳಿಯುವ ಯತ್ನ ನಡೆಸಿದ್ದೇವೆ. ಅದೇ ಕಾರಣವಾಗಿ ಕ್ರೂಕ್‌ನ ಸಹಪಾಠಿಗಳು, ಸ್ನೇಹಿತರು, ಪೋಷಕರನ್ನ ಮಾತನಾಡಿಸಲಾಗಿದೆ ಎಂದು ಎಫ್‌ಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಏನಾಗುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ. ವಕೀಲರ ಜತೆ ಮಾತನಾಡಿದ ಬಳಿಕ ಪ್ರತಿಕ್ರಿಯಿಸುವುದಾಗಿ ಕ್ರೂಕ್ ಪೋಷಕರು ಹೇಳಿದ್ದಾರೆ. ಕ್ರೂಕ್ ತಂದೆ ತಾಯಿ ಪ್ರಮಾಣೀಕೃತ ಕೌನ್ಸಿಲರ್‌ಗಳಾಗಿದ್ದಾರೆ.

ಕ್ರೂಕ್ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಭಾಗಿಯಾಗಲು ನೋಂದಣಿ ಮಾಡಿಸಿದ್ದ. ಎಡಪಂಥೀಯ ಪಕ್ಷಗಳ ಚುನಾವಣೆಗೆ ಕೆಲಸ ಮಾಡುವ ಸಂಸ್ಥೆಗೆ 15 ಡಾಲರ್ ದೇಣಿಗೆ ನೀಡಿದ್ದ ಎಂದು ತಿಳಿದು ಬಂದಿದೆ. ಆರೋಪಿ ಕ್ರೂಕ್‌ಗೆ ಕ್ರಿಮಿನಲ್ ಹಿನ್ನೆಲೆ ಇಲ್ಲ. ಆತ ಎಸಗಿದ ಕೃತ್ಯಕ್ಕೂ, ಆತನ ಸ್ವಭಾವಕ್ಕೂ ಭಾರಿ ವ್ಯತ್ಯಾಸ ಕಾಣುತ್ತಿದೆ. ಹಾಗಾಗಿ ಆತನ ಉದ್ದೇಶ ಏನಿತ್ತು ಎಂಬುದನ್ನು ತಿಳಿಯಲೆಂದೇ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಎಫ್‌ಬಿಐ ಅಧಿಕಾರಿಗಳು ಹೇಳಿದ್ದಾರೆ. ಬಂದೂಕಿನಿಂದ 6 ಬಾರಿ ಗುಂಡು ಹಾರಿಸಿದ ಕ್ರೂಕ್‌ನೆಡೆಗೆ ದೂರದಿಂದಲೇ ಸ್ನೈಪರ್ ಗುಂಡಿಕ್ಕಿ ಕೊಂದಿದ್ದರು.

ಶಾಲೆ ರೈಫಲ್ ಶೂಟಿಂಗ್ ಸ್ಪರ್ಧೆ ವಿಫಲ

ಟ್ರಂಪ್ ಸಭೆಯಲ್ಲಿ ಮಾತನಾಡುತ್ತಿದ್ದಾಗ ಕ್ರೂಕ್ 139 ಮೀಟರ್ ದೂರದಿಂದ ಆಟೊಮ್ಯಾಟಿಕ್ ರೈಫಲ್‌ನಿಂದ 5 ಗುಂಡು ಹಾರಿಸಿದ್ದ ಎಂದು ಆರೋಪಿಸಲಾಗಿದೆ. ಆದರೆ, ಈತನ ಶೂಟಿಂಗ್ ಇತಿಹಾಸ ಬೇರೆಯದೇ ಹೇಳುತ್ತದೆ. ಬೇಥಲ್ ಪಾರ್ಕ್ ಹೈಸ್ಕೂಲ್‌ನಲ್ಲಿ ಓದಿದ್ದ ಕ್ರೂಕ್, 2022ರಲ್ಲಿ ಪದವಿ ಪಡೆದಿದ್ದ. ಹೈಸ್ಕೂಲ್‌ನಲ್ಲಿ ಪಠ್ಯೇತರ ಚಟುವಟಿಕೆಯಲ್ಲಿ ಕೆಟ್ಟ ಶೂಟರ್ ಎಂದು ತಮಾಷೆಗೆ ಒಳಗಾಗಿದ್ದ ಎಂದಿರುವ ಸಹಪಾಠಿಗಳು, ಕ್ರೂಕ್ ಉತ್ತಮ ಗುರಿಕಾರ ಅಲ್ಲವೇ ಅಲ್ಲ. ಆತನಿಗೆ ಬಂದೂಕು ಹಿಡಿದು ಸರಿಯಾಗಿ ಗುಂಡಿಕ್ಕಲು ಗುರಿ ಇಡುವುದೇ ತಿಳಿದಿಲ್ಲ. ಹೈಸ್ಕೂಲ್ ರೈಫಲ್ ತಂಡದಲ್ಲಿ ಸ್ಥಾನ ಪಡೆಯಲೂ ವಿಫಲನಾಗಿದ್ದ. ಅಂತಹವನು ಮಾಜಿ ಅಧ್ಯಕ್ಷ ಟ್ರಂಪ್ ಅವರ ಹತ್ಯೆಗೆ ಯತ್ನಿಸಿದ್ದ ಎಂದರೆ ನಂಬಲೇ ಆಗುತ್ತಿಲ್ಲ ಎಂದು ಹೇಳಿದ್ದಾರೆ. ಸದಾ ಒಬ್ಬಂಟಿ ಇರುತ್ತಿದ್ದ ಕ್ರೂಕ್, ಅನೇಕ ಬಾರಿ ಹಿರಿಯ ವಿದ್ಯಾರ್ಥಿಗಳಿಂದ ರ‍್ಯಾಗಿಂಗ್‌ಗೆ ಒಳಗಾಗಿದ್ದ. ಏಕಾಂಗಿಯಾಗಿದ್ದರೂ ಚುರುಕಾಗಿದ್ದ. ಆತನಿಗೆ ಯಾವುದೇ ರಾಜಕೀಯ ವಿಚಾರಗಳಿರಲಿಲ್ಲ ಎಂದು ಮತ್ತೊಬ್ಬ ಸ್ನೇಹಿತ ಹೇಳಿದ್ದಾನೆ.

ಚೀನಾ-ರಷ್ಯಾ ಜಂಟಿ ಸಮರಾಭ್ಯಾಸಕ್ಕೆ ಟೀಕೆ

ಬೀಜಿಂಗ್: ಉಕ್ರೇನ್-ರಷ್ಯಾ ಯುದ್ಧ ವಿಚಾರದಲ್ಲಿ ಚೀನಾ ಯುದ್ಧ ಪ್ರೇರಕ ದೇಶ ಎಂದು 'ನ್ಯಾಟೊ' ಸದಸ್ಯರು ಸೋಮವಾರ ಟೀಕಿಸಿದ್ದಾರೆ. ಈ ಟೀಕೆಗೆ ಕಿವಿಗೊಡದ ಚೀನಾ, ರಷ್ಯಾದ ಜತೆ ಸಾಗರದಲ್ಲಿ ಜಂಟಿ ಸಮರಾಭ್ಯಾಸ ಆರಂಭಿಸಿದೆ. ರಷ್ಯಾ ಜತೆ ಚೀನಾ ಸಮರಾಭ್ಯಾಸ ನಡೆಸಿರುವುದು ನ್ಯಾಟೊ ಸದಸ್ಯ ದೇಶಗಳ ಕಣ್ಣು ಕೆಂಪಾಗಿಸಿದೆ.

ಜಂಟಿ ಸಮರಾಭ್ಯಾಸ ಭಾನುವಾರ ಆರಂಭವಾಗಿದ್ದು, ಎರಡೂ ದೇಶಗಳ ಸೇನೆ, ಉತ್ತರ ಹಾಗೂ ಪಶ್ಚಿಮ ಫೆಸಿಫಿಕ್ ಸಾಗರದಲ್ಲಿ ಗಸ್ತು ಕಾರ್ಯ ಕೈಗೊಂಡಿವೆ. ಈಗಿನ ಸೇನಾ ಚಟುವಟಿಕೆಗೂ, ಅಂತಾರಾಷ್ಟ್ರೀಯ ಹಾಗೂ ಸ್ಥಳೀಯ ಸಂದರ್ಭಗಳಿಗೂ ಯಾವುದೇ ಸಂಬಂಧ ಇಲ್ಲ. ಇದು ಯಾವುದೇ ಮೂರನೇ ಪಕ್ಷವನ್ನು ಗುರಿ ಮಾಡಿದ ಕಾರ್ಯವಲ್ಲ ಎಂದು ಚೀನಾ ರಕ್ಷಣಾ ಸಚಿವಾಲಯ ಸೋಮವಾರ ಹೇಳಿಕೆ ನೀಡಿದೆ.

ಗೌಂಗ್‌ಡೊಂಗ್ ಪ್ರಾಂತ್ಯದಲ್ಲಿ ಭಾನುವಾರ ಜಂಟಿ ಸಮರಾಭ್ಯಾಸ ಆರಂಭವಾಗಿದೆ. ಜುಲೈ 3ನೇ ವಾರದವರೆಗೂ ನಡೆಯಲಿದೆ. ಈ ಸಮರಾಭ್ಯಾಸವನ್ನು ಭದ್ರತಾ ಬೆದರಿಕೆ ಹಾಗೂ ಜಾಗತಿಕ ಮತ್ತು ಸ್ಥಳೀಯವಾಗಿ ಶಾಂತಿ ಹಾಗೂ ಸ್ಥಿರತೆ ಕಾಪಾಡುವಲ್ಲಿನ ನೌಕಾದಳದ ಸಾಮರ್ಥ್ಯವನ್ನು ಪ್ರದರ್ಶಿಸುವ ಉದ್ದೇಶದಲ್ಲಿ ನಡೆಸಲಾಗುತ್ತಿದೆ. ಜಂಟಿ ಸಮರಾಭ್ಯಾಸದಲ್ಲಿ ಕ್ಷಿಪಣಿ ನಿರೋಧಕ, ಸಮುದ್ರ ಮತ್ತು ವಾಯು ದಾಳಿಯಂತಹ ತಾಲೀಮು ಕೂಡ ನಡೆಯಲಿದೆ ಎಂದು ಚೀನಾ ಮಾಧ್ಯಮಗಳು ವರದಿ ಮಾಡಿವೆ.

ಹತ್ಯಾಯತ್ನದಲ್ಲಿ ಬದುಕುಳಿದ ಬಗ್ಗೆ ಟ್ರಂಪ್ ಪ್ರತಿಕ್ರಿಯೆ

ಆ ಕ್ಷಣದಿಂದಾಗಿ ಪಾರಾದೆ



ವಾಷಿಂಗ್ಟನ್: ಅಧ್ಯಕ್ಷೀಯ ಚುನಾವಣಾ ಪ್ರಚಾರ ವೇಳೆ ನಡೆದ ಹತ್ಯಾಯತ್ನದ ಬಗ್ಗೆ ಡೋನಾಲ್ಡ್ ಟ್ರಂಪ್ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ.

'ಆ ಒಂದು ಕ್ಷಣ ಬೇರೆಡೆ ಮುಖ ಮಾಡದೇ ಇದ್ದಿದ್ದರೆ ಇಷ್ಟು ಹೊತ್ತಿಗೆ ನಾನು ಮೃತನಾಗಿರುತ್ತಿದ್ದೆ' ಎಂದು ಟ್ರಂಪ್, ತಮ್ಮ ಮೇಲೆ ಶನಿವಾರ ಸಂಜೆ(ಭಾರತದಲ್ಲಿ ಭಾನುವಾರ ಬೆಳಗ್ಗೆ) ನಡೆದ ಹತ್ಯಾಯತ್ನದ ದಾಳಿಯ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಮಾಧ್ಯಮದ ಜತೆ ಮಾತನಾಡಿದ ಟ್ರಂಪ್, ಸಾಮಾನ್ಯವಾಗಿ ನಾನು ಜನಸಮೂಹದ ಕಡೆಗೇ ಮುಖಮಾಡಿ ಮಾತನಾಡುತ್ತೇನೆ. ಬೇರೆಡೆಗೆ ಮುಖ ತಿರುಗಿಸುವುದಿಲ್ಲ. ಆದರೆ ಅಂದು, ಆ ಒಂದು ಕ್ಷಣ ಬೇರೆಡೆಗೆ ಮುಖ ತಿರುಗಿಸಿದ್ದರಿಂದಲೇ ನನ್ನ ಜೀವ ಉಳಿಯಿತು. ಇಲ್ಲವಾಗಿದ್ದರೆ ನಾನು ಆ ದಾಳಿಯಲ್ಲಿ ಸಾವಿಗೀಡಾಗಬೇಕಿತ್ತು ಎಂದರು.

ದಾಳಿ ಬಳಿಕ ಡಯಾಸ್ ಹಿಂದೆ ಬಗ್ಗಿ ಕುಳಿತು ಪಾರಾಗಿದ್ದ ಟ್ರಂಪ್, ಬಳಿಕ ಮೇಲೆದ್ದು ನಿಂತವರೇ ಸುತ್ತುವರಿದಿದ್ದ ಭದ್ರತಾ ಸಿಬ್ಬಂದಿಗಳ ಮಧ್ಯೆಯೇ ಮುಖ ಹೊರ ಚಾಚಿ, ಮುಷ್ಟಿ ಬಿಗಿ ಮಾಡಿ ಮೇಲೆತ್ತಿ 'ಫೈಟ್' ಎಂದು ಘೋಷಣೆ ಮೊಳಗಿಸಿದ್ದರು. ಈ ಸಂದರ್ಭದ ಫೋಟೊ ಭಾರಿ ವೈರಲ್ ಆಗಿದೆ. ಈ ಬಗೆಗೂ ಪ್ರತಿಕ್ರಿಯಿಸಿದ ಟ್ರಂಪ್, ಬಹಳಷ್ಟು ಜನರು ಈ ಫೋಟೊವನ್ನು ತಾವು ನೋಡಿದ ಅಪ್ರತಿಮ ಫೋಟೊ ಎಂದು ಬಣ್ಣಿಸಿದ್ದಾರೆ. ಅವರು ಹೇಳಿದ್ದು ಸರಿಯಾಗಿಯೇ ಇದೆ. ಏಕೆಂದರೆ ನಾನು ಮಡಿದಿಲ್ಲ. ಈವರೆಗಿನ ಅಪ್ರತಿಮ ಫೋಟೊಗಳೆಲ್ಲವೂ ಮಡಿದವರ ಫೋಟೊಗಳೇ ಆಗಿವೆ ಎಂದಿದ್ದಾರೆ. ಜತೆಗೆ ಸೀಕ್ರೆಟ್ ಸರ್ವಿಸ್ ಸಿಬ್ಬಂದಿಯ ಕಾರ್ಯಕ್ಷಮತೆ ಪ್ರಶಂಸಿಸಿದ ಟ್ರಂಪ್, ಅವರು ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದ್ದಾರೆ ಎಂದರು.

ಬೈಡನ್ ಪ್ರತಿಕ್ರಿಯೆ

ಪೆನ್ಸಿಲ್ವೇನಿಯಾದ ಬಟ್ಲರ್‌ನಲ್ಲಿನ ಚುನಾವಣಾ ಪ್ರಚಾರ ಸಭೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ನಡೆದ ಹತ್ಯಾ ಯತ್ನದ ದಾಳಿ ಕುರಿತಾಗಿ ರಾಷ್ಟ್ರದ ಜನರದ್ದೇಶಿಸಿ ಮಾತನಾಡಿದ ಅಧ್ಯಕ್ಷ ಜೋ ಬೈಡನ್, 'ಅಮೆರಿಕದಲ್ಲಿ ಈ ರೀತಿಯ ಹಿಂಸೆಗೆ ಜಾಗವಿಲ್ಲ. ಹಿಂಸಾತ್ಮಕ ಚಟುವಟಿಕೆ ಸಹಿಸಲು ಸಾಧ್ಯವಿಲ್ಲ. ದೇಶದಲ್ಲಿ ರಾಜಕೀಯ ದಂಗೆ ತಾರಕಕ್ಕೇರಿದ್ದು, ಅವನ್ನು ನಿಯಂತ್ರಿಸಲು ಇದು ಸರಿಯಾದ ಸಮಯ. ಭಿನ್ನಾಭಿಪ್ರಾಯ ಏನೇ ಇರಲಿ ಮತಪೆಟ್ಟಿಗೆಯಲ್ಲಿ ಸರಿಪಡಿಸಿಕೊಳ್ಳಬೇಕೆ ಹೊರತು ಗುಂಡಿನ ದಾಳಿಯಿಂದಲ್ಲ. ರಾಜಕೀಯ ಕದನ ಕಣ ಆಗಬಾರದು' ಎಂದಿದ್ದಾರೆ.

ಗಂಟಲುಮಾರಿ, ನಾಯಿಕೆಮ್ಮು, ಧನುರ್ವಾಯು

ಭಾರತದ 16 ಲಕ್ಷ ಮಕ್ಕಳು ಅತ್ಯಗತ್ಯ ಲಸಿಕೆ ವಂಚಿತರು

ದೆಹಲಿ: ಕೋವಿಡ್ ಮಹಾಮಾರಿ ಬಳಿಕ ಭಾರತದ 16 ಲಕ್ಷ ಮಕ್ಕಳು ಅತ್ಯಂತ ಅಗತ್ಯವಾದ ಜೀವರಕ್ಷಕ ಲಸಿಕೆಗಳನ್ನು ಪಡೆಯದೇ ವಂಚಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಸೋಮವಾರ ಕಳವಳ ವ್ಯಕ್ತಪಡಿಸಿದೆ.

2023ರಲ್ಲಿ 16 ಲಕ್ಷ ಮಕ್ಕಳಿಗೆ ಡಿಫ್ತೀರಿಯ (ಗಂಟಲು ಮಾರಿ), ಪರ್ಟ್ಯೂಸಿಸ್(ನಾಯಿಕೆಮ್ಮು), ಟೆಟೆನಸ್(ಧನುರ್ವಾಯು) ಹಾಗೂ ಮೀಸಲ್ಸ್(ದಡಾರ) ಲಸಿಕೆಗಳ ಒಂದು ಡೋಸನ್ನೂ ನೀಡಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಮತ್ತು ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತು ನಿಧಿ(ಯುನಿಸೆಫ್) ಮಹತ್ವದ ಅಂಕಿ ಅಂಶಗಳ 'ಜಾಗತಿಕ ರೋಗ ನಿರೋಧಕ' ವರದಿ ಪ್ರಕಟಿಸಿವೆ. ವರದಿ ಪ್ರಕಾರ 2022ರಲ್ಲಿ 11 ಲಕ್ಷ ಮಕ್ಕಳಿಗೆ ಅಗತ್ಯವಾದ ಚುಚ್ಚುಮದ್ದು ಹಾಕಿರಲಿಲ್ಲ. 2023ರಲ್ಲಿ 16 ಲಕ್ಷ ಮಕ್ಕಳು ಲಸಿಕೆಗಳಿಂದ ವಂಚಿತರಾಗಿದ್ದಾರೆ.

2020-21ರಲ್ಲಿ ಕೋವಿಡ್ ಎದುರಾಗಿದ್ದರಿಂದ ಅತ್ಯಗತ್ಯ ಲಸಿಕೆ ನೀಡುವ ಅಭಿಯಾನಕ್ಕೆ ಹಿನ್ನಡೆಯಾಗಿತ್ತು. ಆದರೆ ಈ ಸಂಖ್ಯೆ 2023ರಲ್ಲೂ ಚೇತರಿಕೆ ಕಂಡಿಲ್ಲ ಎಂದು ವರದಿಯಾಗಿದೆ. ಉತ್ತಮ ಪ್ರಮಾಣದಲ್ಲಿ ಲಸಿಕಾ ಅಭಿಯಾನ ನಡೆಯುತ್ತಿವೆ ಎಂದು ಹೇಳಲಾಗಿದ್ದರೂ ಡಬ್ಲ್ಯುಎಚ್‌ಒ ವರದಿ ಭಾರತದ ಆತಂಕಕ್ಕೆ ಕಾರಣವಾಗಿದೆ.

ಮುಖ್ಯಾಂಶಗಳು

- ವಿಶ್ವ ಆರೋಗ್ಯ ಸಂಸ್ಥೆ-ಯುನಿಸೆಫ್ ಕಳವಳ
- 2023ರಲ್ಲಿ ಒಂದೂ ಡೋಸ್ ನೀಡಲಾಗಿಲ್ಲ
- 2022ರಲ್ಲಿ 11 ಲಕ್ಷ ಮಕ್ಕಳಿಗೆ ಲಸಿಕೆ ನೀಡಿಲ್ಲ
- ಕೋವಿಡ್ ಕಾರಣ 2021-22ರಲ್ಲಿ ಹಿನ್ನಡೆ

ಅಗತ್ಯ ಲಸಿಕೆಗಳ ಒಂದು ಡೋಸ್ ಕೂಡ ಪಡೆಯದ ವಿಶ್ವಾದ್ಯಂತದ ಮಕ್ಕಳ ಸಂಖ್ಯೆ 2022ರಲ್ಲಿ 1.39 ಲಕ್ಷದಷ್ಟಿದ್ದರೆ, 2023ರಲ್ಲಿ 1.45 ಕೋಟಿಗೆ ಏರಿಕೆಯಾಗಿದೆ. ಡಿಫ್ತೇರಿಯಾ ,ಪರ್ಟ್ಯೂಸಿಸ್, ಟೆಟೆನಸ್ ನಂತಹ ಲಸಿಕೆಗಳ 3 ಡೋಸ್ ಪಡೆದ ಮಕ್ಕಳ ಸಂಖ್ಯೆ ಶೇ.84ರಷ್ಟು ಮಾತ್ರ. ಅಂದರೆ 10.8 ಕೋಟಿ ಮಕ್ಕಳು ಮಾತ್ರವೇ ಈ ಲಸಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಡೆದಿವೆ ಎಂದು ವರದಿ ಅಂಕಿ ಅಂಶ ನೀಡಿದೆ.

ಸಂಸತ್ತಿನಲ್ಲಿ ಹೊಗೆ; ಚಾರ್ಜ್-2

ದೆಹಲಿ: ಸಂಸತ್ತಿನ ಒಳಕ್ಕೆ ಪ್ರೇಕ್ಷಕರಂತೆ ನುಸುಳಿ ಸದನದೊಳಕ್ಕೆ ಜಿಗಿದು ಹೊಗೆಬಾಂಬ್ ಸಿಡಿಸಿ ಆತಂಕ ಸೃಷ್ಟಿಸಿದ್ದ ಪ್ರಕರಣದಲ್ಲಿ ತನಿಖಾಧಿಕಾರಿಗಳು ಆರೋಪಿಗಳ ವಿರುದ್ಧ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸೋಮವಾರ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಸಿದರು. ಪ್ರಸ್ತುತ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ(ಯುಎಪಿಎ) ಎಲ್ಲಾ ಆರೋಪಿಗಳ ವಿರುದ್ಧ ಪ್ರಥಮ ದೋಷಾರೋಪ ಪಟ್ಟಿ ಸಲ್ಲಿಸಿದ್ದ ತನಿಖಾಧಿಕಾರಿಗಳ ತಂಡ, ಆರೋಪಿಗಳನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಮಾಹಿತಿ ಮತ್ತು ಸಾಕ್ಷ್ಯಗಳನ್ನು ಸಂಗ್ರಹಿಸಿದೆ. ಆ ಹಿನ್ನೆಲೆಯಲ್ಲಿ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಇದೇ ವೇಳೆ, ನ್ಯಾಯಾಲಯ ಆರೋಪಿಗಳೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಬಳಿಕ ಮುಂದಿನ ವಿಚಾರಣೆಯನ್ನು ಆ.2ಕ್ಕೆ ನಿಗದಿಪಡಿಸಿದೆ.

ಅತಿ ಆತ್ಮವಿಶ್ವಾಸದಿಂದಲೇ ಪೆಟ್ಟು: ಯೋಗಿ

ಲಖನೌ: ಅತಿಯಾದ ಆತ್ಮವಿಶ್ವಾಸವೇ ಬಿಜೆಪಿಗೆ ಪೆಟ್ಟು ನೀಡಿತು. ಉತ್ತರಪ್ರದೇಶದಲ್ಲಿನ ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಹಿನ್ನಡೆಗೆ ಕಾರಣವಾಯಿತು ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿಷಾದಿಸಿದ್ದಾರೆ.

ಪಕ್ಷದ ರಾಜ್ಯ ಕಾರ್ಯಕಾರಿಣಿ ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, ಪಕ್ಷದ ರಾಜ್ಯ ಘಟಕದ ಎಲ್ಲಾ ಪದಾಧಿಕಾರಿಗಳು, ಸಚಿವರು, ಸಂಸದರಿಗೆ ಮುಂಬರಲಿರುವ ವಿಧಾನಸಭಾ ಉಪ ಚುನಾವಣೆ ಹಾಗೂ 2027ರ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು. ಉತ್ತರಪ್ರದೇಶದಲ್ಲಿ ಬಿಜೆಪಿ ಧ್ವಜ ಹಾರಾಟ ಮುಂದುವರಿಯಬೇಕು ಎಂಬ ಗುರಿ ನೀಡಿದರು. ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಭಾಗಿಯಾಗಿದ್ದರು.

ಪ್ರಧಾನಿ ಮೋದಿ ನಾಯಕತ್ವದಲ್ಲಿ 2014, 2017, 2019 ಹಾಗೂ 2022ರಲ್ಲಿ ಬಿಜೆಪಿಯ ಸತತ ಗೆಲುವು ಉತ್ತರಪ್ರದೇಶದಲ್ಲಿ ಪ್ರತಿಪಕ್ಷಗಳ ಮೇಲೆ ಭಾರಿ ಒತ್ತಡ ಹಾಕಿತ್ತು. ಆದರೆ, ಈಗ ಪ್ರತಿಪಕ್ಷಗಳು ಎದೆಯುಬ್ಬಿಸಿ ಗತ್ತಿನಿಂದ ಮಾತನಾಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಬಿಜೆಪಿ ಹಿನ್ನಡೆಗೆ ಮತಗಳು ಬೇರೆ ಪಕ್ಷಗಳಿಗೆ ಹಂಚಿಕೆಯಾಗಿದ್ದು ಒಂದು ಕಾರಣವಾದರೆ, ಅತಿಯಾದ ಆತ್ಮವಿಶ್ವಾಸ ಇನ್ನೊಂದು ಕಾರಣ. ಹಾಗೆಂದು ಯಾರೂ ಹಿಂಜರಿಯುವುದು ಬೇಡ ಎಂದು ಉತ್ತೇಜನದ ಮಾತನಾಡಿದರು.

ಜಾರ್ಖಂಡ್ ಸಿಎಂ ಹೇಮಂತ್ ಸೊರೆನ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಕಾಶ್ಮೀರ ಮಾಜಿ ಸಿಎಂ ದಾಂಪತ್ಯ ಬಿಕ್ಕಟ್ಟಿಗೆ 15 ವರ್ಷ | ಇಬ್ಬರು ಪುತ್ರರು ಸರದಿ ಮೇರೆಗೆ ಅಪ್ಪ-ಅಮ್ಮ ಬಳಿ | ಪತ್ನಿಗೆ 1.50 ಲಕ್ಷ ಜೀವನಾಂಶ

ವಿಚ್ಛೇದನ: ಓಮರ್ ಪತ್ನಿಗೆ ನೋಟಿಸ್

ದೆಹಲಿ: ಕ್ರೌರ್ಯ ಹಾಗೂ ಪರಿತ್ಯಜನೆ ಕಾರಣ ನೀಡಿ ಪತ್ನಿ ಪಾಯಲ್‌ರಿಂದ ವಿಚ್ಛೇದನ ಕೋರಿ 8 ವರ್ಷಗಳಿಂದ ಕಾನೂನು ಹೋರಾಟ ನಡೆಸುತ್ತಿರುವ ಜಮ್ಮು-ಕಾಶ್ಮೀರ ಮಾಜಿ ಮುಖ್ಯಮಂತ್ರಿ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಮುಖಂಡ ಓಮರ್ ಅಬ್ದುಲ್ಲಾ, ಸದ್ಯ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆ ಆರಂಭಿಸಿರುವ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಹಾಗೂ ನ್ಯಾ.ಅಹಸಾನುದ್ದಿನ್ ಅಮಾನುಲ್ಲಾಹ್ ಅವರ ಪೀಠ, ಈ ಸಂಬಂಧ ಪ್ರತಿಕ್ರಿಯೆ ದಾಖಲಿಸುವಂತೆ ಓಮರ್ ಅಬ್ದುಲ್ಲಾ ಪತ್ನಿ ಪಾಯಲ್ ಅಬ್ದುಲ್ಲಾಗೆ ಸೋಮವಾರ ನೋಟಿಸ್ ಜಾರಿ ಮಾಡಿದೆ. 6 ವಾರದೊಳಗೆ ಪ್ರತಿಕ್ರಿಯಿಸುವಂತೆಯೂ ಸೂಚಿಸಿದೆ.

ಓಮರ್ ಅಬ್ದುಲ್ಲಾ-ಪಾಯಲ್ 1994ರ ಸೆ.1ರಂದು ಮದುವೆಯಾಗಿದ್ದು, 15 ವರ್ಷ ಸಂಸಾರ ನಡೆಸಿದ್ದರು. ಬಳಿಕ ದಂಪತಿ ಕಳೆದ 15 ವರ್ಷಗಳಿಂದ ದೂರವಿದ್ದಾರೆ. ಇಬ್ಬರು ಮಕ್ಕಳು ಸದ್ಯ ತಂದೆ-ತಾಯಿ ಇಬ್ಬರ ಕಸ್ಟಡಿಯಲ್ಲೂ ಪಾಳಿ ಲೆಕ್ಕದಲ್ಲಿ ಇದ್ದಾರೆ. ಕ್ರೌರ್ಯದ ಕಾರಣ ನೀಡಿ ಪತ್ನಿಯಿಂದ ಬಿಡುಗಡೆ ಕೋರಿದ ಓಮರ್ 2016ರಲ್ಲಿ ಕಾಶ್ಮೀರದ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ನ್ಯಾಯಾಲಯ, ಓಮರ್ ವಿಚ್ಛೇದನಕ್ಕೆ ನೀಡಿದ ಕಾರಣ ಸಮರ್ಪಕವಾಗಿಲ್ಲ ಎಂದು ಹೇಳಿ ವಿಚ್ಛೇದನ ಮಂಜೂರು ಮಾಡಲು ನಿರಾಕರಿಸಿತು. ಬಳಿಕ ಹೈಕೋರ್ಟ್‌ನಲ್ಲಿಯೂ ಓಮರ್‌ಗೆ ನಿರಾಸೆಯಾಯಿತು. ನ್ಯಾ.ಸಂಜೀವ್ ಸಚ್ದೇವ್ ಹಾಗೂ ನ್ಯಾ.ವಿಕಾಸ್ ಮಹಾಜನ್ ಪೀಠ, ಕೌಟುಂಬಿಕ ನ್ಯಾಯಾಲಯದ ತೀರ್ಪು ಎತ್ತಿಹಿಡಿದು, ವಿಚ್ಛೇದನ ನೀಡಲು ಸಾಧ್ಯವಿಲ್ಲ ಎಂದಿತು. ಅಲ್ಲದೇ, ಮಾಸಿಕ 1.50 ಲಕ್ಷ ರು. ಜೀವನಾಂಶ ಪತ್ನಿಗೂ, ಮಕ್ಕಳಿಗೆ ತಲಾ 60 ಸಾವಿರ ರು.ಗಳನ್ನು ಜೀವನ ನಿರ್ವಹಣೆಗೆ ನೀಡುವಂತೆಯೂ ಹೈಕೋರ್ಟ್ ಓಮರ್ ಅಬ್ದುಲ್ಲಾಗೆ ಸೂಚಿಸಿದೆ. ಹೈಕೋರ್ಟ್ ತೀರ್ಪು ವಿರುದ್ಧ ಓಮರ್ ಸುಪ್ರೀಂಗೆ ಮೇಲ್ಮನವಿ ಸಲ್ಲಿಸಿದ್ದು, ಹಿರಿಯ ವಕೀಲ ಕಪಿಲ್ ಸಿಬಲ್ ವಕಾಲತು ವಹಿಸಿದ್ದಾರೆ.

ಅಮನ್‌ಪ್ರೀತ್ ಸಿಂಗ್ ಸೇರಿ ಐವರ ಸೆರೆ | ಹೈದರಾಬಾದಲ್ಲಿ 200 ಗ್ರಾಂ ಕೊಕೇನ್ ವಶ

ಮಾದಕದ್ರವ್ಯ: ನಟಿ ರಕುಲ್ ಸೋದರ ಸೆರೆ

ಹೈದರಾಬಾದ್: ಮಾದಕ ದ್ರವ್ಯ ಪ್ರಕರಣದಲ್ಲಿ ಬಹುಭಾಷಾ ನಟಿ ರಕುಲ್ ಪ್ರೀತ್ ಸಿಂಗ್ ಅವರ ಕಿರಿಯ ಸೋದರ ಅಮನ್ ಪ್ರೀತ್ ಸಿಂಗ್ ಸೇರಿದಂತೆ ಐವರನ್ನು ಜಂಟಿ ಕಾರ್ಯಾಚರಣೆ ತಂಡ ಹೈದರಾಬಾದ್‌ನಲ್ಲಿ ಸೋಮವಾರ ಬಂಧಿಸಿದೆ.

ಹೈದರಾಬಾದ್ ಹೊರವಲಯದ ರಾಜೇಂದ್ರ ನಗರದಲ್ಲಿ ನಗರ ಪೊಲೀಸ್ ಮತ್ತು ವಿಶೇಷ ಕಾರ್ಯಾಚರಣೆ ತಂಡ ಜಂಟಿ ಕಾರ್ಯಾಚರಣೆ ನಡೆಸಿ 2 ಕೋಟಿ ರು. ಮೌಲ್ಯದ 200 ಗ್ರಾಂ ಕೊಕೇನ್ ವಶಪಡಿಸಿಕೊಂಡಿದೆ. ಇದೇ ವೇಳೆ ಹೈದರಾಬಾದ್ ನಗರಕ್ಕೆ ಮಾದಕ ವಸ್ತು ಸಾಗಿಸಿದ ಹಾಗೂ ದೊಡ್ಡ ಮಟ್ಟದ ವಹಿವಾಟು ನಡೆಸಿದ ಆರೋಪದಡಿ ಅಮನ್ ಪ್ರೀತ್ ಸಿಂಗ್ ಮತ್ತು ಉಳಿದ ನಾಲ್ವರನ್ನು ಬಂಧಿಸಿದೆ. ಅಮನ್ ಸೇರಿದಂತೆ 30 ಜನರ ಬಳಿ ಮಾದಕ ದ್ರವ್ಯ ಇರುವ ನಿಖರ ಮಾಹಿತಿ ಪಡೆದ ಬಳಿಕವೇ ಜಂಟಿ ಕಾರ್ಯಾಚರಣೆ ನಡೆಸಲಾಗಿದೆ. ಬಂಧಿತ ಐವರನ್ನೂ ತಕ್ಷಣವೇ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಬಳಿಕ ನ್ಯಾಯಾಧೀಶರೆದುರು ಹಾಜರುಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡ್ರಗ್ ಸೇವನೆ ದೃಢ

ಅಮನ್ ಪ್ರೀತ್ ಸಿಂಗ್ ಮಾದಕ್ರ ದ್ರವ್ಯವನ್ನು ಸೇವಿಸಿದ್ದರು. ಮೊದಲಿಗೆ ಐವರು ಮಾದಕದ್ರವ್ಯ ಬಳಕೆದಾರರನ್ನು ಠಾಣೆಗೆ ಕರೆತಂದು ಮೂತ್ರ ಪರೀಕ್ಷೆ ಕಿಟ್ ಬಳಸಿ ಪರೀಕೆಗೊಳಪಡಿಸಿದಾಗ ವರದಿ ಪಾಸಿಟಿವ್ ಬಂದಿತು. ಬಳಿಕ ಅವರನ್ನು ಮಾದಕ ದ್ರವ್ಯ ಸೇವನೆ ಆರೋಪದಡಿ ಬಂಧಿಸಲಾಯಿತು. ಬಳಿಕ ಐವರನ್ನೂ ಹೆಚ್ಚಿನ ಪರೀಕ್ಷೆಗಾಗಿ ಸರಕಾರಿ ಆಸ್ಪತ್ರೆಗೆ ಕಳುಹಿಸಲಾಯಿತು ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ನಟಿಗೆ ಹಿಂದೆ ಇ.ಡಿ ವಿಚಾರಣೆ

2021 ಮತ್ತು 2022ರ ಮಾದಕದ್ರವ್ಯದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನಟಿ ರಕುಲ್ ಪ್ರೀತ್ ಸಿಂಗ್ ರನ್ನೂ ಜಾರಿ ನಿರ್ದೇಶನಾಲಯದ ಅಧಿ ಕಾರಿಗಳು ವಿಚಾರಣೆಗೊಳಪ ಡಿಸಿದ್ದರು. ಇ.ಡಿ ಅಧಿಕಾರಿಗಳು ಸಮನ್ಸ್ ನೀಡಿ ಕರೆಸಿ ನಟಿಯ ಹೇಳಿಕೆ ದಾಖಲಿಸಿದ್ದರು. ಅಲ್ಲದೇ, ಮಾದಕವಸ್ತು ಸಾಗಣೆ ಮತ್ತು ಸೇವನೆ ಪ್ರಕರಣದಲ್ಲಿ ನಟಿ ರಕುಲ್ ಪ್ರೀತ್ ಸಿಂಗ್, ನಟರಾದ ರಾಣಾ ದಗ್ಗುಬಾಟಿ, ನವದೀಪ್, ರವಿತೇಜ ಸೋದರನ ಹೆಸರುಗಳೂ ಕೇಳಿಬಂದಿದ್ದವು.

ಸಮಾಚಾರ ಸಣ್ಣದಲ್ಲ

ಪ್ರಧಾನಕುಮಾರ್ ಅರಸ್ ಅಂಪೈರ್ ಸಂಘದ ಅಧ್ಯಕ್ಷ

ಬೆಂಗಳೂರು: ಆರ್.ವಿ.ಪ್ರಧಾನಕುಮಾರ್ ಅರಸ್ ಮತ್ತು ಜೆ.ನಾಗರಾಜ ಅವರು ಕರ್ನಾಟಕ ಕ್ರಿಕೆಟ್ ಅಂಪೈರ್‌ಗಳ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಸಂಘದ 50ನೇ ವಾರ್ಷಿಕ ಮಹಾಸಭೆ ನಡೆದಿದ್ದು, ಈ ವೇಳೆ ಎರಡು ವರ್ಷಗಳ (2024-26) ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳು: ಆರ್.ವಿ. ಪ್ರಧಾನ್ ಕುಮಾರ್ ಅರಸ್ (ಅಧ್ಯಕ್ಷ), ಬಿ.ಎಸ್.ರಘೋತ್ತಮ್ (ಉಪಾಧ್ಯಕ್ಷ), ಜೆ.ನಾಗರಾಜ (ಕಾರ್ಯದರ್ಶಿ), ಎಂ.ಆರ್.ಯೋಗಾನರಸಿಂಹ (ಜಂಟಿ ಕಾರ್ಯದರ್ಶಿ), ಜೆ.ರಾಹುಲ್ ರಾಜ್ (ಖಜಾಂಚಿ). ಕಾರ್ಯಕಾರಿ ಸಮಿತಿ ಸದಸ್ಯರು: ಎಂ.ಎಸ್. ಸುಹಾಸ್, ಮಿಥುನ್ ಎಸ್.ಪಾಟೀಲ್, ಎಂ.ಆರ್. ರವೀಂದ್ರನಾಥ್, ಎನ್.ಶಶಿಧರ್

ಜಲಪಾತದಲ್ಲಿ ಸಿಲುಕಿದ 15 ಪ್ರವಾಸಿಗರ ರಕ್ಷಣೆ

ಮುಂಬೈ: ಮಹಾರಾಷ್ಟ್ರದಲ್ಲಿ ವರುಣಾರ್ಭಟ ಜೋರಾಗಿದ್ದು ಮಂಗಳವಾರವೂ ರೆಡ್ ಅಲರ್ಟ್ ಘೋಷಿಸಲಾಗಿದೆ. ಪ್ರವಾಸಿ ತಾಣಗಳಿಗೆ ಯುವಜನತೆ ದೊಡ್ಡ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ನಾಸಿಕ್‌ನ ಅಂಜನೇರಿ ಜಲಪಾತದಲ್ಲಿ ಸೋಮವಾರ 15 ಪ್ರವಾಸಿಗರ ತಂಡ ಸಂಕಷ್ಟಕ್ಕೆ ಸಿಲುಕಿದ್ದು, ಅವರ ರಕ್ಷಣೆಗೆ ಹರಸಾಹಸ ಪಡಬೇಕಾಯಿತು.

ಅಂಜನೇರಿ ಜಲಪಾತ ವೀಕ್ಷಣೆಗೆಂದು 15 ಪ್ರವಾಸಿಗರ ತಂಡ ತೆರಳಿದ್ದಾಗ ದಿಢೀರ್ ನೀರು ಉಕ್ಕೇರಿದೆ. ಪ್ರವಾಸಿಗರು ನಿಂತಿದ್ದ ಜಾಗದವರೆಗೂ ನೀರು ಆವರಿಸಿದೆ. ತಕ್ಷಣ ಧಾವಿಸಿದ ಅರಣ್ಯ ಇಲಾಖೆ ಸಿಬ್ಬಂದಿ, ಮಾನವ ಸರಪಳಿ ರಚಿಸಿ ಪ್ರವಾಸಿಗರನ್ನು ರಕ್ಷಿಸಿದ್ದಾರೆ. ಈ ರಕ್ಷಣೆ ಕಾರ್ಯಾಚರಣೆ 6 ಗಂಟೆ ನಡೆಸಲಾಗಿದೆ. ಈ ದೃಶ್ಯಾವಳಿಯ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಸ್ಥಳದಲ್ಲಿದ್ದ ಅರಣ್ಯ ಇಲಖೆ ಅಧಿಕಾರಿಗಳು ಪ್ರವಾಸಿಗರಿಗೆ ಧೈರ್ಯವಾಗಿರಲು ಕಿವಿಮಾತು ಹೇಳಿದ್ದಾರೆ. ಒಬ್ಬರ ಕೈ ಮತ್ತೊಬ್ಬರು ಹಿಡಿದುಕೊಂಡು ಮಾನವ ಸರಪಳಿ ರಚಿಸುವಂತೆ ಸಲಹೆ ನೀಡಿದ್ದಾರೆ. ಇದು ರಕ್ಷಣಾ ಕಾರ್ಯಕ್ಕೆ ನೆರವಾಗಿದೆ. ಕೊಂಕಣ್, ಗೋವಾ, ಮಹಾರಾಷ್ಟ್ರ, ಕೇರಳ ಭಾಗದಲ್ಲಿ ಭಾರಿ ಮಳೆಯಾಗುತ್ತಿದ್ದು ಸದ್ಯ ಹಲವೆಡೆ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಕೇರಳದ ಹಲವು ಭಾಗಗಳಲ್ಲಿ ಬಿರುಗಾಳಿ ಜತೆ ಮಳೆಯಾಗುತ್ತಿದ್ದು, ಕೆಲ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ಗುಜರಾತ್: ಬಸ್, ಲಾರಿ ಡಿಕ್ಕಿ, 6 ಸಾವು

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್-ವಡೋದರಾ ಎಕ್ಸ್‌ಪ್ರೆಸ್ ವೇನಲ್ಲಿ ಸೋಮವಾರ ಭೀಕರ ಅಪಘಾತವಾಗಿದೆ. ಆನಂದ್ ನಗರದ ಬಳಿ ಸೋಮವಾರ ನಸುಕಿನ 4.30ರಲ್ಲಿ ಬಸ್ ಮತ್ತು ಲಾರಿ ನಡುವೆ ಅಪಘಾತವಾಗಿದ್ದು, ಮೂವರು ಮಹಿಳೆಯರು ಸೇರಿ 6 ಮಂದಿ ಸಾವನ್ನಪ್ಪಿದ್ದಾರೆ. 8 ಮಂದಿ ಗಾಯಗೊಂಡಿದ್ದಾರೆ. ವಡೋದರಾ ಮಾರ್ಗವಾಗಿ ಸಾಗುತ್ತಿದ್ದ ಬಸ್, ಮಾರ್ಗ ಮಧ್ಯೆ ಪಂಕ್ಚರ್ ಆಗಿದೆ. ಹೀಗಾಗಿ ಬಸ್‌ನಲ್ಲಿದ್ದ ಪ್ರಯಾಣಿಕರೆಲ್ಲಾ ಕೆಳಗೆ ಇಳಿದಿದ್ದಾರೆ. ಈ ವೇಳೆ ಹಿಂದಿನಿಂದ ವೇಗವಾಗಿ ಬಂದ ಲಾರಿ, ಬಸ್ ಪ್ರಯಾಣಿಕರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ಮಾಹಿತಿ ತಿಳಿದ ಅಗ್ನಿಶಾಮಕ ದಳ, ಹೈವೇ ಗಸ್ತು ಪಡೆ, ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಕಾವೇರಿ: ತ.ನಾಡಿನಲಿ ಇಂದು ಸರ್ವಪಕ್ಷ ಸಭೆ

ಚೆನ್ನೈ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿಷಯದಲ್ಲಿ ಕರ್ನಾಟಕ ಸರಕಾರ ಸರ್ವಪಕ್ಷ ಸಭೆಯಲ್ಲಿ ಕೈಗೊಂಡ ನಿರ್ಣಯಕ್ಕೆ ಎಂ.ಕೆ.ಸ್ಟಾಲಿನ್ ಸರಕಾರ ಖಂಡಿಸಿದೆ. ಈ ಬೆಳವಣಿಗೆ ಬಗ್ಗೆ ಚರ್ಚಿಸಲು ಮಂಗಳವಾರ ಚೆನ್ನೈನಲ್ಲಿ ಸಿಎಂ ಸ್ಟಾಲಿನ್ ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಅಂತಾರಾಜ್ಯ ನದಿ ನೀರು ಬಿಕ್ಕಟ್ಟಿನ ಪರಿಹಾರಕ್ಕಾಗಿ ರಾಜ್ಯ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಧಾರಕ್ಕೆ ಬರಲಾಗುವುದು ಎಂದು ರಾಜ್ಯ ಸರಕಾರದ ಮೂಲಗಳು ತಿಳಿಸಿವೆ. ಜು.15ರ ಮಾಹಿತಿ ಪ್ರಕಾರ ಕರ್ನಾಟಕದ ಕಾವೇರಿ ಕಣಿವೆಯ 4 ಜಲಾಶಯಗಳಲ್ಲಿ ಒಟ್ಟು 75.586 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು. ಆದರೆ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಕೇವಲ 13.808 ಟಿಎಂಸಿ ಅಡಿ ನೀರಿದೆ ಎಂದು ಸ್ಟಾಲಿನ್ ಸರಕಾರ ಸೋಮವಾರ ಅಂಕಿ-ಅಂಶ ಪ್ರಕಟಿಸಿದೆ.

ಹವಾಮಾನ ಇಲಾಖೆ ಮುನ್ಸೂಚನೆಯಂತೆ ವಾಡಿಕೆಯಷ್ಟು ಮಳೆಯಾಗುವುದಿದ್ದರೂ, ಕಾವೇರಿ ಜಲ ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ಸೂಚನೆಯಂತೆ ನೀರು ಹರಿಸಲು ಕರ್ನಾಟಕ ಸರಕಾರ ನಿರಾಕರಿಸುತ್ತಿದೆ. ಆ ಮೂಲಕ ತಮಿಳುನಾಡಿನ ರೈತರಿಗೆ ದ್ರೋಹ ಬಗೆಯುತ್ತಿದೆ. ಇಂಥ ಧೋರಣೆ ಸಹಿಸಲು ಸಾಧ್ಯವಿಲ್ಲ ಎಂದು ಸ್ಟಾಲಿನ್ ಸರಕಾರ ಎಚ್ಚರಿಕೆ ನೀಡಿದೆ.

ನಗರದಲ್ಲಿ ಸಂಚಾರ ದಟ್ಟಣೆ ನಿವಾರಣೆ: ಡಿ.ಕೆ.ಶಿವಕುಮಾರ್

1800 ಕೋಟಿ ವೆಚ್ಚದ ವೈಟ್ ಟಾಪಿಂಗ್ ಯೋಜನೆಗೆ ಚಾಲನೆ

ಬೆಂಗಳೂರು: ಬೆಂಗಳೂರಿನ ರಸ್ತೆಗಳು ಪದೇಪದೆ ಕಿತ್ತು ಬರುತ್ತಿರುವ ಹಿನ್ನೆಲೆ ಶಾಶ್ವತ ರಸ್ತೆಗಳನ್ನು ನಿರ್ಮಿಸಲು 1800 ಕೋಟಿ ವೆಚ್ಚದಲ್ಲಿ 157 ಕಿ.ಮೀ ವೈಟ್ ಟಾಪಿಂಗ್ ರಸ್ತೆ ನಿರ್ಮಿಸಲಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬ್ರ್ಯಾಂಡ್ ಬೆಂಗಳೂರು, ಸುಗಮ ಸಂಚಾರ ಬೆಂಗಳೂರು ಪರಿಕಲ್ಪನೆಯಡಿ ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮೀಪುರಗಳಲ್ಲಿ 200 ಕೋಟಿ ವೆಚ್ಚದಲ್ಲಿ 19.67 ಕಿ.ಮೀ ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾಧ್ಯಮಗಳ ಜತೆ ಮಾತನಾಡಿ, ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ಬೀಳಬಾರದು ಎಂಬ ಉದ್ದೇಶದಿಂದ ವೈಟ್ ಟಾಪಿಂಗ್ ರಸ್ತೆ ಮಾಡಲಾಗುತ್ತಿದೆ. ಈ ರಸ್ತೆಗಳು ಸುಮಾರು 25 ವರ್ಷಗಳ ಕಾಲ ಬಾಳಿಕೆ ಬರುತ್ತವೆ. ನಿತ್ಯ ಮೂರು ನಾಲ್ಕು ವಾರ್ಡ್ ಗಳಲ್ಲಿ ಈ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುವುದು. ಕಾಲಮಿತಿಯಲ್ಲಿ ಈ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು 200 ಕಿ.ಮೀ ನಷ್ಟು ಹೊಸ ರಸ್ತೆ ನಿರ್ಮಾಣ ಮಾಡಲು ತೀರ್ಮಾನ ಮಾಡಿದ್ದು, ಉನ್ನತ ಗುಣಮಟ್ಟಕ್ಕಾಗಿ ವೈಟ್ ಟಾಪಿಂಗ್ ಮಾಡಲು ಸೂಚಿಸಲಾಗಿದೆ ಎಂದರು.

ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮೀಪುರಗಳಲ್ಲಿ 19.67 ಕಿ.ಮೀ ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗ ಡಿಸಿಎಂ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

ಸಚಿವ ಜಮೀರ್ ಅಹ್ಮದ್ ಖಾನ್, ದಿನೇಶ್ ಗುಂಡೂರಾವ್, ಸ್ಥಳೀಯ ಶಾಸಕರಾದ ಡಾ. ಸಿ.ಎನ್ ಅಶ್ವತ್ಥ ನಾರಾಯಣ್, ಕೆ. ಗೋಪಾಲಯ್ಯ, ಪಾಲಿಕೆ ಆಡಳಿತಗಾರ ಉಮಾ ಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಜಂಟಿ ಆಯುಕ್ತೆ ಪಲ್ಲವಿ, ಪ್ರಧಾನ ಅಭಿಯಂತರ ಪ್ರಹ್ಲಾದ್ ಮತ್ತಿತರರು ಇದ್ದರು.

ಡಿಸಿಎಂ ಶೂ ಕಳುವು: ಚಾಲನೆಗೂ ಮುನ್ನ ನಡೆಸಲಾದ ಪೂಜೆಯ ವೇಳೆಯಲ್ಲಿ ಡಿ.ಕೆ.ಶಿವಕುಮಾರ್ ರ ಶೂ ಕಳುವಾದ ಘಟನೆಯೂ ನಡೆದಿದೆ. ಸದಾಶಿವನಗರದ ಭಾಷ್ಯಂ ಸರ್ಕಲ್ ಬಳಿ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಈ ವೇಳೆ ಪೂಜೆಯಲ್ಲಿ ಭಾಗಿಯಾಗುವುದಕ್ಕಾಗಿ ಡಿಸಿಎಂ ಶೂ ಬಿಚ್ಚಿಟ್ಟಿದ್ದರು, ಪೂಜೆ ಮುಗಿಸಿ ಕಾರ್ ಬಳಿ ತೆರಳಿದಾಗ ಶೂ ಕಂಡಿರಲಿಲ್ಲ. ಕೆಲ ನಿಮಿಷಗಳ ಕಾಲ ಶೂಗಾಗಿ ಡಿಕೆ ಶಿವಕುಮಾರ್ ಹಾಗೂ ಸಂಗಡಿಗರು ಹುಡುಕಾಟ ನಡೆಸಿದ್ದಾರೆ. ಆದರೆ ಶೂ ಸಿಗಲಿಲ್ಲ. 'ಎಲ್ಲೋಯ್ತಪ್ಪ ನನ್ನ ಶೂ' ಎಂದು ಜನರಿಗೂ ಡಿಕೆ ಶಿವಕುಮಾರ್ ಈ ಸಂದರ್ಭದಲ್ಲಿ ಕೇಳಿದರು. ಆದರೆ ಶೂ ಬಗ್ಗೆ ಯಾರೂ ಕೂಡ ಮಾತೇ ಆಡಲಿಲ್ಲ. ಕೊನೆಗೆ ಶೂ ಸಿಗದೇ ಇದ್ದಿದ್ದಕ್ಕಾಗಿ ಬೇರೆ ಕಾರ್ಯಕ್ರಮಗಳಿಗೆ ತಡವಾದ್ದರಿಂದ ಕಾರಿನಲ್ಲಿ ಇದ್ದ ಬೇರೆ ಶೂ ಧರಿಸಿ ತೆರಳಿದರು.

ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸಲು ಸಚಿವ ಖಂಡ್ರೆ ಕರೆ

16 ಎಸಿಎಫ್‌ಗಳಿಗೆ ನೇಮಕ ಪತ್ರ ವಿತರಣೆ

ವಿಧಾನಸೌಧದ ಕಚೇರಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ ನೇರ ನೇಮಕಾತಿಗೊಂಡ ಅಭ್ಯರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ ನೇಮಕ ಪತ್ರವನ್ನು ಸಚಿವ ಈಶ್ವರ್ ಖಂಡ್ರೆ ವಿತರಿಸಿದರು.

ಬೆಂಗಳೂರು: ಸರಕಾರಿ ಕೆಲಸ ದೇವರ ಕೆಲಸ. ಅರಣ್ಯ ಸಂರಕ್ಷಣೆಯನ್ನು ದೇವರ ಕೆಲಸ ಎಂದು ಮಾಡಿ. ಅರಣ್ಯ ಉಳಿಸಿ, ಪಕ್ಷಿ ಸಂಕುಲ, ಪ್ರಾಣಿಸಂಕುಲ ಮತ್ತು ಕೀಟಸಂಕುಲ ಉಳಿಸಿ, ಕಾಡನ್ನು ಕಾಪಾಡಿ, ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸಲು ಶ್ರಮಿಸಿ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಸೌಧದ ಕಚೇರಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ ನೇರ ನೇಮಕಗೊಂಡ 16 ಅಭ್ಯರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ, ನೇಮಕಪತ್ರ ವಿತರಿಸಿ ಮಾತನಾಡಿದ ಅವರು, ಎಲ್ಲ ವಿದ್ಯಾವಂತರಿಗೂ ಸರಕಾರಿ ನೌಕರರಾಗಿ ಸೇವೆ ಸಲ್ಲಿಸುವ ಅವಕಾಶ ದೊರಕುವುದಿಲ್ಲ. ನಿಮಗೆ ಲಭಿಸಿರುವ ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಅರಣ್ಯ ಮತ್ತು ಅರಣ್ಯ ಸಂಪನ್ಮೂಲ ಹಾಗೂ ವನ್ಯಜೀವಿ ಸಂರಕ್ಷಣೆ ಮಾಡಿ. ಇಂದು ಇಡೀ ವಿಶ್ವ ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯಂತಹ ಬೃಹತ್ ಸವಾಲು ಎದುರಿಸುತ್ತಿದೆ. ಅರಣ್ಯ ಸಂರಕ್ಷಣೆ ಹಿಂದೆಂದಿಗಿಂತಲೂ ಇಂದು ಅತ್ಯಂತ ಮಹತ್ವದ್ದಾಗಿದೆ. ಈ ಕಾಲಘಟ್ಟದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾಗಿರುವ ನೀವು, ಅರಣ್ಯವನ್ನು ಸಂರಕ್ಷಿಸಲು ಇಲಾಖೆಗೆ ಸಹಾಯಕರಾಗಬೇಕು ಎಂದು ತಿಳಿಸಿದ್ದಾರೆ.

ಅರಣ್ಯ ಕಾಯಿದೆ ಅಡಿಯಲ್ಲಿ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಪು ನೀಡುವ ಅಧಿಕಾರ ಬಳಸಿ ಒತ್ತುವರಿ ತೆರವು ಮಾಡಿ, ಜನಸ್ನೇಹಿಯಾಗಿ ಕೆಲಸ ನಿರ್ವಹಿಸಿ ಉತ್ತಮ ಅಧಿಕಾರಿ ಎಂಬ ಹೆಸರು ಗಳಿಸಿ ಎಂದು ಕಿವಿಮಾತು ಹೇಳಿದರು.

> **3 ವರ್ಷ ತರಬೇತಿ**
>
> **ಸೋಮವಾರ ನೇಮಕ ಪತ್ರ ಪಡೆದ ಎಸಿಎಫ್‌ಗಳು 2024ರ ಆಗಸ್ಟ್ 21ರಿಂದ ಎರಡು ವರ್ಷಗಳ ಕಾಲ ಡೆಹರಾಡೂನ್‌ನಲ್ಲಿ ತರಬೇತಿ ಪಡೆಯಲಿದ್ದು ನಂತರ ಒಂದು ವರ್ಷ ರಾಜ್ಯದಲ್ಲಿ ಆನ್‌ಜಾಬ್ ಟ್ರೈನಿಂಗ್ ಪಡೆಯಲಿದ್ದು, ಇದು ಪ್ರೊಬೇಷನರಿ ಅವಧಿಯಾಗಿರುತ್ತದೆ. ನಂತರ ಅವರಿಗೆ ಸ್ಥಳ ನಿಯುಕ್ತಿ ಮಾಡಲಾಗುವುದು.**

ಕೇರಳ: ಮೂವರು ಸಿಬ್ಬಂದಿ ಅಮಾನತು

ಆಸ್ಪತ್ರೆ ಲಿಫ್ಟ್‌ನಲ್ಲಿ ಸಿಲುಕಿದ್ದ ವ್ಯಕ್ತಿ 2 ದಿನ ಬಳಿಕ ಹೊರಕ್ಕೆ

ತಿರುವನಂತಪುರಂ: ಆರೋಗ್ಯ ತಪಾಸಣೆಗೆಂದು ತಿರುವಂತಪುರಂನ ಸರಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಶನಿವಾರ ಬಂದಿದ್ದ 59 ವರ್ಷದ ವ್ಯಕ್ತಿಯೊಬ್ಬರು ಲಿಫ್ಟ್‌ನಲ್ಲಿ ಸಿಲುಕಿಕೊಂಡು 2 ದಿನಗಳ ಕಾಲ ಹೊರಬರಲಾರದೇ ಪರಿತಪಿಸಿದ್ದಾರೆ. ಸೋಮವಾರ ಬೆಳಗ್ಗೆ 10 ಗಂಟೆ ಬಳಿಕ ಹೆಚ್ಚಿನ ಸಿಬ್ಬಂದಿಗಳು ಕೆಲಸಕ್ಕೆ ಹಾಜರಾದ ಬಳಿಕವಷ್ಟೇ ಅವರನ್ನು ರಕ್ಷಣೆ ಮಾಡಲು ಸಾಧ್ಯವಾಗಿದೆ.



ತಿರುವಂತಪುರಂನ ಸರಕಾರಿ ವೈದ್ಯಕೀಯ ಕಾಲೇಜಿನ ಹೊರ ರೋಗಿ ವಿಭಾಗದಲ್ಲಿ ಶನಿವಾರ ಬೆಳಗ್ಗೆ ಚಿಕಿತ್ಸೆಗೆಂದು ಬಂದಿದ್ದ ರವೀಂದ್ರನ್ ನಾಯರ್, ಮೇಲಿನ ಮಹಡಿಗೆ ಹೋಗಲು ಲಿಫ್ಟ್ ಹತ್ತಿದ್ದಾರೆ. ಆದರೆ ಲಿಫ್ಟ್ ಮೇಲೆ ಹೋಗದೇ ಕೆಳಗೆ ಕುಸಿದು ನಿಂತಿದೆ. ಬಾಗಿಲು ಜಾಮ್ ಆಗಿದೆ. ಸಹಾಯಕ್ಕಾಗಿ ಕೂಗಿದರೂ ಯಾರೂ ಪ್ರತಿಕ್ರಿಯಿಸಿಲ್ಲ. ದುರದೃಷ್ಟಕ್ಕೆ ನಯರ್ ಮೊಬೈಲ್ ಫೋನ್ ಕೂಡ ಸ್ವಿಚ್ಡ್ ಆಫ್ ಆಗಿದೆ. ಮನೆಯವರು, ಮಿತ್ರರು ಯಾರ ಸಹಾಯವನ್ನೂ ಕೋರಲು ಸಾಧ್ಯವಾಗಿಲ್ಲ. ಕುಟುಂಬದವರೂ ನಾಯರ್‌ಗಾಗಿ ಹುಡುಕಾಡಿ ಕಡೆಗೆ ಪೊಲೀಸರಿಗೆ ದೂರು ದಾಖಲಿಸಿದ್ದರು.

2ನೇ ಶನಿವಾರ, ಭಾನುವಾರ ರಜೆ ಕಾರಣ 2 ದಿನ ಯಾರೊಬ್ಬರೂ ಲಿಫ್ಟ್‌ನತ್ತ ಗಮನ ಹರಿಸಿಲ್ಲ. ಲಿಫ್ಟ್‌ನಲ್ಲಿದ್ದ ತುರ್ತುಸೇವೆ ಸಂಖ್ಯೆಗೆ ಕರೆ ಮಾಡಿದರೂ ಪ್ರಯೋಜನವಾಗಿಲ್ಲ. ಹತ್ತಾರು ಬಾರಿ ಅಲಾರಾಂ ಬಟನ್ ಒತ್ತಿದರೂ ಯಾರೂ ನೆರವಿಗೆ ಬರಲಿಲ್ಲ. ಸೋಮವಾರ ಬೆಳಗ್ಗೆ ಲಿಫ್ಟ್ ಆಪರೇಟರ್ ಬಂದ ಬಳಿಕವಷ್ಟೇ ನಾಯರ್ ಸಿಲುಕಿರುವುದು ಗೊತ್ತಾಗಿ ರಕ್ಷಿಸಲಾಗಿದೆ. ಸಿಬ್ಬಂದಿ ಬೇಜವಾಬ್ದಾರಿಯೇ ಕಾರಣ ಎನ್ನಲಾಗಿದ್ದು, ಇಬ್ಬರು ಲಿಫ್ಟ್ ಆಪರೇಟರ್, ಒಬ್ಬರು ಸೆಕ್ಯುರಿಟಿ ಸಿಬ್ಬಂದಿಯ ಆಸ್ಪತ್ರೆ ಆಡಳಿತ ಅಮಾನತುಗೊಳಿಸಿದೆ. ಆರೋಗ್ಯ ಸಚಿವೆ ವೀಣಾ ಜಾರ್ಜ್ ತನಿಖೆ ಮಾಡಿ ವರದಿ ನೀಡುವಂತೆ ಆಸ್ಪತ್ರೆ ಅಧೀಕ್ಷಕರಿಗೆ ಸೂಚನೆ ನೀಡಿದ್ದಾರೆ.

4ನೇ ಸುತ್ತಿಗೆ ಅನಾಹತ್, ಶೌರ್ಯ

ದೆಹಲಿ: ವಿಶ್ವ ಜೂನಿಯರ್ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಅನಾಹತ್ ಸಿಂಗ್ ಮತ್ತು ಶೌರ್ಯ ಬಾವಾ ಅವರು ನಾಲ್ಕನೇ ಸುತ್ತು ಪ್ರವೇಶಿಸಿದ್ದಾರೆ. ಬಾಲಕಿಯರ ವಿಭಾಗದ ಮೂರನೇ ಸುತ್ತಿನಲ್ಲಿ ಅನಾಹತ್ ಅವರು 11-7, 12-10, 11-6 ಅಮೆರಿಕದ ಸಮಂತಾ ಜಫ್ ಅವರನ್ನು ಸೋಲಿಸಿದರು. ಕ್ವಾರ್ಟರ್ ಫೈನಲ್ ಪ್ರವೇಶಕ್ಕಾಗಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ಅಕರಿ ಮಿಡೋರಿಕಾವಾ ಅವರ ವಿರುದ್ಧ ಸೆಣಸಲಿದ್ದಾರೆ.



ಇನ್ನು ಬಾಲಕರ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಶೌರ್ಯ ಬಾವಾ ಅವರು 4-11, 11-7, 12-10, 11-6ರಿಂದ ಅಮೆರಿಕದ ರಸ್ಟಿನ್ ಡೈಸರ್ ವಿರುದ್ಧ ಗೆಲುವು ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅರ್ಜೆಂಟೀನಾದ ಸೆಗುಂಡೊ ಪೊರ್ಟಾಬ್ಲೆಸ್ ಅವರನ್ನು ಎದುರಿಸಲಿದ್ದಾರೆ. ಬಾಲಕರ 3ನೇ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಭಾರತದ ಯುವರಾಜ್ ಮಾಧವಾಣಿ ಅವರು 11-8, 6-11, 11-7, 8-11, 6-11ರಿಂದ ಈಕ್ವೆಡಾನರ್ ಎಮಿಲಿಯೊ ಲೋಪೆಜ್ ವಿರುದ್ಧ ಸೋಲನುಭವಿಸಿದರು.

ಬಾಲಕಿಯರ ವಿಭಾಗದಲ್ಲಿ ಟಿಯಾನಾ ಪಾರಸ್ರಾಮ್ಪುರಿ ಅವರು 5-11, 3-11, 3-11ರಿಂದ ಫ್ರಾನ್ಸ್‌ನ ಲೌರೆನ್ ಬಾಲ್ಟಾಯನ್ ವಿರುದ್ಧ ಸೋಲನುಭವಿಸಿದರು. ಎರಡನೇ ಸುತ್ತಿನಲ್ಲಿ ಭಾರತದ ಅಯಾನ್ ವಜಿರಳ್ಳಿ 3-11, 4-11, 9-11ರಿಂದ ವಾಸೇಯ್ ಮಕ್ಸೂದ್ (ಕೆನಡಾ) ವಿರುದ್ಧ ಸೋತರು. ಅರಿಹಂತ್ ಕೆ.ಎಸ್. ಅವರು 11-9, 7-11, 4-11, 7-11ರಲ್ಲಿ ಲೋ ವಾ-ಸೆರ್ನ್ (ಮಲೇಷ್ಯಾ) ವಿರುದ್ಧ ಪರಾಭವಗೊಂಡರು. ಅವಲೋಕಿತ್ ಸಿಂಗ್ 6-11, 5-11, 7-11ರಿಂದಲಿ ಸಿಯೋಜಿನ್ ಓಹ್ (ದಕ್ಷಿಣ ಕೊರಿಯಾ) ವಿರುದ್ಧ ಸೋತರು.

ಸರಣಿಗೆ ಆಸಿಸ್ ತಂಡ ಪ್ರಕಟ

ದೆಹಲಿ: ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ವಿರುದ್ಧ 8 ಪಂದ್ಯಗಳ ಸರಣಿಗೆ ಟಿ20 ಹಾಗೂ ಏಕದಿನಕ್ಕೆ ತಂಡಗಳನ್ನು ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ಪ್ರಕಟಿಸಿದೆ. ವಿಶ್ವಕಪ್ ಸೋಲಿನ ನಂತರ ಆಸ್ಟ್ರೇಲಿಯಾ ತಂಡವು ಸ್ಕಾಟ್ಲೆಂಡ್ ವಿರುದ್ಧ 3 ಟಿ20 ಹಾಗೂ ಇಂಗ್ಲೆಂಡ್ ವಿರುದ್ಧ 3 ಪಂದ್ಯಗಳ ಟಿ20 ಸರಣಿ ಹಾಗೂ 5 ಪಂದ್ಯಗಳ ಏಕದಿನ ಸರಣಿಗಳನ್ನಾಡಲಿದೆ. ಈ ಸರಣಿಗಾಗಿ ಇದೀಗ ಕ್ರಿಕೆಟ್ ಆಸ್ಟ್ರೇಲಿಯಾ ಬಲಿಷ್ಠ ಪಡೆಯನ್ನೇ ಘೋಷಿಸಿದೆ. ಏಕದಿನ ಮತ್ತು ಟಿ20 ಸರಣಿಗಳಿಗಾಗಿ ಆಯ್ಕೆ ಮಾಡಲಾದ ಈ ತಂಡಗಳನ್ನು ಮಿಚೆಲ್ ಮಾರ್ಷ್ ಮುನ್ನಡೆಸಲಿದ್ದಾರೆ. ಇನ್ನು ಟಿ20 ತಂಡದಲ್ಲಿ ಯುವ ಆಟಗಾರರಾದ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಹಾಗೂ ಕೂಪರ್ ಕೊನೊಲಿಗೆ ಸ್ಥಾನ ನೀಡಲಾಗಿದೆ.

ಯುವ ಸ್ಫೋಟಕ ದಾಂಡಿಗ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಟಿ20 ಮತ್ತು ಏಕದಿನ ಎರಡೂ ತಂಡಗಳಲ್ಲಿ ಸ್ಥಾನ ಪಡೆದಿದ್ದು, ಹೀಗಾಗಿ ಮುಂಬರುವ ಸರಣಿಗಳಲ್ಲಿ ಆಸ್ಟ್ರೇಲಿಯಾ ತಂಡದ ಆರಂಭಿಕನಾಗಿ ಕಣಕ್ಕಿಳಿಯುವುದು ಖಚಿತ ಎನ್ನಲಾಗಿದೆ. ಏಕೆಂದರೆ ತಂಡದ ಆರಂಭಿಕನಾಗಿದ್ದ ಡೇವಿಡ್ ವಾರ್ನರ್ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ಇದೀಗ ಅವರ ಸ್ಥಾನಕ್ಕೆ ಜೇಕ್ ಫ್ರೇಸರ್ ಮೆಕ್ ಗುರ್ಕ್ ಅವರನ್ನು ಆಯ್ಕೆ ಮಾಡಲಾಗಿದ್ದು, ಅದರಂತೆ ಟ್ರಾವಿಸ್ ಹೆಡ್ ಜತೆ ಮೆಕ್‌ಗುರ್ಕ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ.

ಮ್ಯಾಕ್ಸ್‌ವೆಲ್‌ಗಿಲ್ಲ ಸ್ಥಾನ: 2023ರ ಏಕದಿನ ವಿಶ್ವಕಪ್ ವಿಜೇತ ತಂಡದ ನಾಯಕ ಪ್ಯಾಟ್ ಕಮಿನ್ಸ್ ಈ ಸರಣಿಗಳಿಂದ ಹೊರಗುಳಿದಿದ್ದಾರೆ. ಹೀಗಾಗಿ ಏಕದಿನ ತಂಡವನ್ನು ಮಿಚೆಲ್ ಮಾರ್ಷ್ ಮುನ್ನಡೆಸಲಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ. ಆದರೆ ಟಿ20 ತಂಡದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಗೆ ಸ್ಥಾನ ನೀಡಲಾಗಿಲ್ಲ. ಇತ್ತೀಚೆಗೆ ಮುಗಿದ ಟಿ20 ವಿಶ್ವಕಪ್‌ನಲ್ಲಿ ಮ್ಯಾಕ್ಸಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರು. ಹೀಗಾಗಿ ಅವರನ್ನು ಆಯ್ಕೆಗೆ ಪರಿಗಣಿಸಲಾಗಿಲ್ಲ ಎಂದು ತಿಳಿದು ಬಂದಿದೆ. ಇದಾಗ್ಯೂ ಏಕದಿನ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಯಶಸ್ವಿಯಾಗಿದ್ದಾರೆ.

ಭಾರತ ಪಾಕ್‌ಗೆ ಬರದಿದ್ದರೆ, ನಾವೂ ವಿಶ್ವಕಪ್‌ಗೆ ಬರಲ್ಲ

ಚಾಂಪಿಯನ್ಸ್ ಟ್ರೋಫಿ ವರದಿಗಳಿಗೆ ಪಿಸಿಬಿ ಉತ್ತರ | ಲಿಖಿತ ವರದಿ ನೀಡುವಂತೆ ಬಿಸಿಸಿಐಗೆ ಒತ್ತಾಯ

ದೆಹಲಿ: ಚಾಂಪಿಯನ್ಸ್ ಟ್ರೋಫಿ ಆಡಲು ಭಾರತ ತಂಡ ಪಾಕಿಸ್ತಾನಕ್ಕೆ ಹೋಗಲ್ಲ ಎಂಬ ವರದಿ ಹರಿದಾಡುತ್ತಿದ್ದು, ಇದೀಗ ಪಾಕ್ ಕ್ರಿಕೆಟ್ ಬೋರ್ಡ್ ಈ ಬಗ್ಗೆ ಹೇಳಿಕೆಯೊಂದನ್ನು ನೀಡಿದ್ದು ಭಾರೀ ಚರ್ಚೆಗೆ ಕಾರಣವಾಗಿದೆ.

ಈ ಹಿಂದೆ ಭಾರತ ತಂಡವು ಪಾಕಿಸ್ತಾನದಲ್ಲಿ ನಡೆಯಲಿರುವ 2025ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾಗವಹಿಸುವುದಿಲ್ಲ ಎಂದು ವರದಿಯಾದಿತ್ತು. ಈ ಬಗ್ಗೆ ಇದೀಗ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೇಳಿಕೆ ನೀಡಿದ್ದು, ಒಂದು ವೇಳೆ ಭಾರತ ಪಾಕಿಸ್ತಾನಕ್ಕೆ ಬರದಿದ್ದರೆ, ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಿರುವ 2026ರ ಟಿ20 ವಿಶ್ವಕಪ್‌ನಿಂದ ಹಿಂದೆ ಸರಿಯುವುದಾಗಿ ಬೆದರಿಕೆ ಹಾಕಿದೆ ಎಂದು ವರದಿಯಾಗಿದೆ. ಪಾಕಿಸ್ತಾನದಲ್ಲಿ ನಡೆಯಲಿರುವ ಈ ಟೂರ್ನಿ ಸಂಬಂಧಿಸಿದಂತೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಈಗಾಗಲೇ ಐಸಿಸಿಗೆ ಕರಡು ವೇಳಾಪಟ್ಟಿಯನ್ನೂ ಸಲ್ಲಿಸಿದೆ. ಈ ಕರಡು ಪ್ರತಿಯ ಪ್ರಕಾರ ಭಾರತದ ಪಂದ್ಯಗಳು ಲಾಹೋರ್‌ನಲ್ಲಿ ನಡೆಯಲಿವೆ. ಆದರೆ ಎಎನ್‌ಐ ವರದಿ ಪ್ರಕಾರ ಭಾರತ ತಂಡ ಚಾಂಪಿಯನ್ಸ್ ಟ್ರೋಫಿಗಾಗಿ ಪಾಕಿಸ್ತಾನಕ್ಕೆ ತೆರಳದಿದ್ದರೆ ಅಥವಾ ಭಾರತ ತಂಡವನ್ನು ಕಳುಹಿಸಲು ಭಾರತ ಸರಕಾರ ಒಪ್ಪದಿದ್ದರೆ ಈ ಬಗ್ಗೆ ಲಿಖಿತ ಪುರಾವೆಯನ್ನು ಬಿಸಿಸಿಐ ನೀಡಬೇಕೆಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಕೇಳಿದೆ ಎಂದು ಮೂಲಗಳು ತಿಳಿಸಿವೆ.

ಲಿಖಿತ ವರದಿಗೆ ಪಾಕ್ ಒತ್ತಾಯ: ಟೀಂ ಇಂಡಿಯಾವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಭಾರತ ಸರಕಾರ ನಿರಾಕರಿಸಿದರೆ, ಈ ಸಂಬಂಧ ನಮಗೆ ಲಿಖಿತ ಪುರಾವೆ ಬೇಕು ಮತ್ತು ಈ ಪುರಾವೆಯನ್ನು ಬಿಸಿಸಿಐ, ಐಸಿಸಿಗೆ ಸಲ್ಲಿಸಬೇಕು. ಅದರಲ್ಲೂ ಈ ಲಿಖಿತ ಪುರಾವೆಯನ್ನು ಟೂರ್ನಿ ಆರಂಭಕ್ಕೆ ಐದಾರು ತಿಂಗಳು ಇರುವ ಮುಂಚೆಯೇ ನೀಡಬೇಕು ಎಂದು ಪಿಸಿಬಿ ಒತ್ತಾಯಿಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ವರದಿ ಮಾಡಲಾಗಿದೆ.

ಏನಿದು ಹೈಬ್ರಿಡ್ ಮಾದರಿ?: ಹೈಬ್ರಿಡ್ ಮಾದರಿ ಅಂದರೆ ಭಾರತದ ಪಂದ್ಯಗಳನ್ನು ಯುಎಇ ಅಥವಾ ಶ್ರೀಲಂಕಾದಲ್ಲಿ ಆಯೋಜಿಸಬೇಕು ಎಂದು ಬಿಸಿಸಿಐ, ಐಸಿಸಿ ಬಳಿ ಮನವಿ ಮಾಡಿದ ಎಂದು ವರದಿಯಾಗಿದೆ. 2023ರಲ್ಲಿ ನಡೆದಿದ್ದ ಏಷ್ಯಾಕಪ್ ಸಹ ಇದೇ ಮಾದರಿಯಲ್ಲಿ ನಡೆದಿತ್ತು. ಅದರಂತೆ ಈ ಬಾರಿಯೂ ಹೈಬ್ರಿಡ್ ಮಾದರಿಯಲ್ಲಿ ನಡೆಸಬೇಕು ಎಂಬುದು ಬಿಸಿಸಿಐ ವಾದವಾಗಿದೆ ಎಂಬುವುದು ಮೂಲಗಳಿಂದ ತಿಳಿದುಬಂದಿದೆ.

ಹೈಬ್ರಿಡ್ ಮಾದರಿಗೂ ವಿರೋಧ: ಒಂದು ವೇಳೆ ಭಾರತ ಚಾಂಪಿಯನ್ಸ್ ಟ್ರೋಫಿ ಆಡಲು ಪಾಕಿಸ್ತಾನಕ್ಕೆ ಬರದಿದ್ದರೆ, ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಿರುವ 2026ರ ಟಿ20 ವಿಶ್ವಕಪ್‌ನಿಂದ ಹಿಂದೆ ಸರಿಯುವುದಾಗಿ ಪಿಸಿಬಿ ಬೆದರಿಕೆ ಹಾಕಿದೆ ಎಂದು ವರದಿಯಾಗಿದೆ. ಜಿಯೋ ನ್ಯೂಸ್ ಪ್ರಕಾರ, ಪಿಸಿಬಿ ಸಂಪೂರ್ಣ ಪಂದ್ಯಾವಳಿಯನ್ನು ಪಾಕಿಸ್ತಾನದಲ್ಲಿ ಆಯೋಜಿಸುವ ಬಗ್ಗೆ ಅಚಲವಾಗಿದ್ದು, ಜುಲೈ 19 ರಿಂದ 22 ರ ನಡುವೆ ಕೊಲಂಬೊದಲ್ಲಿ ನಡೆಯಲ್ಲಿರುವ ಐಸಿಸಿಯ ವಾರ್ಷಿಕ ಸಮ್ಮೇಳನದಲ್ಲಿ ಯಾವುದೇ ಹೈಬ್ರಿಡ್ ಮಾದರಿಯ ಪ್ರಸ್ತಾಪವನ್ನು ವಿರೋಧಿಸುವ ಬಗ್ಗೆ ತೀರ್ಮಾನಿಸಿದೆ ಎಂದು ವರದಿಯಾಗಿದೆ.

> **ರಾಜೀವ್ ಶುಕ್ಲಾ ಸ್ಪಷ್ಟನೆ**
>
> **ಇನ್ನು ಪಾಕಿಸ್ತಾನ ಈ ಬಗ್ಗೆ ಹೇಳಿಕೆ ನೀಡುತ್ತಿದ್ದಂತೆ ಭಾರತೀಯ ಕ್ರಿಕೆಟ್ ಮಂಡಳಿಯ ಉಪಾಧ್ಯಕ್ಷ ರಾಜೀವ್ ಶುಕ್ಲಾ ಹೇಳಿಕೆ ನೀಡಿದ್ದು, ಟೀಂ ಇಂಡಿಯಾವನ್ನು ಪಾಕಿಸ್ತಾನಕ್ಕೆ ಕಳುಹಿಸುವ ಬಗ್ಗೆ ಭಾರತ ಸರಕಾರವಾಗಲಿ ಅಥವಾ ಬಿಸಿಸಿಐ ಆಗಲಿ ಯಾವುದೇ ಚರ್ಚೆಯನ್ನು ಇದುವರೆಗೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅದಾಗ್ಯೂ ಟೀಂ ಇಂಡಿಯಾ ಪಾಕಿಸ್ತಾನಕ್ಕೆ ಪ್ರಯಾಣಿಸುವುದು ಅನುಮಾನ ಎಂದು ಹೇಳಲಾಗುತ್ತಿದೆ. ಭಾರತ ತಂಡ ಪಾಕಿಸ್ತಾನಕ್ಕೆ ಹೋಗುವ ಬದಲಿಗೆ, ಈ ಪಂದ್ಯಾವನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಬೇಕು ಎಂದು ಬಿಸಿಸಿಐ ಕೇಳಿಕೊಂಡಿದೆ ಎಂದು ವರದಿಯಾಗಿದೆ.**

ಕ್ರೀಡಾಂಗಣದಲ್ಲಿ ತಂಬಾಕು ಜಾಹೀರಾತು ನಿಷೇಧ?

ಯುವಕರನ್ನು ಉತ್ತೇಜಿಸುವ ಜಾಹೀರಾತನ್ನು ಹಾಕದಂತೆ ಕೇಂದ್ರ ಸರಕಾರದ ಕ್ರಮ



ದೆಹಲಿ: ಕ್ರಿಕೆಟ್ ಕ್ರೀಡಾಂಗಣಗಳಲ್ಲಿ ತಂಬಾಕು ಜಾಹೀರಾತುಗಳ ಪ್ರಚಾರ ಮಾಡುವುದನ್ನು ಕೇಂದ್ರ ಸರಕಾರ ನಿಷೇಧಿಸಲಿದ್ದು, ಕೇಂದ್ರ ಆರೋಗ್ಯ ಸಚಿವಾಲಯವು ಶೀಘ್ರದಲ್ಲೇ ಈ ಬಗ್ಗೆ ಬಿಸಿಸಿಐ ಜತೆ ಮಾತುಕತೆ ನಡೆಸಲಿದೆ ಎಂದು ತಿಳಿದುಬಂದಿದೆ.

ಭಾರತದಲ್ಲಿ ಕ್ರಿಕೆಟ್‌ನ ಕೋಟ್ಯಾಂತರ ಅಭಿಮಾನಿಗಳಿದ್ದಾರೆ. ಹೀಗಾಗಿ ಬಿಸಿಸಿಐ ಖಜಾನೆ ವರ್ಷದಿಂದ ವರ್ಷಕ್ಕೆ ಭರ್ತಿಯಾಗುತ್ತಲೆ ಸಾಗುತ್ತಿದೆ. ಆದ್ದರಿಂದ ಬಿಸಿಸಿಐನ ಹಿಂದೆ ಬಿದ್ದಿರುವ ಕೆಲವು ತಂಬಾಕು ಉತ್ಪನ್ನಗಳ ಕಂಪನಿಗಳು ತಮ್ಮ ಉತ್ಪನ್ನಗಳ ಪ್ರಚಾರಕ್ಕೆ ಕ್ರಿಕೆಟ್ ಅನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಹಾಗಾಗಿ ಊಹೆಗೂ ಮೀರಿದ ಹಣ ನೀಡಿ ಕ್ರಿಕೆಟ್ ಪಂದ್ಯಾವಳಿಗಳ ವೇಳೆ ತಮ್ಮ ಉತ್ಪನ್ನಗಳನ್ನು ಪ್ರಚಾರ ಮಾಡುತ್ತವೆ. ಇದರಿಂದ ತಂಬಾಕು ಸೇವನೆಯಂತಹ ದುಶ್ಚಟಕ್ಕೆ ಬಲಿಯಾಗುವವರ ಸಂಖ್ಯೆಯೂ ಹೆಚ್ಚಾಗಿದೆ. ಹೀಗಾಗಿ ಇದನ್ನು ನಿಯಂತ್ರಣಕ್ಕೆ ತರುವ ನಿಟ್ಟಿನಲ್ಲಿ ಕೇಂದ್ರ ಆರೋಗ್ಯ ಸಚಿವಾಲಯ ಮಹತ್ವದ ಕ್ರಮ ಕೈಗೊಳ್ಳಲು ಮುಂದಾಗಿದೆ.

17 ಪಂದ್ಯಗಳಲ್ಲಿ ಶೇ.41ಜಾಹೀರಾತು : ವರದಿಗಳ ಪ್ರಕಾರ, 2023ರ ಏಕದಿನ ವಿಶ್ವಕಪ್‌ನ ಕೊನೆಯ 17 ಪಂದ್ಯಗಳಲ್ಲಿ ಐಸಿಎಂಆರ್ ಮತ್ತು ವೈಟಲ್ ಸ್ಟ್ರಾಟಜೀಸ್ ಶೇ.41ದಷ್ಟು ಧೂಮಪಾನ ಮತ್ತು ತಂಬಾಕು ಜಾಹೀರಾತುಗಳನ್ನು ತೋರಿಸಲಾಗಿದೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಕ್ರೀಡಾಂಗಣಗಳಲ್ಲಿ ತಂಬಾಕು ಜಾಹೀರಾತುಗಳನ್ನು ತೋರಿಸುವುದನ್ನು ನಿಷೇಧಿಸುವಂತೆ ಬಿಸಿಸಿಐಗೆ ಸೂಚಿಸಲಿದೆ ಎಂದು ವರದಿಯಾಗಿದೆ. ಇದಲ್ಲದೆ, ಏಲಕ್ಕಿ ಹೆಸರಿನಲ್ಲಿ ತಂಬಾಕು ಪ್ರಚಾರ ಮಾಡುವ ನಟರಿಗೂ ಇಂತಹ ಜಾಹೀರಾತುಗಳಲ್ಲಿ ನಟಿಸದಂತೆ ಎಚ್ಚರಿಕೆ ನೀಡಲು ಮುಂದಾಗಿದೆ.

> **ಯುವಕರಿಗೆ ಆಕರ್ಷಣೆ**
>
> **ಈ ಬಗ್ಗೆ ಅಧಿಕಾರಿಯೊಬ್ಬರು ಮಾತನಾಡಿದ್ದು, ಭಾರತದ ಯುವಕರು ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸುತ್ತಾರೆ. ಆದರೆ ಪಂದ್ಯದ ಸಮಯದಲ್ಲಿ ಅನೇಕ ಸೆಲೆಬ್ರಿಟಿಗಳ ತಂಬಾಕು ಜಾಹೀರಾತುಗಳನ್ನು ತೋರಿಸಲಾಗುತ್ತದೆ. ಇದು ಯುವಕರನ್ನು ಹೆಚ್ಚು ಆಕರ್ಷಿಸುತ್ತದೆ. ಹೀಗಾಗಿ ಕೇಂದ್ರ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಬಿಸಿಸಿಐ ಜತೆ ನಿರಂತರ ಸಂಪರ್ಕದಲ್ಲಿದ್ದು, ಶೀಘ್ರದಲ್ಲೇ ಈ ಬಗ್ಗೆ ಮಹತ್ವದ ನಿರ್ಧಾರ ಕೈಗೊಳ್ಳಬಹುದು ಎಂದು ತಿಳಿಸಿದ್ದಾರೆ.**

ವಿಶ್ವವಾಣಿ ಆರಾಮ
@vishwavaninews
ಬೆಂಗಳೂರು
ಮಂಗಳವಾರ
16 | 07 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ಅತಿಯಾದರೆ ಅದೇ ವಿಷ!

ನಾವು ಕೆಲವು ಬಾರಿ ಕೆಲವು ಸಂಗತಿಗಳಲ್ಲಿ ಅತಿಯಾದ ಸ್ನೇಹವನ್ನು, ಸಲುಗೆಯನ್ನು, ಪ್ರೀತಿಯನ್ನು, ಮೋಹವನ್ನು, ಛಲವನ್ನು ತೋರುತ್ತೇವೆ. ಒಳ್ಳೆಯ ಸಂಗತಿಯಾಗಲಿ, ವಿಷಮ ವಿಷಯವೇ ಆಗಲಿ, ಯಾವುದಾದರೂ ಸರಿ ಅತಿಯಾದರೆ ಅವಘಡವೇ ಸಂಭವಿಸುತ್ತದೆ. ಕೇಳಿದ್ದೆಲ್ಲವನ್ನು ದಾನವಾಗಿ ಕೊಡಬಲ್ಲೆ. ಅದುವೇ ನನ್ನ ಬದುಕಿನ ಮಹತ್ತರವಾದ ಮೌಲ್ಯ. ಯಾರು ಯಾವುದನ್ನೇ ಕೇಳಿದರೂ ಇಲ್ಲವೆನ್ನುವ ಪ್ರಶ್ನೆಯೆ ಇಲ್ಲ ಎಂಬ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದ ಬಲಿ ಚಕ್ರವರ್ತಿ ಅತಿಯಾದ ದಾನವನ್ನು ಮಾಡಿದ್ದರ ಪರಿಣಾಮವಾಗಿಯೇ ಪಾತಾಳಕ್ಕೆ ಇಳಿದು ಹೋಗುತ್ತಾನೆ. ತನ್ನ ಬದುಕನ್ನೇ ಕಳೆದುಕೊಳ್ಳುತ್ತಾನೆ. ನಾನು ಎಲ್ಲವನ್ನೂ ಗೆಲ್ಲಬಲ್ಲೆ. ಯಾವುದೇ ಸಂಗತಿಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎನ್ನುವ ಅತಿಯಾದ ಛಲದ ಮನೋಭಾವ ಹೊಂದಿದ್ದ ದುರ್ಯೋಧನ ತನ್ನ ವಿನಾಶಕ್ಕೆ ತಾನೇ ಕಾರಣವಾಗುವುದು ಮಾತ್ರವಲ್ಲದೇ ತನ್ನೆಲ್ಲ ಮನೆತನದ ಸರ್ವನಾಶಕ್ಕೆ ಕಾರಣವಾದ ಸಂಗತಿ ನಮಗೆ ಅಪರಿಚಿತವೇನಲ್ಲ. ಹಾಗಾಗಿಯೇ ಅತಿಯಾದರೆ ಅಮೃತವೂ ವಿಷವೇ ಎನ್ನುವ ಮಾತಿನಲ್ಲಿ ಸತ್ಯವೇ ಅಡಗಿದೆ.

ಮಾತಾದರೂ ಅಷ್ಟೇ, ಮೌನವದಾರೂ ಅಷ್ಟೇ, ಊಟವಾದರೂ ಅಷ್ಟೇ. ಹೆಚ್ಚು ರುಚಿಕರವಾಗಿದೆಯೆಂದಾಗಲಿ, ಪೌಷ್ಠಿಕತೆಯಿಂದ ತುಂಬಿದೆಯಂತಾಗಲಿ ಹೆಚ್ಚು ತಿಂದರೆ ಅದು ಅನಾರೋಗ್ಯವನ್ನುಂಟು ಮಾಡಬಲ್ಲದು. ಹಾಗಂತ ಅತಿಯಾದ ಉಪವಾಸದಿಂದಲೂ ಅನಾಹುತಗಳು ಜರುಗಬಲ್ಲವು. ನಿದ್ರೆ, ಸೋಮಾರಿತನ, ಅಧಿಕಾರ, ಅಂತಸ್ತು, ದ್ವೇಷ ಯಾವುದಾದರೂ ಸರಿ ಎಲ್ಲದಕ್ಕೂ ಕೂಡ ಒಂದು ಮಿತಿ ಇರಬೇಕು. ಡಿ.ವಿ.ಜಿ. ಅವರ ಮಾತಿನಂತೆ ಮನಸ್ಸಿನ ಉದ್ವೇಗದಲಿ, ತ್ಯಾಗದಲಿ, ಭೋಗದಲಿ ಅತಿಯಾಗದೇ ಮಿತವ್ಯಯಿಯಾಗಬೇಕು. ಅವಶ್ಯಕತೆಗಳಿಗಿಂತ ಯಾವುದು ಹೆಚ್ಚಾದರೂ ಸರಿ ಅದರಿಂದ ಅಪಾಯವಂತೂ ಕಟ್ಟಿಟ್ಟ ಬುತ್ತಿ. ನಾವು ಯಾವುದೇ ಸಂಗತಿಗಳಲ್ಲಿಯೇ ಆಗಲಿ ಒಂದಷ್ಟು ಸಂಯಮ ರೂಢಿಸಿಕೊಳ್ಳಬೇಕು. ಕೆಲವು ಇತಿಮಿತಿಗಳ ಪರಿಧಿಯಲ್ಲಿ ಬದುಕನ್ನು ಮುನ್ನೆಡಸಬೇಕು. ಸಲ್ಲದ ಭಾವಾವೇಶಕ್ಕೆ ಒಳಗಾಗಿ ನಮ್ಮ ವಿವೇಚನೆಯನ್ನು ಕಳೆದುಕೊಳ್ಳದಂತೆ ಸಾಧ್ಯವಾದಷ್ಟು ಕಾಳಜಿವಹಿಸಬೇಕು. ಇದು ಬದಕಿಗೆ ಘನತೆಯನ್ನು ತಂದು ಕೊಡಬಲ್ಲದು.

● ಮಹಾದೇವ ಬಸರಕೋಡ

ಹೆಲ್ತ್ ಕಾರ್ನರ್

ನಮ್ಮ ದೇಶದಲ್ಲಿ ಪುರಾತನ ಕಾಲದಿಂದಲೂ ಒಂದು ಔಷಧವಾಗಿ ಬಳಕೆಯಲ್ಲಿರುವ ಲಿಂಬೆಯನ್ನು ಆಹಾರದ ಜತೆ ಸೇವಿಸುವ ಕ್ರಮವೂ ಇದೆ. ಲಿಂಬೆಯಲ್ಲಿರುವ ವಿಟಮಿನ್ ಸಿ ಮತ್ತು ಇತರ ಲವಣಾಂಶಗಳು ದೇಹಕ್ಕೆ ಪೂರಕ ಎನಿಸಿವೆ. ಜತೆಗೆ ಲಿಂಬೆಯು ಆ್ಯಂಟಿ ಆಕ್ಸಿಡೆಂಟ್‌ಗಳ ಅತ್ಯುತ್ತಮ

ಮೂಲಗಳಲ್ಲಿ ಒಂದು. ಇವು ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ಫ್ರೀ ರ‍್ಯಾಡಿಕಲ್ಸ್ (ಉಂಡಾಡಿ ಕಣಗಳು)ನ್ನು ಹತೋಟಿಯಲ್ಲಿಟ್ಟು, ಆರೋಗ್ಯವನ್ನು ಕಾಪಾಡುತ್ತವೆ. ಫ್ರೀ ರ‍್ಯಾಡಿಕಲ್ಸ್ ಅತಿಯಾದರೆ ಹೃದಯದ ಸಮಸ್ಯೆ, ಮಧುಮೇಹ ಮತ್ತು ಇತರ ರೋಗಗಳು ಉಲ್ಬಣಗೊಳ್ಳುವ ಸಾಧ್ಯತೆ ಇದೆ. ನಿಂಬೆ ರಸವು ಇದನ್ನು ಕಡಿಮೆ ಮಾಡುವುದರ ಜತೆಯಲ್ಲೇ, ಇದರಲ್ಲಿರುವ ವಿಟಮಿನ್ ಸಿ ಇಂದಾಗಿ, ನಮ್ಮ ದೇಹದ ರೋಗ ನಿರೋಧಕ ಶಕ್ತಿಯು ವೃದ್ಧಿಯಾಗುತ್ತದೆ. ಆಹಾರದಲ್ಲಿರುವ ಕಬ್ಬಿಣದ ಅಂಶವು ದೇಹಕ್ಕೆ ಬೇಗನೆ ಸೇರಲು ನಿಂಬೆ ರಸ ಸಹಾಯ ಮಾಡುತ್ತದೆ. ಇನ್ನೂ ಇತರ ಉತ್ತಮ ಗುಣಗಳಿರುವ ಲಿಂಬೆ ರಸವನ್ನು ಪ್ರತಿನಿತ್ಯ ನಮ್ಮ ಆಹಾರದೊಂದಿಗೆ ಸೇವಿಸುವುದು ಉತ್ತಮ ಅಭ್ಯಾಸ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಅನಾಥ ಹಸುಗಳ ಆಶ್ರಯತಾಣ

ತುಮಕೂರು ಸನಿಹದ ಊರ್ಡಿಗೆರೆಯಲ್ಲಿರುವ ಗೋಶಾಲೆಯಲ್ಲಿ ಅನಾಥ ಹಸುಗಳಿಗೆ ಆಶ್ರಯ ನೀಡಲಾಗುತ್ತಿದ್ದು ಜನ್ಮದಿನಾಚರಣೆಯಂತಹ ಕಾರ್ಯಕ್ರಮಗಳಿಗೂ ಅವಕಾಶ ಮಾಡಿಕೊಡಲಾಗಿದೆ.

● ಧಾರಿಣಿ ಮಾಯಾ

ಮಾನವ ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಗೋದಾನ ಮಾಡಬೇಕೆಂದು, ಅದು ಸಾಧ್ಯವಾಗದಿದ್ದರೆ ಗೋ ಗ್ರಾಸನ್ನಾದರೂ ನೀಡಬೇಕೆಂದು ಪುರಾಣ ಹೇಳುತ್ತದೆ. ನಮ್ಮ ನಾಡಿನಲ್ಲಿ ಹಲವು ಗೋಶಾಲೆಗಳಿವೆ. ಅಂತಹುದರಲ್ಲೊಂದು ನಾನು ಇತ್ತೀಚೆಗೆ ಭೇಟಿ ಕೊಟ್ಟ ಶ್ರೀ ಕೃಷ್ಣ ಗೋಶಾಲಾ.

ಬೆಂಗಳೂರಿನಿಂದ ಸುಮಾರು 70 ಕಿ.ಮೀ. ದೂರದಲ್ಲಿ, ದಾಬಸ್‌ಪೇಟೆಯಿಂದ 16 ಕಿ.ಮೀ. ದೂರದ ಊರ್ಡಿಗೆರೆಯಿಂದ ಆಟೋದಲ್ಲಿ 2 ಕಿ.ಮೀ. ಕ್ರಮಿಸಿದರೆ ಶ್ರೀ ಕೃಷ್ಣ ಗೋಶಾಲಾ ಸಿಗುತ್ತದೆ. (ಕೂರ್ಮಗಿರಿ ಕ್ಷೇತ್ರ, ಬ್ಯಾತ ಅಂಚೆ). ಈ ಸಂಸ್ಥೆಯು ಒಂದು ಸೇವಾ ಸಂಸ್ಥೆಯಾಗಿದ್ದು ವಯಸ್ಸಾಗಿರುವ, ಅನಾಥ ಹಾಗೂ ಅಶಕ್ತ ಗೋವುಗಳನ್ನು ಸಂರಕ್ಷಣೆ ಮಾಡುತ್ತಿದೆ. ಆರಂಭದಲ್ಲಿ ನಾಲ್ಕು ಹಸುಗಳನ್ನು ರಕ್ಷಿಸುವುದರ ಮೂಲಕ ವಿಜಯದಶಮಿಯಂದು ಅವರ ಯೋಜನೆಗೆ ಚಲಾವಣೆ ಸಿಕ್ಕಿತು. ನಂತರ 'ಸ್ಫೂರ್ತಿ' ಎಂಬ ಸಂಘಟನೆಯಿಂದ ಪ್ರತಿವರ್ಷ ಪಾದಯಾತ್ರೆ ಮಾಡುತ್ತಿದ್ದ ಒಂದು ಸಂದರ್ಭದಲ್ಲಿ ಹಸುಗಳನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುತ್ತಿರುವುದನ್ನು ಕಂಡು, ಅವುಗಳನ್ನು ಹಿಡಿದು ಸುಮಾರು 14 ಹಸುಗಳನ್ನು ರಕ್ಷಿಸಲಾಯಿತು. ಅದರ ಫಲವಾಗಿ ಬಿ. ಎಸ್. ರಮೇಶ್ ಎಂಬುವರ ಅಧ್ಯಕ್ಷತೆಯಲ್ಲಿ ಒಟ್ಟು ಒಂಬತ್ತು ಮಂದಿಯಿಂದ ಶ್ರೀ ಕೃಷ್ಣ ಗೋಶಾಲಾ 2010 ರಲ್ಲಿ ಸ್ಥಾಪನೆಯಾಯಿತು. ದಿನಕಳೆದಂತೆ ಹಸುಗಳ ಸಂಖ್ಯೆ ಜಾಸ್ತಿಯಾಗತೊಡಗಿತು. ಇದೀಗ ಒಟ್ಟು 210 ಹಸು, ಕರು, ಎಮ್ಮೆ, ಹೋರಿಗಳು ಮತ್ತಷ್ಟು ವಿಶಾಲ ಸ್ಥಳದಲ್ಲಿ ಇಂದು ಸುರಕ್ಷಿತವಾಗಿವೆ. ಎರಡು ಎಕರೆ ಜಾಗವನ್ನು 10 ವರ್ಷಕ್ಕೆಂದು ಗುತ್ತಿಗೆಗೆ ತೆಗೆದುಕೊಂಡು, ಒಂದು ಎಕರೆ ಜಾಗವನ್ನು ಶ್ರೀ ಕೃಷ್ಣಗೋಶಾಲಾ ಟ್ರಸ್ಟ್ ಹೆಸರಿನಲ್ಲಿ ಇದೀಗ ಖರೀದಿ ಮಾಡಲಾಗಿದೆ.

ದಾಖಲಾತಿಯೊಂದಿಗೆ ಸಂತೆಗಳಲ್ಲಿ ಕೊಂಡುಕೊಂಡ ಇಲ್ಲವೇ ಕಳ್ಳತನ ಮಾಡಿದ ಹಸು ಕರುಗಳನ್ನು ಕಸಾಯಿಖಾನೆಗೆ ಕಳಿಸುವುದುಂಟು. ಕೆಲವು ಬಾರಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೂ ರವಾನೆ ಮಾಡುತ್ತಾರೆ. ಈ ಸಂದರ್ಭದಲ್ಲಿ ರಕ್ಷಿಸಲ್ಪಟ್ಟ ಹಸು, ಕರುಗಳು ಪೋಲೀಸ್ ಇಲಾಖೆಯಲ್ಲಿ ಅಧಿಕೃತವಾಗಿ ದಾಖಲಾಗಿ, ವೈದ್ಯಕೀಯ ಪ್ರಮಾಣಪತ್ರ ಪಡೆದ ನಂತರ ಇಲ್ಲಿನ ಗೋಶಾಲೆಗೆ ಸೇರಿಸಲಾಗುತ್ತದೆ.

ನ್ಯಾಯಾಲಯದ ಪ್ರಕರಣದಲ್ಲಿರುವ ಹಸುಗಳನ್ನೂ ಇಲ್ಲಿ ತಂದಿರಿಸಲಾಗುತ್ತದೆ. ಆ ಹಸು ಕಸಾಯಿಖಾನೆಗೊಯ್ಯುತ್ತಿದ್ದುದೋ ಅಥವಾ ರೈತನದ್ದೋ ಎಂದು ನ್ಯಾಯಾಂಗ ತೀರ್ಪು ನೀಡುವವರೆಗೂ ಅದನ್ನು ನೋಡಿಕೊಳ್ಳುವ ಜವಾಬ್ದಾರಿ ಗೋಶಾಲೆಯದ್ದಾಗಿರುತ್ತದೆ. ಇಲ್ಲಿ ರೈಡ್ ಆದ ಹಸು, ಕರುಗಳ ಸಂಪೂರ್ಣ ದಾಖಲಾತಿಯನ್ನು ಇಟ್ಟುಕೊಂಡಿರುತ್ತಾರೆ. ಕೋರ್ಟಿನಲ್ಲಿ ಆ ಹಸುವಿನ ಕೇಸ್ ಬಂದಾಗ ಗೋಶಾಲೆಯ ಅಧ್ಯಕ್ಷರು ಅಥವಾ ಟ್ರಸ್ಟಿಗಳು ಕೋರ್ಟಿಗೆ ಹಾಜರಾಗಬೇಕಾಗುತ್ತದೆ.

ಈ ಗೋಶಾಲೆಯನ್ನು ಹೊರನೋಟದಲ್ಲಿ ನೋಡಿದಾಗ ಎಂಥವರಿಗೂ ಖುಷಿಯಾಗುವುದು ಸಹಜ. ಆದರೆ ಅದರ ದಿನನಿತ್ಯದ ನಿರ್ವಹಣೆ, ಬವಣೆ, ದಾಖಲಾದ ಕೇಸ್‌ಗಳ ಬೆನ್ನಟ್ಟುವಿಕೆಯನ್ನು ಯಾವುದೇ ಬೇಸರವಿಲ್ಲದೆ ಸಂಭಾಳಿಸಬೇಕಾಗುತ್ತದೆ. ಪ್ರಾಣಿದಯೆ ಇರುವವರು, ಉತ್ಸಾಹಿಗಳು ಹಾಗೂ ಸಂಪೂರ್ಣ ಸೇವಾಮನೋಭಾವ ಹೊಂದಿರುವವರು ಮಾತ್ರ ಇಲ್ಲಿನ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯ. ಇದಕ್ಕೆ ಸಾಕಷ್ಟು ವೆಚ್ಚವೂ ಆಗುತ್ತದೆ.

ಇಲ್ಲಿ ಒಟ್ಟು 16 ಟ್ರಸ್ಟಿಗಳಿದ್ದು, ಗೋಶಾಲೆಯ ನಿರ್ವಹಣೆಗೆ ಒಬ್ಬ ಮ್ಯಾನೇಜರ್ ಹಾಗೂ 8 ಮಂದಿ ಕೆಲಸಗಾರರಿದ್ದಾರೆ. ಸ್ಥಳೀಯ ಕೆಲಸದವರು ಸಿಗದಿರುವ ಕಾರಣ ಈ ಎಲ್ಲಾ ಕೆಲಸಗಾರರೂ ರಾಜಸ್ಥಾನ ಅಥವಾ ಮಧ್ಯಪ್ರದೇಶದವರು. ಗೋಶಾಲೆಯ ನಿರ್ವಹಣೆಗೆ ದಿನಕ್ಕೆ ಸುಮಾರು 10,000 ರೂಪಾಯಿ ಮತ್ತು ಹಾಗೂ ತಿಂಗಳಿಗೆ ರು.2.5 ಲಕ್ಷ ವೆಚ್ಚ ತಗಲುತ್ತದೆ. ಕಳೆದ ವರ್ಷ ಮಾತ್ರ ಪುಣ್ಯಕೋಟಿ ದತ್ತು ಯೋಜನೆ ಅಡಿಯಲ್ಲಿ ಒಂದು ಹಸುವಿಗೆ ವರ್ಷಕ್ಕೆ 8000 ರೂಪಾಯಿಗಳಂತೆ ಅನುದಾನ ಮಂಜೂರಾಗಿತ್ತು. ಈ ವರ್ಷ ಬಂದಿಲ್ಲ. ದಾನಿಗಳ ಕೊಡುಗೆಯಿಂದಲೇ ಹೆಚ್ಚಿನಮಟ್ಟದಲ್ಲಿ ಗೋಶಾಲೆ ನಡೆಯುತ್ತಿದೆ ಎಂದು ಅಧ್ಯಕ್ಷ ರಮೇಶ್ ಹೇಳುತ್ತಾರೆ.

ವಾರಕ್ಕೊಂದು ದಿನ ವೈದ್ಯರು ಬಂದು ಎಲ್ಲಾ ಹಸುಗಳನ್ನು ವೈದ್ಯಕೀಯ ತಪಾಸಣೆ ಮಾಡುತ್ತಾರೆ. ತುರ್ತು ಸಂದರ್ಭದಲ್ಲಿ ಊಡಿಗೆರೆಯ ಪಶುವೈದ್ಯಕೀಯ ಆಸ್ಪತ್ರೆ ಅಥವಾ ತುಮಕೂರಿನ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಹಸುಗಳನ್ನು ಕರೆದುಕೊಂಡುಹೋಗಬೇಕಾಗುತ್ತದೆ.

ಹಸು ದತ್ತು

- ಒಂದು ಕುಟುಂಬವು ಒಂದು ಹಸುವನ್ನು ಹಿರಿಯರ, ತಂದೆ ತಾಯಿ ಅಥವಾ ಮನೆಯ ಸದಸ್ಯರ ಹೆಸರಿನಲ್ಲಿ ದತ್ತು ತೆಗೆದುಕೊಳ್ಳಬಹುದು.
- ಗೋಗ್ರಾಸ ನಿಧಿಗೆ ಅವರವರ ಶಕ್ತ್ಯಾನುಸಾರ ಹಣ ಸಮರ್ಪಣೆ ಮಾಡಬಹುದು.
- ಕಟ್ಟಡದ ನಿಧಿ ಸಂಗ್ರಹಕ್ಕೆ ದೇಣಿಗೆ ನೀಡುವ ಅವಕಾಶವಿದೆ.

ಈ ಗೋಶಾಲೆಯ ಹತ್ತಿರದಲ್ಲೇ ಇರುವ ಕೂರ್ಮಗಿರಿ ಬೆಟ್ಟದ ತುದಿಗೆ ಹೋದರೆ, ಸುತ್ತಲಿನ ವಿಶಾಲ ಭೂ ಪ್ರದೇಶ ಕಾಣಿಸುವುದರಿಂದಾಗಿ, ಇಲ್ಲೊಂದು ಪುಟ್ಟ ವಾಯುವಿಹಾರವನ್ನೂ ಮಾಡಬಹುದು. ಕೂರ್ಮಗಿರಿಯ ತುದಿಯಲ್ಲಿ ಗುಡಿ, ನೀರಿನ ದೊಣೆ, ಬಂಡೆ ಕಲ್ಲುಗಳ ವಿನ್ಯಾಸವನ್ನು ನೋಡುವ ಅವಕಾಶವೂ ಇದೆ.

ಮಕ್ಕಳ ಜನ್ಮದಿನಾಚರಣೆ

13 ವರ್ಷಗಳಿಂದ ನಡೆದುಕೊಂಡುಬರುತ್ತಿರುವ ಶ್ರೀ ಕೃಷ್ಣ ಗೋಶಾಲೆಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ವ್ಯವಸ್ಥೆಯಿದೆ. ಮಕ್ಕಳ ಜನ್ಮದಿನಾಚರಣೆ, ಮದುವೆ ವಾರ್ಷಿಕೋತ್ಸವ ಅಥವಾ ಯಾವುದೇ ರೀತಿಯ ಶುಭಕಾರ್ಯಗಳನ್ನು ಇಲ್ಲಿ ಆಚರಿಸಬಹುದು. ಹಸುಗಳ ಆರೈಕೆ, ಹಸುಗಳ ಸೀಮಂತ ಮೊದಲಾದ ಕಾರ್ಯಕ್ರಮಗಳಿಗೆ ಅವಕಾಶ ನೀಡಲಾಗುತ್ತಿದೆ. ಹಸು ಕರುಗಳನ್ನು ನೋಡಲು ಬಂದ ಅತಿಥಿಗಳಿಗೆ ಗೋಶಾಲೆಯಲ್ಲಿ ಊಟದ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತದೆ. ಕಾರ್ಯಕ್ರಮ ನಡೆಸಿದವರು ಇಲ್ಲಿನ ಗೋವುಗಳಿಗೆ ತಮ್ಮ ಕೈಲಾದಷ್ಟು ಕಾಣಿಕೆ ಕೊಡಬಹುದು.

ದೇಸಿ ತಳಿ

ಗಿರ್, ರಾಜಸ್ಥಾನದ ಕಾಂಕ್ರೇಜ್, ಸ್ಥಳೀಯ ಹಳ್ಳಿಕಾರ್, ಮಲೆನಾಡು ಗಿಡ್ಡ, ಆಂಧ್ರದ ಓಂಗೋಲ್ ತಳಿಗಳನ್ನು ಇಲ್ಲಿ ಕಾಣಬಹುದು. ಸಂರಕ್ಷಿಸಿದ ಹಸುಗಳೆಂದು ತಾತ್ಸಾರ ಮಾಡದೇ, ಒಣ ಹುಲ್ಲು, ಹಸಿ ಹುಲ್ಲು, ಹೊಟ್ಟು, ಬೂಸಾ, ಜೋಳಗಳನ್ನು ಪೋಷಣೆಗಾಗಿ ಹಾಕಲಾಗುತ್ತದೆ. ಹತ್ತಿರದ ಕಾಡು ಪ್ರದೇಶಕ್ಕೆ ಗಟ್ಟಿಮುಟ್ಟಾದ ಸುಮಾರು 80 ಹಸುಗಳನ್ನು ನಿತ್ಯವೂ ಮೇಯುವುದಕ್ಕೆ, ಮೂವರು ಕೆಲಸಗಾರರೊಂದಿಗೆ ಕಳುಹಿಸಲಾಗುತ್ತದೆ. ಇಲ್ಲಿನ ಹಸುಗಳಿಗೆ ವಯಸ್ಸಾಗಿರುವುದರಿಂದ, ದೊರಕುವ ಹಾಲಿನ ಪ್ರಮಾಣ ದಿನಕ್ಕೆ ಸುಮಾರು 5 ಲೀಟರ್‌ನಷ್ಟು ಮಾತ್ರ. ಅದು ಅಲ್ಲಿನ ಕರುಗಳಿಗಷ್ಟೇ ಸಾಕಾಗಿ, ಹೆಚ್ಚುವರಿ ಹಾಲು ಅಲ್ಲಿ ಕೆಲಸ ಮಾಡುವ ಏಳೆಂಟು ಮಂದಿ ಕೆಲಸಗಾರರ ದಿನಬಳಕೆಗೆ ಸರಿಹೊಂದುತ್ತದೆ.

ಇನ್‌ಫ್ಲಮೇಷನ್ ಅಥವಾ ಉರಿಯೂತವು ಹಲವು ಆರೋಗ್ಯ ಸಮಸ್ಯೆಗಳ ಮೂಲ. ಉರಿಯೂತವನ್ನು ನಿಯಂತ್ರಿಸಲು ಅರಶಿಣವು ಉತ್ತಮ ಎನಿಸಿದೆ.

ಉರಿಯೂತ ನಿಯಂತ್ರಣ

● ಡಾ. ನೇತ್ರಾವತಿ ವಿ.

ಧಾವಂತ ಬದುಕು, ಬದಲಾದ ಜೀವನ ಶೈಲಿ, ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆಯಿಂದ ನಮ್ಮಲ್ಲಿ ಹಲವರು ಅನೇಕ ಕಾಯಿಲೆಗಳಿಂದಲೂ, ನಿಶ್ಯಕ್ತಿ, ಆಯಾಸ, ಬಳಲಿಕೆ ಇಂದಲೂ ತೊಂದರೆಗೊಳಗಾಗಿದ್ದಾರೆ. ಹಲವಾರು ಕಾಯಿಲೆಗಳನ್ನು ಆಳವಾಗಿ ಅಧ್ಯನ ಮಾಡಿದಾಗ ಕಂಡುಬಂದಿರುವ ಸಾಮಾನ್ಯ ಲಕ್ಷಣವೆಂದರೆ ಉರಿಯೂತ (ಇನ್‌ಫ್ಲಮೇಷನ್). ದೇಹದಲ್ಲಿ ಉರಿಯೂತ ಮಟ್ಟವನ್ನು ಬಹಳ ಸುಲಭವಾಗಿ ಸಿ ಆರ್ ಪಿ ರಕ್ತ ಪರೀಕ್ಷೆಯ ಮೂಲಕ ತಿಳಿಯಲೂಬಹುದು.

ಉರಿಯೂತವು ಕೆಲವು ದೀರ್ಘ ಕಾಲೀನ ಕಾಯಿಲೆಗಳಾದಂತಹ ಇರ್ರಿಟೇಬಲ್ ಬೋವೆಲ್ ಡಿಸೀಸ್, ಸಂಧಿವಾತ, ಆಸ್ತಮಾ, ಸೋರಿಯಾಸಿಸ್, ಅಲರ್ಜಿ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳಲ್ಲಿ ಸಾಮಾನ್ಯವಾಗಿ ಕಾಣುವಂತಹ ಲಕ್ಷಣ. ಈ ನಿಟ್ಟಿನಲ್ಲಿ ಯೋಚಿಸಿದಾಗ, ನಮ್ಮ ದೇಹದ ಆರೋಗ್ಯ ಕಾಪಾಡಲು ಉರಿಯೂತ ಅಥವಾ ಇನ್‌ಫ್ಲಮೇಷನ್‌ನ್ನು ಕಡಿಮೆ ಮಾಡುವುದು ಅತಿ ಅಗತ್ಯ ಎನಿಸಿದೆ. ಎಷ್ಟೋ ಕಾಯಿಲೆಗಳ ಮೂಲವೇ ಉರಿಯೂತ ಅಥವಾ ಇನ್‌ಫ್ಲಮೇಷನ್ ಎಂದು ಅಧ್ಯಯನಗಳು ತಿಳಿಸಿವೆ. ಉರಿಯೂತವನ್ನು ನಿಯಂತ್ರಿಸಲು ಹಲವಾರು ಅಲೋಪಥಿಕ್ ಔಷಧಗಳು ಲಭ್ಯವಿದ್ದರೂ ಸಹ ನೈಸರ್ಗಿಕವಾಗಿಯೂ ಸಹ ನಿಯಂತ್ರಿಸಬಹುದು.

ನಮ್ಮ ಆಹಾರದಲ್ಲಿ ವಿಶೇಷ ಸ್ಥಾನ ಗಳಿಸಿರುವಂಥಹ ಮಸಾಲೆ ಪದಾರ್ಥಗಳಾದ ಅರಿಶಿನ, ಮೆಂತ್ಯೆ, ಕರಿ ಮೆಣಸು, ಶುಂಠಿ, ದಾಲ್ಚಿನ್ನಿ, ಲವಂಗ, ಏಲಕ್ಕಿ, ಅಜ್ವಾಯಿನ, ಇಂಗು, ಜೀರಿಗೆ, ಕೊತ್ತಮ್ಬರಿ ಬೀಜ, ಸೋಂಪು ಬೆಳ್ಳುಳ್ಳಿ ಯಲ್ಲಿ ವಿಶೇಷವಾದ ಜೈವಿಕವಾಗಿ ಕ್ರಿಯಾಶೀಲವಾದ ಔಷಧೀಯ ಮೌಲ್ಯಗಳನ್ನೊಳಗೊಂಡ ರಾಸಾಯನಿಕ ಸಂಯುಕ್ತಗಳಾದ ಎಸ್ಸೆನ್ಶಿಯಲ್ ಆಯಿಲ್ಸ್ ಮತ್ತು ಒಲೆಯೊರೆಸಿನ್ಸ್ ಇವೆ. ಈ ಎಲ್ಲ ಪದಾರ್ಥಗಳೂ ಏಷ್ಯಾ ಖಂಡದಲ್ಲಿ ಹೆಚ್ಚು ಉತ್ಪಾದಿಸಲ್ಪಟ್ಟು ಪ್ರಪಂಚದಾದ್ಯಂತ ಆಹಾರ ತಯಾರಿಕೆಯಲ್ಲಿ ಮತ್ತು ಔಷಧವಾಗಿಯೂ ಸಹ ವ್ಯಾಪಕವಾಗಿ ಬಳಸಲ್ಪಡುತ್ತಿದೆ.

ಅರಿಶಿಣದ ಅದ್ವಿತೀಯ ಔಷಧೀಯ ಗುಣಗಳನ್ನು ಹಲವುದಶಕಗಳ ಹಿಂದೆಯೇ ಅಧ್ಯಯನಗಳು ಖಚಿತ ಪಡಿಸಿವೆ. ಅರಿಶಿಣದಲ್ಲಿರುವ ಕರ್ಕ್ಯುಮಿನ್ ಎಂಬ ಕ್ರಿಯಾಶೀಲ ರಾಸಾಯನಿಕ ಸಂಯುಕ್ತವು ಹಲವು ಬಗೆಯ ಚಟುವಟಿಕೆಗಳ ಮೂಲಕ ಆರೋಗ್ಯ ವೃದ್ಧಿಗೆ ಸಹಾಯ ಮಾಡುತ್ತದೆ. ಅರಿಶಿಣವು ಉರಿಯೂತ ನಿವಾರಕ, ಸೋಂಕು ನಿವಾರಕ ಹಾಗು ನಿರ್ವಿಷೀಕರಣ ಪ್ರಕ್ರಿಯೆಯ ಮೂಲಕ ಕ್ಯಾನ್ಸರ್, ಮಧುಮೇಹ, ಸಂಧಿವಾತ, ಇರ್ರಿಟೇಬಲ್ ಬೋವೆಲ್

ಸಿಂಡ್ರೋಮ್, ಅಸ್ತಮಾ, ಸೋರಿಯಾಸಿಸ್ ಕಾಯಿಲೆಗಳನ್ನು ಬಾರದಂತೆ ತಡೆಯಲು ಮತ್ತು ಅಕಸ್ಮಾತ್ ಬಂದ ನಂತರ ನಿಯಂತ್ರಿಸಲು ಸಹಕಾರಿಯಾಗಿದೆ. ಹಾಗೆಯೇ ಕರುಳಿನಲ್ಲಿರುವ ಸಹಕಾರಿ ಬ್ಯಾಕ್ಟೀರಿಯಾಗಳು (ಗಟ್ ಬ್ಯಾಕ್ಟೀರಿಯಾ) ಉತ್ತಮ ಮಟ್ಟದಲ್ಲಿ ಇಡುವಲ್ಲಿಯೂ ಸಹ ಅರಿಶಿಣ ಸಹಕಾರಿಯಾಗಿದೆ.

ಅರಿಶಿಣವನ್ನು ಸೇವಿಸುವ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ಕರ್ಕ್ಯುಮಿನ್ ರಾಸಾಯನಿಕದ ಸಂಪೂರ್ಣ ಉಪಯೋಗ ಪಡೆಯಬಹುದು. ಕರ್ಕ್ಯುಮಿನ್ ರೀತಿಯಲ್ಲಿಯೇ ಕರಿ ಮೆಣಸಿನಲ್ಲಿ ಪೈಪೆರಿನ್ ಎಂಬ ಒಂದು ಜೈವಿಕ ಕ್ರಿಯಾಶೀಲ ಸಂಯುಕ್ತವಿದೆ. ಅರಿಶಿಣವನ್ನು ಕರಿ ಮೆಣಸಿನೊಂದಿಗೆ ಮತ್ತು ಮೆಂತ್ಯೆ ಪುಡಿಯೊಂದಿಗೆ ಸೇವಿಸುದರಿಂದ ಅತಿ ಹೆಚ್ಚು ಔಷಧೀಯ ಲಾಭಗಳನ್ನು ಪಡೆಯಬಹುದು.

ಹಾಗೆಯೇ ಅರಿಶಿಣವನ್ನು ಹಾಲಿನೊಂದಿಗೆ, ಮಿತಪ್ರಮಾಣದ ಉತ್ತಮ ಗುಣಮಟ್ಟದ ಅಡುಗೆ ಎಣ್ಣೆ ಮತ್ತು ಕಾಯಿಸಿದ ತುಪ್ಪದೊಂದಿಗೆ ಸೇವಿಸಿದರೆ ಕರ್ಕ್ಯುಮಿನ್ ನ ಬಯೋ ಅವೈಲಬಿಲಿಟಿ ಹೆಚ್ಚಿಸಿಕೊಳ್ಳಬಹುದು ಎಂದು ಸಂಶೋಧಕರು ಧೃಢೀಕರಿಸಿದ್ದಾರೆ. ಒಂದು ಲೋಟ ಬಿಸಿ ಹಾಲಿಗೆ, ಅರ್ಧ ಚಮಚ ಉತ್ತಮ ಅರಶಿಣ ಪುಡಿಯನ್ನು ಬೆರೆಸಿ ಕುಡಿಯುವುದು ಒಂದು ಸುಲಭ ವಿಧಾನ.

ಅರಿಶಿಣದಿಂದ ಕರ್ಕ್ಯುಮಿನ್ ಬೇರ್ಪಡಿಸಿ, ಪೈಪೆರಿನ್ ಅನ್ನು ಕರಿ ಮೆಣಸಿನಿಂದ ಬೇರ್ಪಡಿಸಿ ಕ್ಯಾಪ್ಸುಲ್ ಗಳನ್ನೂ ಸಿದ್ದಪಡಿಸಲಾಗಿದೆ. ವೈದ್ಯರ ಸಲಹೆಯ ಮೇರೆಗೆ ಅಂತಹ ಕ್ಯಾಪ್ಸುಲ್‌ಗಳನ್ನೂ ಸೇವಿಸಬಹುದು ಅಥವಾ ಮನೆಯಲ್ಲಿಯೂ ಸಹ ಕಷಾಯ ಅಥವಾ ಹರ್ಬಲ್ ಟೀ ರೀತಿಯಲ್ಲಿ ಇವುಗಳನ್ನು ಸೇವಿಸಿ ಆರೋಗ್ಯವೃದ್ಧಿಸಿಕೊಳ್ಳಬಹುದು.

ಆಹಾರದಿಂದ ನಿಶ್ಯಕ್ತಿ ದೂರ



● ಡಾ. ಸುಧಾಕರ ಜಿ.ಲಕ್ಕವಳ್ಳಿ

ಮಳೆಗಾಲ ಬಂತು ಎಂದರೆ ಡೆಂಘೀ ಜ್ವರ ಪುಟಿದೇಳುತ್ತದೆ; ಮಳೆ ನೀರು ನಿಂತಲ್ಲಿ ಸೊಳ್ಳೆಗಳ ಸಂಖ್ಯೆ ಜಾಸ್ತಿಯಾಗಿ, ಅವು ಮನುಷ್ಯರನ್ನು ಕಚ್ಚಿ, ಸೋಂಕು ಹರಡಲು ಕಾರಣವಾಗುತ್ತದೆ. ವೈರಸ್ ಸೋಂಕಿನಿಂದ ಉಂಟಾಗುವ ಡೆಂಘೀ ಜ್ವರ ಸೊಳ್ಳೆ ಕಡಿತದಿಂದ ಹರಡುತ್ತದೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡದಿದ್ದರೆ, ಕೆಲವರಲ್ಲಿ ರೋಗವು ತೀವ್ರವಾಗಿರುತ್ತದೆ. ಈ ವೈರಲ್ ಕಾಯಿಲೆಗೆ ಚಿಕಿತ್ಸೆ ನೀಡುವಾಗ ಪರಿಗಣಿಸಬೇಕಾದ ಎರಡು ನಿರ್ಣಾಯಕ ಅಂಶಗಳೆಂದರೆ ಡೆಂಗ್ಯೂ ಮರುಕಳಿಸುವಿಕೆ ಮತ್ತು ಅನುಸರಿಸಬೇಕಾದ ಆಹಾರಕ್ರಮ. ಸರಿಯಾದ ಆಹಾರ ಕ್ರಮವು ವೇಗವಾಗಿ ಚೇತರಿಸಿಕೊಳ್ಳಲು ಸಹಕಾರಿ. ಡೆಂಘೀ ಜ್ವರದಿಂದ ವೇಗವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುವ ಆಹಾರಗಳಿವು.

ವೈರಸ್ ಸೋಂಕಿನಿಂದ ಉಂಟಾಗುವ ಡೆಂಘೀ ಮತ್ತು ಇತರ ಜ್ವರಗಳು ದೇಹವನ್ನು ಕಾಡಿದಾಗ, ಸೂಕ್ತವಾದ ಆಹಾರ ಸೇವಿಸಿ ಬೇಗನೆ ಚೇತರಿಸಿಕೊಳ್ಳಬಹುದು.

1.ಪಪ್ಪಾಯಿ ಎಲೆಗಳ ರಸ

ಪಪ್ಪಾಯಿ ಎಲೆಗಳ ಸಾರವು ರೋಗಕ್ಕೆ ಒಳಗಾದವರು ಸೂಚಿಸುವ ಅತ್ಯಂತ ವಿಶ್ವಾಸಾರ್ಹ ಚಿಕಿತ್ಸೆಯಾಗಿದೆ. ಪಪ್ಪಾಯಿ ಎಲೆಗಳು ಪ್ಲೇಟ್ಲೆಟ್ ಸಂಖ್ಯೆ ಹೆಚ್ಚಿಸಲು ಮತ್ತು ಸಾಮಾನ್ಯ ಮಟ್ಟಕ್ಕೆ ತರಲು ಒಂದು ಉತ್ತಮ ಮಾರ್ಗ ಎನಿಸಿದೆ. ದಿನಕ್ಕೆ ಕನಿಷ್ಠ ಎರಡು ಬಾರಿ ಈ ರಸವನ್ನು ಸೇವಿಸಬಹುದು.

2.ಎಳನೀರು

ಎಳನೀರು ದೇಹಕ್ಕೆ ಅಗತ್ಯವಾದ ಖನಿಜಗಳು ಮತ್ತು ಲವಣಗಳನ್ನು ಒದಗಿಸುತ್ತದೆ. ಪ್ರತಿದಿನ ಎರಡು ಲೋಟವಾಗುವಷ್ಟು ಎಳನೀರನ್ನು ಚೇತರಿಕೆಯು ಸುಲಭಸಾಧ್ಯ..

3. ಹಣ್ಣು ಮತ್ತು ಜ್ಯೂಸ್

ಡೆಂಘೀ ಚೇತರಿಕೆಗೆ ದ್ರವಗಳು ಅತ್ಯಗತ್ಯ. ಸುಲಭವಾಗಿ ಸಿಗುವ ಸಿಟ್ರಸ್ ಹಣ್ಣುಗಳು ವಿಟಮಿನ್‌ಗಳ ಅತ್ಯುತ್ತಮ ಮೂಲವಾಗಿದೆ ಮತ್ತು ಅವುಗಳು ವಿಟಮಿನ್ ಸಿ ಹೊಂದಿರುತ್ತವೆ. ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಕರುಳು ಸ್ನೇಹಿ ಮತ್ತು ಹಣ್ಣಿನಲ್ಲಿರುವ ನಾರಿನ ಅಂಶವು ಗ್ಯಾಸ್ಟಿಕ್ ಸಮಸ್ಯೆಗಳಿಂದ ದೂರವಿರಿಸುತ್ತದೆ. ಹಣ್ಣಿನ ತೊಳೆ ಮತ್ತು ಮನೆಯಲ್ಲಿ ಹಿಂಡಿದ ತಾಜಾ ರಸವನ್ನು ಸೇವಿಸಬಹುದು. ಮೂಸುಂಬಿ, ಕಿತ್ತಳೆ, ನಿಂಬೆ ರಸದಲ್ಲಿ ಹೆಚ್ಚಿನ ವಿಟಮಿನ್ ಸಿ ಲಭ್ಯ.

4.ಗಿಡಮೂಲಿಕೆ ಚಹಾ

ಏಲಕ್ಕಿ, ಪುದೀನಾ, ಶುಂಠಿ,ದಾಲ್ಚಿನ್ನಿ ಇತ್ಯಾದಿಗಳೊಂದಿಗೆ ಚಹಾ ಮಿಶ್ರಣವನ್ನು ಸೇರಿಸಿದರೆ ಅದು ದೇಹ ಮತ್ತು ಮನಸ್ಸನ್ನು ನೆಮ್ಮದಿಯಾಗಿಡಲು ಸಹಾಯ ಮಾಡುತ್ತದೆ.

5.ಗಂಜಿ

ಗಂಜಿಯು ಜೀರ್ಣಿಸಿಕೊಳ್ಳಲು ಸುಲಭ. ಸ್ವಲ್ಪ ಹೆಚ್ಚು ಸೇವಿಸಿದರೂ ಸುಲಭವಾಗಿ ಜೀರ್ಣವಾಗುತ್ತದೆ. ರಾಗಿ ಹಿಟ್ಟಿನ ಗಂಜಿ ಅಥವಾ

ಇವುಗಳಿಂದ ದೂರವಿರಿ

ಯಾವುದೇ ಜ್ವರ ಅಥವಾ ರೋಗ ಬಂದಾಗ, ಇವುಗಳನ್ನು ತಿನ್ನದೇ ಇರುವುದು ಉತ್ತಮ: ಕರಿದ, ಸಂಸ್ಕರಿಸಿದ, ಜಂಕ್, ಎಣ್ಣೆಯುಕ್ತ ಮತ್ತು ಮಸಾಲೆಯುಕ್ತ ಆಹಾರಗಳು, ಚಹಾ,ಕಾಫಿ,ಕೋಕೋ ಮತ್ತು ಇತರ ಕೆಫೀನ್ ಹೊಂದಿರುವ ಪಾನೀಯಗಳು ಇತ್ಯಾದಿಗಳ ಅತಿಯಾದ ಸೇವನೆಯ ಅಭ್ಯಾಸವನ್ನು ಬಿಟ್ಟುಬಿಡಿ. ಡೆಂಘಿ ಜ್ವರ ಬಂದಾಗ, ಸೋಂಕು ಹೊಂದಿದ ಶೇ.5ರಷ್ಟು ಜನರಲ್ಲಿ ಅದು ತೀವ್ರವಾಗಬಹುದು. ಆಗ ಆಗಿಂದಾಗ್ಗೆ ಪ್ಲೇಟ್ಲೆಟ್ ಎಣಿಕೆಗಳು ಮತ್ತು ಹೆಮಟೋಕ್ರಿಟ್ ನ ಮೇಲ್ವಿಚಾರಣೆ ಮಾಡಲು ನಿರಂತರ ರಕ್ತ ಪರೀಕ್ಷೆಗಳು ಅತ್ಯಗತ್ಯ.

ಇದು ಬೇಡ

ಜ್ವರ ಅಥವಾ ನೋವಿಗೆ ಆಸ್ಪಿರಿನ್ ಅಥವಾ ಯಾವುದೇ ಎನ್,ಎಸ್,ಎ,ಐ,ಡಿ ಗಳನ್ನು ನೀಡಬೇಡಿ - ಏಕೆಂದರೆ ಆಸ್ಪಿರಿನ್ ರಕ್ತವನ್ನು ತೆಳುವಾಗಿಸುತ್ತದೆ ಮತ್ತು ಎನ್,ಎಸ್,ಎ,ಐ,ಡಿ ಗಳು ಪ್ಲಾಸ್ಮಾ ಸೋರಿಕೆಯನ್ನು ಉಲ್ಬಣಗೊಳಿಸುತ್ತವೆ. ಕೆಂಪು ಕಲೆಗಳು, ಯಾವುದೇ ಸ್ಥಳದಿಂದ ರಕ್ತಸ್ರಾವ, ಕಪ್ಪು ಮಲ, ಅರೆನಿದ್ರಾವಸ್ಥೆ, ಉಸಿರಾಟದ ತೊಂದರೆ, ಚರ್ಮದ ತೆಳುವಾಗುವುದು ಮತ್ತು ಆಗಾಗ್ಗೆ ವಾಂತಿ ಮುಂತಾದ ಲಕ್ಷಣಗಳು ಕಂಡುಬಂದರೆ ಕೂಡಲೇ ಚಿಕಿತ್ಸೆ ಪಡೆಯಿರಿ, ವಿಳಂಬ ಮಾಡಬೇಡಿ. ಯಾವುದೇ ಜ್ವರಕ್ಕೆ ಸ್ವಯಂ ಚಿಕಿತ್ಸೆ ಮಾಡಬೇಡಿ ಮತ್ತು ವೈದ್ಯರ ಸಲಹೆ ಪಡೆಯಿರಿ; ಅವರು ಸೂಚಿಸುವ ಔಷಧೋಪಚಾರ ಹಾಗೂ ಆಹಾರ ಕ್ರಮವನ್ನು ತಪ್ಪದೇ ಅನುಸರಿಸಿ.

ಸಮಾಚಾರ ಸಣ್ಣದಲ್ಲ

ಸದನದಲ್ಲಿ ದ್ರಾವಿಡ್‌ಗೆ ವಿಶೇಷ ಸನ್ಮಾನ

ಬೆಂಗಳೂರು: ಟಿ20 ವಿಶ್ವಕಪ್ ವಿಜೇತ ತಂಡದ ನಿರ್ಗಮಿತ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸದನದಲ್ಲಿ ಅಭಿನಂದನಾ ಗೌರವ ಸಲ್ಲಿಸಲು ಅಧಿವೇಶನದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಬಿಜೆಪಿ ಶಾಸಕ ಸುರೇಶ್ ಕುಮಾರ್, ಭಾರತ ಟಿ20 ವಿಶ್ವಕಪ್ ಗೆಲುವಿನ ವೇಳೆ ಟೀಂ ಇಂಡಿಯಾದ ಮುಖ್ಯ ಕೋಚ್ ಆಗಿದ್ದ ಕನ್ನಡಿಗ ರಾಹುಲ್ ದ್ರಾವಿಡ್ ಅವರನ್ನು ಸನ್ಮಾನಿಸುವಂತೆ ಮನವಿ ಮಾಡಿದರು. ಈ ಮನವಿಯನ್ನು ಸದನದ ಎಲ್ಲಾ ಸದಸ್ಯರು ಸ್ವಾಗತಿಸಿದರು. ಬಳಿಕ ಈ ವಿಚಾರವಾಗಿ ಪ್ರತಿಕ್ರಿಯಿಸಿದ ಸ್ಪೀಕರ್ ಖಾದರ್ ಕರ್ನಾಟಕದ ಜನತೆ ಪರವಾಗಿ ದ್ರಾವಿಡ್ ಅವರಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಶ್ರೀಲಂಕಾ ಸರಣಿಗೆ ಮೊಹಮ್ಮದ್ ಶಮಿ ಆಯ್ಕೆ?



ಮುಂಬಯಿ: ತಿಂಗಳ ಕೊನೆಯಲ್ಲಿ ಶ್ರೀಲಂಕಾ ವಿರುದ್ಧದ ಟಿ20 ಮತ್ತು ಏಕದಿನ ಸರಣಿಗೆ ಮೊಹಮ್ಮದ್ ಶಮಿ ಮರಳುವ ಸಾಧ್ಯತೆ ಇದೆ ಎನ್ನಲಾಗಿದೆ. ವರದಿಗಳ ಪ್ರಕಾರ ಶಮಿ ಅವರು ಈ ಸರಣಿಯಲ್ಲಿ ಆಡುವ ಮೂಲಕ ಮತ್ತೆ ಭಾರತ ತಂಡಕ್ಕೆ ಕಮ್ ಬ್ಯಾಕ್ ಮಾಡಲಿದ್ದಾರೆ ಎನ್ನಲಾಗಿದೆ. ಕಳೆದ ವರ್ಷ ಭಾರತದ ಆತಿಥ್ಯದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ವೇಳೆ ಗಾಯಗೊಂಡಿದ್ದ ಶಮಿಗೆ ಲಂಡನ್‌ನಲ್ಲಿ ಪಾದದ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ವಿಶ್ವಕಪ್ ಬಳಿಕ ಶಮಿ ಇದುವರೆಗೂ ಯಾವುದೇ ಕ್ರಿಕೆಟ್ ಪಂದ್ಯ ಆಡಿಲ್ಲ. ಗಾಯದಿಂದ ಸಂಪೂರ್ಣ ಚೇತರಿಕೆ ಕಂಡಿರುವ ಶಮಿ ಈಗಾಗಲೇ ಬೌಲಿಂಗ್ ಅಭ್ಯಾಸ ಕೂಡ ಆರಂಭಿಸಿದ್ದಾರೆ. ಬೌಲಿಂಗ್ ಮತ್ತು ವ್ಯಾಯಾಮ ನಡೆಸುತ್ತಿರುವ ವಿಡಿಯೊವನ್ನು ಶಮಿ ಕೆಲವು ವಾರಗಳ ಹಿಂದೆ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದರು. ಗಾಯದಿಂದಾಗಿ ಶಮಿಗೆ ಈ ಬಾರಿ ಐಪಿಎಲ್ ಸೇರಿ ಮಹತ್ವದ ಟಿ20 ವಿಶ್ವಕಪ್ ಟೂರ್ನಿ ಕೈತಪ್ಪಿತ್ತು. ಕಳೆದ ವರ್ಷ ನಡೆದಿದ್ದ ಏಕದಿನ ವಿಶ್ವಕಪ್ ವೇಳೆ ಗಾಯಗೊಂಡಿದ್ದ ಶಮಿ, ಈ ಗಾಯವನ್ನು ಮರೆಮಾಚಿ ವಿಶ್ವಕಪ್‌ನಲ್ಲಿ ಅಮೋಘ ಬೌಲಿಂಗ್ ಪ್ರದರ್ಶನ ತೋರಿದ್ದರು.

ವಿರಾಮ
ಪ್ರತಿ ಭಾನುವಾರ

ದಾಖಲೆಯ 16ನೇ ಬಾರಿ ಅರ್ಜೆಂಟಿನಾ ಚಾಂಪಿಯನ್ | ಗಾಯದಲ್ಲೂ ಆಡಿದ ಮೆಸ್ಸಿ | ನಾಲ್ಕನೇ ಬಾರಿ ಗೆದ್ದ ಸ್ಪೇನ್

ಅರ್ಜೆಂಟಿನಾಗೆ ಕೊಪಾ, ಸ್ಪೇನ್‌ಗೆ ಯುರೋ ಕಪ್

ಅಮೆರಿಕ: ಬಹು ನಿರೀಕ್ಷಿತ ಕೊಪಾ ಅಮೆರಿಕ ಟೂರ್ನಿ ಹಾಗೂ ಯುರೋಪಿಯನ್ ಕಪ್ ಫುಟ್‌ಬಾಲ್ ಚಾಂಪಿಯನ್‌ಶಿಪ್‌ಗಳು ಮುಕ್ತಾಯಗೊಂಡಿದ್ದು, ಕೊಪಾ ಅಮೆರಿಕ ಪಟ್ಟ ಅರ್ಜೆಂಟಿನಾ ಅಲಂಕರಿಸಿದರೆ, ಯುರೋ ಚಾಂಪಿಯನ್ ಆಗಿ ಸ್ಪೇನ್ ಹೊರಹೊಮ್ಮಿದೆ. ಬಹು ದಿನಗಳಿಂದ ನಡೆಯುತ್ತಿದ್ದ ಈ ಟೂರ್ನಿಗಳ ಫೈನಲ್ ಪಂದ್ಯಗಳು ಭಾನುವಾರ ನಡೆದಿವೆ. ಕೊಪಾ ಅಮೆರಿಕ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯದಲ್ಲಿ ಕೊಲಂಬಿಯಾ ತಂಡವನ್ನು ಮಣಿಸಿ ಸ್ಪೇನ್ 4ನೇ ಬಾರಿ ಯುರೋ ಚಾಂಪಿಯನ್ ಆದರೆ ಇನ್ನೊಂದೆಡೆ ಅರ್ಜೆಂಟಿನಾ ಇಂಗ್ಲೆಂಡ್ ತಂಡವನ್ನು ಮಣಿಸಿ ದಾಖಲೆಯ 16ನೇ ಬಾರಿ ಕೊಪಾ ಅಮೆರಿಕ ಚಾಂಪಿಯನ್ ಆಗಿದೆ.

ಕೊಪಾ ಚಾಂಪಿಯನ್ ಆದ ಅರ್ಜೆಂಟಿನಾ: 2021ರಲ್ಲಿ ಬ್ರೆಝಿಲ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿದ್ದ ಅರ್ಜೆಂಟೀನಾ. ಇದೀಗ ಮತ್ತೊಮ್ಮೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಈ ಮೂಲಕ ಅರ್ಜೆಂಟೀನಾ ತಂಡವು 2021 ರ ಕೋಪಾ ಅಮೆರಿಕ, 2022ರ ಫಿಫಾ ವಿಶ್ವಕಪ್ ಹಾಗೂ 2024ರ ಕೊಪಾ ಅಮೆರಿಕ ಟ್ರೋಫಿ ಸೇರಿ ಸತತ ಮೂರು ಟ್ರೋಫಿ ಗೆದ್ದ ದಾಖಲೆ ಬರೆದಿದೆ. ಫ್ಲೋರಿಡಾದ ಮಿಯಾಮಿ ಗಾರ್ಡನ್ಸ್‌ನಲ್ಲಿರುವ ಹಾರ್ಡ್ ರಾಕ್ ಸ್ಟೇಡಿಯಂನಲ್ಲಿ ನಡೆದ ಜಿದ್ದಾಜಿದ್ದಿನ ಫೈನಲ್ ಪಂದ್ಯದ ಮೊದಲಾರ್ಧದಲ್ಲಿ ಯಾವುದೇ ಗೋಲು ದಾಖಲಾಗಿರಲಿಲ್ಲ. ಇನ್ನು ದ್ವಿತೀಯಾರ್ಧದ ಆರಂಭದಲ್ಲೇ ಗಾಯಗೊಂಡ ಅರ್ಜೆಂಟೀನಾ ತಂಡದ ನಾಯಕ ಲಿಯೋನೆಲ್ ಮೆಸ್ಸಿ ಮೈದಾನ ತೊರೆದರು. ಪರಿಣಾಮ ದ್ವಿತೀಯಾರ್ಧದಲ್ಲೂ ಉಭಯ ತಂಡಗಳಿಂದ ಗೋಲು ದಾಖಲಾಗಲಿಲ್ಲ. ಹೀಗಾಗಿ ಫಲಿತಾಂಶ ನಿರ್ಧಾರಕ್ಕಾಗಿ ಹೆಚ್ಚುವರಿ ಸಮಯವನ್ನು ಬಳಸಿಕೊಳ್ಳಲಾಯಿತು. ಹೆಚ್ಚುವರಿ ಸಮಯದ ಮೊದಲಾರ್ಧದಲ್ಲೂ ಯಾವುದೇ ಗೋಲು ದಾಖಲಾಗಲಿಲ್ಲ. ಆದರೆ 112ನೇ ನಿಮಿಷದಲ್ಲಿ ಡಿ ಮರಿಯಾ ನೀಡಿದ ಅತ್ಯುತ್ತಮ ಪಾಸ್ ಅನ್ನು ಲೌಟಾರೊ ಮಾರ್ಟಿನೆಝ್ ಅವರು ಭರ್ಜರಿ ಗೋಲು ದಾಖಲಿಸಿದರು. ಈ ಗೋಲ್‌ನೊಂದಿಗೆ ಅರ್ಜೆಂಟಿನಾ ಫೈನಲ್ ಪಂದ್ಯದಲ್ಲಿ 1-0 ಇಂದ ಭರ್ಜರಿ ಗೆಲುವು ದಾಖಲಿಸಿತು.

ಅರ್ಜೆಂಟೀನಾ ದಾಖಲೆ : ಕೊಲಂಬಿಯಾ ವಿರುದ್ಧ ಗೆಲ್ಲುವ ಮೂಲಕ ಅರ್ಜೆಂಟೀನಾ ತಂಡವು ಕೊಪಾ ಅಮೆರಿಕ ಟೂರ್ನಿಯಲ್ಲಿ ಅತೀ ಹೆಚ್ಚು ಬಾರಿ ಚಾಂಪಿಯನ್ ಆದ ತಂಡವೆಂಬ ದಾಖಲೆ ನಿರ್ಮಿಸಿದೆ. ಇದಕ್ಕೂ ಮುನ್ನ ಈ ದಾಖಲೆ ಉರುಗ್ವೆ ತಂಡದ ಹೆಸರಿನಲ್ಲಿತ್ತು. ಉರುಗ್ವೆ ತಂಡವು ಒಟ್ಟು 15 ಬಾರಿ ಚಾಂಪಿಯನ್ ಪಟ್ಟಕ್ಕೇರಿದೆ. ಇದೀಗ 16ನೇ ಬಾರಿ ಕೊಪಾ ಅಮೆರಿಕ ಚಾಂಪಿಯನ್‌ಶಿಪ್ ಗೆಲ್ಲುವ ಮೂಲಕ ದಾಖಲೆ ಬರೆದಿದೆ.

ಡಿ.ಮರಿಯಾ ನಿವೃತ್ತಿ: ಅರ್ಜೆಂಟೀನಾದ ಗೆಲುವಿನೊಂದಿಗೆ ಹಿರಿಯ ಆಟಗಾರ ಏಂಜಲ್ ಡಿ ಮರಿಯಾ ಅಂತಾರಾಷ್ಟ್ರೀಯ ಫುಟ್‌ಬಾಲ್‌ಗೆ ಗುಡ್ ಬೈ ಹೇಳಿದ್ದಾರೆ. ಕಳೆದ ಫಿಫಾ ವಿಶ್ವಕಪ್‌ನಲ್ಲಿ ಅರ್ಜೆಂಟೀನಾ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದ ಮರಿಯಾ, ಇದೀಗ ಕೊಪಾ ಅಮೆರಿಕ ಟ್ರೋಫಿಯೊಂದಿಗೆ ನಿವೃತ್ತಿ ಘೋಷಿಸಿದ್ದಾರೆ.

ಪಂದ್ಯ ಆರಂಭದಲ್ಲಿ ವಿಳಂಬ : ಕೊಪಾ ಅಮೆರಿಕ ಫೈನಲ್ ಪಂದ್ಯವು 75 ನಿಮಿಷ ವಿಳಂಬವಾಗಿ ಪ್ರಾರಂಭವಾಯಿತು. ಪರಿಣಾಮ ಕ್ರೀಡಾಂಗಣದ ಹೊರಗಡೆ ಪಂದ್ಯ ವೀಕ್ಷಿಸಲು ಬಂದಿದ್ದ ಅಭಿಮಾನಿಗಳು ಕಾಯಬೇಕಾಯಿತು. ಪಂದ್ಯ ಪ್ರಾರಂಭದ ಹಂತದಲ್ಲಿ ಕ್ರೀಡಾಂಗಣದ ಗೇಟ್‌ನಲ್ಲಿ ದಿಢೀರ್ ಗದ್ದಲ ಸೃಷ್ಟಿಯಾಯಿತು.

ಹೊರಗುಳಿದ ಮೆಸ್ಸಿ: ಫುಟ್‌ಬಾಲ್ ದಿಗ್ಗಜ ಲಿಯೋನಲ್ ಮೆಸ್ಸಿ ಪಂದ್ಯದ ಮೊದಲಾರ್ಧದಲ್ಲಿ ಗಾಯಗೊಂಡು ಹೊರಗುಳಿದರು. ಎದುರಾಳಿ ತಂಡದ ಆಟಗಾರಿಗೆ ಡಿಕ್ಕಿ ಹೊಡೆದು ಬಿದ್ದ ಕಾರಣ ಮೆಸ್ಸಿ ಅವರಿಗೆ ಗಂಭೀರ ಗಾಯ ಉಂಟಾಯಿತು. ಪರಿಣಾಮ ಮೆಸ್ಸಿ ಒಂದಿಷ್ಟು ಹೊತ್ತು ಹೊರಗೆ ಉಳಿಯಬೇಕಾಯಿತು. ಇದೇ ವೇಳೆ ಅವರನ್ನು ತಪಾಸಣೆ ಮಾಡಬೇಕಾದರೆ ಅವರ ಕಣ್ಣಲ್ಲಿ ನೀರು ಬಂದಿದ್ದ ವಿಡಿಯೊ ಒಂದು ವೈರ್ ಆಗಿದೆ.

ಸ್ಪೇನ್‌ಗೆ 4ನೇ ಕಿರೀಟ

ಇನ್ನೊಂದಡೆ ಯುರೋ ಕಪ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ಸ್ಪೇನ್ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಬರ್ಲಿನ್‌ನ ಒಲಿಂಪಿಯಾ ಸ್ಟೇಡಿ ಯಂನಲ್ಲಿ ನಡೆದ ಈ ಪಂದ್ಯವು ರಣರೋಚಕ ವಾಗಿತ್ತು. ಪಂದ್ಯದ ಆರಂಭದಲ್ಲೇ ಆಕ್ರಮಣಕಾರಿ ಆಟಕ್ಕೆ ಮುಂದಾದ ಸ್ಪೇನ್ ಪಡೆಯು ಸತತ ದಾಳಿಯ ಮೂಲಕ ಇಂಗ್ಲೆಂಡ್ ಮೇಲೆ ಒತ್ತಡ ಹೇರಿದರು. ಪರಿಣಾಮ ಮೊದಲಾರ್ಧದ ಅರ್ಧ ಭಾಗವನ್ನು ಇಂಗ್ಲೆಂಡ್ ರಕ್ಷಣಾತ್ಮಕ ಆಟಕ್ಕೆ ಕಳೆದರು. ದ್ವಿತೀಯಾರ್ಧದಲ್ಲಿ ಸ್ಪೇನ್‌ನ ಫಾರ್ವಡ್ ಆಟಗಾರರಾದ ಅಲ್ವಾರೊ ಮೊರಾಟಾ, ಡ್ಯಾನಿ ಓಲ್ಮೋ, ಫೆರಾನ್ ಟೊರೆಸ್ ಮತ್ತು ಲ್ಯಾಮಿನ್ ಯಮಲ್ ಉತ್ತಮ ಹೊಂದಾಣಿಕೆಯ ಆಟ ಪ್ರದರ್ಶಿಸಿ ಮೊದಲ ಗೋಲು ಬಾರಿಸುವಲ್ಲಿ ಯಶಸ್ವಿಯಾದರು. ಗೋಲಿನ ಬಳಿಕ ಇಂಗ್ಲೆಂಡ್ ಫಾರ್ವಡ್ ಆಟಗಾರರಾದ ಹ್ಯಾರಿ ಕೇನ್, ಸಾಕಾ ಮತ್ತು ಬೆಲ್ಲಿಂಗ್‌ಹ್ಯಾಮ್ ಸತತವಾಗಿ ಸ್ಪೇನ್ ಪೋಸ್ಟ್‌ನತ್ತ ದಾಳಿ ನಡೆಸಿದರು ಆದರೆ ಗೋಲು ಬಾರಿಸುವಲ್ಲಿ ವಿಫಲಾದರು. ಆದರೆ 73ನೇ ನಿಮಿಷದಲ್ಲಿ ಬೆಲ್ಲಿಂಗ್ ಹ್ಯಾಮ್ ನೀಡಿದ ಉತ್ತಮ ಪಾಸ್ ಅನ್ನು ಗೋಲಾಗಿಸುವಲ್ಲಿ ಕೋಲ್ ಪಾಲ್ಮರ್ ಕೊನೆಗೂ ಯಶಸ್ವಿಯಾದರು. ಈ ಗೋಲಿನೊಂದಿಗೆ ಪಂದ್ಯವು 1-1 ಸಮಬಲದೊಂದಿಗೆ ಸಾಗಿತು. ಪಂದ್ಯದ 90ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿಸುವಲ್ಲಿ ಇಂಗ್ಲೆಂಡ್ ಆಟಗಾರರು ಸರ್ವ ಪ್ರಯತ್ನ ನಡೆಸಿದ್ದರು. ಆದರೆ ಗೋಲು ಬಲೆಯ ಲೈನ್‌ನಲ್ಲಿ ನಿಂತು ಡ್ಯಾನಿ ಓಲ್ಮೋ ಹೆಡ್ ಮಾಡುವ ಮೂಲಕ ಚೆಂಡನ್ನು ತಡೆದರು. ಈ ಅದ್ಭುತ ಸೇವ್ ಸ್ಪೇನ್ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿತು ಎಂದರೆ ತಪ್ಪಾಗಲಾರದರು. ಅದರಂತೆ ಅಂತಿಮವಾಗಿ 2-1 ಅಂತರದಿಂದ ಇಂಗ್ಲೆಂಡ್ ತಂಡವನ್ನು ಮಣಿಸಿ ಸ್ಪೇನ್ ಪಡೆಯು ಯುರೋ ಕಪ್ 2024ರ ಚಾಂಪಿಯನ್ ಪಟ್ಟ ಅಲಂಕರಿಸಿತು.

ಏಕದಿನ, ಟೆಸ್ಟ್ ಆಡುತ್ತೇನೆ: ರೋಹಿತ್

ದೆಹಲಿ: ಟಿ20 ಬಳಿಕ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ರೋಹಿತ್ ಶರ್ಮಾ ನಿವೃತ್ತಿ ಘೋಷಣೆ ಮಾಡಲಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ಈ ಬಗ್ಗೆ ರೋಹಿತ್ ಶರ್ಮಾ ತಮ್ಮ ನಿವೃತ್ತಿ ಬಗ್ಗೆ ಸ್ಪಷ್ಟನೆ ನೀಡಿದ್ದು, ನಾನು ನಿವೃತ್ತಿಯ ಬಗ್ಗೆ ಈಗಲೇ ಏನೂ ಯೋಚನೆ ಮಾಡಿಲ್ಲ. ಜೀವನವು ನಿಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಪ್ರಸ್ತುತ ನಾನು ಚೆನ್ನಾಗಿ ಆಡುತ್ತಿದ್ದು, ಮುಂದಿನ ಕೆಲ ವರ್ಷಗಳ ಕಾಲ ಆಡಲಿದ್ದೇನೆ. ನಾನು ಭಾರತಕ್ಕಾಗಿ ನಿಜವಾಗಿಯೂ ವಿಶ್ವಕಪ್ ಗೆಲ್ಲಿಸಿಕೊಡಲು ಬಯಸುತ್ತೇನೆ ಎಂದು ಹೇಳಿದ್ದಾರೆ. ಟಿ20 ವಿಶ್ವಕಪ್ ಗೆದ್ದ ನಂತರ ನಾಯಕನಾಗಿದ್ದ ರೋಹಿತ್ ಶರ್ಮಾ ಈ ಸ್ವರೂಪದಿಂದ ನಿವೃತ್ತರಾಗಿದ್ದರು. ಈ ಹಿನ್ನಲೆಯಲ್ಲಿ ರೋಹಿತ್ ಟೆಸ್ಟ್ ಮತ್ತು ಏಕದಿನ ಪಂದ್ಯಗಳಲ್ಲಿ ಅವರ ಭವಿಷ್ಯದ ಬಗ್ಗೆ ಅಭಿಮಾನಿಗಳ ಮನಸ್ಸಿನಲ್ಲಿ ಸಾಕಷ್ಟು ಅನುಮಾನಗಳನ್ನು ಸೃಷ್ಟಿಸಿತ್ತು. ಈ ಬಗ್ಗೆ ಸ್ಪಷ್ಟನೆ ನೀಡುವ ಮೂಲಕ ರೋಹಿತ್ ತೆರೆ ಎಳೆದಿದ್ದಾರೆ.

ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಪ್ರಮುಖ ದಾಖಲೆಗಳನ್ನು ಬರೆಯುವ ಮೂಲಕ ರೋಹಿತ್ ಎಲ್ಲರನ್ನೂ ರಂಜಿಸಿದ್ದರು.

ಪ್ರಮುಖವಾಗಿ ತಮ್ಮ ಸಿಕ್ಸ್‌ಗಳಿಂದ ಪ್ರಸಿದ್ಧರಾಗಿದ್ದ ಅವರು ಟಿ20ಯಲ್ಲಿ ವಿಶೇಷ ಸಾಧನೆ ಮಾಡಿದ್ದಾರೆ. ಆದರೆ ಇದೀಗ ವಿಶ್ವಕಪ್ ಗೆದ್ದ ನಂತರ ನಿವೃತ್ತಿ ಘೋಷಿಸಿದ್ದು, ಎಲ್ಲರಿಗೂ ಶಾಕ್ ನೀಡಿದ್ದಾರೆ.

ಯುವರಾಜ್, ರೈನಾ ಸೇರಿ ನಾಲ್ವರ ವಿರುದ್ಧ ದೂರು

ದೆಹಲಿ: ವಿಕಲಾಂಗರನ್ನು ಅಪಹಾಸ್ಯ ಮಾಡಿದ ಆರೋಪದಡಿ ಮಾಜಿ ಕ್ರಿಕೆಟಿಗರಾದ ಹರ್ಭಜನ್ ಸಿಂಗ್, ಸುರೇಶ್ ರೈನಾ, ಯುವರಾಜ್ ಸಿಂಗ್ ಮತ್ತು ಗುರುಕೀರತ್ ಮಾನ್ ವಿರುದ್ಧ ಪೊಲೀಸರು ದೂರು ದಾಖಲಿಸಿದ್ದಾರೆ.

ಈ ಬಗ್ಗೆ ರಾಷ್ಟ್ರೀಯ ಅಂಗವಿಕಲರ ಉದ್ಯೋಗ ಉತ್ತೇಜನ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಅರ್ಮಾನ್ ಅಲಿ ಅವರು ದೆಹಲಿಯ ಅಮರ್ ಕಾಲೋನಿ ಪೊಲೀಸ್ ಠಾಣೆಯ ಎಸ್ಹೆಚ್‌ಒ ಅವರಿಗೆ ದೂರು ನೀಡಿದ್ದಾರೆ ಎನ್ನಲಾಗಿದೆ. ಕ್ರಿಕೆಟಿಗರಲ್ಲದೆ, ಮೆಟಾ ಇಂಡಿಯಾದ ಉಪಾಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಸಂಧ್ಯಾ ದೇವನಾಥನ್ ವಿರುದ್ಧವೂ ದೂರು ದಾಖಲಾಗಿದೆ. ಮೆಟಾ ಒಡೆತನದ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ಇನ್ಸ್ಟಾಗ್ರಾಮ್, ಅಂತಹ ವಿಷಯವನ್ನು ಪೋಸ್ಟ್ ಮಾಡಲು ಅವಕಾಶ ನೀಡುವ ಮೂಲಕ ಮಾಹಿತಿ ತಂತ್ರಜ್ಞಾನ ಕಾಯ್ದೆ, 2000 ಅನ್ನು ಉಲ್ಲಂಘಿಸಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಅಮರ್ ಕಾಲೋನಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸ್ವೀಕರಿಸಲಾಗಿದ್ದು, ಈ ಬಗ್ಗೆ ಹೆಚ್ಚಿನ ತನಿಖೆಗಾಗಿ ಜಿಲ್ಲೆಯ ಸೈಬರ್ ಸೆಲ್‌ಗೆ ಹಂಚಿಕೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಫೈನಲ್‌ನಲ್ಲಿ ಭಾರತ ಚಾಂಪಿಯನ್ಸ್, ಪಾಕಿಸ್ತಾನ ಚಾಂಪಿಯನ್‌ಗಳನ್ನು ಸೋಲಿಸಿದ ನಂತರ ಮಾಜಿ ಕ್ರಿಕೆಟಿಗರು ಇನ್ಸ್ಟಾಗ್ರಾಮ್‌ನಲ್ಲಿ ವೀಡಿಯೊವನ್ನು ಹಂಚಿಕೊಂಡಿದ್ದಾರೆ. ಆ ವೀಡಿಯೊದಲ್ಲಿ, ಯುವರಾಜ್ ಸಿಂಗ್, ಹರ್ಭಜನ್ ಸಿಂಗ್ ಮತ್ತು ರೈನಾ ತಮ್ಮ ದೇಹದ ಮೇಲೆ ಪಂದ್ಯಗಳಿಂದ ಉಂಟಾಗುವ ದೈಹಿಕ ಹಾನಿಯನ್ನು ತೋರಿಸಲು ಕುಂಟುತ್ತಾ ಓಡಾಡಿದ್ದಾರೆ. ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆಯು ವೀಡಿಯೊವನ್ನು ಸಂಪೂರ್ಣ ಅವಮಾನಕರ ಎಂದು ಹೇಳಿದೆ.

ನಿನಗಾಗಿ ಎಂದ ಯತಿ

ನಟ, ನಿರ್ದೇಶಕ ಯತಿರಾಜ್ ಇದೀಗ ಸುಧೀರ್ಘ ಸಮಯದ ನಂತರ ಮತ್ತೆ ಕಿರುತೆರೆಗೆ ಎಂಟ್ರಿ ಕೊಟ್ಟಿದ್ದಾರೆ. ನಿನಗಾಗಿ ಧಾರಾವಾಹಿಯಲ್ಲಿ ಯತಿರಾಜ್ ಬಣ್ಣ ಹಚ್ಚಿದ್ದು, ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಿನಗಾಗಿ ದಾರಾವಾಹಿಯನ್ನು ಸಂಪೃಥ್ವಿ ನಿರ್ದೇಶಿಸುತ್ತಿದ್ದು, ಯತಿರಾಜ್ ನಾಯಕಿಯ ತಂದೆ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಾಯಕಿಯಾಗಿ ಬಿಗ್ ಬಾಸ್ ಖ್ಯಾತಿಯ ದಿವ್ಯಾ ಉರುಡುಗ ನಟಿಸುತ್ತಿದ್ದಾರೆ. ಎಲ್ಲರ ನಡುವೆ ಇದ್ದರೂ ಅಜ್ಞಾತವಾಸಿಯಾಗಿ, ಅಂತರ್ಮುಖಿಯಾಗಿ, ವೇದನೆಗಳನ್ನು ಹೊರಹಾಕದೆ ಒಳಗೊಳಗೆ ನೋಯುವ-ಬೇಯುವ ಅಪರೂಪದ ಪಾತ್ರವಿದು.

ಜೀವನ್ ಛಾಯಾಗ್ರಹಣದಲ್ಲಿ ಕಲರ್ ಫುಲ್ ಸನ್ನಿವೇಶಗಳು ಮೂಡಿಬರುತ್ತಿವೆ. ಋತ್ವಿಕ್, ಬೇಬಿ ಸಿರಿ, ಸೋನಿಯಾ, ವಿಜಯ್ ಕೌಂಡಿನ್ಯ, ವಿಕ್ಟರಿ ವಾಸು, ಪುನೀತ್, ಕಾಮಿಡಿ ಕಿಲಾಡಿ ಖ್ಯಾತಿಯ ಮನೋಹರ್, ಸುಮೋಕ್ಷ, ಮಾನಸಾ, ಜಗದೀಶ್ ಮಲ್ನಾಡ್ ಸೇರಿದಂತೆ ಹಲವು ಕಲಾವಿದರು ಅಭಿನಯಿಸುತ್ತಿದ್ದಾರೆ.

ಕಾಲಿವುಡ್‌ಗೆ ನಾಯಕಿಯಾಗಿ ಚೈತ್ರಾ

ಸಪ್ತ ಸಾಗರದ ಸುಂದರಿ ಚೈತ್ರಾ, ಆಚಾರ್ ಕನ್ನಡ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಹೀಗಿರುವಾಗಲೇ ಚೈತ್ರಾ ಟಾಲಿವುಡ್ ಗೂ ಹಾರಿದ್ದಾರೆ. ಹೌದು ತಮಿಳು ನಟ ಸಿದ್ದಾರ್ಥ್ ನಟಿಸುತ್ತಿರುವ ನಲವತ್ತನೇ ಸಿನಿಮಾಗೆ ಚೈತ್ರಾ ಆಚಾರ್ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಈ ಕುರಿತಂತೆ ಚೈತ್ರಾ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಶಾಂತಿ ಟಾಕೀಸ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಈ ಚಿತ್ರ ಅದ್ದೂರಿ ವೆಚ್ಚದಲ್ಲಿಯೇ ನಿರ್ಮಾಣವಾಗಲಿದೆ. ಸಿದ್ದಾರ್ಥ್ ಹಾಗೂ ಚೈತ್ರಾ ಜತೆಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿ ಇರಲಿದ್ದು, ಮುಂದಿನ ತಿಂಗಳು ಚಿತ್ರ ಸೆಟ್ಟೇರಲಿದೆ. ಶಾಂತಿ ಟಾಕೀಸ್ ನಿರ್ಮಾಣದ ಚಿತ್ರದಲ್ಲಿ ನಟಿಸುತ್ತಿರುವುದು ಖುಷಿ ತಂದಿದೆ ಎಂದು ಚೈತ್ರಾ ಆಚಾರ್ ಸಂತಸ ಹಂಚಿಕೊಂಡಿದ್ದಾರೆ.

ಇನ್ನು ಇದರ ಜತೆಗೆ ರಾಜಮುರುಗನ್ ಚಿತ್ರದಲ್ಲಿಯೂ ಚೈತ್ರಾ ನಾಯಕಯಾಗಿ ನಟಿಸಲಿದ್ದಾರೆ. ಈ ಚಿತ್ರದಲ್ಲಿ ತಮಿಳು ನಟ ಶಶಿಕುಮಾರ್ ನಾಯಕನಾಗಿ ಬಣ್ಣಹಚ್ಚುತ್ತಿದ್ದಾರೆ. ಇದು ಗ್ರಾಮೀಣ ಸೊಗಡಿನ ಸಿನಿಮಾವಾಗಿದ್ದು ಚೈತ್ರಾ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಇಬ್ಬನಿಯಿಂದ ಬಂದ ಮಧುರ ಗಾನ

ಶೀರ್ಷಿಕೆಯಲ್ಲಿಯೇ ಸೆಳೆದಿರುವ ಇಬ್ಬನಿ ತಬ್ಬಿದ ಇಳೆಯಲಿ ಮಧುರವಾದ ಗಾನದ ಮೂಲಕ ಸಂಗೀತ ಪ್ರಿಯರನ್ನು ಸೆಳೆಯುತ್ತಿದ್ದು, ಈ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ಸದಾ ನೀನೆ .. ಎಂಬ ಹಾಡು ಇದಾಗಿದ್ದು, ಹೃದಯದ ಸವಿ ಮಾತಿಗೆ ಪ್ರೀತಿಯ ಶ್ರುತಿ ಬೆರೆತಿದೆ. ಸದಾ ನೀನೇ ಹಾಡು ಕಲರ್‌ಫುಲ್ ಆಗಿ ಮೂಡಿಬಂದಿದೆ. ನಾಗಾರ್ಜುನ್ ಶರ್ಮ ಸಾಹಿತ್ಯವಿರುವ ಈ ಹಾಡಿಗೆ ಗಗನ್ ಬಡೇರಿಯಾ ಸಂಗೀತ ಸಂಯೋಜಿಸಿದ್ದಾರೆ. ಅರುಣ್ ಕಾಮತ್ ದನಿಯಲ್ಲಿನ ಮೂಡಿಬಂದಿರುವ ಈ ಗಾನ ಕೇಳಲು ಇಂಪಾಗಿದೆ. ವಿಹಾನ್ ಹಾಗೂ ಅಂಕಿತಾ ಅಮರ್ ಈ ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ಮಯೂರಿ ನಟರಾಜ್, ದಾಮಿನಿ ಧನರಾಜ್ ಮುಂತಾದವರು

ತಾರಾಬಳಗದಲ್ಲಿದ್ದಾರೆ. ಕಿರಿಕ್ ಪಾರ್ಟಿ ಹಾಗೂ ಅವನ್ನೇ ಶ್ರೀ ಮನ್ನಾರಾಯಣ ಚಿತ್ರಗಳಲ್ಲಿ ಕಾರ್ಯನಿರ್ವಹಿಸಿರುವ ಚಂದ್ರಜಿತ್ ಬೆಳಿಯಪ್ಪ, ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಪರವಃ ಸ್ಟುಡಿಯೋಸ್ ಲಾಂಛನದಲ್ಲಿ ಜಿ.ಎಸ್.ಗುಪ್ತ ಮತ್ತು ರಕ್ಷಿತ್ ಶೆಟ್ಟಿ ಈ ಚಿತ್ರವನ್ನು ನಿರ್ಮಿಸಿದ್ದಾರೆ ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕಾರ್ಯದಲ್ಲಿ ಬ್ಯುಸಿಯಾಗಿದೆ.

ಭೀಮನ ಭೂಮ್ ಭೂಮ್ ಬೆಂಗಳೂರು

> ಈವರೆಗೂ ರಿಲೀಸ್ ಮಾಡಿರುವ ಭೀಮನ ಎಲ್ಲ ಹಾಡುಗಳಿಗೂ ಸಿನಿಪ್ರಿಯರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಭೂಮ್ ಭೂಮ್.. ಹಾಡನ್ನು ಸಂಗೀತ ಪ್ರಿಯರು ಇಷ್ಟಪಡಲಿದ್ದಾರೆ ಎಂಬ ನಂಬಿಕೆ ನನಗಿದೆ.
> – ಕೃಷ್ಣ ಸಾರ್ಥಕ್ ನಿರ್ಮಾಪಕ

ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ ಭೀಮ ಈಗಾಗಲೇ ಹಾಡುಗಳು ಹಾಗೂ ಟೀಸರ್ ಮೂಲಕ ಸದ್ದು ಮಾಡುತ್ತಿದ್ದು, ಆಗಸ್ಟ್ 9ರಂದು ಭೀಮನ ಬಳಗ ಚಿತ್ರಮಂದಿರಕ್ಕೆ ಲಗ್ಗೆಯಿಡಲಿದೆ. ಈಗ ಭೀಮ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಲಿದೆ.

ಭೂಮ್ ಭೂಮ್ ಬೆಂಗಳೂರು.. ಎಂಬ ಹಾಡು ಇದಾಗಿದ್ದು, ಜುಲೈ 19 ರಂದು ರಿಲೀಸ್ ಆಗಲಿದೆ. ವಿಶೇಷವೆಂದರೆ ಈ ಹಾಡಿಗೆ ನಾಗರಹೊಳೆ ಬಳಿ ನೆಲೆಸಿರುವ ಬುಡಕಟ್ಟು ಸಮುದಾಯದವರು ದನಿಗೂಡಿಸಿದ್ದಾರೆ. ಇದು ಜನಪದ ಸಾಹಿತ್ಯದ ಗೀತೆಯಾಗಿದ್ದು ಚರಣ್‌ರಾಜ್ ಸಂಗೀತ ಸಂಯೋಜಿಸಿದ್ದಾರೆ.ಭೀಮನ ಬ್ಯಾಡ್ ಬಾಯ್ಸ್,... ಐ ಲವ್ ಯೂ ಕಣೇ... ಹಾಗೂ ಡೋಂಟ್ ವರಿ ಬೇಬಿ ಚಿನ್ನಮ್ಮ... ಹಾಡುಗಳು ಬಿಡುಗಡೆಯಾಗಿ ಲಕ್ಷಾಂತರ ವೀಕ್ಷಣೆ ಕಂಡಿವೆ. ಅಂತೆಯೇ ಭೂಮ್ ಭೂಮ್ ಬೆಂಗ ಳೂರು... ಹಾಡು ರಿಲೀಸ್ ಆಗಿ ಸಿನಿಮಾದ ಬಗ್ಗೆ ಮತ್ತಷ್ಟು ಕ್ಯೂರಿಯಾಸಿಟಿ ಮೂಡಿಸಲಿದೆ ಎಂಬ ನಿರೀಕ್ಷೆ ಚಿತ್ರತಂಡಕ್ಕಿದೆ. ಭೀಮ ಚಿತ್ರದಲ್ಲಿ ವಿಜಯ್ ಗೆ ಜತೆಯಾಗಿ ಅಶ್ವಿನಿ ನಟಿಸಿದ್ದಾರೆ. ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ. ಕೃಷ್ಣ ಸಾರ್ಥಕ್ ಮತ್ತು ಜಗದೀಶ್ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ನಾಟ್ ಔಟ್ ಈ ವಾರ ತೆರೆಗೆ

ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ವಿ.ರವಿಕುಮಾರ್ ಹಾಗೂ ಶಂಶುದ್ದೀನ್ ಎ ನಿರ್ಮಿಸಿರುವ ನಾಟ್ ಔಟ್ ಈ ವಾರ ತೆರೆಗೆ ಬರಲಿದೆ.

ಇದು ಡಾರ್ಕ್ ಹ್ಯೂಮರ್ ಚಿತ್ರವಾಗಿದ್ದು, ಎಂ. ಅಂಬರೀಶ್ ನಿರ್ದೇಶನ ಮಾಡಿದ್ದಾರೆ. ನಿರ್ಮಾಪಕ ರವಿಕುಮಾರ್ ಪುತ್ರ ಅಜಯ್ ಪೃಥ್ವಿ ನಾಯಕ ನಾಗಿಯೂ ಅಭಿನ ಯಿಸಿ ದ್ದಾರೆ. ರಚನಾ ಇಂದರ್ ನಾಯ ಕಿಯಾಗಿ ಬಣ್ಣಹಚ್ಚಿದ್ದಾರೆ. ರವಿ ಶಂಕರ್, ಕಾಕ್ರೋಜ್ ಸುಧಿ, ಗೋಪಾ ಲಕೃಷ್ಣ ದೇಶಪಾಂಡೆ, ಸಲ್ಮಾನ್, ಗೋವಿಂದೇಗೌಡ, ಪ್ರಶಾಂತ್ ಸಿದ್ದಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಬೆಂಗಳೂರು -ಮೈಸೂರು ಸುತ್ತ ಮುತ್ತ ಚಿತ್ರೀಕರಣ ನಡೆಸಲಾಗಿದೆ.

ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಹಾಲೇಶ್ ಛಾಯಾಗ್ರಹಣ ಹಾಗೂ ಕೆ. ಎಂ. ಪ್ರಕಾಶ್ ಸಂಕಲನ ಈ ಚಿತ್ರಕ್ಕಿದೆ.

ಹೆಜ್ಜಾರು ಮೆಚ್ಚಿದ ಕಿಚ್ಚ

ವಿಭಿನ್ನ ಕಥೆಯ ಹೆಜ್ಜಾರು ತೆರೆಗೆ ಬರಲು ಸಿದ್ದವಾಗಿದೆ. ಸದ್ಯ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಚಿತ್ರದ ಬಗ್ಗೆ ಕುತೂಹಲ ಹೆಚ್ಚುವಂತೆ ಮಾಡಿದೆ. ಈ ಟ್ರೇಲರ್ ನೋಡಿ ಮೆಚ್ಚಿರುವ ಕಿಚ್ಚ ಸುದೀಪ್ ಚಿತ್ರತಂಡಕ್ಕೆ ಶುಭಕೋರಿದ್ದಾರೆ. ಹೆಜ್ಜಾರು ಒಂದು ವಿಶಿಷ್ಟ ಕಥೆ ಎನ್ನಬಹುದು. ಮೂವತ್ತು ವರ್ಷಗಳ ಅಂತರದಲ್ಲಿ ಇಬ್ಬರು ವ್ಯಕ್ತಿಗಳ ಜೀವನದಲ್ಲಿ ನಡೆಯುವ ಕಥೆ ಚಿತ್ರದಲ್ಲಿದೆ. ಇದು ಕಾಲ್ಪನಿಕ ಕಥೆಯಾದರೂ, ನೈಜತೆಗೆ ತೀರ ಹತ್ತಿರವಾಗಿದೆ. ಹಾಗಾಗಿ ಇದು ಎಲ್ಲರಿಗೂ ಕನೆಕ್ಟ್ ಆಗುವ ಕಥೆಯಾಗಿದೆ. ಭೂಗತ ಲೋಕದ ಕಥೆಯ ಜತೆಗೆ ನವಿರಾದ ಪ್ರೇಮ ಕಥೆ ಯೂ ಇದೆ. ಭಗತ್ ಆಳ್ವ ನಾಯಕನಾಗಿ ನಟಿಸಿದ್ದು, ಲಿಯೋನಿಲ್ ಶ್ವೇತಾ ಡಿಸೋಜಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಗೋಪಾಲಕೃಷ್ಣ ದೇಶಪಾಂಡೆ, ಮುನಿ, ಬಾಲರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹರ್ಷಪ್ರಿಯ ನಿರ್ದೇಶನದ ಈ ಚಿತ್ರವನ್ನು ಗಗನ ಎಂಟರ್ ಪ್ರೈಸಸ್ ಬ್ಯಾನರ್ ನಲ್ಲಿ ಎನ್. ವಿಮಲಾ ನಿರ್ಮಿಸಿದ್ದಾರೆ.

ಅಪ್ಪು ಸಂಭ್ರಮಕ್ಕೆ ಅದ್ದೂರಿ ಚಾಲನೆ



ಅಪ್ಪು ಕಪ್ ಸೀಸನ್ 2 ಬ್ಯಾಡ್ ಮಿಂಟನ್ ಪಂದ್ಯಾವಳಿಗೆ ಗೆ ದಿನಗಣನೆ ಆರಂಭವಾಗಿದೆ. ಸ್ಯಾಂಡಲ್ ವುಡ್ ಸೆಲೆಬ್ರೆಟಿಗಳು ಸೇರಿ ಸಂಭ್ರಮಿಸುವ ಈಪಂದ್ಯಾವಳಿ ಈ ತಿಂಗಳಾಂತ್ಯದಲ್ಲಿ ನಡೆಯಲಿದೆ.

ಅಪ್ಪು ಕಪ್ ಸೀಸನ್ 2ರ ಕಪ್ ಅನಾವರಣವಾಯಿತು. ಐದು ಕೆಜಿ ತೂಕದ ಅಪ್ಪು ಭಾವಚಿತ್ರವುಳ್ಳ ಬೆಳ್ಳಿ ಕಪ್ ಅನ್ನು ಅಶ್ವಿನಿ ಪುನೀತ್ ರಾಜ್ ಕುಮಾರ್ ಹಾಗೂ ಶ್ರೀಮುರಳಿ ಅನಾವರಣ ಮಾಡಿದರು.

ಶೆಟಲ್ ಬ್ಯಾಡ್ ಮಿಂಟನ್ ಅಪ್ಪು ಅವರ ಮೆಚ್ಚಿನ ಆಟವಾಗಿತ್ತು. ಕಳೆದ ವರ್ಷವೂ ಅಪ್ಪು ಕಪ್ ಅದ್ದೂರಿಯಾಗಿ ನಡೆಯಿತು. ಅಂತೆಯೇ ಈ ಬಾರಿಯೂ ಯಶಸ್ವಿಯಾಗಿ ನಡೆಯಲಿ ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಶುಭಕೋರಿದರು.

ಯಾವುದಾದರೂ ಆಟದ ನೆಪದಲ್ಲಿ ಕಲಾವಿದರನ್ನು ಒಟ್ಟಾಗಿ ಸೇರಿಸುವ ಆಸೆ ಅಪ್ಪು ಅವರಿಗಿತ್ತು. ಅದು ಹೊರದೇಶದಲ್ಲಿ ಅದನ್ನು ನಡೆಸಬೇಕೆಂಬುದು ಅವರ ಯೋಚನೆಯಾಗಿತ್ತು. ಸದಾ ಒಬ್ಬರಿಗೆ ಒಳೆಯದನ್ನೇ ಬಯಸುವ ಹೃದಯ ಅವರದು. ಅಂತಹ ಪುನೀತ್ ರಾಜಕುಮಾರ್ ಅವರ ನೆನಪಿನಲ್ಲಿ ನಡೆಯುತ್ತಿರುವ ಅಪ್ಪು ಕಪ್ ಸೀಸನ್ 2 ಯಶಸ್ವಿಯಾಗಲಿ ಎಂದು ಶ್ರೀ ಮುರಳಿ ಹೇಳಿದರು.

ಈ ಬಾರಿ ಹತ್ತು ತಂಡಗಳು ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿದ್ದು, ಆ ಎಲ್ಲಾ ತಂಡಗಳಿಗೂ ಅಪ್ಪು ಅಭಿನಯಿಸಿರುವ ಸಿನಿಮಾಗಳ ಹೆಸರಿಡಲಾಗಿದೆ.